ಗುರುವಾರ, ಸೆಪ್ಟೆಂಬರ್ 29, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಹೊಸ ವೆಬ್ ಸರಣಿ

ಮುಂಬೈನಲ್ಲಿ ಬುಧವಾರ ಬಾಲಿವುಡ್ ನಟಿ ಗುಲ್ ಪನಾಗ್ ಅವರು ತಮ್ಮ ಹೊಸ ವೆಬ್‌ಸರಣಿ 'ಗುಡ್ ಬ್ಯಾಡ್ ಗರ್ಲ್' ಪ್ರಚಾರ ಕಾರ್ಯದಲ್ಲಿ ಪಾಲ್ಗೊಂಡರು

ಒಂದು ಕೋಟಿ ಪ್ರವಾಸಿಗರ ಆಕರ್ಷಿಸಲು ಹೊಸ ಪ್ರವಾಸೋದ್ಯಮ ನೀತಿಯ ಗುರಿ • ಜಿಲ್ಲಾ ಸಮಿತಿಗಳಿಗೆ ಹೊಣೆ

ಪ್ರವಾಸಿ ತಾಣಗಳ ಅಭಿವೃದ್ಧಿಗೆ ಆದ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರವಾಸಿ ತಾಣಗಳ ತ್ವರಿತ ಅಭಿವೃದ್ಧಿಗೆ ಹೊಸ ಪ್ರವಾಸೋದ್ಯಮ ನೀತಿಯಲ್ಲಿ ಆದ್ಯತೆ ನೀಡಿರುವ ಸರ್ಕಾರ, ಮೂಲ ಸೌಕರ್ಯಗಳೂ ಸೇರಿದಂತೆ ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳುವ ಅಧಿಕಾರವನ್ನು ಜಿಲ್ಲಾ ಪ್ರವಾಸೋದ್ಯಮ ಸಮಿತಿಗೆ ನೀಡಿದೆ.

'ಕರ್ನಾಟಕ ಪ್ರವಾಸೋದ್ಯಮ ನೀತಿ 2020–26' ಅನ್ನು ಬುಧವಾರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬಿಡುಗಡೆ ಮಾಡಿದರು.

ಆಯಾ ಜಿಲ್ಲೆಯ ಜಿಲ್ಲಾಧಿಕಾರಿ ಅಧ್ಯಕ್ಷತೆಯ ಜಿಲ್ಲಾ ಸಮಿತಿಯು ಪ್ರವಾಸಿ ತಾಣಗಳಲ್ಲಿ ₹ 5 ಕೋಟಿ ಒಳಗಿನ ಮೂಲ ಸೌಕರ್ಯ ಕಾರ್ಯಗಳ ಅನುಷ್ಠಾನ, ಉತ್ತೇಜನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು, ಸ್ಥಳೀಯ ವ್ಯಾಪಾರ ವೃದ್ಧಿ, ಉದ್ಯೋಗ ಸೃಷ್ಟಿಸುವುದು, ಮೇಲ್ವಿಚಾರಣೆಯ ಅಧಿಕಾರವನ್ನು ನೋಡಿಕೊಳ್ಳಲಿದೆ. ಯೋಜನೆಯ ಅನುಷ್ಠಾನದಲ್ಲಿ ಎದುರಾಗುವ ತೊಡಕುಗಳನ್ನು ನಿವಾರಿಸಿ, ತ್ವರಿತ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳುವ ಹೊಣೆಗಾರಿಕೆಯನ್ನೂ ಸಮಿತಿಗೆ ನೀಡಲಾಗಿದೆ. ₹ 5 ಕೋಟಿಗೂ ಅಧಿಕ ಮೊತ್ತದ ಯೋಜನೆಗಳಿಗೆ ಪ್ರವಾಸೋದ್ಯಮ ಸಚಿವರ ಅಧ್ಯಕ್ಷತೆಯ ಪ್ರವಾಸೋದ್ಯಮ ಸಬಲೀಕರಣ ಸಮಿತಿಯ ಅನುಮೋದನೆ ಕಡ್ಡಾಯ.

ಪ್ರಸ್ತುತ ರಾಜ್ಯದ ಪ್ರವಾಸಿ ತಾಣಗಳಿಗೆ ಪ್ರತಿ ವರ್ಷ 30 ಲಕ್ಷ ಪ್ರವಾಸಿಗರು ಭೇಟಿ ನೀಡುತ್ತಿದ್ದು, ಮುಂದಿನ ಮೂರು ವರ್ಷದಲ್ಲಿ ವಾರ್ಷಿಕ ಒಂದು ಕೋಟಿಗೆ ಮುಟ್ಟಿಸಲು, ಹೆಚ್ಚಿನ ಸಂಖ್ಯೆಯಲ್ಲಿ ವಿದೇಶಿ ಪ್ರವಾಸಿಗರನ್ನು ಆಕರ್ಷಿಸಲು ಅನುಸರಿಸಬೇಕಾಗದ ಕಾರ್ಯತಂತ್ರಗಳನ್ನು ಹೊಸ ನೀತಿಯಲ್ಲಿ ವಿವರಿಸಲಾಗಿದೆ. ಪ್ರವಾಸೋದ್ಯಮಕ್ಕೆ ಸೂಕ್ತವಾಗಿರುವ ಕಲಬುರಗಿ, ಬೀದರ್ ಕೋಟೆಗಳು, ಜೋಗ ಜಲಪಾತ, ಕರಾವಳಿ ತೀರಗಳೂ ಒಳಗೊಂಡ 18 ಜಿಲ್ಲೆಗಳನ್ನು ಆದ್ಯತಾ ವಲಯವಾಗಿ ಪರಿಗಣಿಸಲಾಗಿದೆ.

ಕೇಂದ್ರ ಸರ್ಕಾರದ ಪರ್ವತ ಮಾಲಾ ಯೋಜನೆಯಡಿ ರಾಜ್ಯದ 15 ಪ್ರವಾಸಿ ತಾಣಗಳಲ್ಲಿ ರೋಪ್ ವೇ ಅಳವಡಿಸಲು ಪ್ರಸ್ತಾವ ಸಲ್ಲಿಸಲಾಗಿದೆ. ಸಾರ್ವಜನಿಕ-ಖಾಸಗಿ ಸಹಭಾಗಿತ್ವದಡಿ ನಂದಿಬೆಟ್ಟ, ಅಂಜನಾದ್ರಿಯಲ್ಲಿ ಈಗಾಗಲೇ ರೋಪ್-ವೇ ಕಾರ್ಯಕ್ಕೆ ಚಾಲನೆ ನೀಡಲಾಗಿದ್ದು, ಉಳಿದ ಸ್ಥಳಗಳ ಆಯ್ಕೆ ಅಂತಿಮಗೊಳಿಸುವ ಗುರಿ ಹೊಂದಲಾಗಿದೆ.

ವಿಧಾನಸೌಧದಲ್ಲಿ ಬುಧವಾರ ಪ್ರವಾಸೋದ್ಯಮ ಇಲಾಖೆ ಆಯೋಜಿಸಿದ್ದ ವಿಶ್ವ ಪ್ರವಾಸೋದ್ಯಮ ದಿನಾಚರಣೆಯಲ್ಲಿ ಪ್ರವಾಸೋದ್ಯಮ ಮಾರ್ಗದರ್ಶಕರಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಗೌರವ ಧನದ ಚೆಕ್ ವಿತರಿಸಿದರು. ಸಚಿವರಾದ ಆನಂದ್ ಸಿಂಗ್, ಗೋವಿಂದ ಕಾರಜೋಳ ಇದ್ದರು.

ಭೂ ಪರಿವರ್ತನೆ ಉಚಿತ

ಪ್ರವಾಸೋದ್ಯಮ ಯೋಜನೆಗಳು, ವಿಸ್ತರಣಾ ಯೋಜನೆಗಳ ಅಭಿವೃದ್ಧಿಗಾಗಿ ಭೂ ಪರಿವರ್ತನೆ ಮಾಡಿಕೊಳ್ಳುವ ಖಾಸಗಿ ವ್ಯಕ್ತಿ, ಸಂಸ್ಥೆಗಳಿಗೆ ಭೂ ಪರಿವರ್ತನಾ ಶುಲ್ಕದಲ್ಲಿ ಶೇ 100ರಷ್ಟು ರಿಯಾಯಿತಿ ನೀಡಲಾಗಿದೆ. ಮುದ್ರಾಂಕ ಹಾಗೂ ನೋಂದಣಿ ಶುಲ್ಕವನ್ನೂ ಕಟ್ಟಬೇಕಿಲ್ಲ. ಆದರೆ, ಬೆಂಗಳೂರು ನಗರ ಪಾಲಿಕೆ ವ್ಯಾಪ್ತಿಯ ಪ್ರವಾಸೋದ್ಯಮ ಯೋಜನೆಗಳ ಅಭಿವೃದ್ಧಿಗೆ ಈ ನಿಯಮ ಅನ್ವಯಿಸುವುದಿಲ್ಲ. ₹ 25 ಲಕ್ಷದವರೆಗಿನ ಸಾಲಕ್ಕೆ ವಾರ್ಷಿಕ ಶೇ 5ರ ಬಡ್ಡಿ ಸಹಾಯಧನ ನೀಡಲು ಸರ್ಕಾರ ಸಮ್ಮತಿಸಿದೆ.

ಅಂತರರಾಷ್ಟ್ರೀಯ ನಕ್ಷೆಯಲ್ಲಿ ರಾಜ್ಯ: ಸಿ.ಎಂ

ಬೆಂಗಳೂರು: ಬರುವ ಕೆಲವೇ ತಿಂಗಳಲ್ಲಿ ಕರ್ನಾಟಕ ಪ್ರವಾಸೋದ್ಯಮ ಅಂತರರಾಷ್ಟ್ರೀಯ ನಕ್ಷೆಯಲ್ಲಿ ಸೇರ್ಪಡೆಯಾಗಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ವಿಧಾನಸೌಧದಲ್ಲಿ ಬುಧವಾರ ನಡೆದ ವಿಶ್ವ ಪ್ರವಾಸೋದ್ಯಮ ದಿನಾಚರಣೆಯಲ್ಲಿ ನೊಂದಾಯಿತ ರಾಜ್ಯದ ಪ್ರವಾಸಿ ಮಾರ್ಗದರ್ಶಿಗಳಿಗೆ ಪ್ರೋತ್ಸಾಹಧನ ವಿತರಿಸಿ ಅವರು ಮಾತನಾಡಿದರು.

ರಾಜ್ಯದಲ್ಲಿ ಎರಡು ಪ್ರವಾಸೋದ್ಯಮ ಸರ್ಕಿಟ್‌ಗಳನ್ನು ಎರಡು ತಿಂಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಬೇಲೂರು ಹಳೇಬೀಡು, ಸೋಮನಾಥಪುರ ಸುತ್ತಮುತ್ತಲ ಪ್ರವಾಸಿತಾಣ ಒಳಗೊಂಡ ಮೈಸೂರು ಸರ್ಕಿಟ್ ಹಾಗೂ ವಿಜಯಪುರ, ಬಾದಾಮಿ, ಪಟ್ಟದಕಲ್ಲು, ಹಂಪಿ ಒಳಗೊಂಡ ಹಂಪಿ ಸರ್ಕೀಟ್‌ಗಳನ್ನು ಅಂತರಾಷ್ಟ್ರೀಯ ಮಟ್ಟಕ್ಕೆ ಅಭಿವೃದ್ಧಿಪಡಿಸಲು ಸರ್ಕಾರ ಯೋಜನೆ ರೂಪಿಸಿದೆ. ಪ್ರವಾಸಿಗರು ವೆಬ್‌ಸೈಟ್ ಮೂಲಕ ತಮ್ಮ ಪ್ರವಾಸದ ಸಂಪೂರ್ಣ ವ್ಯವಸ್ಥೆಯನ್ನು ಮಾಡಿಕೊಳ್ಳುವ ಯೋಜನೆಯನ್ನು ರೂಪಿಸಲಾಗುತ್ತಿದೆ ಎಂದು ವಿವರ ನೀಡಿದರು.

ಕರಾವಳಿ ಪ್ರವಾಸಕ್ಕೆ ಸಿಆರ್‌ಝೆಡ್ ಸಮ್ಮತಿ

ಕರಾವಳಿ ನಿಯಂತ್ರಣ ವಲಯದ (ಸಿಆರ್‌ಝೆಡ್) ಪ್ರಸ್ತಾವಕ್ಕೆ ಕೇಂದ್ರ ಸರ್ಕಾರ ಅನುಮೋದನೆ ನೀಡಿದ್ದು, ನೆರೆ ರಾಜ್ಯಗಳ ಮಾದರಿಯಲ್ಲಿ ರಾಜ್ಯದ ಕರಾವಳಿ ಪ್ರವಾಸೋದ್ಯಮಕ್ಕೆ ಯೋಜನೆ ರೂಪಿಸಲಾಗುತ್ತಿದೆ ಎಂದು ಪ್ರವಾಸೋದ್ಯಮ ಸಚಿವ ಆನಂದ್ ಸಿಂಗ್ ಮಾಹಿತಿ ನೀಡಿದರು.

ಸಿಆರ್‌ಝೆಡ್ ಅನುಮೋದನೆ ಪಡೆದ ದೇಶದ ಎರಡನೇ ಹಾಗೂ ದಕ್ಷಿಣ ಭಾರತದ ಮೊದಲ ರಾಜ್ಯ ಕರ್ನಾಟಕ. ರಾಜ್ಯದ ಕಡಲ ತೀರ ಪ್ರದೇಶದ ಪ್ರವಾಸಿ, ವಾಣಿಜ್ಯೋದ್ಯಮದ ಚಟುವಟಿಕೆಗಳು ಗರಿಗೆದರಲಿವೆ ಎಂದರು.

ಪ್ರವಾಸಿಗರಿಗಾಗಿ ನೂತನ ಕ್ಯಾರಾವಾನ್ ವಾಹನ ಪರಿಚಯಿಸಲಾಗಿದೆ. ಮನೆಯ ವಾತಾವರಣ ಸೃಷ್ಟಿಸಲಾಗಿದ್ದು, ಅಡುಗೆ ಮನೆ, ಬೆಡ್ ರೂಂ, ಶೌಚಾಲಯದ ವ್ಯವಸ್ಥೆ ಮಾಡಲಾಗಿದೆ. ಈ ಕ್ಯಾರಾವ್ಯಾನ್ ಬಳಕೆ ಮಾಡುವ ಪ್ರವಾಸಿಗರು ಪ್ರವಾಸಿ ತಾಣಕ್ಕೆ ಭೇಟಿ ನೀಡಿ, ರಾತ್ರಿ ವ್ಯಾನ್‌ನಲ್ಲೇ ತಂಗಬಹುದು ಎಂದು ವಿವರ ನೀಡಿದರು.

ಅರಣ್ಯಕ್ಕೆ ಕಾನು, ಗೋಮಾಳ ಸೇರ್ಪಡೆ ಪ್ರಯತ್ನ; ಆತಂಕ

'ಕೆಲವರಿಂದ ಕೊಲೆ ಬೆದರಿಕೆ'

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: 'ಗೋಮಾಳ, ಕಾನು ಪ್ರದೇಶವನ್ನು ಅರಣ್ಯಕ್ಕೆ ಸೇರಿಸುವ ಪ್ರಯತ್ನ ನಡೆದಿದೆ ಎಂದು ಶೃಂಗೇರಿ ಭಾಗದ ಜನರು ಆತಂಕದಲ್ಲಿದ್ದಾರೆ. ಜಾಗ ಅರಣ್ಯಕ್ಕೆ ಸೇರಿದರೆ ಕೊಲೆ ಮಾಡುವುದಾಗಿ ನನಗೆ ಬೆದರಿಕೆ ಹಾಕಿದ್ದಾರೆ' ಎಂದು ಶಾಸಕ ಟಿ.ಡಿ. ರಾಜೇಗೌಡ ಹೇಳಿದರು.

ಬುಧವಾರ ಇಲ್ಲಿ ನಡೆದ ಕೆಡಿಪಿ ಸಭೆಯಲ್ಲಿ ಅವರು ಮಾತನಾಡಿದರು. 'ಬದುಕಿಗೆ ಕಂಟಕ ಎದುರಾಗಿರುವುದರಿಂದ ಅನಿವಾರ್ಯವಾಗಿ ಬೆದರಿಕೆ ಹಾಕಿದ್ದಾರೆ. ಬೆದರಿಕೆ ಹಾಕಿರುವುದರಲ್ಲಿ ತಪ್ಪಿಲ್ಲ. ಸರ್ಕಾರ ಸ್ಪಂದಿಸಿ ಪರ್ಯಾಯ ವ್ಯವಸ್ಥೆ ಕಲ್ಪಿಸಿದರೆ ಸಮಸ್ಯೆ ಪರಿಹಾರವಾಗುತ್ತದೆ, ನಮಗೆ ಬೆದರಿಕೆಯೂ ಇರಲ್ಲ' ಎಂದು ಹೇಳಿದರು.

'ಜೀವ ಕೈಯಲ್ಲಿ ಹಿಡಿದುಕೊಂಡು ಓಡಾಡಬೇಕಾದ ಸ್ಥಿತಿ ಇದೆ. ಬೆದರಿಕೆ ಹಾಕಿದವರ ಹೆಸರು ಹೇಳಲ್ಲ, ಅವರ ವಿರುದ್ಧ ದೂರನ್ನೂ ದಾಖಲಿಸಲ್ಲ' ಎಂದರು.

'ಶೃಂಗೇರಿ ತಾಲ್ಲೂಕಿನ ಹಾದಿ ಕೆರೂರು ಸರ್ವೆ ನಂಬರ್ 11ರಲ್ಲಿ 1090 ಎಕರೆ ಪ್ರದೇಶದಲ್ಲಿ 762 ಎಕರೆ ಅರಣ್ಯ, 328 ಎಕರೆ ಗೋಮಾಳ ಇದೆ. ಹಾದಿ ಗ್ರಾಮದ ಸರ್ವೆ ನಂಬರ್ 2ರಲ್ಲಿ 971 ಎಕರೆ ಪ್ರದೇಶದಲ್ಲಿ 734 ಎಕರೆ ಕಾಡು, 234 ಎಕರೆ ಕಾನು ಇದೆ. ತಹಶೀಲ್ದಾರ್ ಅವರು ಮೋಜಣಿ ಮತ್ತು ಅರಣ್ಯ ಇಲಾಖೆಯವರಿಗೆ ಪತ್ರ ಬರೆದಿದ್ದಾರೆ. ಆದರೆ, ಈವರೆಗೆ ಮೋಜಣಿ ಮಾಡಿಲ್ಲ. ಗೋಮಾಳ, ಕಾನು ಜಾಗವನ್ನು ಅರಣ್ಯಕ್ಕೆ ಸೇರಿಸುವ ಪ್ರಯತ್ನ ನಡೆದಿದೆ ಎಂದು ಅಲ್ಲಿನ ಜನರು ಆತಂಕದಲ್ಲಿದ್ದಾರೆ' ಎಂದು ಹೇಳಿದರು.

ದೂರು ನೀಡಿದರೆ ಕ್ರಮ: 'ಕೊಲೆ ಬೆದರಿಕೆಗೆ ಸಂಬಂಧಿಸಿದಂತೆ ಶಾಸಕ ರಾಜೇಗೌಡ ದೂರು ನೀಡಿದರೆ ಉನ್ನತ ತನಿಖೆ ಮಾಡಿಸುತ್ತೇವೆ. ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸುತ್ತೇವೆ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ. ಬಸವರಾಜ (ಬೈರತಿ) ಹೇಳಿದರು. 'ಕೊಲೆ ಬೆದರಿಕೆಗೆ ಸಂಬಂಧಿಸಿದಂತೆ ಶಾಸಕ ರಾಜೇಗೌಡ ಅವರಿಂದ ದೂರು ಪಡೆದು ತನಿಖೆ ನಡೆಸುತ್ತೇವೆ' ಎಂದು ಎಸ್ಪಿ ಉಮಾ ಪ್ರಶಾಂತ್ ಪ್ರತಿಕ್ರಿಯಿಸಿದರು.

'ಅಸ್ಪೃಶ್ಯತೆ ನಿವಾರಣೆಗೆ ಆಂದೋಲನ'

ಪ್ರಜಾವಾಣಿ ವಾರ್ತೆ

ಕೋಲಾರ: 'ಅಸ್ಪೃಶ್ಯತೆ ನಿವಾರಣೆ ಉದ್ದೇಶದಿಂದ ರಾಜ್ಯದಾದ್ಯಂತ ಸರ್ಕಾರದಿಂದಲೇ ಬೃಹತ್ ಆಂದೋಲನ ನಡೆಸಲಾಗುವುದು. ಈ ನಿಟ್ಟಿನಲ್ಲಿ ಸಿದ್ಧತೆ ನಡೆಯುತ್ತಿವೆ' ಎಂದು ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಬುಧವಾರ ಹೇಳಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಒಬ್ಬ ಮನುಷ್ಯನನ್ನು ಮತ್ತೊಬ್ಬ ಮನುಷ್ಯ ಮುಟ್ಟಲಾರದಷ್ಟು ಅಸ್ಪೃಶ್ಯತೆ ಇದ್ದರೆ ಆ ಸಮಾಜವೇ ಪ್ರಶ್ನಾರ್ಹ. ಎಲ್ಲಾ ಪರಿಶಿಷ್ಟರಿಗೆ ಸಮಾನ ಬದುಕಿನ ಹಕ್ಕು ಕಲ್ಪಿಸಲು ಸರ್ಕಾರ ಬದ್ಧವಾಗಿದೆ' ಎಂದರು.

'ಉಳ್ಳೇರಹಳ್ಳಿಯ ಸಂತ್ರಸ್ತ ಕುಟುಂಬದ ನೆಲೆಗಾಗಿ ಜಿಲ್ಲಾಡಳಿತ ಈಗಾಗಲೇ ನಿವೇಶನ ಗುರುತಿಸಿದೆ. ಇಲಾಖೆಯ ವಿಶೇಷ ಅನುದಾನದಲ್ಲಿ ₹ 5 ಲಕ್ಷದಲ್ಲಿ ಮನೆ ನಿರ್ಮಿಸಿ ಕೊಡಲಾಗುವುದು. ಬಾಲಕನ ಉನ್ನತ ಶಿಕ್ಷಣದವರೆಗಿನ ಎಲ್ಲಾ ವೆಚ್ಚವನ್ನು ಇಲಾಖೆಯೇ ಭರಿಸಲಿದೆ. ಬಾಲಕನ ತಾಯಿಗೆ ಮನೆಗೆ ಸಮೀಪದಲ್ಲಿರುವ ಇಲಾಖೆಯ ಹಾಸ್ಟೆಲ್‌ನಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಅಡುಗೆ ಕೆಲಸ ನೀಡಲಾಗುವುದು' ಎಂದರು.

ಬಳಿಕ ಜಿಲ್ಲಾಧಿಕಾರಿ ಕಚೇರಿಯಲ್ಲಿ ಪರಿಶಿಷ್ಟ ಮಹಿಳೆ ಶೋಭಾ ಹಾಗೂ ಪತಿ ರಮೇಶ್ ಅವರನ್ನು ಭೇಟಿಯಾಗಿ ಪುನರ್ ವಸತಿ ಯೋಜನೆಯಡಿ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ₹ 5 ಲಕ್ಷ ವೆಚ್ಚದಲ್ಲಿ ಮನೆ ನಿರ್ಮಿಸಿಕೊಡಲು ಆದೇಶ ಪತ್ರ ನೀಡಿದರು. ಪದವಿಪೂರ್ವ ಶಿಕ್ಷಣದಿಂದ ಸ್ನಾತಕೋತ್ತರವರೆಗೆ ಉಚಿತ ಶಿಕ್ಷಣಕ್ಕೆ ಅರ್ಹವಾಗಿರುವ ಪ್ರಮಾಣಪತ್ರ ನೀಡಿದರು.

ಬೆಂಗಳೂರಿನಲ್ಲಿ ಬುಧವಾರ ನಡೆದ ಎಐಡಿಎಸ್‌ಒ ಸಮಾವೇಶದಲ್ಲಿ ಪಾಲ್ಗೊಂಡಿದ್ದ ವಿದ್ಯಾರ್ಥಿಗಳೊಂದಿಗೆ ಮುಖಂಡರು

ಎಐಡಿಎಸ್‌ಒ ವತಿಯಿಂದ ವಿದ್ಯಾರ್ಥಿಗಳ ಸಮಾವೇಶ

'ವ್ಯಾಪಾರೀಕರಣಗೊಳಿಸುವ ಎನ್‌ಇಪಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿಕ್ಷಣದ ವ್ಯಾಪಾರೀಕರಣ ವಿರೋಧಿಸಿ ಎಐಡಿಎಸ್‌ಒ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಸಹಿ ಸಂಗ್ರಹ ಅಭಿಯಾನದ ಅಂಗವಾಗಿ ಬುಧವಾರ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ವಿದ್ಯಾರ್ಥಿಗಳ ಬೃಹತ್ ಸಮಾವೇಶ ನಡೆಯಿತು.

150 ದಿನಗಳ ಸಹಿ ಸಂಗ್ರಹ ಅಭಿಯಾನದಲ್ಲಿ 40 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ರಾಜ್ಯದ ಎಲ್ಲ ಜಿಲ್ಲೆಗಳಿಂದ 35 ಲಕ್ಷಕ್ಕೂ ಅಧಿಕ ಸಹಿಗಳನ್ನು ಪಡೆಯಲಾಗಿದೆ. ಈ ಸಹಿಗಳೊಂದಿಗೆ ಮನವಿ ಪತ್ರವನ್ನು ಮುಖ್ಯಮಂತ್ರಿ ಅವರ ಮೂಲಕ ಪ್ರಧಾನಿ ಅವರಿಗೆ ತಲುಪಿಸಲಾಗುವುದು ಎಂದು ಮುಖಂಡರು ತಿಳಿಸಿದ್ದಾರೆ.

ಸಮಾವೇಶದಲ್ಲಿ ಮಾತನಾಡಿದ ಹಂಪಿ ಕನ್ನಡ ವಿಶ್ವವಿದ್ಯಾಲಯದ ನಿವೃತ್ತ ಕುಲಪತಿ ಪ್ರೊ.ಎ. ಮುರಿಗೆಪ್ಪ, 'ಶಿಕ್ಷಣವನ್ನು ದುಬಾರಿಗೊಳಿಸಿರುವ ಸರ್ಕಾರವು ಜನವಿರೋಧಿಯಾಗಿದೆ. ಹೀಗಾಗಿ, ಹೋರಾಟ ನಡೆಸುವುದು ವಿದ್ಯಾರ್ಥಿಗಳ ಹಕ್ಕು' ಎಂದರು.

ಎಐಡಿಎಸ್‌ಒ ಅಖಿಲ ಭಾರತ ಸಮಿತಿ ಅಧ್ಯಕ್ಷ ವಿ.ಎನ್. ರಾಜಶೇಖರ್ ಮಾತನಾಡಿ, 'ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯು(ಎನ್‌ಇಪಿ) ಸರ್ಕಾರಿ ಶಿಕ್ಷಣ ಸಂಸ್ಥೆಗಳು ಕಮರಿ ಹೋಗುವಂತಹ ಶಿಫಾರಸುಗಳನ್ನು ಮಾಡಿದೆ. ಈ ಮೊದಲು ಕಾಂಗ್ರೆಸ್ ಸರ್ಕಾರವು 1986ರಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೊಳಿಸಿ ಶಿಕ್ಷಣದ ಖಾಸಗೀಕರಣಕ್ಕೆ ರತ್ನಗಂಬಳಿ ಹಾಸಿತ್ತು. ಈಗ ಕೇಂದ್ರ ಸರ್ಕಾರವು ಎನ್‌ಇಪಿ ಮೂಲಕ ಶಿಕ್ಷಣವನ್ನು ಮತ್ತಷ್ಟು ರಭಸವಾಗಿ ಕಾರ್ಪೊರೇಟ್ ರೀತಿಯಲ್ಲಿ ವಾಣಿಜ್ಯೀಕರಣಗೊಳಿಸುತ್ತಿದೆ. ಈ ಮೂಲಕ ಬಡ ವಿದ್ಯಾರ್ಥಿಗಳಿಗೆ ದ್ರೋಹ ಬಗೆಯುತ್ತಿದೆ' ಎಂದು ಅವರು ದೂರಿದರು.

'ಸಹಿ ಸಂಗ್ರಹ ಅಭಿಯಾನ ಮುಂದುವರಿಯಲಿದೆ. ದೇಶದಾದ್ಯಂತ ಒಂದು ಲಕ್ಷ ಎನ್‌ಇಪಿ ವಿರೋಧಿ ಸಮಿತಿಗಳ ರಚಿಸಿ ವಿದ್ಯಾರ್ಥಿ ವಿರೋಧಿ ಹೊಸ ಶಿಕ್ಷಣ ನೀತಿಯನ್ನು ಹಿಮ್ಮೆಟಿಸಲು ಒಕ್ಕೊರಲಿನಿಂದ ಮುಂದಾಗಬೇಕು' ಎಂದು ಕರೆ ನೀಡಿದರು.

> **ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವ ಹಾಗೂ ಅನ್ಯಾಯ ಪ್ರಶ್ನೆ ಮಾಡುವ ಮನಃಸ್ಥಿತಿಯನ್ನು ಹಿಸುಕಿ ಹಾಕಲು ಸರ್ಕಾರ ಎಲ್ಲ ರೀತಿಯಲ್ಲೂ ಹುನ್ನಾರ ನಡೆಸುತ್ತಿದೆ.**
> **ಅಶ್ವಿನಿ ಕೆ.ಎಸ್.,** ರಾಜ್ಯ ಅಧ್ಯಕ್ಷೆ

> **ಕಾಲೇಜು ನಿರ್ವಹಣೆಗೆ ವಿದ್ಯಾರ್ಥಿಗಳಿಂದಲೇ ಆದಾಯ ಮಾಡಿಕೊಳ್ಳಿ ಎಂದು ಸಚಿವರೊಬ್ಬರು ಹೇಳಿದ್ದಾರೆ. ಸರ್ಕಾರ ಉದಾತ್ತ ಆಶಯಗಳಿಗೆ ಕೊಳ್ಳಿ ಇಟ್ಟಿದೆ.**
> **ಅಜಯ್ ಕಾಮತ್**
> ಎಐಡಿಎಸ್‌ಒ ರಾಜ್ಯ ಕಾರ್ಯದರ್ಶಿ

ಸುದ್ದಿ 2 ನಿಮಿಷ

ಇದೇ 30ಕ್ಕೆ ದೇಗುಲಗಳಲ್ಲಿ ಸಾಮೂಹಿಕ ಕುಂಕುಮಾರ್ಚನೆ

ಬೆಂಗಳೂರು: ಎಲ್ಲ ದೇವಸ್ಥಾನಗಳಲ್ಲಿ ಲಲಿತಾ ಪಂಚಮಿ (ಸೆ. 30) ದಿನ ಸಾಮೂಹಿಕ ಕುಂಕುಮಾರ್ಚನೆ ನಡೆಸುವಂತೆ ಮುಜರಾಯಿ ಸಚಿವೆ ಶಶಿಕಲಾ ಜೊಲ್ಲೆ ಸೂಚನೆ ನೀಡಿದ್ದಾರೆ.

ಪ್ರತಿವರ್ಷ ಪಾಡ್ಯದಿಂದ ನವಮಿವರೆಗೆ (ನವರಾತ್ರಿ) ಶಕ್ತಿ ಸ್ವರೂಪಿಣಿಯವರಾದ ಜಗನ್ಮಾತೆಯರನ್ನು ವಿಶೇಷವಾಗಿ ಆರಾಧಿಸುವುದು ಹಿಂದೂ ಧರ್ಮದಲ್ಲಿ ನಡೆದುಕೊಂಡು ಬಂದಿರುವ ಆಚರಣೆ. ಅದರಂತೆ, ಇದೇ 30ರಂದು ಲಲಿತಾ ಪಂಚಮಿ ವಿಶೇಷವಾಗಿದ್ದು, ಅಂದು ಎಲ್ಲ ದೇವಸ್ಥಾನಗಳಲ್ಲಿ ಮಹಿಳೆಯರನ್ನು ಬರಮಾಡಿಕೊಂಡು ಅರ್ಚಕರ ಮೂಲಕ ಎರಡು ಪಾಳಿಯಲ್ಲಿ ಕುಂಕುಮಾರ್ಚನೆ ನೆರವೇರಿಸಬೇಕು' ಎಂದು ಅವರು ಹೇಳಿದ್ದಾರೆ.

'ಅನಿವಾರ್ಯಗಳಿಂದ ಅಂದು ಕುಂಕುಮಾರ್ಚನೆ ನಡೆಸಲು ಸಾಧ್ಯವಾಗದಿದ್ದರೆ ಅ. 3ರಂದು (ದುರ್ಗಾಷ್ಟಮಿ) ಈ ಕಾರ್ಯಕ್ರಮ ನಡೆಸಬೇಕು. ಜತೆಗೆ ವ್ಯಾಪಕ ಪ್ರಚಾರ ನೀಡಬೇಕು' ಎಂದೂ ಅಧಿಕಾರಿಗಳಿಗೆ ಅವರು ಸೂಚಿಸಿದ್ದಾರೆ.

ಶಾಲೆಗಳ ನವೀಕರಣಕ್ಕೆ ಅರ್ಜಿ ಸಲ್ಲಿಕೆಗೆ ಅಕ್ಟೋಬರ್ 15ರ ಗಡುವು

ಬೆಂಗಳೂರು: ಖಾಸಗಿ ಅನುದಾನಿತ, ಅನುದಾನ ರಹಿತ ಖಾಸಗಿ ಶಾಲೆಗಳ ಹೊಸ ಮಾನ್ಯತೆ, ನವೀಕರಣಕ್ಕಾಗಿ ಅರ್ಜಿ ಸಲ್ಲಿಸಲು ಅ.15ರವರೆಗೆ ಅವಕಾಶ ಕಲ್ಪಿಸಲಾಗಿದೆ.

ಮಾನ್ಯತೆ, ನವೀಕರಣಕ್ಕಾಗಿ ಸಲ್ಲಿಸಿದ ಅರ್ಜಿಗಳು ತಿರಸ್ಕೃತವಾಗಿರುವ, ಅರ್ಜಿ ಸಲ್ಲಿಸಲು ಸಾಧ್ಯವಾಗದೇ ಇರುವ ಎಲ್ಲ ಶಾಲಾ ಆಡಳಿತ ಮಂಡಳಿಗಳೂ ಮತ್ತೆ ಅರ್ಜಿ ಸಲ್ಲಿಸಬಹುದು. ಸೆ.29ರಿಂದ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಕೊನೆಯ ದಿನಾಂಕದ ಒಳಗೆ ಸುರಕ್ಷತಾ ಪ್ರಮಾಣ ಪತ್ರ ಸಲ್ಲಿಸಲು ಸಾಧ್ಯವಾಗದೇ ಇರುವ ಶಾಲೆಗಳು ಅಫಿಡವಿಟ್ ನೀಡಬಹುದು.

ಸಲ್ಲಿಕೆಯಾದ ಎಲ್ಲ ಅರ್ಜಿಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು, ಉಪ ನಿರ್ದೇಶಕರು ಹಂತಹಂತವಾಗಿ ನ.25ರ ಒಳಗೆ ಇತ್ಯರ್ಥಪಡಿಸಬೇಕು. ಇಲ್ಲದಿದ್ದರೆ ಅಂತಹ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲಾಗುವುದು ಎಂದು ಆಯುಕ್ತರು ಆದೇಶದಲ್ಲಿ ಎಚ್ಚರಿಸಿದ್ದಾರೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	124.00	4,547	7,113
ಹಾರಂಗಿ	2,859	2,856.84	544	1,450
ಕಬಿನಿ	2,284	2,282.71	1,020	1,550
ಹೇಮಾವತಿ	2,922	2,921.88	2,941	3,325
ಲಿಂಗನಮಕ್ಕಿ	1,819	1,815	1,819	9,143
ಸೂಪಾ (ಮೀ)	564	553.90	1,714	3,833
ಮಾಣಿ	594	590	518	714
ತುಂಗಭದ್ರಾ	1,633	1,633	9,807	9,909
ಮಲಪ್ರಭಾ	2,079.50	2,079.50	694	694
ಘಟಪ್ರಭಾ	2,175	2,175	2,201	2,201
ಭದ್ರಾ	186	184	3,200	3,200
ಆಲಮಟ್ಟಿ (ಮೀ)	519.60	519.60	9,136	9,136
ನಾರಾಯಣಪುರ (ಮೀ)	492.25	492.08	10,486	9,290

* ನೆಲಮಟ್ಟದಿಂದ

'ಶೇ 40ರಷ್ಟು ಕಮಿಷನ್: ಆರೋಪ ಸಾಬೀತುಪಡಿಸಲು ಕಾಂಗ್ರೆಸ್ ವಿಫಲ'

ಶಿರಸಿ: 'ಗುತ್ತಿಗೆದಾರರಿಂದ ರಾಜ್ಯ ಸರ್ಕಾರ ಶೇ 40 ರಷ್ಟು ಕಮಿಷನ್ ಪಡೆಯುತ್ತಿದೆ ಎಂದು ಹಾದಿಬೀದಿಯಲ್ಲಿ ಆರೋಪಿಸಿದ್ದ ಕಾಂಗ್ರೆಸ್ ಈ ಆರೋಪವನ್ನು ವಿಧಾನಸಭೆ ಅಧಿವೇಶನದಲ್ಲಿ ಪ್ರಸ್ತಾಪಿಸಲಿಲ್ಲ. ಆರೋಪ ಸಾಬೀತುಪಡಿಸಲು ಅದು ವಿಫಲವಾಗಿದೆ' ಎಂದು ಲೋಕೋಪಯೋಗಿ ಸಚಿವ ಸಿ.ಸಿ. ಪಾಟೀಲ ಹೇಳಿದರು.

ಇಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಕಾಂಗ್ರೆಸ್ ಆರೋಪಕ್ಕೆ ಅಗತ್ಯ ದಾಖಲೆ ಸಹಿತ ಪ್ರತ್ಯುತ್ತರ ನೀಡಲು ಸಿದ್ಧರಾಗಿಯೇ ಸದನಕ್ಕೆ ತೆರಳಿದ್ದೆವು. ಸಿದ್ದರಾಮಯ್ಯ ಸೇರಿದಂತೆ ಯಾವ ಕಾಂಗ್ರೆಸ್ ನಾಯಕರು ಈ ಕುರಿತು ತುಟಿ ಬಿಚ್ಚಲಿಲ್ಲ' ಎಂದರು.

ಕೃಷಿ ಭೂಪರಿವರ್ತನೆ: ಸುಗ್ರೀವಾಜ್ಞೆಗೆ ತೀರ್ಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಗಳಿಗೆ ಬಳಸಿಕೊಳ್ಳಲು ಅವಕಾಶ ಕಲ್ಪಿಸುವ ಭೂಪರಿವರ್ತನೆ ತಿದ್ದುಪಡಿ ಮಸೂದೆಯನ್ನು ಸುಗ್ರೀವಾಜ್ಞೆಯ ಮೂಲಕ ಜಾರಿಗೊಳಿಸಲು ನಿರ್ಧರಿಸಲಾಗಿದೆ' ಎಂದು ಕಂದಾಯ ಸಚಿವ ಆರ್.ಅಶೋಕ ಹೇಳಿದರು.

ರಾಜ್ಯದಲ್ಲಿರುವ ಲಕ್ಷಾಂತರ ಕಂದಾಯ ನಿವೇಶನಗಳನ್ನು ಭೂಪರಿವರ್ತನೆ ವ್ಯಾಪ್ತಿಗೆ ತರಲು ಉದ್ದೇಶಿಸಲಾಗಿದೆ. ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಸೆಕ್ಷನ್ 95 ಕ್ಕೆ ತಿದ್ದುಪಡಿಯಿಂದ ಪರಿವರ್ತನೆಗಿದ್ದ ಅಡ್ಡಿ ಆತಂಕಗಳು ನಿವಾರಣೆಗೊಳ್ಳಲಿವೆ ಎಂದು ಅವರು ಬುಧವಾರ ಸುದ್ದಿಗಾರರಿಗೆ ತಿಳಿಸಿದರು.

ಇತ್ತೀಚೆಗೆ ನಡೆದ ಅಧಿವೇಶನದಲ್ಲಿ ಮಸೂದೆಗೆ ಅಂಗೀಕಾರ ಪಡೆಯಲು ಸಾಧ್ಯವಾಗಿಲ್ಲ. ಆದ್ದರಿಂದ ಸುಗ್ರೀವಾಜ್ಞೆ ಹೊರಡಿಸಲು ನಿರ್ಧರಿಸಲಾಗಿದೆ ಎಂದರು.

ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಗಳಿಗೆ ಭೂಪರಿವರ್ತನೆ ಮಾಡಿಸಿಕೊಳ್ಳಲು ಅರ್ಜಿ ನೀಡಿದ 7 ದಿನಗಳಲ್ಲಿ ಅರ್ಜಿಯನ್ನು ಇತ್ಯರ್ಥಗೊಳಿಸಲಾಗುವುದು. ಗ್ರಾಮೀಣ ಪ್ರದೇಶದಲ್ಲಿ ಪರಿವರ್ತನೆಗೆ ಅರ್ಜಿ ಸಲ್ಲಿಸಿದ 30 ದಿನಗಳಲ್ಲಿ ಅವರ ಉದ್ದೇಶಗಳಿಗೆ ಅನುಮತಿ ಸಿಗಲಿದೆ ಎಂದು ಅವರು ಹೇಳಿದರು.

ಮಸೂದೆಯ ಮುಖ್ಯ ಅಂಶಗಳು: 'ಮಹಾ ಯೋಜನೆ (ಮಾಸ್ಟರ್ ಪ್ಲಾನ್) ಅಥವಾ ನಗರ ಯೋಜನಾ ಪ್ರಾಧಿಕಾರದ ಮಂಜೂರಾತಿ ಅನ್ವಯ ಕೃಷಿ ಭೂಮಿ ಅಥವಾ ಅದರ ಭಾಗವನ್ನು ಯಾವುದಾದರೂ ಇತರ ಉದ್ದೇಶಕ್ಕೆ ಬಳಸಲು ಇಚ್ಛಿಸುವವರು ನಿಗದಿಪಡಿಸಿದ ದಂಡ ಪಾವತಿಸಿ ಪ್ರಮಾಣಪತ್ರ ಸಹಿತ ಜಿಲ್ಲಾಧಿಕಾರಿಗೆ ಅರ್ಜಿ ಸಲ್ಲಿಸಬೇಕು. ಹೀಗೆ ಸಲ್ಲಿಕೆಯಾದ ಅರ್ಜಿಗಳಿಗೆ ಏಳು ದಿನಗಳ ಒಳಗೆ ಜಿಲ್ಲಾಧಿಕಾರಿ ಮಂಜೂರಾತಿ ಆದೇಶ ಹೊರಡಿಸಬೇಕು. 15 ದಿನ ಕಳೆದರೂ ಜಿಲ್ಲಾಧಿಕಾರಿ ಅರ್ಜಿಗಳನ್ನು ವಿಲೇವಾರಿ ಮಾಡದಿದ್ದರೆ, ಕೃಷಿಯೇತರ ಭೂಮಿಯಾಗಿ ಪರಿವರ್ತನೆ ಆಗಿದೆ ಎಂದು ಪರಿಭಾವಿಸಿಕೊಳ್ಳಬಹುದು' ಎಂದು ಅಂಶ ತಿದ್ದುಪಡಿಯಾದ ಮಸೂದೆಯಲ್ಲಿದೆ.

ಕರ್ನಾಟಕ ದ್ವೇಷ ರಾಜಕಾರಣದ ಪ್ರಯೋಗ ಶಾಲೆಯಾಗಿದೆ: ಆರೋಪ

'ಭಾರತ್ ಜೋಡೊ ಇಂದಿನ ಅಗತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಂಗ್ರೆಸ್‌ನ 'ಭಾರತ್ ಜೋಡೊ' ಪಾದಯಾತ್ರೆ ಇಂದಿನ ಅಗತ್ಯವಾಗಿದೆ. ಡಾ.ಬಿ.ಆರ್. ಅಂಬೇಡ್ಕರ್ ಅವರ ಸಂವಿಧಾನ ಅಪಾಯದಲ್ಲಿದೆ. ನಾಗರಿಕತೆಯ ಅಡಿಪಾಯದ ಮೇಲೆ ದಾಳಿ ನಡೆಯುತ್ತಿದೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ನಾವೆಲ್ಲರೂ ಬೀದಿಯಲ್ಲಿ ನಿಂತು ನಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಬೇಕಿದೆ' ಎಂದು ಸ್ವರಾಜ್ ಅಭಿಯಾನದ ಯೋಗೇಂದ್ರ ಯಾದವ್ ಹೇಳಿದರು.

'ಬಸವಣ್ಣನವರ ನಾಡಿನಲ್ಲಿ ದ್ವೇಷ ರಾಜಕಾರಣಕ್ಕೆ ಅವಕಾಶವಿಲ್ಲ. ಕುವೆಂಪು ಅವರ ಕವಿತೆಗಳಿಂದ ಪ್ರಭಾವಿತನಾಗಿದ್ದೇನೆ. ಸಾಹಿತಿಗಳಾದ ಯು.ಆರ್. ಅನಂತಮೂರ್ತಿ, ಗಿರೀಶ್ ಕಾರ್ನಾಡ್ ಅವರ ಬರಹಗಳನ್ನು ಓದಿ ಬೆಳೆದಿದ್ದೇನೆ. ಇಲ್ಲಿನ ದಲಿತ ಸಾಹಿತ್ಯದ ಆಳವನ್ನು ಅರಿತಿದ್ದೇನೆ. ಆದರೆ ಇಲ್ಲಿ ಬಿಜೆಪಿ ಮತ್ತು ಸಂಘ ಪರಿವಾರವು ಹಿಂದೂ-ಮುಸ್ಲಿಂ ವಿಚಾರಗಳನ್ನು ಮುನ್ನೆಲೆಗೆ ತಂದು, ಕರ್ನಾಟಕವನ್ನು ದ್ವೇಷ ರಾಜಕಾರಣದ ಪ್ರಯೋಗ ಶಾಲೆಯಾಗಿ ಪರಿವರ್ತಿಸಲಾಗಿದೆ' ಎಂದು ಬುಧವಾರ ನಡೆದ ಸುದ್ದಿಗೋಷ್ಠಿ ಅವರು ಕಳವಳ ವ್ಯಕ್ತಪಡಿಸಿದರು.

'ಕಾಂಗ್ರೆಸ್ ಹಮ್ಮಿಕೊಂಡಿರುವ ಯಾತ್ರೆ ಯಾವುದೇ ಪಕ್ಷಕ್ಕೆ ಸೀಮಿತವಾಗಿಲ್ಲ. ದೇಶದ ಆಗುಹೋಗುಗಳ ಬಗ್ಗೆ ಕಾಳಜಿ ಇರುವ, ಸಂವಿಧಾನ ಮತ್ತು ಪ್ರಜಾತಂತ್ರದಲ್ಲಿ ನಂಬಿಕೆ ಇಟ್ಟಿರುವ ವ್ಯಕ್ತಿ ಮತ್ತು ಸಂಘಟನೆಗಳ ಯಾತ್ರೆಯಾಗಿದೆ. ಇದು ದಕ್ಷಿಣದ ಯೋಚನೆಗಳೊಂದಿಗೆ ಉತ್ತರದ ಕಡೆಗೆ ಪ್ರಯಾಣ. ಇದು ಪ್ರತಿಯೊಬ್ಬರ ಮನಸ್ಸುಗಳನ್ನು ಜೋಡಿಸುವ ಯಾತ್ರೆ' ಎಂದರು.

ಸಾಹಿತಿ ಎಸ್.ಜಿ. ಸಿದ್ದರಾಮಯ್ಯ ಮಾತನಾಡಿ, 'ಬಹುತ್ವ ಭಾರತ, ಒಕ್ಕೂಟ ವ್ಯವಸ್ಥೆ, ಶಿಕ್ಷಣ, ಸಮಾನತೆಗೆ ದೊಡ್ಡ ಕುತ್ತು ಎದುರಾಗಿದೆ. ಈಗ ನಾವು ಮೌನವಾಗಿದ್ದರೆ ನಮ್ಮ ಮುಂದಿನ ಪೀಳಿಗೆ ಕ್ಷಮಿಸುವುದಿಲ್ಲ' ಎಂದರು.

ಸಾಹಿತಿ ಬಂಜಗೆರೆ ಜಯಪ್ರಕಾಶ್ ಮಾತನಾಡಿ, 'ದೇಶದಲ್ಲಿ ಜಾತಿ, ಧರ್ಮದ ಪಂಗಡೀಕರಣ ಮತ್ತು ವಿಂಗಡೀಕರಣ ವಿದ್ಯಮಾನ ನಡೆಯುತ್ತಿದೆ. ಅಭಿವ್ಯಕ್ತಿ ಸ್ವಾತಂತ್ರ್ಯ, ಮಾನವ ಹಕ್ಕುಗಳ ದಮನೀಕರಣ ನಡೆಯುತ್ತಿದೆ. ಸೌಹಾರ್ದ ಭಾರತ ನಿರ್ಮಾಣಕ್ಕೆ ಯಾತ್ರೆ ಸಾಕ್ಷಿಯಾಗಲಿದೆ' ಎಂದರು.

ಪ್ರಕಾಶ್ ಕಮ್ಮರಡಿ, ಬಿ.ಟಿ. ಲಲಿತಾ ನಾಯಕ್, ರುದ್ರಪ್ಪ ಹನಗವಾಡಿ, ಜಿ.ಜಿ. ಹಳ್ಳಿ ನಾರಾಯಣಸ್ವಾಮಿ ಇದ್ದರು.

> **ಭಾರತ ಜೋಡೊ ಯಾತ್ರೆ ದಕ್ಷಿಣದ ಪ್ರಮುಖ ಚಳವಳಿಯಂತೆ ಭಾಸವಾಗುತ್ತಿದೆ. ಹೀಗಾಗಿ, ಎಲ್ಲರೂ ಪಕ್ಷ, ಸಿದ್ಧಾಂತ, ವಿಚಾರಗಳ ಭೇದವಿಲ್ಲದೆ ಭಾಗವಹಿಸಬೇಕು**
> **ಯೋಗೇಂದ್ರ ಯಾದವ್**
> ಸ್ವರಾಜ್ ಅಭಿಯಾನ

ಭಾವೈಕ್ಯ ಕರ್ನಾಟಕ ಬೆಂಬಲ

ಕಾಂಗ್ರೆಸ್‌ನ ಭಾರತ್ ಜೋಡೊ ಯಾತ್ರೆಗೆ ನಾಡಿನ ಹಲವು ಗಣ್ಯರು, ಸಂಘಟನೆಗಳು, ಸಮಾನಮನಸ್ಕರು ಭಾವೈಕ್ಯ ಕರ್ನಾಟಕ ವೇದಿಕೆ ಅಡಿಯಲ್ಲಿ ಬೆಂಬಲ ಸೂಚಿಸಿದ್ದಾರೆ.

ನ್ಯಾಯಮೂರ್ತಿ ಗೋಪಾಲಗೌಡ, ಸಾಹಿತಿಗಳಾದ ಕೆ. ಮರುಳಸಿದ್ದಪ್ಪ, ಬಿ.ಟಿ. ಲಲಿತಾ ನಾಯಕ್, ದು.ಸರಸ್ವತಿ, ನಟ ಪ್ರಕಾಶ್ ರಾಜ್, ಸಬಿಹಾ ಭೂಮಿಗೌಡ ಯಾತ್ರೆಗೆ ಬೆಂಬಲ ಸೂಚಿಸಿದ್ದಾರೆ.

ಕೆಎಸ್‌ಆರ್‌ಟಿಸಿ ಸಿಬ್ಬಂದಿ ಗಳಿಕೆ ರಜೆ ಮೊತ್ತ ಪಾವತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಸರಾ ಹಬ್ಬಕ್ಕೆ ನೌಕರರಿಗೆ ಸಿಹಿ ಸುದ್ದಿ ನೀಡಿರುವ ಕೆಎಸ್‌ಆರ್‌ಟಿಸಿ, ಗಳಿಕೆ ರಜೆ ನಗದೀಕರಣ ಮೊತ್ತ ಪಾವತಿಸುವುದಾಗಿ ತಿಳಿಸಿದೆ.

ಕೋವಿಡ್‌ನಿಂದ ಉಂಟಾಗಿದ್ದ ಕ್ಲಿಷ್ಟಕರ ಪರಿಸ್ಥಿತಿಯಲ್ಲಿ ಸಿಬ್ಬಂದಿಗೆ ಗಳಿಕೆ ರಜೆ ಪಾವತಿಸಲು ಸಾಧ್ಯವಾಗಿರಲಿಲ್ಲ. ಆರ್ಥಿಕವಾಗಿ ಚೇತರಿಕೆ ಹಂತದಲ್ಲಿದ್ದರೂ ನೌಕರರಿಗೆ ಹಬ್ಬದ ಸಡಗರ ಹೆಚ್ಚಿಸಲು ನಿಗಮ ತೀರ್ಮಾನಿಸಿದೆ. 2021–22ನೇ ಸಾಲಿನ ಗಳಿಕೆ ರಜೆ ನಗದೀಕರಣ ಮೊತ್ತವನ್ನು ಅ.3ರಂದು ಎಲ್ಲಾ ಅರ್ಹ ಸಿಬ್ಬಂದಿಗೆ ಪಾವತಿಸಲಾಗುವುದು ಎಂದು ಕೆಎಸ್‌ಆರ್‌ಟಿಸಿ ಅಧ್ಯಕ್ಷ ಎಂ.ಚಂದ್ರಪ್ಪ ಮತ್ತು ವ್ಯವಸ್ಥಾಪಕ ನಿರ್ದೇಶಕ ವಿ.ಅನ್ಬುಕುಮಾರ್ ತಿಳಿಸಿದ್ದಾರೆ.

ಗುರುವಾರ, ಸೆಪ್ಟೆಂಬರ್ 29, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 270 | ಪುಟ 18
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಣಿಪಾಲ್ ಹಾಸ್ಪಿಟಲ್ಸ್
ಹೃದಯ ಸಂಬಂಧಿತ ಎಮರ್ಜನ್ಸಿ ಸೇವೆಗಾಗಿ ಸ್ಕ್ಯಾನ್ ಮಾಡಿ

ಆಳ-ಅಗಲ
ಉಗ್ರರೊಂದಿಗೆ ನಂಟು ಆರೋಪ ಪಿಎಫ್‌ಐಗೆ ಬೀಗಮುದ್ರೆ

ಇಂದು ಸ್ಪರ್ಧಾವಾಣಿ 6

ಸಿಇಟಿ ಪರಿಷ್ಕೃತ ರ‍್ಯಾಂಕಿಂಗ್: ಅ.1ಕ್ಕೆ ಪ್ರಕಟ 3

ಪಿಎಸ್‌ಐ: ಮರು ಪರೀಕ್ಷೆ ನಿರ್ಧಾರಕ್ಕೆ ಮಧ್ಯಂತರ ತಡೆ 3B

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
56,598	16,858	₹51,050 (ಬೆಂಗಳೂರು)	₹55,800 (ಬೆಂಗಳೂರು)	81.93

Berger express painting
Faster. Cleaner. Safer.
SMS XP to 56767
GET IT ON Google Play
Download on the App Store
ಹಬ್ಬದ ಖುಷಿಯನ್ನು ಸ್ವಾಗತಿಸಿ
ಚಕಮಕಿಸುವ ಪೇಂಟ್ ಮಾಡಿದ ಮನೆಯೊಂದಿಗೆ

ಅನಿಲ್ ಚೌಹಾಣ್ ಸೇನಾಪಡೆಗಳ ಮುಖ್ಯಸ್ಥ



ನವದೆಹಲಿ (ಪಿಟಿಐ): ಜನರಲ್ ಬಿಪಿನ್ ರಾವತ್ ಅವರ ದುರ್ಮರಣದಿಂದಾಗಿ 9 ತಿಂಗಳಿಂದ ಖಾಲಿ ಇದ್ದ ಸೇನಾ ಪಡೆಗಳ ಮುಖ್ಯಸ್ಥರ (ಸಿಡಿಎಸ್) ಹುದ್ದೆಗೆ ಲೆಫ್ಟಿನೆಂಟ್ ಜನರಲ್ (ನಿವೃತ್ತ) ಅನಿಲ್ ಚೌಹಾಣ್ ಅವರನ್ನು ಬುಧವಾರ ನೇಮಕ ಮಾಡಲಾಗಿದೆ. 3

ಚಿನಕುರಳಿ

ಪ್ರಕಾಶ್ ಶೆಟ್ಟಿ

ಭಯೋತ್ಪಾದನಾ ಸಂಘಟನೆಗಳ ಜತೆಗೆ ನಂಟು, ಕೋಮುದ್ವೇಷ ಹರಡುವ ಯತ್ನದ ಆರೋಪ

ಪಿಎಫ್‌ಐಗೆ 5 ವರ್ಷ ನಿಷೇಧ

ನವದೆಹಲಿ (ಪಿಟಿಐ): ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಸಂಘಟನೆಯನ್ನು ಕೇಂದ್ರ ಸರ್ಕಾರವು ಐದು ವರ್ಷಗಳ ಅವಧಿಗೆ ಬುಧವಾರ ನಿಷೇಧಿಸಿದೆ. ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆ ಅಡಿಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ.

ಜಾಗತಿಕ ಮಟ್ಟದ ಭಯೋತ್ಪಾದನಾ ಸಂಘಟನೆ ಐಎಸ್ ಮತ್ತು ಇತರ ಉಗ್ರಗಾಮಿ ಸಂಘಟನೆಗಳ ಜತೆಗೆ ನಂಟು ಹೊಂದಿದೆ ಹಾಗೂ ದೇಶದೊಳಗೆ ಕೋಮುದ್ವೇಷ ಹರಡಲು ಸಂಘಟನೆಯು ಯತ್ನಿಸಿದೆ ಎಂದು ಆರೋಪಿಸಲಾಗಿದೆ.

ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ), ಜಾರಿ ನಿರ್ದೇಶನಾಲಯ (ಇ.ಡಿ) ಮತ್ತು ವಿವಿಧ ರಾಜ್ಯಗಳ ಪೊಲೀಸರು ಇತ್ತೀಚಿನ ಕೆಲ ದಿನಗಳಲ್ಲಿ ಪಿಎಫ್‌ಐಗೆ ಸಂಬಂಧಿಸಿದ ಸ್ಥಳಗಳಲ್ಲಿ ಎರಡು ಬಾರಿ ಶೋಧ ನಡೆಸಿ, ಸಂಘಟನೆಯ ಹಲವು ಸದಸ್ಯರನ್ನು ಬಂಧಿಸಿದ್ದರು. ಅದಾದ ಬಳಿಕ ನಿಷೇಧದ ಆದೇಶ ಹೊರಬಿದ್ದಿದೆ. ಇದೇ 22ರಂದು ನಡೆದ ಶೋಧದ ಸಮಯದಲ್ಲಿ 106 ಮುಖಂಡರನ್ನು ಬಂಧಿಸಲಾಗಿತ್ತು. ಮಂಗಳವಾರ ನಡೆದ ಶೋಧದ ಸಂದರ್ಭದಲ್ಲಿ 170ಕ್ಕೂ ಹೆಚ್ಚು ಮಂದಿಯನ್ನು ಬಂಧಿಸಲಾಗಿತ್ತು ಅಥವಾ ವಶಕ್ಕೆ ಪಡೆಯಲಾಗಿತ್ತು.

ನಿಷೇಧದ ಬಳಿಕ ಪಿಎಫ್‌ಐ ಕಚೇರಿಗಳಿಗೆ ಬೀಗ ಹಾಕಿ ಮೊಹರು ಮಾಡುವ ಪ್ರಕ್ರಿಯೆಗೂ ಚಾಲನೆ ನೀಡಲಾಗಿದೆ. ಪಿಎಫ್‌ಐ ಸಂಘಟನೆಯು ಸಕ್ರಿಯವಾಗಿರುವ 17 ರಾಜ್ಯಗಳಲ್ಲಿ ಇರುವ ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸಲಾಗುವುದು.

ಪಿಎಫ್‌ಐಯನ್ನು ಕಾನೂನುಬಾಹಿರ ಚಟುವಟಿಕೆ ತಡೆ ಕಾಯ್ದೆ ಅಡಿಯಲ್ಲಿ ನಿಷೇಧಿಸಲು ಅಗತ್ಯವಾದಷ್ಟು ಕಾರಣಗಳು ಇವೆಯೇ ಎಂಬುದನ್ನು ಪರಿಶೀಲಿಸಲು ಕೇಂದ್ರ ಸರ್ಕಾರವು ನ್ಯಾಯಮಂಡಳಿಯನ್ನು 30 ದಿನಗಳೊಳಗೆ ರಚಿಸಲಿದೆ. ತನ್ನನ್ನು ಸಮರ್ಥಿಸಿಕೊಳ್ಳಲು ಪಿಎಫ್‌ಐಗೆ ಅವಕಾಶ ಇದೆ.

2006ರಲ್ಲಿ ಆರಂಭವಾದ ಸಂಘಟನೆಯ ಮೇಲೆ 2010ರಿಂದಲೇ ನಿಗಾ ಇರಿಸಲಾಗಿತ್ತು. ಪಿಎಫ್‌ಐ ಪ್ರಬಲವಾಗಿರುವ ಕೇರಳದಲ್ಲಿ ಈ ಸಂಘಟನೆಯ ಕಾರ್ಯಕರ್ತರು ಪ್ರಾಧ್ಯಾಪಕ ಟಿ.ಜೆ. ಜೋಸೆಫ್ ಅವರ ಕೈ ಕತ್ತರಿಸಿದ್ದರು. ಈ ಪ್ರಕರಣದಲ್ಲಿ ಭಾಗಿಯಾಗಿದ್ದ ಹಲವರು ತಪ್ಪಿತಸ್ಥರು ಎಂದು ನ್ಯಾಯಾಲಯವು ತೀರ್ಪು ನೀಡಿದೆ.

ದೇಶದಾದ್ಯಂತ ಪಿಎಫ್‌ಐ ಮತ್ತು ಅದರ ಸದಸ್ಯರ ವಿರುದ್ಧ 1,400ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ. ಭಯೋತ್ಪಾದನೆ ತಡೆ ಕಾನೂನುಗಳ ಅಡಿಯಲ್ಲಿ ಈ ಪ್ರಕರಣಗಳನ್ನು ದಾಖಲಿಸಲಾಗಿದೆ. ಸಂಘಟನೆಯು ರಹಸ್ಯ ತಂಡ ಒಂದನ್ನು ರಚಿಸಿಕೊಂಡಿದೆ.

7ನೇ ಪುಟ ನೋಡಿ

ಪಿಎಫ್‌ಐ ಜತೆ ಸಿದ್ದರಾಮಯ್ಯ ನೆಂಟಸ್ತಿಕೆ: ಬೊಮ್ಮಾಯಿ

ಬೆಂಗಳೂರು: 'ಪಿಎಫ್‌ಐ ಜತೆ ನೆಂಟಸ್ತಿಕೆ ಇರುವುದರಿಂದಲೇ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಆ ಸಂಘಟನೆಯ ಮೇಲಿನ ನಿಷೇಧವನ್ನು ವಿರೋಧಿಸುತ್ತಿದ್ದಾರೆ. ಇವರ ಸರ್ಕಾರದ ಅವಧಿಯಲ್ಲೇ ಪಿಎಫ್‌ಐ ಕಾರ್ಯಕರ್ತರ ಮೇಲಿನ ಪ್ರಕರಣಗಳನ್ನು ಹಿಂದಕ್ಕೆ ಪಡೆದಿದ್ದರು. ಇದಕ್ಕಿಂತ ಸಾಕ್ಷ್ಯ ಬೇಕಾ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪ್ರಶ್ನಿಸಿದರು.

ಸುದ್ದಿಗಾರರ ಜತೆ ಬುಧವಾರ ಮಾತನಾಡಿದ ಅವರು, 'ದೇಶದಲ್ಲಿ ಏನೇ ನಡೆದರೂ ಆರ್‌ಎಸ್‌ಎಸ್‌ಗೆ ಸಂಬಂಧ ಕಲ್ಪಿಸುವುದು ಸಿದ್ದರಾಮಯ್ಯ ಅವರ ಜಾಯಮಾನ. ಬೆಕ್ಕಿನ ಕಣ್ಣಿನಲ್ಲಿ ಇಲಿ ಎಂಬಂತೆ ಸಿದ್ದರಾಮಯ್ಯ ಕಣ್ಣಲ್ಲಿ ಸದಾ ಆರ್‌ಎಸ್‌ಎಸ್ ಇರುತ್ತದೆ. ಆರ್‌ಎಸ್‌ಎಸ್ ಅನ್ನು ಏಕೆ ನಿಷೇಧ ಮಾಡಬೇಕು? ದೇಶ ಭಕ್ತ ಸಂಘಟನೆ ಆಗಿರುವುದರಿಂದಲೇ? ದೀನ-ದಲಿತರಿಗಾಗಿ ಮತ್ತು ಸಂಕಷ್ಟದಲ್ಲಿ ಇರುವವರಿಗಾಗಿ ಕೆಲಸ ಮಾಡುತ್ತಿರುವುದರಿಂದಲೇ? ಈ ದೇಶದ ಸಂಸ್ಕೃತಿ ಮತ್ತು ಪರಂಪರೆಯನ್ನು ಉಳಿಸುತ್ತಿರುವುದಕ್ಕಾಗಿ ನಿಷೇಧ ಮಾಡಬೇಕೆ' ಎಂದು ತರಾಟೆಗೆ ತೆಗೆದುಕೊಂಡರು.

7ನೇ ಪುಟ ನೋಡಿ

ಆರ್‌ಎಸ್‌ಎಸ್ ವಿರುದ್ಧವೂ ಕ್ರಮ ತೆಗೆದುಕೊಳ್ಳಿ: ಸಿದ್ದರಾಮಯ್ಯ

ಬೆಂಗಳೂರು: 'ಆರ್‌ಎಸ್‌ಎಸ್, ಮತ್ತಿತರ ಸಂಘಟನೆಗಳು ಕಾನೂನು ವಿರೋಧಿ ಕೃತ್ಯಕ್ಕೆ ಕೈ ಹಾಕಿ, ಸಮಾಜದಲ್ಲಿ ಶಾಂತಿ ಕದಡುವ ಪ್ರಯತ್ನ ಮಾಡಿದರೆ ಅವುಗಳ ವಿರುದ್ಧವೂ ಕ್ರಮ ಜರುಗಿಸಬೇಕು' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಪಿಎಫ್‌ಐ ನಿಷೇಧಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಅವರು, 'ಕಾನೂನಿಗೆ ವಿರುದ್ಧವಾಗಿ ನಡೆದುಕೊಳ್ಳುವ, ಸಮಾಜದಲ್ಲಿ ಶಾಂತಿ ಕದಡುವ ಯಾವುದೇ ಸಂಘಟನೆ ವಿರುದ್ಧ ಸರ್ಕಾರ ಕ್ರಮ ಕೈಗೊಂಡರೆ ವಿರೋಧಿಸುವುದಿಲ್ಲ' ಎಂದರು.

'ಸಮಾಜದ ಶಾಂತಿ, ಸಾಮರಸ್ಯ ಹಾಳು ಮಾಡುವ, ದ್ವೇಷದ ರಾಜಕಾರಣ ಮಾಡುವ ಸಂಘಟನೆ ಯಾವುದೇ ಆಗಿದ್ದರೂ ಅಂಥ ಸಂಘಟನೆಗಳನ್ನು ಸರ್ಕಾರ ನಿಷೇಧಿಸಬೇಕು' ಎಂದೂ ಹೇಳಿದರು.

ನಿಷೇಧಿತ ಸಂಘಟನೆಗಳು

ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ, ರೆಹಾಬ್ ಇಂಡಿಯಾ ಫೌಂಡೇಶನ್, ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾ, ಆಲ್ ಇಂಡಿಯಾ ಇಮಾಮ್ಸ್ ಕೌನ್ಸಿಲ್, ನ್ಯಾಷನಲ್ ಕಾನ್ಫೆಡರೇಷನ್ ಆಫ್ ಹ್ಯೂಮನ್ ರೈಟ್ಸ್ ಫೌಂಡೇಶನ್, ನ್ಯಾಷನಲ್ ವಿಮೆನ್ಸ್ ಫ್ರಂಟ್, ಜೂನಿಯರ್ ಫ್ರಂಟ್, ಎಂಪವರ್ ಇಂಡಿಯಾ ಫೌಂಡೇಶನ್

ಬಾಗಮನೆ ಒತ್ತುವರಿ ತೆರವು ಪ್ರಕರಣ

ಲೋಕಾಯುಕ್ತರ ನಡೆಗೆ ಹೈಕೋರ್ಟ್ ಅಸಮಾಧಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಗಮನೆ ಟೆಕ್‌ಪಾರ್ಕ್ ಬಳಿಯ ಒತ್ತುವರಿ ತೆರವಿಗೆ ಸಂಬಂಧಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಕೈಗೊಂಡ ಕಾರ್ಯಾಚರಣೆ ವಿರುದ್ಧದ ದೂರಿನ ವಿಚಾರಣೆ ನಡೆಸಿದ ಲೋಕಾಯುಕ್ತರ ನಡೆಗೆ ಹೈಕೋರ್ಟ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

ಈ ಸಂಬಂಧ ಧಾರವಾಡದ ಸಮಾಜ ಪರಿವರ್ತನಾ ಸಮುದಾಯದ (ಎಸ್‌ಪಿಎಸ್) ಸಂಸ್ಥಾಪಕ ಅಧ್ಯಕ್ಷ ಎಸ್.ಆರ್.ಹಿರೇಮಠ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹಿರಿಯ ವಕೀಲ ಎಸ್.ಬಸವರಾಜ್, 'ಲೋಕಾಯುಕ್ತ ಸರ್ಕಾರಿ ನೌಕರರ ಭ್ರಷ್ಟಾಚಾರದ ಆರೋಪಗಳ ಬಗ್ಗೆ ದಾಖಲಾಗುವ ದೂರುಗಳ ಕುರಿತು ಕ್ರಮ ಕೈಗೊಳ್ಳಬೇಕು. ಸಾರ್ವಜನಿಕ ಆಡಳಿತವನ್ನು ಅಭಿವೃದ್ಧಿಪಡಿಸುವ ದಿಸೆಯಲ್ಲಿ ಕಾರ್ಯ ನಿರ್ವಹಿಸಬೇಕು. ಆದರೆ, ಈಗಿರುವ ಲೋಕಾಯುಕ್ತರು ತಮ್ಮ ಮಿತಿಯನ್ನು ಮೀರಿ, ಅಸಾಂವಿಧಾನಿಕವಾಗಿ ನಡೆದುಕೊಂಡಿದ್ದಾರೆ ಮತ್ತು ಸಾಂವಿಧಾನಿಕವಾಗಿ ಸ್ಥಾಪಿತವಾದ ಹೈಕೋರ್ಟ್‌ಗೆ ಪರ್ಯಾಯವಾಗಿ ಕಾರ್ಯನಿರ್ವಹಿಸಿದ್ದಾರೆ' ಎಂದು ದೂರಿದರು.

3ನೇ ಪುಟ ನೋಡಿ

ಕೇಂದ್ರ ನೌಕರರ ತುಟ್ಟಿ ಭತ್ಯೆ ಶೇ 4ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರಿ ನೌಕರರ ತುಟ್ಟಿ ಭತ್ಯೆ (ಡಿಎ) ಹಾಗೂ ತುಟ್ಟಿ ಪರಿಹಾರವನ್ನು (ಡಿಆರ್) ಶೇ 4ರಷ್ಟು ಹೆಚ್ಚಿಸುವ ಪ್ರಸ್ತಾವನೆಗೆ ಕೇಂದ್ರ ಸಚಿವ ಸಂಪುಟ ಬುಧವಾರ ಅನುಮೋದನೆ ನೀಡಿದೆ. ಇದು ಈ ವರ್ಷದ ಜುಲೈ 1ರಿಂದಲೇ ಜಾರಿಗೊಳ್ಳಲಿದೆ.

ಕೇಂದ್ರ ಸರ್ಕಾರದ ನಿರ್ಧಾರ ದಿಂದಾಗಿ 41.85 ಲಕ್ಷ ಕೇಂದ್ರ ಸರ್ಕಾರಿ ನೌಕರರು ಹಾಗೂ 69.76 ಲಕ್ಷ ಪಿಂಚಣಿದಾರರಿಗೆ ಪ್ರಯೋಜನವಾಗಲಿದೆ. ಡಿಎ ಹಾಗೂ ಡಿಆರ್ ಹೆಚ್ಚಳದಿಂದ ಸರ್ಕಾರದ ಬೊಕ್ಕಸಕ್ಕೆ ವಾರ್ಷಿಕ ಒಟ್ಟು ₹12,852.56 ಕೋಟಿ ಹೊರೆಯಾಗಲಿದೆ.

PRINCE JEWELLERY
GREAT FESTIVAL SALE
FLAT VALUE ADDITION
4.99%* ರಿಂದ ಪ್ರಾರಂಭ
ಪ್ರಿನ್ಸ್ ಅಶ್ಯೂರ್ಡ್ ವ್ಯಾಲ್ಯೂ ಸಂಗ್ರಹಣೆಯ ಮೇಲೆ
7.5%* ರಿಯಾಯಿತಿ
ಪ್ರಮಾಣೀಕೃತ ನೈಸರ್ಗಿಕ ವಜ್ರದ ಆಭರಣಗಳ ಮೇಲೆ ಪ್ರತಿ ಕ್ಯಾರೆಟ್‌ಗೆ
25%* ರಿಯಾಯಿತಿ
ಬೆಳ್ಳಿ ವಸ್ತುಗಳ ಮೇಕಿಂಗ್ ಚಾರ್ಜ್‌ಗಳ ಮೇಲೆ



ಉಚಿತ*
ಆಭರಣ ಖರೀದಿಯ ಮೇಲೆ ಹಬ್ಬದ ಸೀರೆ / ರಿಡೀಮ್ ಮಾಡಬಹುದಾದ ಉಡುಗೊರೆ ವೋಚರ್‌ಗಳು
ಪ್ರತಿ ಆಭರಣ ಖರೀದಿಯ ಮೇಲೆ ಗೃಹೋಪಕರಣ ವಸ್ತುಗಳು ಉಚಿತ*
Lowest market rate | Quality + collections you'll love | Best value on exchange | BIS 916 Hallmarked Gold | GIA Certified Diamonds
BENGALURU: 11th Main Road, Near Cosmopolitan Club, 3rd Block, Jayanagar. Ph: 080-4264 9999.
CHENNAI | COIMBATORE | THIRUVANANTHAPURAM
www.princejewellery.com Open on Sundays. Valet parking available.
*Terms and conditions apply. Offers not valid for coins, bullions, solitaires and exchange of diamond jewellery.
Offer not valid on jewellery with wastage (VA) less than 10%. Offer cannot be clubbed with other offers and closure of purchase plan.

ನಿಮ್ಮ ಮನೆಗೆ ನೀಡಿ
ಹಬ್ಬದ ಬಣ್ಣಗಳಿಂದ ಪರಿವರ್ತನೆ
ಹಬ್ಬದ ಖುಷಿಯ ಆರಂಭದ ಮುನ್ನವೇ
ಆಯ್ಕೆ ಮಾಡಿ ಬರ್ಜರ್ ಎಕ್ಸ್‌ಪ್ರೆಸ್ ಪೇಂಟಿಂಗ್™ - ನಿಮ್ಮ ಮನೆಯನ್ನು
ಅತ್ಯಂತ ಶೀಘ್ರವಾಗಿ ಪೇಂಟ್ ಮಾಡುವ ಒಂದು ಅತ್ಯುತ್ತಮ ಉಪಾಯ.

ಉಚಿತ ಹೋಂ ಕನ್ಸಲ್ಟೆನ್ಸಿ
ಕಲರ್ ಹಾಗೂ ಡೆಕೋರ್ ಕನ್ಸಲ್ಟೆನ್ಸಿ
ಫರ್ನಿಚರ್ ಅನ್ನು ಸಂಪೂರ್ಣವಾಗಿ ಮುಚ್ಚಿಡುವುದು
ನಗದು-ರಹಿತ ಹಾಗೂ ಪಾರದರ್ಶಕ ಟ್ರಾನ್ಸಾಕ್ಷನ್
ಪೇಂಟ್‌ನ ಹೋಂ-ಡೆಲಿವರಿ
ಪೇಂಟಿಂಗ್ ನಂತರ ಸ್ವಚ್ಛ ಮಾಡುವುದು
Berger express painting
Faster. Cleaner. Safer.
ಶೀಘ್ರ, ಹ್ಯಾಸಲ್-ಫ್ರೀ
ಪೇಂಟಿಂಗ್ ಪರಿಹಾರಕ್ಕಾಗಿ
call us at 1800 103 6030
or SMS XP to 56767
GET IT ON Google Play
Download on the App Store

*ಗ್ರಾಹಕ ಹಾಗೂ ಸೇವಾದಾತರ ನಡುವಿನ ನಡುವೆ ಅನುಬಂಧದ ಮೂಲಕ ಪೇಂಟಿಂಗ್ ಸೇವೆಯನ್ನು ನೀಡಲಾಗುತ್ತದೆ. ಬರ್ಜರ್ ಪೇಂಟ್ಸ್ ಇಂಡಿಯ ಲಿಮಿಟೆಡ್ ಕೇವಲ ಪೇಂಟ್ ಸರಬರಾಜು ಹಾಗೂ ಟ್ರೈನಿಂಗ್ ನೀಡುತ್ತದೆ. *ಗೋಡೆಯ ಉಪಯುಕ್ತ ಪರೀಕ್ಷೆಯು ಪರಿಸ್ಥಿತಿಯ ಅಧೀನದಲ್ಲಿದೆ.
*ಪೇಂಟಿಂಗ್ ವೆಚ್ಚವು ಮಾರುಕಟ್ಟೆಯಲ್ಲಿ ಪ್ರಚಲಿತವಿರುವ ದರದ ಅನುರೂಪವಾಗಿರುತ್ತದೆ. ಎಕ್ಸ್‌ಪ್ರೆಸ್ ಪೇಂಟಿಂಗ್ ಟೂಲ್ ಅನ್ನು ಉಪಯೋಗಿಸುವುದಕ್ಕೆ ಯಾವುದೇ ಹೆಚ್ಚುವರಿ ಖರ್ಚಿಲ್ಲ

ಡಾ.ಸಿ.ಎನ್. ಮಂಜುನಾಥ್ ಅವರು ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿದರು. ಪಿಸಿಯೋಥೆರಪಿ ವಿಭಾಗದ ಮುಖ್ಯಸ್ಥ ರಾಜೀವ್, ಕಾಲೇಜಿನ ಆಡಳಿತ ಮಂಡಳಿ ಅಧ್ಯಕ್ಷ ಹನುಮಂತರಾಯಪ್ಪ ಆರ್., ರಾಜ್ಯ ಒಕ್ಕಲಿಗರ ಸಂಘದ ಉಪಾಧ್ಯಕ್ಷ ಡಾ.ರೇಣುಕಾಪ್ರಸಾದ್ ಕೆ.ವಿ. ಹಾಗೂ ನಿರ್ದೇಶಕ ಡಾ.ಟಿ.ಎಚ್. ಆಂಜನಪ್ಪ ಇದ್ದಾರೆ —ಪ್ರಜಾವಾಣಿ ಚಿತ್ರ

'ದುಬಾರಿಯಾದ ಆರೋಗ್ಯ ಕ್ಷೇತ್ರ'

ಬೆಂಗಳೂರು: 'ಇತ್ತೀಚೆಗೆ ಆರೋಗ್ಯ ಕ್ಷೇತ್ರ ದುಬಾರಿಯಾಗಿದ್ದು, ಕೈಗೆಟಕುವ ದರದಲ್ಲಿ ಗುಣಮಟ್ಟದ ಚಿಕಿತ್ಸೆ ನೀಡುವ ಬಗ್ಗೆ ಆಲೋಚಿಸಬೇಕು' ಎಂದು ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ತಿಳಿಸಿದರು.

ರಾಜ್ಯ ಒಕ್ಕಲಿಗರ ಸಂಘ ನಗರದಲ್ಲಿ ಬುಧವಾರ ಹಮ್ಮಿಕೊಂಡ ಕೆಂಪೇಗೌಡ ಇನ್‌ಸ್ಟಿಟ್ಯೂಟ್ ಆಫ್ ಪಿಸಿಯೋಥೆರಪಿಯ ಘಟಿಕೋತ್ಸವದಲ್ಲಿ ಭಾಗವಹಿಸಿ ಮಾತನಾಡಿದರು. 'ವೈದ್ಯರಾದವರು ವೃತ್ತಿನಿಷ್ಠೆ ಮತ್ತು ಬದ್ಧತೆಯಿಂದ ಕಾರ್ಯನಿರ್ವಹಿಸಬೇಕು. ನಾವು ಮಾಡುವ ಕಾರ್ಯದಲ್ಲಿ ಪ್ರತಿಷ್ಠೆ, ದೊಡ್ಡತನವನ್ನು ತೋರಬೇಕೇ ಹೊರತು, ಬಟ್ಟೆಗಳಲ್ಲಿ ಅಲ್ಲ. ಹೃದಯವಂತಿಕೆ, ಸಹನೆ, ತಾಳ್ಮೆ, ಕರುಣೆ ಮತ್ತು ನಗುವಿನೊಂದಿಗೆ ರೋಗಿಗಳಿಗೆ ಚಿಕಿತ್ಸೆ ನೀಡಬೇಕು' ಎಂದು ಹೇಳಿದರು.

'ಯಶಸ್ಸು ಸಾಧಿಸಲು ಜೀವನದಲ್ಲಿ ಅಡ್ಡದಾರಿ ಹಿಡಿಯುವುದು ಒಳ್ಳೆಯದಲ್ಲ. ಕಠಿಣ ಪರಿಶ್ರಮದಿಂದ ಕೆಲಸ ಮಾಡಿದಾಗ ಮಾತ್ರ ಪರಿಪೂರ್ಣ ಯಶಸ್ಸು ಸಾಧಿಸಲು ಸಾಧ್ಯವಾಗುತ್ತದೆ. ಕಡಿಮೆ ಅವಧಿಯಲ್ಲಿ ದೊಡ್ಡ ಯಶಸ್ಸು ಗಳಿಸಬೇಕೆಂಬ ಹಂಬಲವನ್ನು ಯುವಜನರು ಹೊಂದಿದ್ದಾರೆ. ಇದು ಒತ್ತಡಕ್ಕೆ ಕಾರಣವಾಗಿದ್ದು, ಹಲವು ರೋಗಗಳು ಆವರಿಸಿಕೊಳ್ಳುತ್ತಿವೆ. ದೇಹದಲ್ಲಿ ಕಾಣಿಸಿಕೊಳ್ಳುವ ಸಣ್ಣ ಪುಟ್ಟ ನೋವುಗಳಿಗೂ ಔಷಧ ಪಡೆದಲ್ಲಿ ಅಡ್ಡ ಪರಿಣಾಮಗಳು ಕಾಣಿಸಿಕೊಳ್ಳುವ ಸಾಧ್ಯತೆ ಇರುತ್ತದೆ' ಎಂದು ತಿಳಿಸಿದರು.

ಕಾಲೇಜಿನಲ್ಲಿ ಪದವಿ ಪೂರೈಸಿದ್ದ 175 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ತಿದ್ದುಪಡಿ

ವಾಷಿಂಗ್ಟನ್: ಪುಟಿನ್ ಜತೆಗಿನ ಮಾತುಕತೆ ವೇಳೆ ಪ್ರಧಾನಿ ನರೇಂದ್ರ ಮೋದಿ ಅವರು 'ಇದು ಯುದ್ಧ ಕಾಲವಲ್ಲ' ಎಂದು ಹೇಳಿರುವುದಕ್ಕೆ ಅಮೆರಿಕ ಸಂಪೂರ್ಣ ಸಹಮತ ವ್ಯಕ್ತಪಡಿಸಿದೆ.

ವಿದೇಶಾಂಗ ಸಚಿವ ಎಸ್. ಜೈಶಂಕರ್ ಜತೆಗೆ ಮಂಗಳವಾರ ದ್ವಿಪಕ್ಷೀಯ ಮಾತುಕತೆಯ ನಂತರ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕನ್, ಮೋದಿ ಅವರ ಹೇಳಿಕೆಗೆ ಸಹಮತ ವ್ಯಕ್ತಪಡಿಸಿದ್ದರು. ಆದರೆ, ಬುಧವಾರದ ಸಂಚಿಕೆಯಲ್ಲಿ ಈ ಮಾಹಿತಿ ತಪ್ಪಾಗಿ ಪ್ರಕಟವಾಗಿತ್ತು.

ಪಿಎಫ್‌ಐ ಸದಸ್ಯರ ಮನೆ ಮೇಲೆ ದಾಳಿ

ಭಟ್ಕಳ: ಕೇಂದ್ರ ಸರ್ಕಾರ ಮಂಗಳವಾರ ಪಿಎಫ್‌ಐ ಸಂಘಟನೆಗೆ ನಿಷೇಧ ಹೇರಿದ್ದ ಬೆನ್ನಲ್ಲೇ ಪಟ್ಟಣದಲ್ಲಿ ಬುಧವಾರ ಉಪವಿಭಾಗಾಧಿಕಾರಿ, ಸಿಪಿಐ ಒಳಗೊಂಡ ಅಧಿಕಾರಿಗಳ ತಂಡ ಸಂಘಟನೆಯ ಜಿಲ್ಲಾ ಘಟಕದ ಅಧ್ಯಕ್ಷ ಕರೀಮ್ ಹಾಗೂ ಹೆಬಳೆಯ ಹನಿಫಾಬಾದ್‌ನಲ್ಲಿರುವ ಕಾರ್ಯದರ್ಶಿ ಸಲ್ಮಾನ್ ಮನೆ ಮೇಲೆ ಏಕಕಾಲದಲ್ಲಿ ದಾಳಿ ನಡೆಸಿತು.

ಪಿಎಫ್‌ಐಗೆ ಸೇರಿದ ಪುಸ್ತಕ, ಮೊಬೈಲ್ ಫೋನ್ ಸೇರಿದಂತೆ ಮಹತ್ವದ ದಾಖಲೆಗಳನ್ನು ಪರಿಶೀಲಿಸಿ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ. ದಾಳಿಯ ಸಂದರ್ಭದಲ್ಲಿ ಇಬ್ಬರೂ ಮನೆಗಳಲ್ಲಿ ಇರಲಿಲ್ಲ.

ಬಿಬಿಎಂಪಿ ವಾರ್ಡ್‌ವಾರು ಮೀಸಲಾತಿ– ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಪ್ರಶ್ನೆ

ಮೀಸಲು ಬದಲಾವಣೆ ಸಾಧ್ಯವೇ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) 243 ವಾರ್ಡ್‌ಗಳಿಗೆ ಈಗ ನಿಗದಿಪಡಿಸಲಾಗಿರುವ ವಾರ್ಡ್‌ವಾರು ಮೀಸಲಾತಿಯನ್ನು ಬದಲಾಯಿಸಿ, ಹೊಸದಾಗಿ ಮೀಸಲು ನಿಗದಿ ಮಾಡಲು ಸಾಧ್ಯವೇ ಎಂಬ ಬಗ್ಗೆ ನಿಮ್ಮ ನಿಲುವು ಏನು ಎಂಬುದನ್ನು ತಿಳಿಸಿ' ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶಿಸಿದೆ.

ಈ ಕುರಿತಂತೆ ಈಜಿಪುರದ ಕೆ.ಮಹದೇವ, ಕಮ್ಮನಹಳ್ಳಿಯ ಪಳನಿ ದಯಾಳನ್, ದೊಡ್ಡಬಾಣಸವಾಡಿಯ ವಿ.ಶ್ರೀನಿವಾಸ್ ಮತ್ತು ನಾಗನಾಥಪುರದ ಕೆ.ಚಂದ್ರಶೇಖರ್ ಸೇರಿ ಎಂಟು ಜನ ಸಲ್ಲಿಸಿರುವ ರಿಟ್ ಅರ್ಜಿಗಳ ವಿಚಾರಣೆಯನ್ನು ನ್ಯಾಯಮೂರ್ತಿ ಹೇಮಂತ ಚಂದನಗೌಡರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ಮುಂದುವರಿಸಿತು.

'ಒಬಿಸಿ ಅಂಕಿ ಅಂಶಗಳನ್ನು ಒದಗಿಸಿ ಹೊಸದಾಗಿ ಮೀಸಲು ನಿಗದಿಪಡಿಸಲು ಸಾಧ್ಯವೇ, ಹಾಗಾದರೆ ಇದಕ್ಕೆ ಎಷ್ಟು ಕಾಲಾವಕಾಶ ಬೇಕು, ಈ ಕುರಿತಂತೆ ಪ್ರಮಾಣಪತ್ರ ಸಲ್ಲಿಸಿ' ಎಂದು ರಾಜ್ಯ ಸರ್ಕಾರಕ್ಕೆ ಸೂಚಿಸಿತು. ಅಲ್ಲಿಯವರೆಗೂ ಚುನಾವಣಾ ವೇಳಾಪಟ್ಟಿ ಪ್ರಕಟಿಸದಂತೆ ಚುನಾವಣಾ ಆಯೋಗಕ್ಕೆ ತಾಕೀತು ಮಾಡಿತು.

'ಚುನಾವಣೆ ವಿಳಂಬವಾಗಬಾರದು. ಸುಪ್ರೀಂ ಕೋರ್ಟ್‌ನ ಆದೇಶದಂತೆಯೇ ನಡೆಯಬೇಕು. ಸಾಧ್ಯವಾದಷ್ಟೂ ಶೀಘ್ರವೇ ಅಂದರೆ, ಈ ವರ್ಷದೊಳಗೆ ಬಿಬಿಎಂಪಿ ಚುನಾವಣೆ ನಡೆಯಲೇಬೇಕು' ಎಂದು ನ್ಯಾಯಪೀಠ ಮೌಖಿಕ ಅಭಿಪ್ರಾಯ ವ್ಯಕ್ತಪಡಿಸಿತು. ವಿಚಾರಣೆಯನ್ನು ಇದೇ 30ಕ್ಕೆ ಮುಂದೂಡಲಾಗಿದೆ.

ಬಿಬಿಎಂಪಿ ಚುನಾವಣೆ: 79 ಲಕ್ಷ ಮತದಾರರು

ಬೆಂಗಳೂರು: ಬಿಬಿಎಂಪಿ ಚುನಾವಣೆ ಸಂಬಂಧ ಅಂತಿಮ ಮತದಾರರ ಪಟ್ಟಿಯನ್ನು ಪಾಲಿಕೆ ಸಿದ್ಧಪಡಿಸಿದ್ದು, ಅದರ ಪ್ರಕಾರ ನಗರದಲ್ಲಿ 79 ಲಕ್ಷ ಮತದಾರರಿದ್ದಾರೆ.

ಪಟ್ಟಿ ತಯಾರಿಸಲು ಜುಲೈ 29ರಂದು ವೇಳಾಪಟ್ಟಿ ನಿಗದಿಯಾಗಿತ್ತು. ಸೆ.9ರ ವರೆಗೆ ಮತದಾರರು ಮಾಹಿತಿ ಒದಗಿಸಿದ್ದು, ಈ ಮಾಹಿತಿ ಬಳಸಿಕೊಂಡು ಅಂತಿಮ ಮತದಾರರ ಪಟ್ಟಿ ಸಿದ್ಧಪಡಿಸಲಾಗಿದೆ. ಸೆ.29ರಂದು ಪ್ರಕಟಿಸಲಾಗುವುದು ಎಂದು ಬಿಬಿಎಂಪಿ ತಿಳಿಸಿದೆ.

ಪಾಲಿಕೆಯ 243 ವಾರ್ಡ್‌ಗಳಲ್ಲಿ ಒಟ್ಟು 79,19,563 ಮತದಾರರಿದ್ದಾರೆ. ಅವರಲ್ಲಿ 41,14,383 ಪುರುಷರು, 38,03,747 ಮಹಿಳೆಯರು ಹಾಗೂ 1,433 ತೃತೀಯ ಲಿಂಗಿ ಮತದಾರರಿದ್ದಾರೆ ಎಂದು ವಿವರಿಸಿದೆ.

bbmp.gov.in ವೆಬ್‌ಸೈಟ್‌ನಲ್ಲಿ ಪಟ್ಟಿ ಪ್ರಕಟಿಸಲಾಗುವುದು. ಸಾರ್ವಜನಿಕರು ತಮ್ಮ ಹಾಗೂ ಕುಟುಂಬ ಸದಸ್ಯರ ಮಾಹಿತಿಯನ್ನು ಮತದಾರರ ಪಟ್ಟಿಯಲ್ಲಿ ಪರಿಶೀಲಿಸಿಕೊಳ್ಳಬಹುದು. ಮತದಾರರ ನೋಂದಣಾಧಿಕಾರಿ, ಸಹಾಯಕ ಮತದಾರರ ನೋಂದಣಾಧಿಕಾರಿ ಕಚೇರಿಗಳಲ್ಲಿ, ವಾರ್ಡ್ ಕಚೇರಿಗಳಲ್ಲಿ ಪಟ್ಟಿ ಲಭ್ಯವಿರಲಿದೆ. ಹೊಸದಾಗಿ ನೋಂದಾಯಿಸಿಕೊಳ್ಳಲು ಮೊಬೈಲ್ ಆ್ಯಪ್ (Voter Helpline App) ಮತ್ತು ಎನ್‌ವಿಎಸ್‌ಪಿ ಪೋರ್ಟಲ್ ಮೂಲಕವೂ ಅರ್ಜಿ ಸಲ್ಲಿಸಬಹುದು ಎಂದು ತಿಳಿಸಿದೆ.

ವಿಶ್ವ ರೇಬಿಸ್ ದಿನದ ಅಂಗವಾಗಿ ನಡೆದ ಕಾರ್ಯಕ್ರಮ

'ರೇಬಿಸ್ ರೋಗ ಸಂಪೂರ್ಣ ತಡೆಗೆ ಕ್ರಮ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರೇಬಿಸ್ ರೋಗವನ್ನು ಸಂಪೂರ್ಣವಾಗಿ ತಡೆಗಟ್ಟಲು ಸರ್ಕಾರ ಬದ್ಧವಾಗಿದೆ' ಎಂದು ಕೇಂದ್ರ ಸರ್ಕಾರದ ಪಶು ಸಂಗೋಪನೆ ಇಲಾಖೆ ಜಂಟಿ ಕಾರ್ಯದರ್ಶಿ ಉಪಮನ್ಯು ಬಸು ತಿಳಿಸಿದರು.

ನಗರದಲ್ಲಿ ಬುಧವಾರ ನಡೆದ ವಿಶ್ವ ರೇಬಿಸ್ ದಿನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಮಾರಣಾಂತಿಕ ಪ್ರಾಣಿಜನ್ಯ ರೋಗವಾಗಿರುವ ರೇಬಿಸ್ ತಡೆಗಟ್ಟಲು ಲಸಿಕೆ ಅಭಿಯಾನವನ್ನು 15 ದಿನಗಳ ಕಾಲ ದೇಶದಾದ್ಯಂತ ಹಮ್ಮಿಕೊಳ್ಳಲಾಗಿದೆ' ಎಂದು ಹೇಳಿದರು.

'ರೇಬಿಸ್ ರೋಗದಿಂದ ನರಳುತ್ತಿರುವ ಪ್ರಾಣಿಯ ಜೊಲ್ಲಿನಿಂದ ರೇಬಿಸ್ ವೈರಾಣು ಇತರೆ ಪ್ರಾಣಿಗಳಿಗೆ ಹರಡುತ್ತದೆ. ರೇಬಿಸ್ ರೋಗದ ನಿರ್ಮೂಲನೆಗಾಗಿ ಜಾಗೃತಿ ಮೂಡಿಸಲು ಪ್ರತಿವರ್ಷ ಸೆಪ್ಟೆಂಬರ್ 28ರಂದು ವಿಶ್ವ ರೇಬಿಸ್ ದಿನ ಆಚರಿಸಲಾಗುತ್ತಿದೆ. 'ಒನ್ ಹೆಲ್ತ್, ಝೀರೊ ಡೆತ್ಸ್' ಎನ್ನುವ ಘೋಷವಾಕ್ಯದೊಂದಿಗೆ ಈ ವರ್ಷ ವಿಶ್ವ ರೇಬಿಸ್ ದಿನ ಆಚರಿಸಲಾಗುತ್ತಿದೆ' ಎಂದು ವಿವರಿಸಿದರು.

ವಿಶ್ವ ರೇಬಿಸ್ ದಿನದ ಅಂಗವಾಗಿ ನಗರದ ಹೆಬ್ಬಾಳದ ಕರ್ನಾಟಕ ಪಶು ವೈದ್ಯಕೀಯ ಪರಿಷತ್‌ನಲ್ಲಿ ಬುಧವಾರ ಶ್ವಾನಗಳಿಗೆ ಲಸಿಕೆ ಹಾಕುವ ಅಭಿಯಾನ ನಡೆಯಿತು.

ಕರ್ನಾಟಕ ಪಶು ವೈದ್ಯಕೀಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಡಾ.ಕೆ.ಸಿ. ವೀರಣ್ಣ ಮಾತನಾಡಿ, 'ರೇಬಿಸ್‌ಪೀಡಿತ ನಾಯಿ ಇತರೆ ಪ್ರಾಣಿ ಮತ್ತು ಮನುಷ್ಯರಿಗೆ ಕಚ್ಚಿದರೆ ಶರೀರದೊಳಗೆ ರೇಬಿಸ್ ವೈರಾಣು ಪ್ರವೇಶಿಸಿ, ರೋಗಕ್ಕೆ ತುತ್ತಾಗುತ್ತಾರೆ. ರೇಬಿಸ್ ರೋಗ ತಡೆಗೆ ಬೆಂಗಳೂರು ಪಶು ಮಹಾವಿದ್ಯಾಲಯದ ಆವರಣದಲ್ಲಿ ರೇಬಿಸ್ ರೋಗ ನಿರ್ಣಯ ಪ್ರಯೋಗಾಲಯ ಸ್ಥಾಪಿಸಲಾಗಿದೆ' ಎಂದರು.

ಭಾರತೀಯ ಪಶು ವೈದ್ಯಕೀಯ ಪರಿಷತ್ ಕಾರ್ಯದರ್ಶಿ ಡಾ.ವಿನೋದ್ ಭಟ್ ಮಾತನಾಡಿ, 'ಬೀದಿ ನಾಯಿಗಳ ಸಂತತಿಯಿಂದಾಗಿ ನಾಯಿ ಕಡಿತ ಸಂಖ್ಯೆ ಹೆಚ್ಚಾಗುತ್ತಿದೆ' ಎಂದರು.

ಇಲಾಖೆ ಆಯುಕ್ತ ಶರತ್, ರೇಬಿಸ್ ತಜ್ಞ ಡಾ.ಶ್ರೀಕೃಷ್ಣ ಇಸ್ಲೂರು, ಕೆವಿಸಿ ಅಧ್ಯಕ್ಷ ಡಾ.ಸತ್ಯನಾರಾಯಣ್, ಹೆಚ್ಚುವರಿ ನಿರ್ದೇಶಕ ಡಾ.ಪಿ.ಟಿ.ಶ್ರೀನಿವಾಸ್, ಡಾ.ತಿಪ್ಪೇಸ್ವಾಮಿ, ಇಲಾಖೆ ನಿರ್ದೇಶಕ ಡಾ.ಮಂಜುನಾಥ್ ಪಾಳೇಗಾರ್ ಇದ್ದರು.

ಸುದ್ದಿ 2 ನಿಮಿಷ

ಪಿಎಫ್‌ಐ ನಿಷೇಧದಿಂದ ಶಾಂತಿ ನೆಲಸುತ್ತಾ: ಎಚ್‌ಡಿಕೆ ಪ್ರಶ್ನೆ

ಚನ್ನಪಟ್ಟಣ: 'ಪಿಎಫ್‌ಐ ಸಂಘಟನೆಯನ್ನು ನಿಷೇಧಿಸಿದ ತಕ್ಷಣ ಸಮಾಜದಲ್ಲಿ ಶಾಂತಿ ನೆಲಸುತ್ತಾ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ.

ಚನ್ನಪಟ್ಟಣದಲ್ಲಿ ಮಂಗಳವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಸಾಮರಸ್ಯ, ಸೌಹಾರ್ದತೆ ಬೆಳೆಸುವ ಕೆಲಸವನ್ನು ಸರ್ಕಾರ ಮಾಡಬೇಕು. ಯಾವುದೇ ಒಂದು ಸಂಘಟನೆ ನಿಷೇಧ ಮಾಡಿದರೆ ಶಾಂತಿ ನೆಲೆಸಲ್ಲ ಎಂದು ಹೇಳಿದರು.

'ಪಿಎಫ್‌ಐ ವಿರುದ್ಧ ದಾಖಲೆಗಳಿದ್ದರೆ ಅದನ್ನು ಜನರ ಮುಂದೆ ಇಡಬೇಕು. ಇದು ಕೇಂದ್ರ ಸರ್ಕಾರದ ಕರ್ತವ್ಯ. ಯಾವುದೇ ಸಂಘಟನೆಗಳು ಸಮಾಜಘಾತುಕ ಚಟುವಟಿಕೆಯಲ್ಲಿ ತೊಡಗಿದ್ದರೆ ಕಠಿಣ ಕ್ರಮ ಆಗಬೇಕು. ಯಾವ ಯಾವ ಸಂಘಟನೆಗಳಿಂದ ದೇಶ ದ್ರೋಹದ ಕೆಲಸ ಆಗಿದೆ. ಯಾವ ರೀತಿ ಗಲಭೆ ಸೃಷ್ಟಿಗೆ ಪ್ರೋತ್ಸಾಹ ಕೊಡುತ್ತಿದ್ದಾರೆ ಎಂಬ ಮಾಹಿತಿಯನ್ನು ಜನತೆಗೆ ತಿಳಿಸಬೇಕು' ಎಂದರು.

ಒಡಿಶಾ: ಕಾಲಮಿತಿಯಲ್ಲಿ ಜಮೀನು

ಬೆಂಗಳೂರು: ಒಡಿಶಾದಲ್ಲಿ ಹೂಡಿಕೆ ಮಾಡುವ ಉದ್ಯಮಗಳಿಗೆ ಮೂವತ್ತು ಎಕರೆವರೆಗಿನ ಜಮೀನನ್ನು ಮೂವತ್ತು ದಿನಗಳ ಒಳಗೆ ಹಂಚಿಕೆ ಮಾಡುವ ಭರವಸೆಯನ್ನು ಅಲ್ಲಿನ ಸರ್ಕಾರ ನೀಡಿದೆ. 50 ಎಕರೆವರೆಗಿನ ಜಮೀನನ್ನು 50 ದಿನಗಳೊಳಗೆ ಹಾಗೂ 100 ಎಕರೆವರೆಗಿನ ಜಮೀನನ್ನು 100 ದಿನಗಳೊಳಗೆ ಹಂಚಿಕೆ ಮಾಡುವುದಾಗಿಯೂ ಸರ್ಕಾರವು ಉದ್ಯಮಿಗಳಿಗೆ ಭರವಸೆ ಇತ್ತಿದೆ.

ನವೆಂಬರ್ 30ರಿಂದ ಭುವನೇಶ್ವರದಲ್ಲಿ ನಡೆಯಲಿರುವ ಮೇಕ್ ಇನ್ ಒಡಿಶಾ ಕಾನ್‌ಕ್ಲೇವ್ ಪೂರ್ವಭಾವಿಯಾಗಿ ಬೆಂಗಳೂರಿನಲ್ಲಿ ಬುಧವಾರ ನಡೆದ ಹೂಡಿಕೆದಾರರ ಸಮ್ಮೇಳನದಲ್ಲಿ ಒಡಿಶಾ ಸರ್ಕಾರದ ಅಧಿಕಾರಿಗಳು ಈ ವಿಷಯ ತಿಳಿಸಿದರು.

ಸಮ್ಮೇಳನದಲ್ಲಿ ಮಾತನಾಡಿದ ಒಡಿಶಾ ಮುಖ್ಯಮಂತ್ರಿ ನವೀನ್ ಪಟ್ನಾಯಕ್, 'ದೇಶದಲ್ಲಿ ಅತ್ಯಂತ ವೇಗವಾಗಿ ಬೆಳವಣಿಗೆ ಕಾಣುತ್ತಿರುವ ಅರ್ಥವ್ಯವಸ್ಥೆಗಳಲ್ಲಿ ನಮ್ಮ ರಾಜ್ಯವೂ ಒಂದು. ಒಡಿಶಾ ರಾಜ್ಯವು ಒಂದೂವರೆ ದಶಕದಿಂದ ರಾಷ್ಟ್ರೀಯ ಸರಾಸರಿಗಿಂತ ಹೆಚ್ಚಿನ ವೇಗದಲ್ಲಿ ಬೆಳವಣಿಗೆ ಕಂಡಿದೆ' ಎಂದರು.

'ಉದ್ಯಮಗಳಿಗೆ ಅಗತ್ಯವಿರುವ ಪ್ರತಿಭಾವಂತರ ದೊಡ್ಡ ಪಡೆಯೇ ಒಡಿಶಾದಲ್ಲಿ ಇದೆ. ಸಬ್ಸಿಡಿ ಇಲ್ಲದಿದ್ದರೂ ಅತ್ಯಂತ ಕಡಿಮೆ ದರಕ್ಕೆ ವಿದ್ಯುತ್ ಒದಗಿಸುವ ರಾಜ್ಯ ನಮ್ಮದು' ಎಂದು ಅಲ್ಲಿನ ಕೈಗಾರಿಕಾ ಸಚಿವ ಪ್ರತಾಪ್ ಕೇಸರಿ ದೇವ್ ಹೇಳಿದರು.

FOTO CIRCLE
FOR EVERYTHING IN PHOTOGRAPHY
No.G.7,8,9, Brigade Plaza, S.C.Road, Near Anandrao Circle, Bangalore-09 Ph: +91-80-22874356, +91-80-22872572 E-mail : fotocirclenk@gmail.com

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ನಂ:ಬೆಂಅಪ್ರಾ/ನಯೋಸ/CLU-106/1527/2022-23 ದಿನಾಂಕ:28.09.2022

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಮಾಲೀಕರ ಪರವಾಗಿ ಜಿಪಿಎದಾರರಾದ ನವನಾಮಿ ಪ್ರಾಜೆಕ್ಟ್ಸ್ ಪ್ರೈ.ಲಿ.	ಪೂರ್ವ	ವರ್ತೂರು	ಕೊಡತಿ	25/3	0 ಎಕರೆ– 2 ಗುಂಟೆ	ವ್ಯವಸಾಯ	ವಸತಿ
2					25/4	0 ಎಕರೆ– 26 ಗುಂಟೆ		
3					25/8	0 ಎಕರೆ– 12.50ಗುಂಟೆ		
4					25/9	0 ಎಕರೆ– 12.50ಗುಂಟೆ		
5					25/10	0 ಎಕರೆ– 12ಗುಂಟೆ		
6					25/11	0 ಎಕರೆ– 24ಗುಂಟೆ		
7					25/16	0 ಎಕರೆ– 8.50ಗುಂಟೆ		
8					25/18	0 ಎಕರೆ– 12ಗುಂಟೆ		
9					25/19	0 ಎಕರೆ– 12ಗುಂಟೆ		
					ಒಟ್ಟು	3 ಎಕರೆ 1.50ಗುಂಟೆ		

ಷರಾ: ಅರ್ಜಿದಾರರು ಪ್ರಶ್ನಿತ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಮಾಡುವುದರಿಂದ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ವಿನ್ಯಾಸ ಅಭಿವೃದ್ಧಿಯಿಂದ ಸುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಹಾಗೂ ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯದ ಜಾಗಗಳು ಮತ್ತು ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತವೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಪ್ರಶ್ನಿತ ಜಮೀನುಗಳನ್ನು "ವ್ಯವಸಾಯ ವಲಯ" ದಿಂದ "ವಸತಿ ಉಪಯೋಗಕ್ಕೆ" ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಚಿಸಿರುವುದಾಗಿ ತಿಳಿಸಿರುತ್ತಾರೆ.

BDA/PRO/CLU/116/2022-23 ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಭಯೋತ್ಪಾದನೆ ಬೆಂಬಲಿಗರನ್ನೂ ನಿಷೇಧಿಸಬೇಕು: ಸಚಿವ ಕೋಟ

ಪ್ರಜಾವಾಣಿ ವಾರ್ತೆ

ಕೋಲಾರ: 'ಮುಂಬರುವ ಚುನಾವಣೆಯು ಭಯೋತ್ಪಾದಕರಿಗೆ ಬೆಂಬಲ ನೀಡುವವರು ಹಾಗೂ ಭಯೋತ್ಪಾದನೆ ಮಟ್ಟಹಾಕುವವರ ನಡುವಿನ ಹೋರಾಟ' ಎಂದು ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಅವರು ಹೇಳಿದರು.

ಬುಧವಾರ ಇಲ್ಲಿ ನಡೆದ ಬಿಜೆಪಿ ಓಬಿಸಿ ಮೋರ್ಚಾ ಸಭೆಯಲ್ಲಿ ಮಾತನಾಡಿ, 'ಪಿಎಫ್‌ಐ ನಿಷೇಧದ ಬಗ್ಗೆ ಕೆಲವರು ಪ್ರಶ್ನೆ ಎತ್ತುತ್ತಿದ್ದಾರೆ. ಯಾರು ಭಯೋತ್ಪಾದನೆಗೆ ಬೆಂಬಲ ಕೊಡುತ್ತಾರೋ, ಯಾರು ಕಾನೂನನ್ನು ಕೈಗೆತ್ತಿಕೊಳ್ಳುತ್ತಾರೋ ಅಂಥವರನ್ನೂ ನಿಷೇಧಿಸಬೇಕು. ಯಾವ ಜಾತಿ, ಯಾವ ಧರ್ಮ ಎಂಬುದು ಮುಖ್ಯ ಅಲ್ಲ' ಎಂದರು.

'ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಬಿಜೆಪಿ ಹಾಗೂ ಸಂಘ ಪರಿವಾರದ 23 ಕಾರ್ಯಕರ್ತರನ್ನು ಹತ್ಯೆ ಮಾಡಲಾಯಿತು. ಆಗ ಕಾಂಗ್ರೆಸ್ ಯಾವ ಸಂದೇಶ ನೀಡಿತು' ಎಂದು ಪ್ರಶ್ನಿಸಿದರು.

'ಪೊಲೀಸ್ ಠಾಣೆಯನ್ನೇ ಜಖಂಗೊಳಿಸಿದ್ದರು, ಹತ್ಯೆ ಮಾಡಿದ್ದರು. ಇಂಥ ಗಂಭೀರ ಘಟನೆಗಳಲ್ಲಿ ತೊಡಗಿದ್ದವರ ಮೇಲೆ ಕಾನೂನು ಚೌಕಟ್ಟಿನಲ್ಲಿ ಪ್ರಕರಣ ದಾಖಲಾಗಿದ್ದನ್ನು ವಾಪಸ್ ತೆಗೆದಿದ್ದರಿಂದ ಶಕ್ತಿ ಬಂದಿದೆ ಎಂಬ ಆರೋಪವೂ ಇದೆ. ಅದರಲ್ಲಿ ಸತ್ಯವೂ ಇದೆ' ಎಂದು ತಿಳಿಸಿದರು.

'ಪಿಎಫ್‌ಐ ನಿಷೇಧ ಸ್ವಾಗತಾರ್ಹ'

ರಾಮನಗರ: ಸಮಾಜ ಮತ್ತು ದೇಶ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದ ಪಿಎಫ್‌ಐ ಮತ್ತು ಅದರ ಎಂಟು ಅಂಗಸಂಸ್ಥೆಗಳನ್ನು 5 ವರ್ಷಗಳ ಮಟ್ಟಿಗೆ ನಿಷೇಧಿಸಿರುವ ಕೇಂದ್ರ ಸರ್ಕಾರದ ಕ್ರಮವನ್ನು ಇಡೀ ದೇಶವೇ ಸ್ವಾಗತಿಸುತ್ತಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ. ಸಿ ಎನ್. ಅಶ್ವತ್ಥನಾರಾಯಣ ಅವರು ಹೇಳಿದರು.

ನೈಋತ್ಯ ರೈಲ್ವೆ

ಬಿಡ್ ಸಂ.: GEM/2022/B/2570758 ದಿನಾಂಕ: 24.09.2022

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
12 ತಿಂಗಳ ಅವಧಿಗೆ ಬೆಂಗಳೂರು ವಿಭಾಗದಿಂದ ಗತಿ ಶಕ್ತಿ/ಬೆಂಗಳೂರು ಕಛೇರಿಗೆ ಅಧಿಕೃತ ಉಪಯೋಗಕ್ಕಾಗಿ ವಾಹನವನ್ನು ಬಾಡಿಗೆಗೆ ಪಡೆಯುವುದು.	ರೂ. 96,51,900/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 17.10.2022, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.gem.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಎಲೆಕ್ಟ್ರಿಕಲ್ ಇಂಜಿನಿಯರ್/ಗತಿ ಶಕ್ತಿ ಘಟಕ ಬೆಂಗಳೂರು

PUB/391/AAD/PRB/SWR/2022-23

S.W.Railways SWRRLY SWRRLY

IN THE COURT OF THE PRINCIPAL SMALL CAUSES AT MYSORE

SC No 39/2022

Plaintiff: The Branch Manager
Canara Bank, Nandanahalli Branch, Mysuru. Rep by its Manager
Sri. Sandeep Kumar .H.R

Vs.

Defendant : Kalapathru Fasions
Prop:C.R. Jagadeesh

PAPER PUBLICATION NOTICE TO THE DEFENDANT

Kalapathru Fasions
Prop: C.R. Jagadeesh
D/No-95, Dr. Shivakumar Road, Doctor Layout, Mysuru
Alternate Address:
Kalapathru Fasions
Prop: C.R. Jagadeesh,
Opposite Panchamuki Temple, Near Muthoot Finance, Tavarekere Bangalore - 562130

That the above named Plaintiff has preferred the above File the Suit Filled in principal Small Causes Court at Mysuru. Notice is hereby given to appear in this Court in person or through an Advocate duly instructed or through some one quthorized by law to appear on your behalf in the said Case on 09-11-2022 at 11.00 AM. If you fail to appear on the said date, and decided in your absence by placing you EXPARTE.

Issue under my hand and seal of this Hon'ble Court. 22/9/2022.

By Order of the Court
Sd/- Chief Administrative Officer
Principal Small Causes Court at Mysuru

Rohith.K.C. BAL. LLB **Advocate,**
Off: #2514, 1st Floor, Old Kantharaj Urs Road, K.G. Koppal, Mysuru.
Mob: 9945748684

ನಿಧನ ವಾರ್ತೆ

ಬಿ. ರವಿ

ಬೆಂಗಳೂರು: ಸರ್ವಜ್ಞನಗರದ ನಿವಾಸಿ ಬಿ.ರವಿ (66) ಅವರು ಅನಾರೋಗ್ಯದಿಂದ ಮಂಗಳವಾರ ನಿಧನರಾದರು.

ಮೃತರಿಗೆ ಪತ್ನಿ ಹಾಗೂ ಪುತ್ರ ಇದ್ದಾರೆ.

ರವಿ ಅವರು ಆರ್‌ಎಸ್‌ಎಸ್ ಸ್ವಯಂ ಸೇವಕರಾಗಿದ್ದರು. ತುರ್ತು ಪರಿಸ್ಥಿತಿ ವೇಳೆ ಜೈಲು ಶಿಕ್ಷೆ ಅನುಭವಿಸಿದ್ದರು. ಜಯಮಹಲ್ ಕ್ಷೇತ್ರದ ಬಿಜೆಪಿ ಅಧ್ಯಕ್ಷರಾಗಿ ಹಾಗೂ ಬೆಂಗಳೂರು ಕೇಂದ್ರದ ಕಾರ್ಯಕಾರಿಣಿ ಸದಸ್ಯರಾಗಿಯೂ ಕಾರ್ಯ ನಿರ್ವಹಿಸಿದ್ದರು.

ಕಲ್ಲಹಳ್ಳಿಯ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕಾರ್ಯನಿರ್ವಾಹಕ ಇಂಜಿನಿಯರ್

ಲೋಕೋಪಯೋಗಿ ಇಲಾಖೆ ಕೋಲಾರ ವಿಭಾಗ, ಕೋಲಾರ-563101.

ದೂ: 08152-222022, ಫ್ಯಾಕ್ಸ್: 08152-227443, ಇ-ಮೇಲ್: eepwdkolar07@gmail.com

ವೆಬ್‌ಸೈಟ್: www.kpwd.gov.in e-portal: http://eproc.karnataka.gov.in

ಇ-ಟೆಂಡರ್ ಪ್ರಕಟಣೆ-ಕೆಡಬ್ಲ್ಯೂ-3

ಟೆಂಡರ್ ಅಧಿಸೂಚನೆ ಸಂಖ್ಯೆ :13/2022-23 ದಿನಾಂಕ: 05.09.2022

ಕೋಲಾರ ಜಿಲ್ಲೆ, ಕೋಲಾರ ತಾಲ್ಲೂಕು ವ್ಯಾಪ್ತಿಯಲ್ಲಿ ಲೆಕ್ಕಶೀರ್ಷಿಕೆ: 5054–ರಾಜ್ಯ ಹೆದ್ದಾರಿ ರಸ್ತೆ ಸುಧಾರಣೆಗಳು ಅಡಿಯಲ್ಲಿ 3 ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು, ಕಾಮಗಾರಿಗೆ ಟೆಂಡರ್‌ಗಿಟ್ಟ ಮೊತ್ತ : ರೂ.100.00 ಲಕ್ಷಗಳು. ಇ.ಎಂ.ಡಿ ಮೊತ್ತ : ರೂ.2.00 ಲಕ್ಷಗಳು. ಕಾಲಾವಧಿ: 9 ತಿಂಗಳು ನಿರ್ವಹಿಸಲು ನೋಂದಾಯಿತ ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಅನ್ವಯ ಟೆಂಡರ್ ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಕೆಡಬ್ಲ್ಯೂ-3ರ ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಕರ್ನಾಟಕ ರಾಜ್ಯದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (viz.,http://eproc.karnataka.gov.in)ನಿಂದ ಡೌನ್‌ಲೋಡ್ ಮಾಡಿಕೊಳ್ಳ ಬಹುದಾಗಿರುತ್ತದೆ. ಭರ್ತಿ ಮಾಡಿದ ಟೆಂಡರ್‌ಗಳನ್ನು ಆನ್‌ಲೈನ್ ಮುಖಾಂತರ ಕರ್ನಾಟಕ ರಾಜ್ಯದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದಿನಾಂಕ: 29.09.2022 ರಂದು ಸಂಜೆ 16.00 ಗಂಟೆ ಒಳಗೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಸ್ವೀಕೃತವಾದ ಟೆಂಡರ್‌ಗಳನ್ನು ದಿನಾಂಕ: 30.09.2022 ರಂದು ಸಂಜೆ 16.30 ಗಂಟೆಯ ನಂತರ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ತೆರೆಯಲಾಗುವುದು. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗೆ ಹಾಗೂ ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (viz., http://eproc.karnataka.gov.in) ನಲ್ಲಿ ಸಂಪರ್ಕಿಸಬಹುದಾಗಿದೆ ಹಾಗೂ ಈ ಕಛೇರಿಯ ಕೆಲಸದ ವೇಳೆಯಲ್ಲಿ ಹೆಚ್ಚಿನ ವಿವರಗಳನ್ನು ಪಡೆಯಲು ಸಹಾ ಕೋರಲಾಗಿದೆ.

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್, ಲೋ.ಇ. ಕೋಲಾರ ವಿಭಾಗ, ಕೋಲಾರ

ವಾ.ಸಾ.ಸಂ.ಇ./ಕೋಲಾರ/ಆರ್.ಓ.ಸಂಖ್ಯೆ 284/ಎಂಸಿಎ/2022-23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ದೇವಿಗೆ ಅಲಂಕಾರ

ಹನುಮಂತನಗರದ ಶೇಷಮಹಾಬಲಮುರಿ ಗಣಪತಿ ದೇವಸ್ಥಾನದ ನವರಾತ್ರಿಯ ಹಬ್ಬದ ಮೂರನೇ ದಿನ ದೇವಿಗೆ ಆಭರಣ, ಪುಷ್ಪ, ಕಬ್ಬು ನವಿಲು ಜೊತೆಗೆ ಇರುವ ಕೌಮಾರಿ ಅಲಂಕಾರ ಮಾಡಲಾಯಿತು.

ವಿಮಲಾ ರಾಜಗೋಪಾಲ್ ಇನ್ನಿಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೇಖಕಿ ವಿಮಲಾ ರಾಜಗೋಪಾಲ್ (ಎಲ್.ಜಿ. ವಿಮಲ) ನಿಧನ ಹೊಂದಿದ್ದಾರೆ. ಅವರಿಗೆ 86 ವರ್ಷ ವಯಸ್ಸಾಗಿತ್ತು. ಅಮೆರಿಕದ ಪೆನ್ಸಿಲ್ವೇನಿಯಾ ರಾಜ್ಯದ ಮೀಡಿಯಾ ಪ್ರಾಂತ್ಯದಲ್ಲಿ ಅವರು ವಾಸವಾಗಿದ್ದರು. ಅವರಿಗೆ ಮಗ, ಇಬ್ಬರು ಪುತ್ರಿಯರು ಇದ್ದಾರೆ.

ಸಾಹಿತಿ ಎಲ್. ಗುಂಡಪ್ಪ ಅವರ ಮಗಳಾಗಿದ್ದ ವಿಮಲಾ 1960ರ ದಶಕದಲ್ಲೇ ತಮ್ಮ ಸಹೋದರಿಯರ ಜೊತೆಗೆ ಎಲ್.ಜಿ.ಸಿಸ್ಟರ್ಸ್ ತಂಡದ ಮೂಲಕ ನೂರಾರು ಕಾರ್ಯಕ್ರಮಗಳನ್ನು ರೇಡಿಯೊ ಮತ್ತು ಸಾರ್ವಜನಿಕ ವೇದಿಕೆಗಳಲ್ಲಿ ಕೊಟ್ಟು ಪ್ರಸಿದ್ಧರಾಗಿದ್ದರು. ಇವರ 'ನಾಡಪದಗಳು' ಎಂಬ ಧ್ವನಿಮುದ್ರಿಕೆ ಕನ್ನಡದ ಮನಸ್ಸುಗಳ ನಡುವೆ ಜನಪ್ರಿಯವಾಗಿದೆ. ಮಲೆನಾಡು ಪ್ರಾಂತ್ಯದ ಜಾನಪದ ಸಂಗೀತ ವನ್ನು ಮೂಲತಃ ಹಳ್ಳಿಗರಿಂದಲೇ ಕಲಿತು, ಅಭ್ಯಸಿಸಿ, ಅವುಗಳನ್ನು ನಿಜರೂಪದಲ್ಲಿಯೇ ಹಾಡಿರುವುದು ಇವರ ಹೆಗ್ಗಳಿಕೆ.

1967ರಲ್ಲಿ ಪತಿ ಎಚ್.ವೈ. ರಾಜಗೋಪಾಲ್ ಅವರ ಉನ್ನತ ವ್ಯಾಸಂಗದ ಕಾರಣವಾಗಿ ವಿಮಲಾ ಅಮೆರಿಕಕ್ಕೆ ವಲಸೆ ಹೋಗಿ ನೆಲೆ ನಿಂತರು. ದೇಹ ಮತ್ತು ಮನೋವೈಕಲ್ಯಗಳಿಗೆ ಒಳಗಾದವರ ಪುನರ್ವ್ಯವಸ್ಥೆಗಾಗಿ 150ಕ್ಕೂ ಹೆಚ್ಚು ವರ್ಷಗಳಿಂದ ಕೆಲಸ ಮಾಡುತ್ತಿರುವ ಎಲ್ವಿನ್ ಸಂಸ್ಥೆಯಲ್ಲಿ ರಿಕ್ರಿಯೇಶನ್ ಥೆರಪಿಸ್ಟ್ ಆಗಿ ಇಪ್ಪತ್ತು ವರ್ಷ ಸೇವೆ ಸಲ್ಲಿಸಿ ನಿವೃತ್ತರಾಗಿದ್ದರು. ವಿಮಲಾ ಅವರು ಯುನಿವರ್ಸಿಟಿ ಆಫ್ ಪೆನ್ಸಿಲ್ವೇನಿಯಾದ ಕನ್ನಡ ವಿಭಾಗದಲ್ಲಿ ಹತ್ತು ವರ್ಷ ಕನ್ನಡ ಬೋಧನೆ ಮಾಡಿದ್ದಾರೆ. 'ತುಂಟರ ತೇರು' ಇವರ ಪ್ರಕಟಿತ ಸಂಕಲನ.

ಭಾರತೀಯ/ ಕನ್ನಡ ಸಂಸ್ಕೃತಿಯ ಪ್ರಚಾರದ ಅಂಗವಾಗಿ ಅಮೆರಿಕದ ವಿವಿಧ ಜನಪದ ಜಾತ್ರೆಗಳಲ್ಲಿ ಭಾರತೀಯ/ ಕರ್ನಾಟಕ ಸಂಸ್ಕೃತಿಯ ಬಗ್ಗೆ ಭಾಷಣ, ಸಂವಾದ, ರಂಗೋಲಿ, ಕೋಲಾಟ ಮತ್ತಿತರ ಕಲೆಗಳನ್ನು ಪರಿಚಯಿಸಿದ್ದಾರೆ. ಅಮೆರಿಕದಲ್ಲಿ ಬೆಳೆಯುತ್ತಿರುವ ಭಾರತೀಯ ಮಕ್ಕಳಿಗೆ ತಮ್ಮ ಸಂಸ್ಕೃತಿಯ ಎಚ್ಚರ ಕಾಪಾಡಲು ನೆರವಾದ ಇಂಡಸ್ ಸಂಸ್ಥೆಯ ಸ್ಥಾಪಕರೂ ಹೌದು. ಜೊತೆಗೆ ಶ್ರುತಿ, ತ್ರಿವೇಣಿ, ಪ್ರಸ್ತಾಪ, ಕನ್ನಡ ಸಾಹಿತ್ಯ ರಂಗ ಮುಂತಾದ ಸಂಸ್ಥೆಗಳ ಸ್ಥಾಪಕ ಸದಸ್ಯರಲ್ಲಿ ಒಬ್ಬರಾಗಿದ್ದರು.

ಹಾರೋಹಳ್ಳಿ ಕೈಗಾರಿಕಾ ಪ್ರದೇಶ ● ಅಧಿಕಾರಿಗಳ ಜಂಟಿ ಸಮಿತಿ ವರದಿಯಲ್ಲಿ ಉಲ್ಲೇಖ

ಮೀಸಲು ಪ್ರದೇಶ ಬಿಡದ ಕೆಐಎಡಿಬಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಎನ್‌ಜಿಟಿ ನೇಮಿಸಿದ್ದ ಜಂಟಿ ಸಮಿತಿ
- ಮೂರು ತಿಂಗಳಲ್ಲಿ ವರದಿ ನೀಡುವಂತೆ ನಿರ್ದೇಶನ ನೀಡಿದ್ದ ಎನ್‌ಜಿಟಿ
- ಕೃಷಿ ಪ್ರದೇಶದಲ್ಲಿ ಕೈಗಾರಿಕೆಗಳ ಸ್ಥಾಪನೆ ಆಗಿಲ್ಲ ಎಂದ ಸಮಿತಿ

ನವದೆಹಲಿ: 'ಬೆಂಗಳೂರು ಸಮೀಪದ ಹಾರೋಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಮೀಸಲು ಪ್ರದೇಶ ಬಿಟ್ಟಿಲ್ಲ. ಇದರಿಂದಾಗಿ, ಸುತ್ತಮುತ್ತಲ ಪ್ರದೇಶದಲ್ಲಿ ಕೆಲವು ಸಂದರ್ಭಗಳಲ್ಲಿ ಶಬ್ದ ಮಾಲಿನ್ಯ ಉಂಟಾಗುತ್ತಿದೆ. ಇದನ್ನು ತಡೆಯಲು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು (ಕೆಐಎಡಿಬಿ) ಕೈಗಾರಿಕಾ ಪ್ರದೇಶದ ಸುತ್ತಮುತ್ತ ಹಸಿರು ಪ್ರದೇಶ ಅಭಿವೃದ್ಧಿಪಡಿಸಬೇಕು' ಎಂದು ಅಧಿಕಾರಿಗಳ ಜಂಟಿ ಸಮಿತಿ ಶಿಫಾರಸು ಮಾಡಿದೆ.

ಕೈಗಾರಿಕಾ ಪ್ರದೇಶದಿಂದ ಪರಿಸರ ಮಾಲಿನ್ಯ ಉಂಟಾಗುತ್ತಿದೆ ಹಾಗೂ ಕೈಗಾರಿಕೆಗಳು ಅಂತರ್ಜಲದ ಅತಿ ಬಳಕೆ ಮಾಡುತ್ತಿವೆ ಎಂದು ಆರೋಪಿಸಿ ಬಾಲಸುಬ್ರಹ್ಮಣ್ಯಂ ಎಂಬುವರು 2021ರಲ್ಲಿ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ ಮೆಟ್ಟಿಲೇರಿದ್ದರು. ಈ ಪ್ರಕರಣದ ವಿಚಾರಣೆ ನಡೆಸಿದ್ದ ನ್ಯಾಯಪೀಠ, 2022ರ ಜನವರಿ 24ರಂದು ಆದೇಶ ಹೊರಡಿಸಿ, ಅಧಿಕಾರಿಗಳ ಜಂಟಿ ಸಮಿತಿ ರಚನೆಗೆ ನಿರ್ದೇಶನ ನೀಡಿತ್ತು. ದೂರುದಾರರು ಮಾಡಿರುವ ಆರೋಪಗಳ ಬಗ್ಗೆ ಸಮಗ್ರ ಪರಿಶೀಲನೆ ನಡೆಸಿ ಮೂರು ತಿಂಗಳಲ್ಲಿ ವರದಿ ಸಲ್ಲಿಸುವಂತೆ ಸೂಚಿಸಿತ್ತು. ಕೇಂದ್ರ ಅರಣ್ಯ, ಪರಿಸರ ಹಾಗೂ ತಾಪಮಾನ ಬದಲಾವಣೆ ಸಚಿವಾಲಯದ ಹೆಚ್ಚುವರಿ ನಿರ್ದೇಶಕ ಡಾ.ಮುರಳಿಕೃಷ್ಣ ನೇತೃತ್ವದ ಸಮಿತಿಯು ಸ್ಥಳ ಪರಿಶೀಲನೆ ಹಾಗೂ ಅಧ್ಯಯನ ನಡೆಸಿ ಎನ್‌ಜಿಟಿಗೆ ವರದಿ ಸಲ್ಲಿಸಿದೆ.

2004ರಲ್ಲಿ ರಚನೆಯಾದ ಈ ಕೈಗಾರಿಕಾ ಪ್ರದೇಶದಲ್ಲಿ 225 ಕೈಗಾರಿಕೆಗಳಿವೆ. ಕೈಗಾರಿಕಾ ಪ್ರದೇಶವನ್ನು ಪಕ್ಕದ ಗ್ರಾಮಗಳಿಗೆ ಹೊಂದಿಕೊಂಡಂತೆ ಅಭಿವೃದ್ಧಿಪಡಿಸಲಾಗಿದೆ. ಗ್ರಾಮ ಹಾಗೂ ಕೈಗಾರಿಕಾ ಪ್ರದೇಶದ ನಡುವೆ ಮೀಸಲು ಪ್ರದೇಶ ಇಲ್ಲ. ಇದರಿಂದಾಗಿ, ಕೆಲವು ಸಂದರ್ಭದಲ್ಲಿ ವಸತಿ ಪ್ರದೇಶದಲ್ಲಿ ನಿಗದಿಪಡಿಸಿದ್ದಕ್ಕಿಂತ ಹೆಚ್ಚು ಶಬ್ದ ಮಾಲಿನ್ಯ ಆಗುತ್ತಿದೆ ಎಂದು ಸಮಿತಿ ಅಭಿಪ್ರಾಯಪಟ್ಟಿದೆ. ಹಾರೋಹಳ್ಳಿ ಕೈಗಾರಿಕಾ ಪ್ರದೇಶದ ಮೂರನೇ ಹಾಗೂ ನಾಲ್ಕನೇ ಹಂತದ ಅನುಷ್ಠಾನದ ವೇಳೆ ಮೀಸಲು ಪ್ರದೇಶ ಇಡಬೇಕು ಎಂದೂ ಶಿಫಾರಸು ಮಾಡಿದೆ. ರಾತ್ರಿ ವೇಳೆಯಲ್ಲಿ ಶಬ್ದ ಮಾಲಿನ್ಯ ಕಡಿಮೆ ಮಾಡಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಕೆಐಎಡಿಬಿ ತಜ್ಞರ ನೆರವು ಪಡೆಯಬೇಕು ಎಂದೂ ಸಮಿತಿ ತಿಳಿಸಿದೆ.

ಇಲ್ಲಿನ ಕೈಗಾರಿಕೆಗಳು ಅಂತರ್ಜಲವನ್ನು ಅತಿ ಬಳಕೆ ಮಾಡುತ್ತಿವೆ ಎಂಬ ಆರೋಪವನ್ನು ಸಮಿತಿ ತಳ್ಳಿ ಹಾಕಿದೆ. ಅಂತರ್ಜಲದ ಮಟ್ಟದಲ್ಲೂ ಭಾರಿ ಇಳಿಕೆ ಆಗಿಲ್ಲ ಎಂದೂ ಹೇಳಿದೆ. ಕೈಗಾರಿಕೆಗಳು ಅಂತರ್ಜಲ ಬಳಕೆಗೆ ಉತ್ತೇಜನ ನೀಡಬಾರದು. ಕೆಐಎಡಿಬಿ ಮೂಲಕ ಪೂರೈಕೆಯಾಗುವ ನೀರನ್ನು ಬಳಸಲು ಪ್ರೋತ್ಸಾಹ ನೀಡಬೇಕು ಎಂದು ಸಮಿತಿ ಸಲಹೆ ನೀಡಿದೆ.

ಕೈಗಾರಿಕಾ ಪ್ರದೇಶವು ಬೆಂಗಳೂರಿಗೆ ಹತ್ತಿರದಲ್ಲಿದೆ. ಕೃಷಿ ಭೂಮಿಯಲ್ಲೇ ಕೈಗಾರಿಕಾ ಪ್ರದೇಶ ಅಭಿವೃದ್ಧಿಪಡಿಸಲಾಗಿದೆ ಎಂದು ಅರ್ಜಿದಾರರು ದೂರಿದ್ದರು. ಇದಕ್ಕೆ ಪ್ರತಿಕ್ರಿಯೆ ನೀಡಿರುವ ಸಮಿತಿ, 'ಯಾವುದೇ ಕೈಗಾರಿಕೆ ಕೃಷಿ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿಲ್ಲ. ಎಲ್ಲ ಬಗೆಯ ಅನುಮತಿ ಪಡೆದು ಕೈಗಾರಿಕೆಗಳು ಕಾರ್ಯನಿರ್ವಹಿಸುತ್ತಿವೆ. ಈ ವಿಚಾರದಲ್ಲಿ ಲೋಪ ಆಗಿಲ್ಲ' ಎಂದು ಸ್ಪಷ್ಟಪಡಿಸಿದೆ. ಕೈಗಾರಿಕೆಗಳ ತ್ಯಾಜ್ಯ ನೀರನ್ನು ವೈಜ್ಞಾನಿಕವಾಗಿ ಸಂಸ್ಕರಣೆ ಮಾಡಲಾಗುತ್ತಿದ್ದು, ಕೊಳಚೆ ನೀರು ಸುತ್ತಮುತ್ತಲ ಕೆರೆಗಳಿಗೆ ಸೇರುತ್ತಿಲ್ಲ ಎಂದು ಸಮಿತಿ ವರದಿಯಲ್ಲಿ ಉಲ್ಲೇಖಿಸಿದೆ.

'ಸದ್ಯಕ್ಕೆ ಎಂಜಿನಿಯರಿಂಗ್ ತರಗತಿಗಳು ಬೇಡ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಸಿಇಟಿ ರ‍್ಯಾಂಕಿಂಗ್ ಪಟ್ಟಿ ಪ್ರಕಟಿಸುವ ಮುನ್ನವೇ ಖಾಸಗಿ ವಿಶ್ವವಿದ್ಯಾಲಯಗಳು ಮತ್ತು ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳು ಆರಂಭಿಸುವ ತರಗತಿಗಳನ್ನು ತಕ್ಷಣವೇ ಸ್ಥಗಿತಗೊಳಿಸಲು ಕ್ರಮ ಕೈಗೊಳ್ಳಬೇಕು ಎಂದು ಭಾರತೀಯ ವಿದ್ಯಾರ್ಥಿ ದಳ ಒತ್ತಾಯಿಸಿದೆ.

ಪ್ರಸ್ತುತ ಸಿಇಟಿ ಬಿಕ್ಕಟ್ಟಿನಿಂದ ಉಂಟಾಗಿರುವ ಸಮಸ್ಯೆಗಳನ್ನು ಪರಿಹರಿಸುವಂತೆ ಒತ್ತಾಯಿಸಿ ಉನ್ನತ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ಅವರಿಗೆ ಮನವಿ ಸಲ್ಲಿಸಿರುವ ಬಳಗವು, ಸಿಇಟಿ ರ‍್ಯಾಂಕಿಂಗ್ ಪಟ್ಟಿಯನ್ನು ತಕ್ಷಣವೇ ಬಿಡುಗಡೆ ಮಾಡಿ ಕೌನ್ಸೆಲಿಂಗ್ ಅನ್ನು ಆರಂಭಿಸಬೇಕು ಎಂದು ಒತ್ತಾಯಿಸಿದೆ.

ರಾಜ್ಯದಲ್ಲಿರುವ 22 ಖಾಸಗಿ ವಿಶ್ವವಿದ್ಯಾಲಯಗಳು ಹಾಗೂ ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳು ತರಗತಿ ಆರಂಭಿಸಿ ಬಡ ಮತ್ತು ಮಧ್ಯಮ ವರ್ಗದ ವಿದ್ಯಾರ್ಥಿಗಳನ್ನು ಶಿಕ್ಷಣದಿಂದ ವಂಚಿತರನ್ನಾಗಿಸುವ ಷಡ್ಯಂತ್ರ ರೂಪಿಸಿರುವ ವಿದ್ಯಾಸಂಸ್ಥೆಗಳ ವಿರುದ್ಧ ಕ್ರಮಕೈಗೊಳ್ಳಬೇಕು ಎಂದು ಆಗ್ರಹಿಸಿದೆ.

ಉನ್ನತ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ರಶ್ಮಿ ಮಹೇಶ್ ಅವರಿಗೆ ಕೋಳಘಟ್ಟ ಯೋಗೇಶ್, ರಾಯಸಂದ್ರ ರವಿಕುಮಾರ್, ಯಲ್ಲಪ್ಪ ಹೆಗಡೆ, ವಿನಯ್, ಗುರುರಾಜ್ ಗೌಡ, ರಕ್ಷಿತ್, ಚಿರಂಜೀವಿ ಮನವಿ ಸಲ್ಲಿಸಿದರು

ಸೀಟು ಹಂಚಿಕೆ ಪ್ರಮಾಣವನ್ನು 50:50ರಷ್ಟು ಜಾರಿಗೆ ತರಬೇಕು. ಕೋವಿಡ್‌ನಿಂದ ಆರ್ಥಿಕ ಪರಿಸ್ಥಿತಿ ಹದಗೆಟ್ಟಿರುವುದರಿಂದ ವಿದ್ಯಾರ್ಥಿಗಳಿಗೆ ಯಾವುದೇ ಹೆಚ್ಚುವರಿ ಶುಲ್ಕ ವಿಧಿಸಬಾರದು ಎಂದು ಆಗ್ರಹಿಸಿದೆ.

ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳ ಮೂಲ ಸೌಕರ್ಯಗಳು, ಶಿಕ್ಷಣದ ಗುಣಮಟ್ಟವನ್ನು ಬಲಪಡಿಸಲು ಕ್ರಮಕೈಗೊಳ್ಳಬೇಕು. ಸಿಇಟಿ ಮೂಲಕ ಆಯ್ಕೆಯಾಗುವ ವಿದ್ಯಾರ್ಥಿಗಳಿಗೆ ವಿಶೇಷ ತರಗತಿಗಳ ಮೂಲಕ ಪಠ್ಯಕ್ರಮಗಳನ್ನು ಪೂರ್ಣಗೊಳಿಸಬೇಕು ಮತ್ತು ಸೆಮಿಸ್ಟರ್ ಅವಧಿಯನ್ನು ಕಡಿತಗೊಳಿಸಬಾರದು ಎಂದು ಬಳಗದ ಮುಖಂಡರಾದ ಕೋಳಘಟ್ಟ ಯೋಗೇಶ್, ರಾಯಸಂದ್ರ ರವಿಕುಮಾರ್, ಯಲ್ಲಪ್ಪ ಹೆಗಡೆ, ವಿನಯ್, ಗುರುರಾಜ್ ಗೌಡ, ರಕ್ಷಿತ್, ಚಿರಂಜೀವಿ ಆಗ್ರಹಿಸಿದ್ದಾರೆ.

ಸಿಇಟಿ ಪರಿಷ್ಕೃತ ರ‍್ಯಾಂಕಿಂಗ್: ಅ.1ಕ್ಕೆ ಪ್ರಕಟ

ಬೆಂಗಳೂರು: ವೃತಿಪರ ಕೋರ್ಸ್‌ಗಳ ಸಿಇಟಿ ರ‍್ಯಾಂಕಿಂಗ್ ಪರಿಷ್ಕೃತ ಪಟ್ಟಿಯನ್ನು ಅ.1ರಂದು ಬಿಡು ಗಡೆ ಮಾಡಲಾಗುವುದು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಹೇಳಿದೆ.

ಈ ಬಾರಿಯೂ ಸಿಇಟಿ ಪರೀಕ್ಷೆ ಬರೆದಿದ್ದ ಹಿಂದಿನ ವರ್ಷದ ವಿದ್ಯಾರ್ಥಿಗಳು ಪಿಯು ಅಂಕ ಪರಿಗಣಿಸುವಂತೆ ಕೋರ್ಟ್ ಮೊರೆ ಹೋಗಿದ್ದರು. ಸಮಸ್ಯೆ ಬಗೆಹರಿಸಲು ಸಮನ್ವಯ ಸೂತ್ರ ರೂಪಿಸುವಂತೆ ಕೋರ್ಟ್ ಸೂಚಿ ಸಿತ್ತು. ಹಾಗಾಗಿ, ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷ ಪ್ರೊ.ಬಿ.ತಿಮ್ಮೇಗೌಡರ ಅಧ್ಯಕ್ಷತೆ ಯಲ್ಲಿ ಐವರ ಸಮಿತಿ ರಚಿಸಿ, ಸಮಿತಿಯ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿತ್ತು.

ಸಮಿತಿ ಕೊಟ್ಟ ವರದಿ ಯನ್ನು ನ್ಯಾಯಾಲಯ ಪುರಸ್ಕರಿಸಿತ್ತು. ಸೆ.29ರಂದು ಪರಿಷ್ಕೃತ ಪಟ್ಟಿ ಪ್ರಕಟಿಸುವುದಾಗಿ ಉನ್ನತ ಶಿಕ್ಷಣ ಸಚಿವರು ಘೋಷಿಸಿದ್ದರು. ಈಗ ಕೋರ್ಟ್ ಆದೇಶ ಆಧರಿಸಿ, ಪರಿಷ್ಕರಿಸಲಾಗಿರುವ ಪಟ್ಟಿಯನ್ನು ಅ.1ರಂದು ಬಿಡುಗಡೆ ಮಾಡು ವುದಾಗಿ ಕೆಇಎ ತಿಳಿಸಿದೆ.

'ಬಿಜೆಪಿ ಒಡೆದರೆ, ಕಾಂಗ್ರೆಸ್ ಒಗ್ಗೂಡಿಸುತ್ತದೆ'

ಪ್ರಜಾವಾಣಿ ವಾರ್ತೆ

ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿ ಕಾರ್ಯಕರ್ತರ ಸಭೆಯಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ದತ್ತ ಮಾತನಾಡಿದರು

ಬೊಮ್ಮನಹಳ್ಳಿ: 'ಬಿಜೆಪಿ ಜಾತಿ, ಧರ್ಮದಲ್ಲಿ ಆಧಾರದಲ್ಲಿ ಜನರನ್ನು ಒಡೆಯುವ ಕೆಲಸ ಮಾಡುತ್ತದೆ. ಆದರೆ ಕಾಂಗ್ರೆಸ್ ಒಡೆದ ಮನಸ್ಸುಗಳನ್ನು ಒಂದುಗೂಡಿಸುವ ಮೂಲಕ ದೇಶದ ಧರ್ಮನಿರಪೇಕ್ಷ ಸಂಸ್ಕೃತಿ ಸಂರಕ್ಷಿಸುತ್ತದೆ. ಈ ಪ್ರಯತ್ನದ ಭಾಗವಾಗಿಯೇ ಭಾರತ್ ಜೋಡೋ ಅಭಿಯಾನ ನಡೆಯುತ್ತಿದೆ' ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ದತ್ತ ಹೇಳಿದರು.

'ಭಾರತ್ ಜೋಡೊ' ಪಾದಯಾತ್ರೆಯನ್ನು ರಾಜ್ಯದಲ್ಲಿ ಯಶಸ್ವಿಗೊಳಿಸುವ ಸಂಬಂಧ ಬುಧವಾರ ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದರು.

'ರಾಜ್ಯ ಸರ್ಕಾರ ಭಾರಿ ಭ್ರಷ್ಟಾಚಾರದಲ್ಲಿ ತೊಡಗಿದ್ದು, ಆಡಳಿತಯಂತ್ರ ಸಂಪೂರ್ಣವಾಗಿ ಕುಸಿದಿದೆ. ಮತ್ತೊಂದೆಡೆ ಕೇಂದ್ರ ಸರ್ಕಾರದ ಜನವಿರೋಧಿ ಆರ್ಥಿಕ ನೀತಿಗಳಿಂದ ಜನರ ಬದುಕು ಸಂಕಷ್ಟಕ್ಕೆ ಸಲುಕಿದೆ. ಇದನ್ನು ಮರೆಮಾಚಲು ಭಾವನಾತ್ಮಕ ವಿಷಯಗಳನ್ನು ಕೆದಕಿ ರಾಜಕೀಯ ಬೇಳೆಬೇಯಿಸಿಕೊಳ್ಳಲು ಬಿಜೆಪಿ ಪ್ರಯತ್ನಿಸುತಿದೆ' ಎಂದರು.

'ಅಕ್ಟೋಬರ್ 11ರಂದು ಶಿರಾದಲ್ಲಿ ಸಾಗುವ ಪಾದಯಾತ್ರೆಯಲ್ಲಿ ಬೊಮ್ಮನಹಳ್ಳಿ ಪ್ರದೇಶದಿಂದ ಸುಮಾರು ಐದು ಸಾವಿರ ಜನ ಭಾಗವಹಿಸಲಿದ್ದಾರೆ' ಎಂದು ಬೆಂಗಳೂರು ದಕ್ಷಿಣ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಜೆ.ಕೃಷ್ಣಪ್ಪ ಹೇಳಿದರು.

ಕಾಂಗ್ರೆಸ್ ಮುಖಂಡ ಮಂಜುನಾಥರೆಡ್ಡಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಟಿ.ವಾಸುದೇವರೆಡ್ಡಿ, ರವೀಂದ್ರ, ಅಶ್ವತ್ಥ ನಾರಾಯಣ, ಕೆಪಿಸಿಸಿ ಸದಸ್ಯ ಬಾಲಕೃಷ್ಣರೆಡ್ಡಿ, ಸ್ಥಳೀಯ ಮುಖಂಡ ಶ್ರೀನಿವಾಸಮೂರ್ತಿ, ಯುವ ಕಾಂಗ್ರೆಸ್ ಮುಖಂಡ ಅನಿಲ್ ರೆಡ್ಡಿ ಇದ್ದರು.

ಸ್ಪಂದಿಸದ ಅಧಿಕಾರಿಗಳು: ರೈತರ ಆರೋಪ

ಹಾಸನ: ಎತ್ತಿನಹೊಳೆ ಯೋಜನೆಗೆ ಭೂಮಿ ನೀಡಿರುವ ರೈತರಿಗೆ ಪರಿಹಾರ ನೀಡದೇ ಅಲೆದಾಡಿಸುತ್ತಿದ್ದಾರೆ ಎಂದು ಆರೋಪಿಸಿ ನೊಂದ ರೈತರು ಇಲ್ಲಿನ ಕುವೆಂಪು ನಗರದ ಎತ್ತಿನಹೊಳೆ ಯೋಜನೆ ಅಧಿಕಾರಿಗಳ ಕಚೇರಿ ಎದುರು ಅಹೋರಾತ್ರಿ ಧರಣಿ ಆರಂಭಿಸಿದ್ದಾರೆ.

ಬೇಲೂರು ತಾಲ್ಲೂಕಿನ ಬೆಟ್ಟದ ಅಲೂರು ಗ್ರಾಮದ ಪಾರ್ವತಮ್ಮ 50 ವರ್ಷಗಳಿಂದ ತಮ್ಮ ಜಮೀನಿನಲ್ಲಿ ಉಳುಮೆ ಮಾಡುತ್ತಿದ್ದಾರೆ. ಪಹಣಿ ಕೂಡ ಅವರ ಹೆಸರಿನಲ್ಲಿ ಇದೆ. ಈಚೆಗೆ ಎತ್ತಿನಹೊಳೆ ಯೋಜನೆಗೆ ಅವರ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡು ನಾಲೆ ಕೊರೆಯಲಾಗಿದೆ. ನಾಲೆ ತೆಗೆಯುವ ಮೊದಲು ಭೂ ಮಾಲೀಕರಿಗೆ ನೋಟಿಸ್ ನೀಡಿದ್ದರು. ಆದರೆ ಇವರೆಗೆ ಪರಿಹಾರ ನೀಡಿಲ್ಲ ಎಂದು ಆರೋಪಿಸಿದರು.

ಅನಿಲ್ ಚೌಹಾನ್ ಸೇನಾಪಡೆಗಳ ಮುಖ್ಯಸ್ಥ

ಒಂದನೇ ಪುಟದಿಂದ...

'ಅನಿಲ್ ಚೌಹಾನ್ ಅವರು ಅಧಿಕಾರ ವಹಿಸಿಕೊಂಡ ದಿನದಿಂದ ಕೇಂದ್ರದ ರಕ್ಷಣಾ ವ್ಯವಹಾರಗಳ ಇಲಾಖೆ ಕಾರ್ಯದರ್ಶಿಯಾಗಿಯೂ ಮುಂದಿನ ಆದೇಶದವರೆಗೆ ಕಾರ್ಯನಿರ್ವಹಿಸಲಿದ್ದಾರೆ' ಎಂದು ರಕ್ಷಣಾ ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಅನಿಲ್ ಅವರು ತಮ್ಮ ನಾಲ್ಕು ದಶಕಗಳ ವೃತ್ತಿ ಜೀವನದಲ್ಲಿ ಸೇನೆಯ ಹಲವು ಹುದ್ದೆಗಳನ್ನು ನಿಭಾಯಿಸಿದ್ದು, ಈಶಾನ್ಯ ಭಾರತ ಮತ್ತು ಜಮ್ಮು-ಕಾಶ್ಮೀರದಲ್ಲಿ ಉಗ್ರರ ನಿಗ್ರಹದಲ್ಲಿ ಅಪಾರ ಅನುಭವ ಹೊಂದಿದ್ದಾರೆ.

ಜ್ಞಾನವಾಪಿ: ಸ್ಥಳ ಸಮೀಕ್ಷೆಗೆ ಅ.31ರವರೆಗೆ ತಡೆಯಾಜ್ಞೆ

ಪ್ರಯಾಗ್‌ರಾಜ್ (ಪಿಟಿಐ): ಜ್ಞಾನವಾಪಿ ಮಸೀದಿಯಲ್ಲಿ ಸಮೀಕ್ಷೆ ನಡೆಸುವಂತೆ ಭಾರತೀಯ ಪುರಾತತ್ವ ಇಲಾಖೆಗೆ ವಾರಾಣಸಿ ನ್ಯಾಯಾಲಯವು ನೀಡಿದ್ದ ಆದೇಶಕ್ಕೆ ಅಲಹಾಬಾದ್ ಹೈಕೋರ್ಟ್ ಅಕ್ಟೋಬರ್ 31ರವರೆಗೆ ತಡೆಯಾಜ್ಞೆಯನ್ನು ನೀಡಿದೆ.

ನ್ಯಾಯಮೂರ್ತಿ ಪ್ರಕಾಶ್ ಅವರು ವಾದ-ಪ್ರತಿವಾದಗಳನ್ನು ಆಲಿಸಿದ ನಂತರ ಪ್ರಕರಣದ ವಿಚಾರಣೆಯನ್ನು ಅಕ್ಟೋಬರ್ 18ಕ್ಕೆ ಮುಂದೂಡಿದರು.

2021ರ ಏಪ್ರಿಲ್ 8ರಂದು ವಾರಾಣಸಿಯ ನ್ಯಾಯಾಲಯವು ನೀಡಿದ್ದ ಮಧ್ಯಂತರ ತಡೆಯಾಜ್ಞೆಯನ್ನು ಆಗಸ್ಟ್ 30ರಂದು ಪರಿಶೀಲಿಸಿದ್ದ ಅಲಹಾಬಾದ್ ಹೈಕೋರ್ಟ್ ಸೆಪ್ಟೆಂಬರ್ 30ರವರೆಗೆ ವಿಸ್ತರಿಸಿತ್ತು.

ಲೋಕಾಯುಕ್ತರ ನಡೆಗೆ ಹೈಕೋರ್ಟ್ ಅಸಮಾಧಾನ

ಒಂದನೇ ಪುಟದಿಂದ...

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠವು, 'ಬಾಗಮನೆ ಬಿಲ್ಡರ್ ಭಾನುವಾರದಂದು ಲೋಕಾಯುಕ್ತದ ಮೊರೆ ಹೋಗಿದ್ದಾರೆ. ಒತ್ತುವರಿ ತೆರವಿನ ತಡೆಗೆ ಅಂದೇ ಆದೇಶ ನೀಡಲಾಗಿದೆ. ಲೋಕಾಯುಕ್ತದಲ್ಲಿ ಏನಾಗುತ್ತಿದೆ, ಕರ್ನಾಟಕ ಲೋಕಾಯುಕ್ತ ಕಾಯ್ದೆ –1984ರ ಅಡಿಯಲ್ಲಿ ಈ ರೀತಿ ತಡೆ ನೀಡುವ ಅಧಿಕಾರವಿದೆಯೇ' ಎಂದು ಖಾರವಾಗಿ ಪ್ರಶ್ನಿಸಿತು.

'ಒತ್ತುವರಿ ತೆರವಿಗೆ ಲೋಕಾಯುಕ್ತ ಕಚೇರಿಯೇ ತಡೆ ನೀಡಬಹುದೇನು, ಹಾಗಿದ್ದರೆ ಜನರು ಕೋರ್ಟ್ ಬದಲಿಗೆ ಲೋಕಾಯುಕ್ತಕ್ಕೆ ಹೋಗಬಹುದಲ್ಲವೇ' ಎಂದು ಕಿಡಿ ಕಾರಿತಲ್ಲದೆ, 'ವ್ಯಾಪ್ತಿ ಮೀರಿದ ಆದೇಶ ನೀಡಲು ನಾವು ಅವಕಾಶ ನೀಡುವುದಿಲ್ಲ' ಎಂದು ಸ್ಪಷ್ಟಪಡಿಸಿ ಪ್ರಕರಣಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತ ನಡೆಸುತ್ತಿರುವ ವಿಚಾರಣೆಗೆ ಮಧ್ಯಂತರ ತಡೆ ನೀಡಿದೆ.

ಪ್ರತಿವಾದಿಗಳಾದ ಕರ್ನಾಟಕ ಲೋಕಾಯುಕ್ತ, ರಾಜ್ಯ ಸರ್ಕಾರ ಮತ್ತು ಬಾಗಮನೆ ಡೆವಲಪರ್ಸ್‌ಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿರುವ ನ್ಯಾಯಪೀಠ ವಿಚಾರಣೆ ಮುಂದೂಡಿದೆ.

ಬೆಂಗಳೂರಿನಲ್ಲಿ ಸರ್ಕಾರಿ ನೌಕರರ ಸಂಘ ಬುಧವಾರ ಹಮ್ಮಿಕೊಂಡಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಸಂಘದ ರಾಜ್ಯಾಧ್ಯಾಕ್ಷ ಸಿ.ಎಸ್.ಷಡಾಕ್ಷರಿ ಮಾತನಾಡಿದರು

ನೌಕರರ ಕುಟುಂಬದ 15 ಸಾವಿರ ಮಕ್ಕಳಿಗೆ ಪುರಸ್ಕಾರ: ಷಡಾಕ್ಷರಿ

ಬೆಂಗಳೂರು: ಸರ್ಕಾರಿ ನೌಕರರ ಕುಟುಂಬದ 15 ಸಾವಿರ ಮಕ್ಕಳಿಗೆ ಪ್ರತಿವರ್ಷ ನಗದುಸಹಿತ ಪ್ರತಿಭಾ ಪುರಸ್ಕಾರ ನೀಡಲಾಗುತ್ತಿದೆ ಎಂದು ಕರ್ನಾಟಕ ರಾಜ್ಯ ಸರ್ಕಾರಿ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್.ಷಡಾಕ್ಷರಿ ಹೇಳಿದರು.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಬುಧವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಎರಡು ವರ್ಷಗಳಿಂದ ಸರ್ಕಾರಿ ನೌಕರರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ. ಈ ಕಾರ್ಯ ನೌಕರರ ಮಕ್ಕಳಲ್ಲಿ ಓದಿನ ಅಭಿರುಚಿ ಮೂಡಿಸಲು ಸಹಕಾರಿಯಾಗಿದೆ ಎಂದರು.

ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಹೇಶ್ ಜೋಷಿ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿದರು. ಸಂಘದ ಖಜಾಂಚಿ ಆರ್.ಶ್ರೀನಿವಾಸ್, ಕಾರ್ಯಾಧ್ಯಕ್ಷರಾದ ಮಲ್ಲಿಕಾರ್ಜುನ ಬಳ್ಳಾರಿ, ಗೌರವಾಧ್ಯಕ್ಷರಾದ ವೆಂಕಟೇಶಯ್ಯ, ಹಿರಿಯ ಉಪಾಧ್ಯಕ್ಷರಾದ ಎಂ.ವಿ. ರುದ್ರಪ್ಪ, ಬಸವರಾಜು, ಸಚಿವಾಲಯ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಎ.ಎಸ್. ಹರ್ಷ, ನೆಲ್ಕುದ್ರಿ ಸದಾನಂದ, ಮಾಲತೇಶ, ಗಿರಿಗೌಡ, ಸಿದ್ದರಾಮಪ್ಪ, ದಿನೇಶ್ ಉಪಸ್ಥಿತರಿದ್ದರು.

'ನಿಜಲಿಂಗಪ್ಪ ಮನೆ ಸ್ಮಾರಕ ಮಾಡಿ, ಇಲ್ಲವೇ ಮಾರಾಟಕ್ಕೆ ಅನುಮತಿ ನೀಡಿ'

ಚಿತ್ರದುರ್ಗ: 'ಮಾಜಿ ಮುಖ್ಯಮಂತ್ರಿ, ದಿವಂಗತ ಎಸ್. ನಿಜಲಿಂಗಪ್ಪ ಅವರ ನಿವಾಸವನ್ನು ಸ್ಮಾರಕವಾಗಿ ರೂಪಿಸುವ ಪ್ರಕ್ರಿಯೆ ಚುರುಕುಗೊಳಿಸಿ; ಇಲ್ಲವೇ ಮಾರಾಟ ಮಾಡಲು ಅವಕಾಶ ಕಲ್ಪಿಸಿ' ಎಂದು ನಿಜಲಿಂಗಪ್ಪ ಅವರ ಪುತ್ರ ಎಸ್.ಎನ್. ಕಿರಣ್‌ಶಂಕರ್ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದಿದ್ದಾರೆ.

'ನಿವಾಸವನ್ನು ಸ್ಮಾರಕವಾಗಿಸುವಲ್ಲಿ ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ ಅವರು ವಿಳಂಬ ನೀತಿ ಅನುಸರಿಸುತ್ತಿದ್ದಾರೆ. ನಿಜಲಿಂಗಪ್ಪ ಅವರು ವಾಸಿಸುತ್ತಿದ್ದ ಮನೆಯನ್ನು ಖರೀದಿಸಿ, ಸ್ಮಾರಕವಾಗಿ ರೂಪಿಸುವುದಾಗಿ ಮುಖ್ಯಮಂತ್ರಿಯಾಗಿದ್ದ ಬಿ.ಎಸ್.ಯಡಿಯೂರಪ್ಪ ಘೋಷಿಸಿದಾಗ ಚಿತ್ರದುರ್ಗದ ಜನರ ಜೊತೆ ನಾನೂ ಸಂತಸಪಟ್ಟಿದ್ದೆ. ಸರ್ಕಾರ ಹಲವು ಆದೇಶ ಹೊರಡಿಸಿ ಅಗತ್ಯ ಅನುದಾನ ಬಿಡುಗಡೆ ಮಾಡಿದೆ. ಆದರೆ, ಈವರೆಗೆ ಪ್ರಕ್ರಿಯೆ ಪೂರ್ಣಗೊಂಡಿಲ್ಲ' ಎಂದು ಅವರು ಹೇಳಿದ್ದಾರೆ.

'ಜಿಲ್ಲಾಧಿಕಾರಿಯವರು 7 ತಿಂಗಳಿಂದ ಯಾವುದೇ ಪ್ರಕ್ರಿಯೆ ಪೂರ್ಣಗೊಳಿಸಿಲ್ಲ. ಮನೆಯನ್ನು ಖರೀದಿಸಿ ಸರ್ಕಾರಕ್ಕೆ ನೋಂದಣಿ ಮಾಡಿಕೊಳ್ಳುವ ವಿಚಾರಕ್ಕೆ ಸಂಬಂಧಿಸಿದಂತೆ ತೊಡಕುಗಳು ಎದುರಾದಾಗ ಅವರೊಂದಿಗೆ ಹಲವು ಬಾರಿ ಚರ್ಚಿಸಲಾಗಿದೆ. ಪುತ್ರ ಎಸ್.ಕೆ. ವಿನಯ್ ಅಮೆರಿಕದಿಂದ ಬಂದು 20 ದಿನ ಕಾದಿದ್ದಾರೆ. ಆದರೂ ಪ್ರಕ್ರಿಯೆ ಪೂರ್ಣಗೊಂಡಿಲ್ಲ' ಎಂದು ಅವರು ಪತ್ರದಲ್ಲಿ ಆರೋಪಿಸಿದ್ದಾರೆ.



ಚಿತ್ರಾವಳಿ



ಆದಾಯ ತೆರಿಗೆ ಇಲಾಖೆಯಲ್ಲಿನ ಉತ್ತಮ ಸೇವೆಗೆ ರಾಜ್ಯದ ಐಆರ್‌ಎಸ್ ಅಧಿಕಾರಿ ಎಂ.ಎಸ್. ನೇತ್ರಪಾಲ್ ಅವರಿಗೆ ನವದೆಹಲಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಪ್ರಶಸ್ತಿ ಪ್ರದಾನ ಮಾಡಿದರು. ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಹಾಗೂ ಇಲಾಖೆಯ ಅಧಿಕಾರಗಳು ಇದ್ದಾರೆ

ಭೀಮಾ ನದಿಯ ಪ್ರವಾಹದಿಂದ ಮುಳುಗಡೆಯಾಗಿದ್ದ ಯಂತ್ರಗಳನ್ನು ಕೇವಲ 36 ಗಂಟೆಗಳಲ್ಲಿ ದುರಸ್ತಿಗೊಳಿಸಿದ ಜಲಮಂಡಳಿಯ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಹಾಗೂ ಗುತ್ತಿಗೆದಾರರಿಗೆ ತೊರೆಕಾಡನಹಳ್ಳಿಯಲ್ಲಿ ಹಮ್ಮಿಕೊಂಡಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಅಧ್ಯಕ್ಷ ಎನ್. ಜಯರಾಮ್ ಮಾತನಾಡಿದರು



E-book today at www.marutisuzuki.com or visit your nearest Maruti Suzuki dealership. | For bulk orders, please contact: shubham.mittal@maruti.co.in

MARUTI SUZUKI AUTHORISED DEALERS: BENGALURU: BIMAL: ITPL ROAD, YELAHANKA, BANASHANKARI, VARTHUR, OLD AIRPORT ROAD, HOSKOTE, CHIKKABALLAPUR, DEVANAHALLI, BAGEPALLI, SIDLAGHATTA, VIJAYPURA, H CROSS, BUDIGERE, GUDIBANDA, HESARGHATTA PH: 080-30693069. KALYANI: MYSORE ROAD, BANNERGHATTA ROAD, NAGARBHAVI, BANASWADI, LALBAGH, RAMANAGARAM, CHANNAPATNA, KANAKPURA, BANNERGATTA, BIDADI, DABASPET, PH: 95909 90011. MANDOVI: BASAVANAGUDI, COX TOWN, BASAVESHWARA NAGAR, YELAHANKA, MALUR, KOLAR, GOURIBIDNUR, PH: 97400 30077. KATARIA: KANAKAPURA ROAD, PH: 78990 40000. PRATHAM: HSR LAYOUT, BELLANDHUR, ANEKAL, MAGADI, CHINTAMANI, MULBAGAL, DODDABALLAPUR, SARJAPUR VILLAGE, PH: PH: 9591991199. RNS MOTORS: YESHWANTHPUR, BOMMANAHALLI, NELAMANGALA, PH: 9538965804. SURAKSHAA CAR CARE: ELECTRONICS CITY, KORAMANGALA, BANGARPET, ATTIBELLE, SRINIVASAPURA, HAROHALLI PH: 8884442299. VARUN MOTORS: MALLESHWARAM, HEBBAL, INFANTRY ROAD, RAJANAKUNTE PH: 78991 00200. TUMKUR: SAKETH: TUMKUR, CHITRADURGA, TIPTUR, KUNIGAL, GUBBI, HOSADURGA, CHALLAKERE, PH: 9980211099.

*Offer includes consumer offer, exchange bonus and corporate offer (wherever applicable) on selected models/ variants. Above mentioned savings amount is the value of maximum savings on selected models/variants. *Terms and conditions apply. Terms and conditions are subject to change without any prior notice. For more details, please contact your nearest ARENA dealership. Features and accessories shown may not be part of standard fitment. Black Glass Shade on the vehicle is due to the lighting effect. Images used are for illustration purposes only. Car color may vary due to printing on paper. Offers vary across variants. Maruti Suzuki India Limited reserves the right to discontinue offers without notice. Above offers are valid till 30th September, 2022.



1. ಯುವ ದಸರಾ ಕಾರ್ಯಕ್ರಮದಲ್ಲಿ ಭಾವನಾ ಹಾಗೂ ಇಬ್ರಾಹಿಂ ತಂಡದವರು ನೃತ್ಯ ಪ್ರದರ್ಶಿಸಿದರು 2. ಕಾರ್ಯಕ್ರಮದಲ್ಲಿ ವಶಿಷ್ಠ ಸಿಂಹ ಮಾತನಾಡಿದರು. 3) ಕಾರ್ಯಕ್ರಮದಲ್ಲಿ ಅಪ್ಪು ಹಾಡುಗಳಿಗೆ ಯುವತಿಯರು ಕುಣಿದು ಸಂಭ್ರಮಿಸಿದರು/ ಪ್ರಜಾವಾಣಿ ಚಿತ್ರಗಳು

ಮಹಾರಾಜ ಕಾಲೇಜು ಮೈದಾನದಲ್ಲಿ ವರ್ಣರಂಜಿತ ಚಾಲನೆ

‘ಅಪ್ಪು ಹವಾ’ದಲ್ಲಿ ಮುಳುಗೆದ್ದ ಯುವ ದಸರಾ

• ಎಂ.ಮಹೇಶ

ಮೈಸೂರು: ಅಲ್ಲಿದ್ದ ವರ್ಣರಂಜಿತ ಪರದೆಗಳಲ್ಲಿ, ನೆರೆದ ನೂರಾರು ಯುವಜನರ ಮನದಲ್ಲಿ , ಪಡ್ಡೆ ಹುಡುಗರ ಕೈಯಲ್ಲಿದ್ದ ಬಾವುಟಗಳಲ್ಲಿ ಮತ್ತು ಫೋಟೋಗಳಲ್ಲಿ ಎಲ್ಲೆಲ್ಲೂ ಅಪ್ಪು ಇದ್ದರು. ‘ಯುವರತ್ನ’ನ ನೆನಪು ವೈವಿಧ್ಯಮಯವಾಗಿತ್ತು. ಎಲ್ಲವೂ ಪುನೀತ್‌ಮಯವಾಗಿತ್ತು. ‘ರಾಜಕುಮಾರ’ನನ್ನು ಸ್ಮರಿಸಿ ಭಾವುಕ ಕ್ಷಣಗಳಿಗೂ ಜನರು ಜಾರಿದರು.

–ಹೀಗೆ, ನಗರದ ಮಹಾರಾಜ ಕಾಲೇಜು ಮೈದಾನದಲ್ಲಿ ಮೊದಲ ದಿನವೇ ಯುವ ದಸರಾ ಅಪ್ಪು ಹವಾದಲ್ಲಿ ಮುಳುಗೆದ್ದಿತು. ಸಾವಿರಾರು ಮಂದಿ ‘ಅಪ್ಪು, ಅಪ್ಪು, ಅಪ್ಪು, ಅಪ್ಪು’ ಎಂದು ಕೂಗುತ್ತಾ ಅಭಿಮಾನ ಪ್ರದರ್ಶಿಸಿದರು. ಆ ಅಪರೂಪದ ಕ್ಷಣಗಳಿಗೆ ಮಕ್ಕಳಿಂದ ಹಿಡಿದು ವೃದ್ಧರವರೆಗೆ ಸಾವಿರಾರು ಮಂದಿ ಸಾಕ್ಷಿಯಾದರು.

ಪುನೀತ್ ಪತ್ನಿ ಅಶ್ವಿನಿ, ಅಣ್ಣ ರಾಘವೇಂದ್ರ ರಾಜ್‌ಕುಮಾರ್, ಕುಟುಂಬದ ವಿನಯ್ ರಾಜ್‌ಕುಮಾರ್, ಧೀರನ್ ರಾಮ್‌ಕುಮಾರ್ ವೇದಿಕೆ ಏರುತ್ತಿದ್ದಂತೆ ‘ಅಪ್ಪು’ ಘೋಷಣೆ ಮುಗಿಲು ಮುಟ್ಟಿತು. ಗಾಯಕರಾದ ವಿಜಯಪ್ರಕಾಶ್, ಕುನಾಲ್ ಗಾಂಜಾವಾಲಾ, ಅನುರಾಧಾ ಭಟ್, ಚೈತ್ರಾ ಅಪ್ಪು ಹಾಡಿದ ಹಾಗೂ ಅಭಿನಯಿಸಿದ ಹಾಡುಗಳ ಮೂಲಕ ಮೋಡಿ ಮಾಡಿದರು. ಯುವಜನರು ಹುಚ್ಚೆದ್ದು ಕುಣಿದರು.

ವರ್ಣರಂಜಿತ ಚಾಲನೆ: ಪುನೀತ್ ಫೋಟೊಗೆ ಪುಷ್ಪ ನಮನ ಸಲ್ಲಿಸುವ ಮೂಲಕ ಯುವ ದಸರಾ ಸಂಭ್ರಮಕ್ಕೆ ವರ್ಣರಂಜಿತ ಚಾಲನೆ ದೊರೆಯಿತು.

ಮಹಾರಾಜ ಕಾಲೇಜು ಮೈದಾನದಲ್ಲಿ ಬುಧವಾರ ನಡೆದ ‘ಯುವ ದಸರಾ’ ಕಾರ್ಯಕ್ರಮದಲ್ಲಿ ನಟ ಪುನೀತ್ ರಾಜ್‌ಕುಮಾರ್ ಫೋಟೊಗೆ ಪತ್ನಿ ಅಶ್ವಿನಿ ಪುನೀತ್ ರಾಜಕುಮಾರ್ ಪುಷ್ಪ ನಮನ ಸಲ್ಲಿಸಿದರು. ನಟ ರಾಘವೇಂದ್ರ ರಾಜ್‌ಕುಮಾರ್ ಇದ್ದಾರೆ/ ಪ್ರಜಾವಾಣಿ ಚಿತ್ರ: ಅನೂಪ್‌ರಾಘ.ಟಿ.

ಮುಖ್ಯಾಂಶಗಳು

- ವಿಜಯಪ್ರಕಾಶ್, ಕುನಾಲ್ ಗಾಂಜಾವಾಲಾ, ಗುರುಕಿರಣ್ ಮೋಡಿ
- ಅಶ್ವಿನಿ, ರಾಘವೇಂದ್ರ ರಾಜ್‌ಕುಮಾರ್ ಕುಟುಂಬದವರು ಭಾಗಿ

ಅಶ್ವಿನಿ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಉದ್ಘಾಟಿಸಿದರು. ನಂತರ ಅಲ್ಲಿ ಅಪ್ಪು ನೆನಪಿನ ಹಾಯಿದೋಣಿ ಸಂಚರಿಸಿತು.

‘ಅಪ್ಪುವನ್ನು ನೀವು ಹಿಂದೆ ಪ್ರೀತಿಸ್ತಾ ಇದ್ರಿ; ಈಗ ಪೂಜಿಸುತ್ತಿದ್ದೀರಿ. ಇಲ್ಲಿರುವ ಎಲ್ಲರಲ್ಲೂ ಅಪ್ಪು ಕಾಣಿಸುತ್ತಿದ್ದಾರೆ. ಅಪ್ಪು ಈ ಜೀವ ನಿನಗೋಸ್ಕರ’ ಎಂದು ರಾಘವೇಂದ್ರ ರಾಜ್‌ಕುಮಾರ್ ಹೇಳಿದಾಗ ಬಹುತೇಕರು ಭಾವುಕರಾದರು.

ಟಾರ್ಚ್ ಬೆಳಗಿಸಿ ಅಭಿಮಾನ ಪ್ರದರ್ಶನ

ಕಾರ್ಯಕ್ರಮಕ್ಕೆ ಮತ್ತೊಂದು ಹಂತದ ಮೆರುಗು ತಂದವರು ಸಂಗೀತ ನಿರ್ದೇಶಕ ಗುರುಕಿರಣ್. ‘ಮೈಲಾರಿ’ ಹಾಡಿನೊಂದಿಗೆ ವೇದಿಕೆ ಏರಿದ ಗುರುಕಿರಣ್, ಅಪ್ಪು ಅಭಿನಯದ ಸರಣಿ ಹಾಡುಗಳನ್ನು ಹಾಡುತ್ತಾ ರಂಜಿಸಿದರು. ನೆರೆದಿದ್ದವರು ಅವರೊಂದಿಗೆ ಹಾಡಿದರು; ಕುಣಿದು ಸಂಭ್ರಮಿಸಿದರು. ವೇದಿಕೆಯಿಂದ ದೂರದಲ್ಲಿದ್ದವರು ಕುಣಿದು ದೂಳೆಬ್ಬಿಸಿದರು.

ಅಪ್ಪು ನಿರ್ಮಾಣದ ಹಾಗೂ ಅಭಿನಯದ ಚಿತ್ರ ‘ಗಂಧದ ಗುಡಿ’ಯ ಟೀಸರ್ ಅನ್ನು ಎರಡೆರಡು ಬಾರಿ ಪ್ರದರ್ಶಿಸಲಾಯಿತು. ಆಗ ಅಶ್ವಿನಿ ಭಾವುಕರಾಗಿ ಕಣ್ಣೀರು ಹಾಕಿದರು.

ಸಿನಿಮಾ ನಿರ್ದೇಶಕ ಅಮೋಘ ವರ್ಷ ಮಾತನಾಡಿ, ‘ಅವರು ಪ್ರೀತಿಯಿಂದ ಮಾಡಿದ ಸಿನಿಮಾ ಇದು. ಹೇಗಿದ್ದೇನೆಯೋ ಹಾಗೆಯೇ ತೋರಿಸಬೇಕು ಎಂದು ಬಯಸಿದ್ದರು. ಅವರೊಂದಿಗೆ ಒಂದೂವರೆ ವರ್ಷ ಕಳೆದದ್ದು ನನ್ನ ಪುಣ್ಯ. ಆ ಪುಣ್ಯವನ್ನು ಚಿತ್ರದ ಮೂಲಕ ಸಿನಿರಸಿಕರಿಗೆ ಹಂಚುತ್ತಿದ್ದೇನೆ. ಆ ಸಿನಿಮಾ ಅ.28ರಂದು ತೆರೆ ಕಾಣಲಿದೆ’ ಎಂದು ಹಂಚಿಕೊಂಡರು.

ಕಣ್ಣಾಲಿಗಳು ತುಂಬಿ ಬಂದವು: ನಂತರ ನಡೆದ ರಸಮಂಜರಿ ಕಾರ್ಯಕ್ರಮ ನಿರೂಪಿಸಿದ ಅನುಶ್ರೀ ಪುನೀತ್ ಜೊತೆಗಿನ ತಮ್ಮ ನೆನಪುಗಳನ್ನು ಹಂಚಿಕೊಳ್ಳುತ್ತಾ ನೆರೆದಿದ್ದವರಿಗೂ ನೆನಪಿಸುತ್ತಾ ಸಾಗಿದರು.

> ಕರ್ನಾಟಕ ಕಳೆದುಕೊಂಡ ಮುತ್ತುಗಳಲ್ಲಿ ಅಪ್ಪು ಒಬ್ಬರು. 20 ವರ್ಷಗಳ ನಂತರ ಮೈಸೂರಿನ ಯುವ ದಸರಾ ಕಾರ್ಯಕ್ರಮದಲ್ಲಿ ಅವರ ನೆನಪಿನಲ್ಲಿ ಹಾಡುವುದಕ್ಕೆ ಖುಷಿಯಾಗುತ್ತದೆ
>
> **ಗುರುಕಿರಣ್**, ಗಾಯಕ

‘ನಟಸಾರ್ವಭೌಮ’ ಹಾಡಿಗೆ ಭಾವನಾ ಮತ್ತು ಇಬ್ರಾಹಿಂ ತಂಡದವರು ನೃತ್ಯ ಪ್ರಸ್ತುತಪಡಿಸಿ, ‘ಹೀ ಹಿಸ್ ಕಿಂಗ್ ಆಫ್ ದಿ ಸಿನಿಮಾ’ ಎಂದು ಸಾರಿದರು.

ಬಳಿಕ ವೇದಿಕೆಗೆ ಬಂದ ನಟ ವಶಿಷ್ಠ ಸಿಂಹ ಮಾತನಾಡಿ, ‘ಕೆಲವೇ ಶ್ರೇಷ್ಠ ಜೀವಗಳು ಮಾತ್ರ ಕಾಲವಾದ ನಂತರವೂ ಎಲ್ಲರ ಹೃದಯದಲ್ಲಿ ಇರುತ್ತಾವೆ. ಅದರಲ್ಲಿ ಪುನೀತ್ ಕೂಡ ಒಬ್ಬರು. ಅವರಂತೆ ಕೈಲಾದಷ್ಟು ನಾಲ್ಕು ಜನರಿಗೆ ಸಹಾಯ ಮಾಡುವ ಗುಣವನ್ನು ನಾವೆಲ್ಲರೂ ಬೆಳೆಸಿಕೊಳ್ಳೋಣ’ ಎಂದರು.

ಅವರು ಹಾಡಿದ ‘ಬೊಂಬೆ ಹೇಳುತೈತೆ’ ಹಾಡಿಗೆ ನೆರೆದಿದ್ದವರೂ ದನಿಯಾಗಿ ನಮನ ಸಲ್ಲಿಸಿದರು. ಆ ಕ್ಷಣದಲ್ಲಿ ಬಹುತೇಕರ ಕಣ್ಣಾಲಿಗಳು ತುಂಬಿ ಬಂದವು. ಅಪ್ಪು ಅಗಲಿಕೆಯ ನೋವು ಮರೆಸಲು ವಶಿಷ್ಠ ಟಗರು ಸಿನಿಮಾದ ಡೈಲಾಗ್ ಹೇಳಿ ರಂಜಿಸಿದರು. ‘ಮರೆತೇ ಹೋದೆನು ಬಂದಾ ಕಾರಣ’ ಹಾಡನ್ನೂ ಹಾಡಿದರು. ‘ಎದೆ ತುಂಬಿ ಹಾಡುವೆನು ತಂಡ’ದವರು ಧಮ್ ಪವರೇ ಧಮ್ ಪವರೇ ಹಾಡಿ ಪವರ್‌ಸ್ಟಾರ್ ನೆನಪನ್ನು ಮುಂದುವರಿಸಿದರು.

ಜಂಬೂ ಸವಾರಿ... ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದಲ್ಲಿ ಬುಧವಾರ ಜನಸಾಗರದ ನಡುವೆ ಸಾಗಿದ ದಸರಾ ಜಂಬೂಸವಾರಿ

ದಸರಾ ಕವಿಗೋಷ್ಠಿಯಲ್ಲಿ ದೊಡ್ಡರಂಗೇಗೌಡ ಪ್ರಶ್ನೆ

‘ದೇವರು, ಪ್ರಕೃತಿ ಮೇಲೆ ಇನ್ನೆಷ್ಟು ಕವಿತೆ ಬರೆಯುತ್ತೀರಿ?’

ಪ್ರಜಾವಾಣಿ ವಾರ್ತೆ

ಮೈಸೂರು: ದೇವರು, ಪ್ರಕೃತಿಯ ಬಗ್ಗೆ ಇನ್ನೆಷ್ಟು ಕವಿತೆಗಳನ್ನು ಬರೆಯುತ್ತೀರಿ? ಕಣ್ಣ ಮುಂದಿನ ಅನ್ಯಾಯ, ಶೋಷಣೆ, ತಾರತಮ್ಯಗಳು ಕಾಣುತ್ತಿಲ್ಲವೇ ಎಂದು ಕವಿ ಡಾ.ದೊಡ್ಡರಂಗೇಗೌಡ ಅವರು ಪ್ರಶ್ನಿಸಿದರು.

ನಗರದ ಕಲಾಮಂದಿರದಲ್ಲಿ ಬುಧವಾರ ದಸರಾ ಕವಿಗೋಷ್ಠಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ‘ಪ್ರಕೃತಿ ಏನಾಗಿದೆ ನೋಡಿ ಸ್ವಾಮಿ. ಅದರ ಮೇಲಾಗಿರುವ ವಿಕೃತಿಯ ತನಿಖೆ ಮಾಡಿ. ಸಮಾಜವನ್ನು ಹದಗೆಡಿಸಿದವರ ನೀಚ ಗುಣ ಖಂಡಿಸಿ ಪ್ರತಿಭಟನಾತ್ಮಕ ಕವಿತೆಗಳನ್ನು ಬರೆಯಿರಿ’ ಎಂದು ಸಲಹೆ ನೀಡಿದರು.

‘ಹೊಸ ನೆತ್ತರುಕ್ಕಿ ಆರಿಹೋಗುವ ಮುನ್ನ, ಕಟ್ಟುವೆವು ನಾವು ಹೊಸ ನಾಡೊಂದನು’ ಎಂದು ಗೋಪಾಲಕೃಷ್ಣ ಅಡಿಗರು ಹೇಳಿದ್ದರು. ಅಂತಹ ನಾಡನ್ನು ಕಟ್ಟಿದ್ದೇವೆಯೇ’ ಎಂದು ಪ್ರಶ್ನಿಸಿದರು.

‘ಜಾತಿ–ಧರ್ಮದ ಹೆಸರಿನಲ್ಲಿ ಶೋಷಣೆ ಹೆಚ್ಚಾಗಿದೆ. ಸಂಪ್ರದಾಯವನ್ನು ಬಿಟ್ಟು ಸಮಾಜಮುಖಿ ಕಾವ್ಯವನ್ನು ಬರೆಯುವ ತುರ್ತಿನ ಹೊತ್ತು ಇದು. ಸರ್ವಜ್ಞನಂತೆ ಸಮಾಜದ ಜಾತಿ– ವರ್ಗ– ವರ್ಣಗಳ ರೋಗಗಳಿಗೆ ಚಿಕಿತ್ಸೆ ನೀಡುವ ಕವಿಗಳಾಗಿ. ಸಮಾಜವನ್ನು ಹೊಕ್ಕಿರುವ ಭೂತಗಳನ್ನು ಬಿಡಿಸಿ, ರೋಗಗ್ರಸ್ತರಿಗೆ ಚಿಕಿತ್ಸೆ ನೀಡಿ’ ಎಂದರು.

‘ಬೀದಿಬದಿ ಕಸ ಗುಡಿಸಿದರಷ್ಟೇ ಸಾಲದು. ಮನಸ್ಸಿನಲ್ಲಿ ಹುದುಗಿರುವ ಭೇದಭಾವ– ಪಕ್ಷಪಾತ ಮತ್ತು ಅಪ್ರಾಮಾಣಿಕತೆಯನ್ನು ಶುದ್ಧಗೊಳಿಸಬೇಕು. ಗ್ರೀಕ್ ಕವಿ ಪ್ಲೇಟೊನ ಆದರ್ಶ ಸಮಾಜ ನಿರ್ಮಿಸಬೇಕು. ವರ್ಗ–ವರ್ಣ ರಹಿತ ಸಮಾಜ ನಿರ್ಮಿಸಬೇಕು’ ಎಂದು ಹೇಳಿದರು.

‘ಈಜಿಪ್ಟ್‌ನ ಪಿರಮಿಡ್‌ನಲ್ಲಿ ಊರೊಳ್ ಎಂಬ ಕನ್ನಡ ಪದವಿದೆ. ಕನ್ನಡದ ಬೇರುಗಳು ಎಲ್ಲೆಡೆ ಚಾಚಿವೆ ಎಂಬುದನ್ನು ನೆನಪಿಡಬೇಕು. ಕನ್ನಡವನ್ನು ನಾಶಗೊಳಿಸಲು ಆಗದು. ಕನ್ನಡದ ತಾಕತ್ತು, ಸಂವರ್ಧನೆಯನ್ನು ಯಾರೂ ಮಾಡಬೇಕಿಲ್ಲ’ ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಕವಿ ಬಿ.ಆರ್. ಲಕ್ಷ್ಮಣರಾವ್, ಪ್ರೊ.ಎಂ.ಕೃಷ್ಣೇಗೌಡ ಇದ್ದರು. ವೇದಿಕೆಯಲ್ಲಿ ಕವಿಗಳಿಗಿಂತಲೂ ರಾಜಕಾರಣಿಗಳೇ ಹೆಚ್ಚಿದ್ದರು.

ಡಿಕೆಶಿ ನಿವಾಸಗಳಲ್ಲಿ ಸಿಬಿಐ ಅಧಿಕಾರಿಗಳಿಂದ ದಾಖಲೆ ಪರಿಶೀಲನೆ

ಪ್ರಜಾವಾಣಿ ವಾರ್ತೆ

ರಾಮನಗರ: ಕೇಂದ್ರೀಯ ತನಿಖಾ ದಳ (ಸಿಬಿಐ)ದ ಅಧಿಕಾರಿಗಳ ತಂಡ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರ ನಿವಾಸಗಳಲ್ಲಿ ಬುಧವಾರ ಪರಿಶೀಲನೆ ನಡೆಸಿತು.

ಶಿವಕುಮಾರ್ ಅವರ ಕನಕಪುರ, ದೊಡ್ಡಾಲಹಳ್ಳಿ, ಸಂತೆ ಕೋಡಿಹಳ್ಳಿಯಲ್ಲಿನ ಮನೆಗಳಿಗೆ ಭೇಟಿ ನೀಡಿದ ಎಂಟು ಅಧಿಕಾರಿಗಳ ತಂಡ, ಆಸ್ತಿ ಮತ್ತು ಇತರ ದಾಖಲೆಗಳನ್ನು ಪರಿಶೀಲಿಸಿತು.

ಬೆಳಿಗ್ಗೆ 11ರಿಂದ ಮಧ್ಯಾಹ್ನ 3ರವರೆಗೂ ಪರಿಶೀಲನೆ ನಡೆಸಿದ್ದು, ಡಿ.ಕೆ.ಶಿವಕುಮಾರ್ ಮತ್ತು ಅವರ ಕುಟುಂಬದವರು, ಸಂಬಂಧಿಕರ ಹೆಸರಿನಲ್ಲಿ ಇರುವ ಆಸ್ತಿಗಳ ಕುರಿತು ಕನಕಪುರ ತಹಶೀಲ್ದಾರ್ ವಿಶ್ವನಾಥ್ ಅವರಿಂದ ಮಾಹಿತಿ ಪಡೆಯಿತು.

ಅಕ್ರಮ ಆಸ್ತಿ ಗಳಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಹಿಂದೆಯೂ ಅಧಿಕಾರಿಗಳ ತಂಡವು ಡಿ.ಕೆ.ಶಿವಕುಮಾರ್ ಹಾಗೂ ಅವರ ಸಹೋದರ ಸಂಸದ ಡಿ.ಕೆ. ಸುರೇಶ್ ಅವರ ಮನೆಗಳಲ್ಲಿ ದಾಖಲೆಗಳನ್ನು ಪರಿಶೀಲಿಸಿತ್ತು.

ಸಿಡಿಲು ಬಡಿದು ನಾಲ್ವರ ಸಾವು

ಯಾದಗಿರಿ: ತಾಲ್ಲೂಕಿನ ಎಸ್.ಹೊಸಳ್ಳಿಯಲ್ಲಿ ಬುಧವಾರ ಎರಡು ಕಡೆ ಸಿಡಿಲು ಬಡಿದು ಒಂದೇ ಕುಟುಂಬದ ಮೂವರು ಸೇರಿ ನಾಲ್ವರು ಮೃತಪಟ್ಟಿದ್ದಾರೆ.

ಗುರುಮಠಕಲ್ ತಾಲ್ಲೂಕಿನ ಗಾಜರಕೋಟದ ಮೋನಮ್ಮ(25), ಅವರ ಮಕ್ಕಳಾದ ಭಾನು (4) ಶ್ರೀನಿವಾಸ (2) ಮತ್ತು ಎಸ್.ಹೊಸಳ್ಳಿ ಗ್ರಾಮದ ಸಾಬಣ್ಣ (17) ಮೃತರು. ಮೋನಮ್ಮ ಅವರ ಮೈದುನ ಭೀಮಾಶಂಕರ (32) ಅವರಿಗೆ ಗಂಭೀರ ಗಾಯಗಳಾಗಿದ್ದು, ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ.

ಯಾದಗಿರಿ ಆಸ್ಪತ್ರೆಗೆ ಬಂದಿದ್ದ ಭೀಮಾಶಂಕರ, ಮೋನಮ್ಮ ಮತ್ತು ಇಬ್ಬರು ಮಕ್ಕಳೊಂದಿಗೆ ಗಾಜರಕೋಟಕ್ಕೆ ಬೈಕ್‌ನಲ್ಲಿ ಮರಳುವಾಗ, ಎಸ್.ಹೊಸಳ್ಳಿ ಬಳಿ ಮಳೆ ಸುರಿಯತೊಡಗಿತು. ಆಗ ಎಲ್ಲರೂ ಮರ ಕೆಳಗೆ ನಿಂತಿದ್ದಾಗ ಸಿಡಿಲು ಬಡಿದಿದೆ. ಅದೇ ಗ್ರಾಮದಲ್ಲಿ ಬೇರೆಡೆ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ವೇಳೆ ಸಾಬಣ್ಣಗೆ ಸಿಡಿಲು ಬಡಿದಿದೆ.

ಕಳಪೆ ಕಾಮಗಾರಿ ಗುತ್ತಿಗೆದಾರರಿಗೆ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಕೋಲಾರ: ‘ಕೋಲಾರ ಜಿಲ್ಲೆಯ ರಸ್ತೆಗಳು ಹದಗೆಟ್ಟಿದ್ದು ಅ.10ರಿಂದ ಐದು ದಿನ ಪ್ರತಿ ತಾಲ್ಲೂಕಿಗೆ ಭೇಟಿ ನೀಡಿ ಪರಿಶೀಲಿಸುತ್ತೇನೆ. ಗುತ್ತಿಗೆದಾರರೂ ಇರಬೇಕು. ಕಾಮಗಾರಿ ಕಳಪೆಯಾಗಿದ್ದರೆ ಅಂಥವರ ಮೇಲೆ ಕಠಿಣ ಕ್ರಮ ಜರುಗಿಸಲಾಗುವುದು’ ಎಂದು ಜಿಲ್ಲಾ ಉಸ್ತುವಾರಿ ಸಚಿವ ಮುನಿರತ್ನ ಎಚ್ಚರಿಕೆ ನೀಡಿದ್ದಾರೆ.

ಕೆರೆ ಸ್ವಚ್ಛತಾ ಕಾರ್ಯಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಯಲಹಂಕ: ಪ್ರಧಾನಿ ನರೇಂದ್ರ ಮೋದಿಯವರ ಹುಟ್ಟುಹಬ್ಬದ ಪ್ರಯುಕ್ತ ಬೆಂಗಳೂರು ಜಿಲ್ಲಾ ಬಿಜೆಪಿ ರೈತಮೋರ್ಚಾ ವತಿಯಿಂದ ಕಡತನಮಲೆ ಗ್ರಾಮದ ಕೆರೆ ಸ್ವಚ್ಛತೆ ಮತ್ತು ಸಸಿ ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಶಾಸಕ ಎಸ್.ಆರ್.ವಿಶ್ವನಾಥ್, ಸಸಿನೆಟ್ಟು ಸ್ವಚ್ಛತಾಕಾರ್ಯದಲ್ಲಿ ಪಾಲ್ಗೊಳ್ಳುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ’ಸುಮಾರು 57 ಎಕರೆ ವಿಸ್ತೀರ್ಣ ಹೊಂದಿರುವ ಕಡತನಮಲೆ ಕೆರೆಯನ್ನು ಸರ್ಕಾರದ ಯಾವುದೇ ಅನುದಾನ ನಿರೀಕ್ಷಿಸದೆ ಕೆರೆ ಅಭಿವೃದ್ಧಿ ಸಮಿತಿಯ ಮೂಲಕ ಸಾರ್ವಜನಿಕರ ಸಹಭಾಗಿತ್ವದಲ್ಲಿ ₹67 ಲಕ್ಷ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗಿದೆ‘ ಎಂದು ತಿಳಿಸಿದರು.

ಐದು ಅಡಿಗಳಷ್ಟು ಹೂಳು ತೆಗೆದು, ಕೆರೆಯ ಸುತ್ತಲೂ ಸುಮಾರು 10 ಸಾವಿರಕ್ಕೂ ಹೆಚ್ಚು ವಿವಿಧ ಜಾತಿಯ ಗಿಡಗಳನ್ನು ನೆಟ್ಟು ಪೋಷಿಸಲಾಗಿದೆ. ಕೆರೆಯು ಸುಮಾರು 30 ವರ್ಷಗಳ ನಂತರ ಕೋಡಿ ಹರಿದಿದ್ದು, ಇದರಿಂದ ಈ ಭಾಗದಲ್ಲಿ ಅಂತರ್ಜಲಮಟ್ಟ ಹೆಚ್ಚಾಗಿ, ನೀರಿನ ಸಮಸ್ಯೆಗೆ ಪರಿಹಾರ ದೊರೆತಂತಾಗಿದೆ. ಇದೊಂದು ಅತ್ಯುತ್ತಮ ಬೆಳವಣಿಗೆಯಾಗಿದ್ದು, ಇತರರಿಗೂ ಮಾದರಿಯಾಗಬೇಕು ಎಂದು ಆಶಿಸಿದರು.

ಜೆಸಿಬಿ, ಟ್ರ್ಯಾಕ್ಟರ್, ಮಿಷನ್ ಬೋಟ್ ಹಾಗೂ ತೆಪ್ಪಗಳನ್ನು ಬಳಸಿ ಸ್ವಚ್ಛತಾಕಾರ್ಯ ಕೈಗೊಳ್ಳಲಾಗಿತ್ತು. ನಡುಗಡ್ಡೆಯ ಮಧ್ಯದಲ್ಲಿ 20 ಜಾತಿಯ ಹಣ್ಣಿನ ಸಸಿಗಳು ಹಾಗೂ ಅರಳಿಗಿಡ ನೆಡಲಾಯಿತು. ಅರಕೆರೆ ಗ್ರಾಮ ಪಂಚಾಯಿತಿ ಸಿಬ್ಬಂದಿ, ಏಟ್ರಿಯಾ ತಾಂತ್ರಿಕ ಮಹಾವಿದ್ಯಾಲಯದ ಎನ್.ಎಸ್.ಎಸ್ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಪಾಲ್ಗೊಂಡಿದ್ದರು.

ದೊಡ್ಡಬಳ್ಳಾಪುರ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ದಿಬ್ಬೂರು ಜಯಣ್ಣ, ಬೆಂಗಳೂರು ಜಿಲ್ಲಾ ಬಿಜೆಪಿ ರೈತ ಮೋರ್ಚಾ ಅಧ್ಯಕ್ಷ ಕಡತನಮಲೆ ಸತೀಶ್, ಗ್ರಾಮ ಪಂಚಾಯಿತಿ ಸದಸ್ಯರಾದ ಕೆ.ಆರ್. ತಿಮ್ಮೇಗೌಡ, ಚೊಕ್ಕನಹಳ್ಳಿ ನಾಗೇಶ್, ಮುಖಂಡರಾದ ಎಸ್.ಎನ್.ರಾಜಣ್ಣ, ಎಚ್.ಬಿ.ಹನುಮಯ್ಯ, ಕೆ.ವಿಜಯಕುಮಾರ್, ಸಿ.ವೆಂಕಟೇಶ್, ಲೋಕೇಶ್ ಗೌಡ ಮತ್ತಿತರರು ಉಪಸ್ಥಿತರಿದ್ದರು.

ಕೆರೆ ಸ್ವಚ್ಛತಾ ಕಾರ್ಯದಲ್ಲಿ ಗ್ರಾಮಸ್ಥರು ಹಾಗೂ ಗ್ರಾಮ ಪಂಚಾಯಿತಿ ಸಿಬ್ಬಂದಿ ಪಾಲ್ಗೊಂಡಿದ್ದರು.

9 ಹೊಸ ತಳಿಗಳ ಆವಿಷ್ಕರಿಸಿದ ಕೃಷಿ ವಿವಿ, ರೈತರ ಸಮಸ್ಯೆಗಳಿಗೆ ಪರಿಹಾರ

ಭತ್ತದ ಈ ತಳಿಗೆ ಬಾರದು ಬೆಂಕಿರೋಗ

• ಆದಿತ್ಯ ಕೆ.ಎ.

ಪ್ರಜಾವಾಣಿ ವಿಶೇಷ

ಬೆಂಗಳೂರು: ಬೆಂಕಿರೋಗ ನಿಗ್ರಹಿಸುವ ಸಾಮರ್ಥ್ಯ, ಅಲ್ಪಾವಧಿಯಲ್ಲೇ ಕಟಾವು, ಅಧಿಕ ಇಳುವರಿ ನೀಡುವ ಎರಡು ಬಗೆಯ ಭತ್ತದ ತಳಿಗಳನ್ನು ಸಂಶೋಧಿಸಿರುವ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ವಿಜ್ಞಾನಿಗಳು, ಅವುಗಳ ಬಿಡುಗಡೆಗೆ ಸಿದ್ಧತೆ ನಡೆಸಿದ್ದಾರೆ.

ನ.3ರಿಂದ 6ರ ತನಕ ನಡೆಯುವ ‘ಕೃಷಿ ಮೇಳ’ದಲ್ಲಿ ಈ ಹೊಸ ತಳಿಗಳು ಪ್ರದರ್ಶನವಾಗಲಿವೆ.

ಪ್ರತಿಕೂಲ ಹವಾಮಾನ, ಅಧಿಕ ವೆಚ್ಚ, ರೋಗಬಾಧೆ ಹಾಗೂ ಕೃಷಿ ಕಾರ್ಮಿಕರ ಕೊರತೆಯಿಂದ ರಾಜ್ಯದಲ್ಲಿ ಭತ್ತ ಬೆಳೆ ಯುವ ರೈತರ ಸಂಖ್ಯೆ ಕಡಿಮೆಯಾಗುತ್ತಿದೆ. ಭತ್ತದ ಬಿತ್ತನೆ ಪ್ರದೇಶವೂ ಕುಸಿಯುತ್ತಿದೆ. ಭತ್ತದ ಬೆಳೆಗಾರರನ್ನು ಉತ್ತೇಜಿಸಲು ಹಾಗೂ ಹೆಚ್ಚಿನ ಆದಾಯ ತರುವ ಉದ್ದೇಶದಿಂದ ಹೊಸ ತಳಿಗಳನ್ನು ಅಭಿವೃದ್ಧಿಪಡಿಸಲಾಗಿದೆ ಎಂದು ವಿಜ್ಞಾನಿಗಳು ಹೇಳುತ್ತಾರೆ.

ಭತ್ತದ ಹೊಸ ತಳಿ ‘ಕೆಎಂಪಿ– 225’

‘ಕೆಎಂಪಿ– 225’ ಭತ್ತದ ಹೊಸ ತಳಿಯು ಅಲ್ಪಾವಧಿಯಲ್ಲೇ ಕಟಾವಿಗೆ ಬರಲಿದೆ. ಬೇರೆ ತಳಿಗಳ ಭತ್ತದ ಬೆಳೆ ಸಾಮಾನ್ಯವಾಗಿ 160ರಿಂದ 180 ದಿನಗಳಲ್ಲಿ ಕಟಾವಿಗೆ ಬಂದರೆ, ಹೊಸ ತಳಿಯ ಫಸಲನ್ನು 120ರಿಂದ 125 ದಿನಕ್ಕೇ ಕಟಾವು ಮಾಡಬಹುದು’ ಎಂದು ತಿಳಿಸಿದ್ದಾರೆ.

> ಈ ವರ್ಷ 12 ಲಕ್ಷ ರೈತರು ಕೃಷಿ ಮೇಳವನ್ನು ವೀಕ್ಷಿಸುವ ನಿರೀಕ್ಷೆಯಿದೆ. ಹೊಸ ತಳಿಗಳ ಬಗ್ಗೆ ರೈತರಿಗೆ ಮಾಹಿತಿ ನೀಡಲಾಗುವುದು.
>
> **ಕೆ.ನಾರಾಯಣಗೌಡ**
> ವಿಸ್ತರಣಾ ನಿರ್ದೇಶಕ, ಕೃಷಿ ವಿ.ವಿ

‘ಈ ತಳಿಯನ್ನು ರಾಜ್ಯದ ದಕ್ಷಿಣ ವಲಯದಲ್ಲಿ ಜುಲೈನಲ್ಲಿ ಬಿತ್ತನೆ ಮಾಡಬಹುದು. ‘ಐಆರ್ 64’ ತಳಿ ಸಾಮಾನ್ಯವಾಗಿ ಬೆಂಕಿರೋಗಕ್ಕೆ ತುತ್ತಾಗಿ ನಷ್ಟವಾಗುತ್ತಿತ್ತು. ಹೊಸತಳಿಯು ‘ಐಆರ್ 64’ ಭತ್ತದ ತಳಿಗೆ ಹೋಲಿಕೆಯಾದರೂ ಎಲೆ, ತೆನೆದಂಟು ಬೆಂಕಿ ರೋಗ ನಿಗ್ರಹ ಸಾಮರ್ಥ್ಯ ಹೊಂದಿದೆ. ಜತೆಗೆ, ಎಕರೆಗೆ 26 ಕ್ವಿಂಟಲ್ ಇಳುವರಿ ಬರಲಿದೆ’ ಎಂದು ಕೃಷಿ ವಿವಿಯ ಪ್ರಾಧ್ಯಾಪಕ ಕೆ.ಶಿವರಾಮ ಹೇಳುತ್ತಾರೆ.

‘ಆರ್‌ಎನ್‌ಆರ್ 15048’ ವೈಜ್ಞಾನಿಕ ಹೆಸರಿನ ಮತ್ತೊಂದು ಭತ್ತದ ಹೊಸ ತಳಿಯೂ ಅಲ್ಪಾವಧಿಯಲ್ಲೇ ಕೊಯ್ಲಿಗೆ ಬರಲಿದೆ. 125 ದಿನಗಳಲ್ಲಿ ಕಟಾವು ಮಾಡಬಹುದು. ಒಣ ವಲಯದಲ್ಲಿ ಬಿತ್ತನೆಗೆ ಇದು ಹೆಚ್ಚು ಸೂಕ್ತ. ಅಕ್ಕಿಯ ಗಾತ್ರ ತುಂಬ ಸಣ್ಣದಾಗಿರುತ್ತದೆ. ಉತ್ಕೃಷ್ಟದರ್ಜೆಯ ಭತ್ತವಾಗಿದ್ದು ಪ್ರತಿ ಎಕರೆಗೆ 22ರಿಂದ 24 ಕ್ವಿಂಟಲ್ ಇಳುವರಿ ಬರಲಿದೆ’ ಎಂದು ತಿಳಿಸಿದ್ದಾರೆ.

ವಿಜ್ಞಾನಿಗಳು ಸಂಶೋಧಿಸಿರುವ ಮುಸುಕಿನ ಜೋಳ ಎಂಎಎಚ್ 14-138 ಸಹ ಕೃಷಿ ಮೇಳದಲ್ಲಿ ಗಮನ ಸೆಳೆಯಲಿದೆ.

ಇದು ಎಲೆ ಅಂಗಮಾರಿ, ಕೇದಿಗೆ ರೋಗನಿರೋಧಕ ಸಾಮರ್ಥ್ಯವನ್ನು ಹೊಂದಿದೆ. ಕಟಾವು ಹಂತದಲ್ಲೂ ಹಸಿರಾಗಿರಲಿದೆ. ಹೆಕ್ಟೇರ್‌ಗೆ 85 ರಿಂದ 95 ಕ್ವಿಂಟಲ್ ಇಳುವರಿ ದೊರೆಯಲಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Drivers

WANTED VALET Parking Driver's, 26 day's duty, Salary Rs.17,000/- Contact for more information: 6362961311/ 9880468881

Graphic Designers

WANTED MALE/ Female Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 23384085

Marketing & Sales

WANTED COUNTER Sales Executives (M/F) for Two Wheeler Showroom Koramanagala, JPNagar, Rajajinagar. Salary + Incentives. 9945083900, 9731028676.

Multiple Vacancy

REQUIRED, TEAMLEADER, & FieldExecutive For BankLoan collection. direct recruitment to company. Contact: 9620206756, 9620200756.

Teachers/ Professors

REQUIRED SOCIAL and PE TEACHER for High School. Contact: ROYAL PUBLIC SCHOOL. Jnanabharathi. Phone: 8867569333

St. Joseph's Institute of Management (Formerly SJCBA - St. Joseph's College of Business Administration) 28/1, Primrose Road (Off M G Road) Bangalore - 560 025. Ph: +91 99722 52765
Visiting Faculty
Applications are invited for Visiting Faculty positions in ERP and Digital Marketing to teach PGDM (MBA) courses.
Qualified and experienced people can send their CV to director@sjim.edu.in before 4th October, 2022.

PERSONAL

Change of Name

CHANGE OF NAME
I, BALAJI RAMESH BABU. S & PARVATHAMMA. B, Residing at #231, 18th Main Road, Subramanyanagar, Bengaluru-560021, have changed our Son's name from VAIBHAV. P.B to VEDVIHAAN. B, born on 30/11/2020, vide affidavit dated 28/9/2022, before notary K.S. Giridhar, Bengaluru.

I, ALAKNANDA DESHPANDE have changed my name to ALAKANANDA KOPPAR vide affidavit dated: 28/9/2022 Before Notary Manohar Jeerige Bangalore.

CHANGE OF NAME
I, YESHODHA T.S Residing at #19, 1st Main, 1st Stage, 5th Phase, Mahaganpathi Nagar, Rajaji Nagar, Bengaluru-560010, have changed my name to T.S. YASHODHA & SSLC Marks Card my father's name has been mentioned as S/o. Shivanna. T.N instead of D/o. Shivanna.T.N. vide affidavit dated 28/09/2022, before notary L. Gopalakrishna,

I, PRATIBHA Spouse of Maruti Tigadi, residing at #163, Ashwathnagar, Bangalore 560094 have changed my name from PRATIBHA to PRATIBHA MARUTI TIGADI as per affidavit dated 28.09.2022, Notary Jalandhara, Bangalore.

I, CHOTE LAL, R/o #123-3, 5th cross, Kaliyamma Temple Road, Bangalore-57, have changed my name to CHHOTE LAL SAW, vide affidavit dated 28.09.2022 before Notary L. Gopalakrishna, Bangalore.

I, POORNIMA Shivaram Jois (Old), r/o. Bengaluru, have changed my name as POORNIMA S (New) vide affidavit sworn before Notary Jayanthi, Karwar on 24-09-2022

I, VINAYKUMAR C. Tugaon S/o Chandrakanth Tugaon, R/at #325 Near Siddeshwar Temple Gadwanti, Bidar-585353 Have Changed My Name to Vinaykumar Vide Affidavit Dated 26-09-2022, Before Notary BA Lakshminarayana Rao Bangalore

EDUCATION CORNER
2nd PU Failed?
Don't be left behind!
A golden opportunity to study degree under Bangalore University this academic year and save one precious year of your life.
BBA B.Com BCA BA
Limited seats. For admissions call:
2ನೇ ಪಿಯುಸಿ ಅನುತ್ತೀರ್ಣವಾದ ವಿದ್ಯಾರ್ಥಿಗಳಿಗೆ ಒಂದು ಸುವರ್ಣ ಅವಕಾಶ. ಸಂಪರ್ಕಿಸಿ:
7846000222

Golden opportunity for SSLC / PUC passed student's ...
SIDDAGANGA INSTITUTE OF PARAMEDICAL SCIENCES
(Recognised by Ministry of Medical Education, Govt of Karnataka)
43, Narasimhaswamy Layout, Service Road, Near Laggere Last Bus Stop, Laggere, Bengaluru-560058
ADMISSIONS ARE OPEN 2022-2023
JOB ORIENT DIPLOMA IN PARAMEDICAL COURSES
LABORATORY / RADIOLOGY / DIALYSIS OPERATION THEATER / OPHTHALMIC
Eligibility & Duration: 3 years for SSLC & 2 years for PUC (Science)
For admission contact: 97439 96770
SGGNG-22304

DH DECCAN HERALD ಪ್ರಜಾವಾಣಿ ಕ್ಲಾಸಿಫೈಡ್ಸ್
RECRUITMENT
BOOK YOUR JOB AD IN DECCAN HERALD ALL KARNATAKA + PRAJAVANI BANGALORE ON WEDNESDAY + SUNDAY
@ 1800/-* FOR 15 WORDS
condition apply*
For More Details Contact:
9731810277 | 9901641752
9845114560 | 9886213331
080- 45557163 | 45557164

BUSINESS

Business Offers

Finance

NRI'S INVESTMENT And Finance Available On Low Interest Against Properties, Land& Building,Sites,Flats, Converted& Agriculture Lands Call: 7411265189

AUTOMOTIVE

Four Wheelers Selling

Others

FLOODED VEHICLE MH09 EG0325 VW Ameo 2027 model for sale without documents inspection at Bangalore Motors, Hesaraghatta Road, Bangalore. -9845074511

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ನೇಮಕಾತಿಯಲ್ಲಿ ಅಕ್ರಮ

ಅಮ್ರಿತ್ ಪೌಲ್ ವಿರುದ್ಧ 1,406 ಪುಟಗಳ ಆರೋಪ ಪಟ್ಟಿ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ನೇಮಕಾತಿ ಪರೀಕ್ಷೆ ಅಕ್ರಮ ದಲ್ಲಿ ಬಂಧಿತ ಆರೋಪಿ ಐಪಿಎಸ್ ಅಧಿಕಾರಿ ಅಮ್ರಿತ್ ಪೌಲ್ ಅವರ ವಿರುದ್ಧದ ತನಿಖೆ ಪೂರ್ಣ ಗೊಳಿಸಿರುವ ಸಿಐಡಿ ತಂಡವು 1,406 ಪುಟಗಳ ಹೆಚ್ಚುವರಿ ಆರೋಪ ಪಟ್ಟಿಯನ್ನು 1ನೇ ಎಸಿಎಂಎಂ ನ್ಯಾಯಾ ಲಯಕ್ಕೆ ಬುಧವಾರ ಸಲ್ಲಿಸಿದೆ.

38 ಸಾಕ್ಷಿದಾರರ ಹೇಳಿಕೆ ಸಂಗ್ರಹಿ ಸಿದ್ದ ತನಿಖಾ ತಂಡವು 78 ದಾಖಲೆಗಳ ಸಹಿತ ಆರೋಪ ಪಟ್ಟಿಯನ್ನು ಮುಚ್ಚಿದ ಲಕೋಟೆಯಲ್ಲಿ ನ್ಯಾಯಾಧೀಶರಿಗೆ ಸಲ್ಲಿಸಿತು.

ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ಅಮ್ರಿತ್ ಪೌಲ್ ವಿರುದ್ಧ ಪ್ರಕರಣ ದಾಖಲಾಗಿತ್ತು.

ಅಮ್ರಿತ್ ಪೌಲ್, ಪೊಲೀಸ್ ನೇಮಕಾತಿ ವಿಭಾಗದ ಎಡಿಜಿಪಿಯಾಗಿ-ದ್ದರು. ಹಣದ ವರ್ಗಾವಣೆ, ಅಕ್ರಮದಲ್ಲಿ ಅವರ ಪಾತ್ರ, ಅಭ್ಯರ್ಥಿಗಳಿಂದ ಪಡೆದ ಹಣದಿಂದ ಆಸ್ತಿ ಖರೀದಿಸಿರುವ ಮಾಹಿತಿ ಈ ಪಟ್ಟಿಯಲ್ಲಿದೆ ಎಂದು ಮೂಲಗಳು ತಿಳಿಸಿವೆ.

‘ಪಿಎಸ್‌ಐ ಪರೀಕ್ಷೆ ಬರೆದಿದ್ದ 27 ಅಭ್ಯರ್ಥಿಗಳ ಒಎಂಆರ್ ಪ್ರತಿಯನ್ನು ನೇಮಕಾತಿ ವಿಭಾಗದ ಪ್ರಥಮ ದರ್ಜೆ ಸಹಾಯಕರಾದ (ಎಫ್‌ಡಿಎ) ಹರ್ಷ ಹಾಗೂ ಶ್ರೀನಿವಾಸ್ ಅವರು ಪೌಲ್ ಅವರ ಸೂಚನೆಯಂತೆ ತಿದ್ದುಪಡಿ ಮಾಡಿದ್ದರು ಎಂಬುದು ಆರೋಪ ಪಟ್ಟಿಯಲ್ಲಿದೆ. ಪೌಲ್ ಅವರ ಸೂಚನೆಯಂತೆ ನಡೆದಿದ್ದ ಅಕ್ರಮದ ಸಂಪೂರ್ಣ ಮಾಹಿತಿಯನ್ನು ಈ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ’ ಎಂದು ಮೂಲಗಳು ತಿಳಿಸಿವೆ.

2021ರ ಅಕ್ಟೋಬರ್ 3ರಂದು ರಾಜ್ಯದ 92 ಕೇಂದ್ರಗಳಲ್ಲಿ ಪಿಎಸ್‌ಐ ಪರೀಕ್ಷೆ ನಡೆದಿತ್ತು.

ಅಮ್ರಿತ್ ಪೌಲ್

ಮರು ಪರೀಕ್ಷೆ ನಿರ್ಧಾರಕ್ಕೆ ಮಧ್ಯಂತರ ತಡೆ

ಬೆಂಗಳೂರು: 545 ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಹುದ್ದೆಗಳ ನೇಮಕಾತಿ ಅಕ್ರಮದ ಹಿನ್ನೆಲೆಯಲ್ಲಿ ಮರುಪರೀಕ್ಷೆ ನಡೆಸುವ ಸರ್ಕಾರದ ನಿರ್ಧಾರಕ್ಕೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಮರು ಪರೀಕ್ಷೆ ರದ್ದು ಕೋರಿ ಹಲವು ಅಭ್ಯರ್ಥಿಗಳು ಸಲ್ಲಿಸಿದ್ದ ಅರ್ಜಿಗಳನ್ನು ನ್ಯಾಯಮೂರ್ತಿ ಜಿ. ನರೇಂದರ್ ಹಾಗೂ ಸಿ.ಎಂ. ಜೋಶಿ ಅವರಿದ್ದ ವಿಭಾಗೀಯ ನ್ಯಾಯಪೀಠವು ಬುಧವಾರ ವಿಚಾರಣೆ ನಡೆಸಿತು. ‘ಪ್ರಕರಣದ ತನಿಖೆ ಪೂರ್ಣ ಗೊಂಡಿದೆ, 32 ಮಂದಿ ಕಳಂಕಿತರು ಎಂದು ಗುರುತಿಸಿ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ. ಹಾಗಾಗಿ, ಕಳಂಕಿತರನ್ನು ಮತ್ತು ಕಳಂಕಿತರ-ಲ್ಲದೇ ಇರುವವರನ್ನು ಪ್ರತ್ಯೇಕಿಸಲು ಅವಕಾಶವಿದೆ. ಆದ್ದರಿಂದ, ಮರು ಪರೀಕ್ಷೆಯ ಅವಶ್ಯಕತೆ ಇಲ್ಲ’ ಎಂಬ ಅರ್ಜಿದಾರರ ವಾದವನ್ನು ಮನ್ನಿ ಸಿದ ನ್ಯಾಯಪೀಠ ಈ ಆದೇಶ ನೀಡಿದೆ.

‘ಎಲ್‌ಎಸಿ: ಪರಿಸ್ಥಿತಿ ಸ್ಥಿರ’

ನವದೆಹಲಿ: ‘ಭಾರತ–ಚೀನಾ ನಡುವಣ ಬಿಕ್ಕಟ್ಟು ನಿಧಾನವಾಗಿ ಶಮನಗೊಳ್ಳುತ್ತಿ-ದ್ದು, ಗಡಿಯಲ್ಲಿನ ವಾಸ್ತವ ನಿಯಂತ್ರಣ ರೇಖೆಯ (ಎಲ್‌ಎಸಿ) ಬಳಿಯ ಒಟ್ಟಾರೆ ಪರಿಸ್ಥಿತಿ ಸ್ಥಿರವಾಗಿದೆ’ ಎಂದು ಭಾರ-ತದಲ್ಲಿರುವ ಚೀನಾದ ರಾಯಭಾರಿ ಸನ್ ವೀಡೊಂಗ್ ಹೇಳಿದ್ದಾರೆ.

ಭಾರತ–ಚೀನಾ ಗಡಿಯಲ್ಲಿನ ಗೋಗ್ರಾ–ಹಾಟ್‌ಸ್ಪ್ರಿಂಗ್ ಪ್ರದೇಶದ 15ನೇ ಗಸ್ತು ತಾಣದಿಂದ ಉಭಯ ದೇಶಗಳ ಸೇನಾ ತುಕಡಿಯನ್ನು ಹಿಂದಕ್ಕೆ ಕರೆಸಿಕೊಳ್ಳುವ ಪ್ರಕ್ರಿಯೆ ಇತ್ತೀಚೆಗೆ ಪೂರ್ಣಗೊಂಡಿತ್ತು.

ಇದರ ಬೆನ್ನಲ್ಲೇ ಮಂಗಳವಾರ ವರ್ಚುವಲ್ ಕಾರ್ಯಕ್ರಮವೊಂದರಲ್ಲಿ ಮಾತನಾಡಿರುವ ಅವರು, ‘ಪೂರ್ವ ಲಡಾಖ್‌ನ ಗಾಲ್ವನ್ ಕಣಿವೆಯ ಬಳಿ ಸೈನಿಕರ ನಡುವೆ ನಡೆದ ಕಾಳಗದ ಬಳಿಕ ಗಡಿಯಲ್ಲಿ ಸಂಘರ್ಷದ ವಾತಾವರಣ ನಿರ್ಮಾಣವಾಗಿತ್ತು. ಅದು ಈಗ ತಿಳಿಯಾಗಿದೆ’ ಎಂದಿದ್ದಾರೆ.

‘ಭಾರತದೊಂದಿಗೆ ರಾಜತಾಂತ್ರಿಕ ಹಾಗೂ ಸೇನಾ ಹಂತದಲ್ಲಿ ಮಾತುಕತೆ ನಡೆಸುವ ಮೂಲಕ ಬಿಕ್ಕಟ್ಟು ಪರಿಹರಿಸಲು ಚೀನಾ ಮುಂದಾಗಲಿದೆ. ಉಭಯ ರಾಷ್ಟ್ರಗಳು ಒಟ್ಟಾಗಿ ಉಳಿದ ಸಮಸ್ಯೆಗಳಿಗೆ ಪರಿಹಾರ ಹುಡುಕಲು ಪ್ರಯತ್ನಿಸಬೇಕಿದೆ’ ಎಂದು ತಿಳಿಸಿದ್ದಾರೆ.

ನಟಿ ಲೀಲಾವತಿ ಆಸ್ಪತ್ರೆ ಉದ್ಘಾಟಿಸಿದ ಮುಖ್ಯಮಂತ್ರಿ

ಆಸ್ತಿ ಮಾರಿ ಆಸ್ಪತ್ರೆ ಕಟ್ಟಿದ ಲೀಲಾವತಿ ಸೇವೆ ಅನುಕರಣೀಯ

ಪ್ರಜಾವಾಣಿ ವಾರ್ತೆ

ನೆಲಮಂಗಲ: ನಗರ ಪ್ರದೇಶದವರು ಗ್ರಾಮೀಣ ಭಾಗದಲ್ಲಿ ಜಮೀನು ಖರೀದಿಸಿ ಫಾರ್ಮ್ ಹೌಸ್ ನಿರ್ಮಿಸಿಕೊ-ಳ್ಳುತ್ತಿರುವ ಪ್ರಸ್ತುತ ಕಾಲಘಟ್ಟದಲ್ಲಿ ತಮ್ಮ ಆಸ್ತಿ ಮಾರಾಟ ಮಾಡಿ, ಗ್ರಾಮೀಣರ ಆರೋಗ್ಯ ಸೇವೆಗೆ ಆಸ್ಪತ್ರೆ ನಿರ್ಮಿಸಿರುವ ಹಿರಿಯ ನಟಿ ಲೀಲಾವತಿ ಅವರ ಸೇವೆ ಅನುಕರಣೀಯ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶ್ಲಾಘಿಸಿದರು.

ತಾಲ್ಲೂಕಿನ ಸೋಲದೇವನಹಳ್ಳಿ ಗ್ರಾಮದಲ್ಲಿ ಡಾ.ಲೀಲಾವತಿ ಅವರು ತಮ್ಮ ಸ್ವಂತ ಖರ್ಚಿನಲ್ಲಿ ನಿರ್ಮಿಸಿರುವ ನೂತನ ಆಸ್ಪತ್ರೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ’ಲೀಲಾವತಿ ಅವರು ಎಲ್ಲ ರೀತಿಯ ಪಾತ್ರಗಳನ್ನು ಮನೋಜ್ಞವಾಗಿ ಅಭಿನಯಿಸುವ ಮೂಲಕ ರಾಜ್ಯದ ಜನರ ಮನಸ್ಸಿನಲ್ಲಿ ಚಿರಸ್ಥಾಯಿಯಾಗಿದ್ದಾರೆ. ಆಸ್ಪತ್ರೆ ಕಟ್ಟಿಸುವ ಮೂಲಕ ಶಾಶ್ವತ ಸೇವೆ ಮಾಡಿ ಪರಿಪೂರ್ಣರಾಗಿದ್ದಾರೆ’ ಎಂದರು.

ಆಸ್ಪತ್ರೆಯನ್ನು ಪ್ರಾಥಮಿಕ ಆರೋಗ್ಯ ಕೇಂದ್ರವಾಗಿ ಪರಿವರ್ತಿಸಿ, ಮೂಲ ಸೌಲಭ್ಯ ನೀಡಲಾಗುವುದು ಹಾಗೂ ಲೀಲಾವತಿ ಅವರ ಬೇಡಿಕೆಯಂತೆ ಇಲ್ಲಿ ಪಶು ಆಸ್ಪತ್ರೆಯನ್ನು ನಿರ್ಮಿಸಲಾಗುವುದು ಎಂದು ಭರವಸೆ ನೀಡಿದರು.

ಸಚಿವ ಸುಧಾಕರ್ ಅವರ ನೇತೃತ್ವದಲ್ಲಿ ರಾಜ್ಯದಾದ್ಯಂತ ₹8 ಕೋಟಿ ವೆಚ್ಚದಲ್ಲಿ 30 ಹಾಸಿಗೆಯ 100 ಸಿಎಚ್‌ಸಿ, 71 ಪಿಎಚ್‌ಸಿ ನಿರ್ಮಾಣ, ಹಿರಿಯ ನಾಗರಿಕರಿಗೆ ಆರೋಗ್ಯ ಶಿಬಿರ ಆಯೋಜಿಸಿ ಚಿಕಿತ್ಸೆ, ಉಚಿತ ಕಣ್ಣಿನ ತಪಾಸಣೆ ಶಸ್ತ್ರಚಿಕಿತ್ಸೆ, ಕನ್ನಡಕ ವಿತರಣೆ, ಕ್ಯಾನ್ಸರ್, ಡಯಾಲಿಸಿಸ್ ಚಿಕಿತ್ಸೆ ಹೀಗೆ ಆರೋಗ್ಯ ಕ್ಷೇತ್ರದ ಯೋಜನೆಗಳಿಗೆ ಚಾಲನೆ ನೀಡಲಾಗುವುದು ಎಂದರು.

ಆಸ್ಪತ್ರೆ ಉದ್ಘಾಟನೆಗೂ ಮುನ್ನ ಲೀಲಾವತಿ ಅವರ ಮನೆಗೆ ತೆರಳಿ ಆರೋಗ್ಯ ವಿಚಾರಿಸಿದರು.

ಜಮೀನಿನ ಮೇಲೆ ಬಂಡವಾಳ ಹೂಡಿ ಲಾಭಗಳಿಸುವ ಜನರ ಮಧ್ಯೆ ಲೀಲಾವತಿ ಅವರ ಸೇವೆ ಸ್ಮರಣೀಯ ಎಂದು ನಟ ದೊಡ್ಡಣ್ಣ ಶ್ಲಾಘಿಸಿದರು.

’ಚೆನ್ನೈನಲ್ಲಿನ ಆಸ್ತಿ ಮಾರಾಟ ಮಾಡಿ ಆಸ್ಪತ್ರೆ ನಿರ್ಮಿಸಿದ್ದೇನೆ. ಗ್ರಾಮೀ ಣರ ಸೇವೆ ಮಾಡುವ ನನ್ನ ಕನಸು ನನಸಾಗಿದೆ’ ಎಂದು ಲೀಲಾವತಿ ಹೇಳಿದರು.

ಶಾಸಕ ಡಾ.ಕೆ.ಶ್ರೀನಿವಾಸಮೂರ್ತಿ ಮಾತನಾಡಿ, ’ಸೋಲದೇವನಹಳ್ಳಿ-ಯು ತಾಲ್ಲೂಕಿನ ಗಡಿ ಭಾಗವಾಗಿದ್ದು, ಬಸ್ ಸೇರಿ ಮೂಲ ಸೌಕರ್ಯಗಳ ಕೊರತೆಯಿಂದ ತಕ್ಷಣಕ್ಕೆ ಆರೋಗ್ಯ ಸೇವೆ ದುರ್ಲಭವಾಗಿರುವುದನ್ನು ಮನಗಂಡ ಲೀಲಾವತಿ ಅವರು ಆಸ್ಪತ್ರೆ ನಿರ್ಮಿಸಿದ್ದ-ರಿಂದ ಅನುಕೂಲವಾಗಿದೆ‘ ಎಂದರು.

ಸಚಿವ ಆನಂದಸಿಂಗ್, ನಟ ವಿನೋದ್ ರಾಜ್, ಗಡಿನಾಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಸೋಮಶೇಖರ್, ಮಾಜಿ ಶಾಸಕ ಎಂ.ವಿ.ನಾಗರಾಜು, ಯೋಜನಾ ಪ್ರಾಧಿಕಾರದ ಅಧ್ಯಕ್ಷ ಎಸ್.ಮಲ್ಲಯ್ಯ, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಬಾ.ಮಾ. ಹರೀಶ್, ಜಿಲ್ಲಾಧಿಕಾರಿ ಆರ್.ಲತಾ, ಕೇಂದ್ರ ವಲಯ ಐಜಿಪಿ ಚಂದ್ರಶೇಖರ್, ಎಸ್ಪಿ ಮಲ್ಲಿಕಾರ್ಜುನ್ ಬಾಲದಂಡಿ, ತಹಶೀಲ್ದಾರ್ ಮಂಜುನಾಥ್ ಅವರೂ ಇದ್ದರು.

ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ನಟಿ ಲೀಲಾವತಿ ಸಮಾಲೋಚನೆ ನಡೆಸಿದರು. ನಿರ್ಮಾಪಕರ ಸಂಘದ ಅಧ್ಯಕ್ಷ ಉಮೇಶ್ ಬಣಕಾರ್ ಇದ್ದಾರೆ

ಮುಂದುವರಿದ ಒತ್ತುವರಿ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಕಾಲುವೆ ಒತ್ತುವರಿ ತೆರವು ಕಾರ್ಯಾಚರಣೆ ನಿಲ್ಲಿಸಿಲ್ಲ ಎಂದು ಸ್ಪಷ್ಟನೆ ನೀಡಿರುವ ಬಿಬಿಎಂಪಿ, ಬುಧವಾರ ತೆರವು ಕಾರ್ಯಾಚರಣೆ ನಡೆಸಿತು.

ಬೊಮ್ಮನಹಳ್ಳಿ ವಾರ್ಡ್ ವ್ಯಾಪ್ತಿಯ ಕೋಡಿಚಿಕ್ಕನಹಳ್ಳಿಯಲ್ಲಿನ ಜನಪ್ರಿಯ ಲೇಕ್ ವ್ಯೂ ಅಪಾರ್ಟ್‌ಮೆಂಟ್ ಸಮು-ಚ್ಚಯದ(1ನೇ ಹಂತ, ಎರಡನೇ ಗೇಟ್) ಬಳಿ ಎರಡು ಕಾಂಪೌಂಡ್ ತೆರವುಗೊ-ಳಿಸಲಾಗಿದೆ. 11 ಅಡಿ ಅಗಲ ಹಾಗೂ 100 ಅಡಿ ಉದ್ದದಷ್ಟು ರಾಜಕಾಲುವೆ ಒತ್ತುವರಿಯಾಗಿತ್ತು. ಅದನ್ನು ತೆರವು ಮಾಡಲಾಯಿತು ಎಂದು ಬಿಬಿಎಂಪಿ ತಿಳಿಸಿದೆ.

ಖಾಲಿ ಜಾಗ ಹಾಗೂ ರಾಜ ಕಾಲುವೆ ಮೇಲೆ ನಿರ್ಮಿಸಿದ್ದ ರಸ್ತೆ ತೆರವು ಗೊಳಿಸುವ ಕಾರ್ಯ ಪ್ರಗತಿ ಯಲ್ಲಿದೆ. ಗುರುವಾರವೂ ಕಾರ್ಯಾ ಚರಣೆ ಮುಂದುವರಿಯಲಿದೆ ಎಂದು ಹೇಳಿದೆ. ಮಹದೇವಪುರ ವಲಯ ವ್ಯಾಪ್ತಿಯಲ್ಲಿ ಪಣತ್ತೂರು, ಹೂಡಿ, ದೊಡ್ಡನೆಕ್ಕುಂದಿ, ವರ್ತೂರು, ಕುಂದನಹಳ್ಳಿ, ಮುನ್ನೇಕೊಳಲು, ಕಸವನಹಳ್ಳಿ ಪ್ರದೇಶಗಳಲ್ಲಿ 5 ಸಾವಿರ ಮೀಟರ್‌ನಷ್ಟು ರಾಜಕಾಲುವೆ ಒತ್ತು-ವರಿಯಾಗಿದೆ. ಭೂಮಾಪಕರು ಸರ್ವೆ ನಡೆಸಿ ಒತ್ತುವರಿ ಗುರುತು ಮಾಡಿದ್ದಾರೆ. ಕೂಡಲೇ ತೆರವು ಮಾಡುವಂತೆ ಅಧಿಕಾರಿಗಳಿಗೆ ತಿಳಿಸಲಾಗಿದೆ ಎಂದು ವಲಯ ಮುಖ್ಯ ಎಂಜಿನಿಯರ್ ಬಸವರಾಜ ಕಬಾಡೆ ವಿವರಿಸಿದ್ದಾರೆ.

ಜನಪ್ರಿಯ ಲೇಕ್ ವ್ಯೂ ಅಪಾರ್ಟ್‌ಮೆಂಟ್ ಸಮುಚ್ಚಯದ ಬಳಿ ಅಧಿಕಾರಿಗಳು ಒತ್ತುವರಿ ತೆರವು ಕಾರ್ಯಾಚರಣೆ ನಡೆಸಿದರು

‘ರಾಜಕೀಯ ಲಾಭಕ್ಕಾಗಿ ಪಿಎಫ್‌ಐ ಬೆಂಬಲಿಸದಿರಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಎಫ್‌ಐ ಅನ್ನು ನಿಷೇಧಿಸಿರುವ ವಿಚಾರದಲ್ಲಿ ಯಾವುದೇ ರಾಜಕೀಯ ಪಕ್ಷಗಳು ತುಷ್ಟೀಕರಣ ಮತ್ತು ರಾಜಕೀಯ ಲಾಭ ಪಡೆದುಕೊಳ್ಳಲು ರಾಜಕಾರಣ ಮಾಡಬಾರದು’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿರುವ ಅವರು, ‘ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಪಿಎಫ್‌ಐ ಕಾರ್ಯಕರ್ತರ ಮೇಲಿದ್ದ ಪ್ರಕರಣಗಳನ್ನು ರದ್ದು ಮಾಡಿ ಆ ಸಂಘಟನೆಯ ಬೆಳವಣಿಗೆಗೆ ಕಾರಣರಾಗಿದ್ದಾರೆ. ಇದನ್ನು ಜನ ಅರ್ಥ ಮಾಡಿಕೊಂಡಿದ್ದಾರೆ. ಕಾಂಗ್ರೆಸ್ ಪಕ್ಷಕ್ಕೆ ತಕ್ಕ ಉತ್ತರವನ್ನು ಮುಂದಿನ ದಿನಗಳಲ್ಲಿ ನೀಡುವುದು ಖಚಿತ’ ಎಂದು ಅವರು ಹೇಳಿದರು.

‘ಪಿಎಫ್‌ಐ ಜಾಗತಿಕ ಉಗ್ರ ಸಂಘಟನೆಗಳ ಜತೆ ಸಂಪರ್ಕ ಮತ್ತು ಸಂಬಂಧ ಹೊಂದಿದೆ. ವಿದೇಶಗಳಿಂದ ನೂರಾರು ಕೋಟಿ ದೇಣಿಗೆ ಪಡೆದು ಭಾರತದಲ್ಲಿ ಕಾರ್ಯಾಚರಣೆ ನಡೆಸು-ತ್ತಿದ್ದರು. ಕೇಂದ್ರ ಸರ್ಕಾರ ಬಲವಾದ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಿ, ದೇಶದ ಏಕತೆ ಮತ್ತು ಸಮಗ್ರತೆಯನ್ನು ಕಾಪಾಡುವ ನಿಟ್ಟಿನಲ್ಲಿ ಕ್ರಮ ತೆಗೆದು ಕೊಂಡಿದೆ’ ಎಂದು ಅವರು ಹೇಳಿದರು.

ಪ್ರಮಾಣ ಪತ್ರ ಸಲ್ಲಿಸಲು ಹೈಕೋರ್ಟ್ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಡಿಕೇರಿ ನಗರಸಭೆ ಅಧ್ಯಕ್ಷೆ ಅನಿತಾ ಪೂವಯ್ಯ ತಮ್ಮ ಅಧ್ಯಕ್ಷಾವಧಿಯಲ್ಲಿ ಎಷ್ಟು ಸಾರ್ವಜನಿಕ ಶೌಚಾಲಯಗಳ ಸ್ವಚ್ಛತೆಯ ಪರಿಶೀಲನೆ ನಡೆಸಿದ್ದಾರೆ’ ಎಂಬ ಬಗ್ಗೆ ಪ್ರಮಾಣ ಪತ್ರ ಸಲ್ಲಿಸುವಂತೆ ಹೈಕೋರ್ಟ್ ಆದೇಶಿಸಿದೆ.

‘ನಮ್ಮ ವಿರುದ್ಧ ಮಡಿಕೇರಿ ಟೌನ್ ಪೊಲೀಸರು ದಾಖಲಿಸಿರುವ ಎಫ್‌ಐಆರ್ ಹಾಗೂ ವಿಚಾರಣಾ ನ್ಯಾಯಾಲಯದ ಪ್ರಕ್ರಿಯೆ ರದ್ದುಪಡಿಸಬೇಕು’ ಎಂದು ಕೋರಿ ಚಂದ್ರಶೇಖರ್, ಹೈಕೋರ್ಟ್‌ನ ಹಿರಿಯ ವಕೀಲ ಹಾಗೂ ಕೆಪಿಸಿಸಿ ಕಾನೂನು ಘಟಕದ ಅಧ್ಯಕ್ಷರೂ ಆದ ಎ.ಎಸ್. ಪೊನ್ನಣ್ಣ ಸೇರಿದಂತೆ ಕಾಂಗ್ರೆಸ್‌ನ 13 ನಾಯಕರು ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗ-ಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

‘ಎಥೆನಾಲ್ ಘಟಕ ಆರಂಭಿಸಿ: ಸಿಎಂಗೆ ಪತ್ರ’

ಬೆಂಗಳೂರು: ಮಂಡ್ಯದಲ್ಲಿರುವ ಮೈಸೂರು ಸಕ್ಕರೆ ಕಾರ್ಖಾನೆಯಲ್ಲಿ ಎಥೆ ನಾಲ್ ಘಟಕ ಆರಂಭಿಸಬೇಕು ಎಂದು ಆಗ್ರಹಿಸಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಗೆ ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಪತ್ರ ಬರೆದಿದ್ದಾರೆ.

‘ಈ ಸಕ್ಕರೆ ಕಾರ್ಖಾನೆಯಲ್ಲಿ 100 ಕೆಎಲ್‌ಪಿಡಿಯ (ನಿತ್ಯ ಸಾವಿರ ಕಿಲೋ ಲೀಟರ್) ಎಥೆನಾಲ್ ಘಟಕ ಆರಂಭಿಸಬಹುದು. ಕಬ್ಬಿನ ರಸದಿಂದ ನೇರವಾಗಿ ಎಥೆನಾಲ್ ಉತ್ಪಾದಿಸಿದರೆ ಪ್ರತಿ ಟನ್ ಕಬ್ಬಿನಿಂದ ಸುಮಾರು 67ರಿಂದ 70 ಲೀಟರ್‌ನಷ್ಟು ಎಥೆನಾಲ್ ಉತ್ಪಾದಿಸಬಹುದೆಂದು ಅಂದಾಜಿಸ ಲಾಗಿದೆ. ಒಂದು ಲೀಟರ್ ಎಥೆನಾಲ್ ಅನ್ನು ₹60ರಿಂದ ₹ 67 ದರದಲ್ಲಿ ತೈಲ ಕಂಪನಿಗಳು ಖರೀದಿಸುತ್ತವೆ. ದಕ್ಷಿಣ ಕರ್ನಾಟಕದ ಕಾರ್ಖಾನೆಗಳು ಪ್ರತಿ ಟನ್ ಕಬ್ಬಿಗೆ ₹ 2,821 ನಿಗದಿಪಡಿಸಿದ್ದು ಅದನ್ನು ಜಾರಿಗೊಳಿಸಬೇಕು. ಅಲ್ಲದೆ, ಒಂದು ಟನ್ ಕಬ್ಬಿನಿಂದ ಸುಮಾರು 70 ಲೀಟರ್ ಎಥೆನಾಲ್ ಉತ್ಪಾದನೆ ಆಗುವುದರಿಂದ ಪ್ರತಿ ಲೀಟರ್ ಎಥೆ ನಾಲ್‌ಗೆ ₹ 67ರಂತೆ ಸುಮಾರು ₹ 4,690 ಆಗುತ್ತದೆ. ಎಥೆನಾಲ್ ಘಟಕ ಸ್ಥಾಪನೆಯಿಂದ ಕಬ್ಬಿಗೆ ವೈಜ್ಞಾನಿಕ ದರ ನೀಡಲು ಸಹಕಾರಿಯಾಗುತ್ತದೆ’ ಎಂದೂ ಪತ್ರದಲ್ಲಿ ವಿವರಿಸಿದ್ದಾರೆ.

‘ಕಾರ್ಖಾನೆಗೆ ಬಾಕಿ ಇರುವ ₹ 20 ಕೋಟಿ ಅನುದಾನ ತಕ್ಷಣ ಬಿಡುಗಡೆ ಮಾಡಲು ಆರ್ಥಿಕ ಇಲಾಖೆಗೆ ಸೂಚಿಸ ಬೇಕು. ಎಥೆನಾಲ್ ಘಟಕ ಆರಂಭಿಸಲು ಮಂಡ್ಯ ಜಿಲ್ಲೆಯ ಜನಪ್ರತಿನಿಧಿಗಳು, ಅಧಿಕಾರಿಗಳು ಮತ್ತು ಈ ಕ್ಷೇತ್ರದ ಪರಿಣಿತರ ಜೊತೆ ಸಭೆ ನಡೆಸಿ ಶೀಘ್ರ ಕ್ರಮ ತೆಗೆದುಕೊಳ್ಳಬೇಕು’ ಎಂದಿದ್ದಾರೆ.

ದೇಶ ಪ್ರೇಮಿ ಮುಸ್ಲಿಮರ ಜವಾಬ್ದಾರಿ ಹೆಚ್ಚು: ಸಿ.ಟಿ.ರವಿ

‘ಪಿಎಫ್‌ಐ ನಿಷೇಧವನ್ನು ಕೆಲವು ರಾಜಕೀಯ ಪಕ್ಷಗಳು ತಮ್ಮ ಲಾಭಕ್ಕೆ ಬಳಸಿಕೊಳ್ಳಲು ಪ್ರಯತ್ನಿಸಿದರೆ ದೇಶದ ಭವಿಷ್ಯಕ್ಕೆ ಹೊಡೆತ ಬೀಳುತ್ತದೆ ಮತ್ತು ಈ ದುಷ್ಟ ಶಕ್ತಿಗಳ ಕೈಯಿಂದ ದೇಶವನ್ನು ಬಿಡಿಸುವ ಕಾರ್ಯದಲ್ಲಿ ತೊಡಕಾಗಲಿದೆ’ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಹೇಳಿದ್ದಾರೆ.

‘ನಿಷೇಧದ ಬಳಿಕ ಪಿಎಫ್‌ಐನ ದುಷ್ಟ ಶಕ್ತಿಗಳು ಭೂಗತರಾಗಿ ಸಮಾಜವನ್ನು ಪ್ರಚೋದಿಸುವ ಕೆಲಸ ಮಾಡಬಹುದು. ಇಂತಹ ಪ್ರಕರಣಗಳು ಗಮನಕ್ಕೆ ಬಂದಲ್ಲಿ ಜನರು ತಕ್ಷಣವೇ ಪೊಲೀಸರಿಗೆ ಮಾಹಿತಿ ನೀಡಬೇಕು. ಕಾನೂನಿನ ಜತೆ ಕೈಜೋಡಿಸಬೇಕು. ದೇಶದ ಭದ್ರತೆ, ಸಮಾಜದ ಗೌರವ ಕಾಪಾಡುವ ನಿಟ್ಟಿನಲ್ಲಿ ದೇಶಪ್ರೇಮಿ ಮುಸ್ಲಿಮರು ಯೋಚನೆ ಮಾಡಬೇಕಾದ ಅಗತ್ಯವಿದೆ. ರಾಷ್ಟ್ರ ವಿರೋಧಿ ಮತ್ತು ಮತಾಂಧತೆಯ ವಿರುದ್ಧ ಅರಿವು ಮೂಡಿಸಬೇಕಾಗಿದೆ’ ಎಂದೂ ಹೇಳಿದರು.

ಪೇಸಿಎಂ ಮೂಲಕ ಜನರಿಗೆ ಅಪಮಾನ:ಅರುಣ್ ಸಿಂಗ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪೇ ಸಿಎಂ ಅಭಿಯಾನದ ಮೂಲಕ ಕಾಂಗ್ರೆಸ್ ಪಕ್ಷವು ಜನಸಾಮಾನ್ಯರ ಮತ್ತು ಸಮಗ್ರ ಕರ್ನಾಟಕದ ಜನರಿಗೆ ಅಪಮಾನ ಮಾಡುತ್ತಿದೆ’ ಎಂದು ಬಿಜೆಪಿ ರಾಜ್ಯ ಘಟಕದ ಉಸ್ತುವಾರಿ ಅರುಣ್‌ಸಿಂಗ್ ಹೇಳಿದ್ದಾರೆ.

ಬುಧವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಈ ರೀತಿಯ ಪ್ರಚಾರದ ಮೂಲಕ ಕಾಂಗ್ರೆಸ್ ಪಕ್ಷ ಸಣ್ಣತನವನ್ನು ತೋರಿಸಿದೆ. ಅದನ್ನು ಜನರು ಕ್ಷಮಿಸುವುದಿಲ್ಲ. ಕಾಂಗ್ರೆಸ್‌ನ ಈ ಧೋರಣೆಗೆ ಬಡ ಜನರು, ರೈತರು ಸೇರಿ ಎಲ್ಲ ಮತದಾರರೂ ತಕ್ಕ ಉತ್ತರ ನೀಡಲಿದ್ದಾರೆ’ ಎಂದು ಹೇಳಿದರು.

‘ರಾಜ್ಯ ಸರ್ಕಾರ ರೈತ ವಿದ್ಯಾನಿಧಿ ಮೂಲಕ ವಿದ್ಯಾರ್ಥಿ ವೇತನ ನೀಡುತ್ತಿದೆ. ಎಸ್‌ಸಿ, ಎಸ್‌ಟಿ ವರ್ಗಕ್ಕೆ ವಿಶೇಷ ಪ್ಯಾಕೇಜ್‌ಗಳನ್ನು ನೀಡುವ ಮೂಲಕ ಬೊಮ್ಮಾಯಿ ಅವರು ಜನಸಾಮಾನ್ಯರ ಮುಖ್ಯಮಂತ್ರಿ ಆಗಿದ್ದಾರೆ’ ಎಂದರು.

‘ಸಿದ್ದರಾಮಯ್ಯ ಅವಧಿಯಲ್ಲಿ ರೀಡೂ, ಎಸ್‌ಸಿ ಹಾಸ್ಟೆಲ್‌ಗಳಲ್ಲಿನ ಖರೀದಿ ಹಗರಣ, ಪಡಿತರದಲ್ಲಿ ಹಗರಣ ನಡೆದಿತ್ತು. ಕಾಂಗ್ರೆಸ್ ಎಂದರೆ ಭ್ರಷ್ಟಾಚಾರದ ಕೂಪ. ಭ್ರಷ್ಟರ ಪಕ್ಷವಾದ ಕಾಂಗ್ರೆಸ್, ಸಜ್ಜನ, ಅತ್ಯುತ್ತಮ ಆಡಳಿತ ನೀಡುತ್ತಿರುವ ಬೊಮ್ಮಾಯಿ ಹೆಸರು ಕೆಡಿಸಲು ವ್ಯರ್ಥ ಆರೋಪ ಮಾಡುತ್ತಿದೆ’ ಎಂದು ಅವರು ಟೀಕಿಸಿದರು.

ಕರ್ನಾಟಕದಲ್ಲಿ ಕಾಂಗ್ರೆಸ್ ತಂತ್ರಗಾರಿಕೆ ನಡೆಯುವುದಿಲ್ಲ. ದೇಶದ ಏಕತೆ ಮತ್ತು ಅಖಂಡತೆಗಾಗಿ ಸಂಕಲ್ಪ ಮಾಡಿರುವ, ರಾಜ್ಯದ ಗೌರವಕ್ಕೆ ಬದ್ಧತೆಯ ಸಂಕಲ್ಪ ಮಾಡಿರುವ ಕಾರ್ಯಕರ್ತರು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಯೋಜನೆಗಳನ್ನು ಫಲಾನುಭವಿಗಳಿಗೆ ತಲುಪಿಸಲಿದ್ದಾ-ರೆ. ಡಬಲ್ ಎಂಜಿನ್ ಸರ್ಕಾರವನ್ನು ಮರಳಿ ಅಧಿಕಾರಕ್ಕೆ ತರಲಿದ್ದಾರೆ ಎಂದು ಹೇಳಿದರು.

ಇಂದು ವಿಶ್ವ ಹೃದಯ ದಿನ

ನಗರದ ಹೃದ್ರೋಗ ತಜ್ಞರು ಕಳವಳ ಹೃದಯದ ಆರೋಗ್ಯಕ್ಕೆ ಆದ್ಯತೆ ನೀಡಲು ಮನವಿ

ಹೃದಯಾಘಾತ: ಯುವಜನರಲ್ಲಿ ಹೆಚ್ಚಳ

ಬೆಂಗಳೂರು: ‘ಬದಲಾದ ಜೀವನ ಶೈಲಿ, ಧೂಮಪಾನದಂತಹ ವ್ಯಸನಗ ಳಿಂದ ಇತ್ತೀಚಿನ ವರ್ಷಗಳಲ್ಲಿ 50 ವರ್ಷದೊ-ಳಗಿನವರು ಹೆಚ್ಚಾಗಿ ಹೃದ ಯಾಘಾತಕ್ಕೆ ಒಳಗಾಗುತ್ತಿದ್ದಾರೆ’ ಎಂದು ನಗರದ ಹೃದ್ರೋಗ ತಜ್ಞರು ಕಳವಳ ವ್ಯಕ್ತಪಡಿಸಿ-ದ್ದಾರೆ.

ವಿಶ್ವ ಹೃದಯ ದಿನದ ಪ್ರಯುಕ್ತ ಹೃದಯ ಆರೋಗ್ಯಕ್ಕೆ ಆದ್ಯತೆ ನೀಡಲು ಮನವಿ ಮಾಡಿಕೊಂಡಿರುವ ವೈದ್ಯರು, ‘ಬದಲಾದ ಜೀವನ ಶೈಲಿಯಿಂದ ಹೃದ ಯದ ಆರೋಗ್ಯವು ಹಂತ ಹಂತವಾಗಿ ಕ್ಷೀಣಿಸುತ್ತಿದೆ. ಹೃದಯದ ರಕ್ತನಾಳಗಳಲ್ಲಿ ರಕ್ತವು ಹೆಪ್ಪುಗಟ್ಟಿದಾಗ ಹೃದಯಾಘಾತ ಸಂಭವಿಸುತ್ತದೆ. ಅಧಿಕ ರಕ್ತದೊತ್ತಡ, ಮಧುಮೇಹ, ಸ್ಥೂಲಕಾಯ, ಧೂಮ ಪಾನ, ಮಾದಕ ವಸ್ತು ಸೇವನೆ, ಒತ್ತಡದ ಜೀವನ, ವಾಯುಮಾಲಿನ್ಯ ಸೇರಿ ವಿವಿಧ ಕಾರಣಗಳಿಂದ ಹೃದಯಾಘಾತ ಸಂಭವಿಸುತ್ತಿದೆ. ಅನುವಂಶೀಯತೆಯಿಂ-ದಲೂ ಕೆಲವರಿಗೆ ಹೃದಯಾಘಾತವಾ-ಗುತ್ತದೆ’ ಎಂದು ಕಳವಳ ವ್ಯಕ್ತಪಡಿಸಿದ್ದಾರೆ.

ವಿವಿಧ ಕ್ಷೇತ್ರಗಳ ಪ್ರಮುಖರು ಹಠಾತ್ ನಿಧನಗೊಂಡಿದ್ದರಿಂದ ಹೃದಯ ಸಂಬಂಧಿ ಸಮಸ್ಯೆಗಳ ಬಗ್ಗೆ ಸಮಗ್ರ ಆರೋಗ್ಯ ಆರೈಕೆ ಸಂಸ್ಥೆ ಪ್ರಾಕ್ಟೊ ಅಧ್ಯಯನ ನಡೆಸಿದೆ. ‘ಹೃದಯಾಘಾತಕ್ಕೆ ಸಂಬಂಧಿಸಿದಂತೆ ಕಳೆದ ಮೂರು ತಿಂಗಳಿಂದ ವಿಚಾರಿಸುವವರ ಪ್ರಮಾಣ ದೇಶದಲ್ಲಿ ಶೇ 200ರಷ್ಟು ಹೆಚ್ಚಳವಾಗಿದೆ. 50 ವರ್ಷದೊಳಗಿನವರು ಹೆಚ್ಚಾಗಿ ಹೃದಯ ಸಂಬಂಧಿ ಸಮಸ್ಯೆಗಳಿಗೆ ತಪಾಸಣೆ ಮಾಡಿಸಿ ಕೊಳ್ಳುತ್ತಿದ್ದಾರೆ. ಬೆಂಗಳೂರು, ದೆಹಲಿ, ಮುಂಬೈ, ಹೈದರಾಬಾದ್, ಪುಣೆ ಒಳ ಗೊಂಡಂತೆ ಪ್ರಥಮ ಶ್ರೇಣಿಯ ನಗರದ ವರೇ ಹೃದಯಾಘಾತದ ಬಗ್ಗೆ ಹೆಚ್ಚಾಗಿ ವಿಚಾರಿಸಿದ್ದಾರೆ’ ಎಂದು ಸಂಸ್ಥೆ ತಿಳಿಸಿದೆ.

‘ಕಳೆದ ಮೂರು ತಿಂಗಳ ಅವಧಿಯಲ್ಲಿ ಅಧಿಕ ರಕ್ತದೊತ್ತಡ ಕುರಿತಾದ ವಿಚಾರಣೆ ಶೇ 60ರಷ್ಟು ಹೆಚ್ಚಳವಾಗಿದೆ. ಈ ಬಗ್ಗೆ ವಿಚಾ-ರಿಸಿದವರಲ್ಲಿ ಶೇ 92ರಷ್ಟು ಮಂದಿ ಪ್ರಥಮ ಶ್ರೇಣಿ ನಗರದವರೇ ಆಗಿದ್ದಾರೆ. ಶೇ 7ರಷ್ಟು ಮಂದಿ ದ್ವಿತೀಯ ಶ್ರೇಣಿ ನಗರ-ದವರಾಗಿದ್ದಾರೆ. ಹೃದಯ ಆರೋಗ್ಯಕ್ಕೆ ಸಂಬಂಧಿಸಿದಂತೆ ನಮ್ಮಲ್ಲಿ ವೈದ್ಯಕೀಯ ಸಲಹೆ, ತಪಾಸಣೆ ಮಾಡಿಸಿಕೊಂಡವ-ರಲ್ಲಿ ಶೇ 56ರಷ್ಟು ಜನರು 30ರಿಂದ 39 ವರ್ಷದವರಾಗಿದ್ದಾರೆ. ಸಮಾಲೋಚನೆಗೆ ಒಳಪಟ್ಟ ರೋಗಿಗಳಲ್ಲಿ ಶೇ 8ರಷ್ಟು ಮಂದಿ ಈ ಹಿಂದೆ ಕೋವಿಡ್ ಪೀಡಿತರಾಗಿದ್ದರು’ ಎಂದು ಸಂಸ್ಥೆಯ ಸಿಒಒ ಡಾ.ಅಲೆಕ್ಸಾಂಡ-ರ್ ಕುರುವಿಲ್ಲಾ ಕಳವಳ ವ್ಯಕ್ತಪಡಿಸಿದ್ದಾರೆ.

ಇಂದು ವಿಶ್ವ ಹೃದಯ ದಿನ

ಹೃದಯಾಘಾತದ ಪ್ರಮಾಣ ಹೆಚ್ಚಳವಾಗುತ್ತಿದ್ದು, ಈ ಬಗ್ಗೆ ಜಾಗೃತಿ ಮೂಡಿಸಬೇಕು. ಯುವಕರು ಹೃದಯಾಘಾತಕ್ಕೆ ಒಳಗಾಗುತ್ತಿರುವುದು ಶೋಚನೀಯ.
ಡಾ. ವಿವೇಕ್ ಜವಳಿ, ಹೃದ್ರೋಗ ತಜ್ಞ, ಫೋರ್ಟಿಸ್ ಆಸ್ಪತ್ರೆ

ಹೃದಯಾಘಾತ ಸಂಭವಿಸಿದ ಒಂದು ಗಂಟೆಯೊಳಗೆ ಚಿಕಿತ್ಸೆ ನೀಡಿದಲ್ಲಿ ವ್ಯಕ್ತಿ ಬದುಕುಳಿಯುವ ಸಾಧ್ಯತೆ ಶೇ 95ರಷ್ಟು ಇರಲಿದೆ.
ಡಾ. ಗುಂಡೂರಾವ್ ಹರೀಶ್ ಜೋಶಿ, ಹೃದ್ರೋಗ ತಜ್ಞ, ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ

ಹೃದಯ ಕಾಯಿಲೆ ಯುವಜನರಲ್ಲಿ ಹೆಚ್ಚುತ್ತಿರುವುದು ಕಳವಳಕಾರಿ. ನಮ್ಮ ಬಳಿಗೆ ಬರುವ ಹೃದ್ರೋಗಿಗಳಲ್ಲಿ ಶೇ 35ಕ್ಕೂ ಅಧಿಕ ಮಂದಿ ಯುವಜನರಾಗಿದ್ದಾರೆ.
ಡಾ.ಕೆ.ಎಸ್. ಕಿಶೋರ್, ಹೃದ್ರೋಗ ತಜ್ಞ, ಸಾಗರ್ ಆಸ್ಪತ್ರೆ



ಸಂಕ್ಷಿಪ್ತ ಸುದ್ದಿ

ಪಿಎಫ್‌ಐ ಸಭೆ ನಡೆಸುತ್ತಿದ್ದ ಕಚೇರಿಗೆ ಬೀಗ

ಹಾಸನ: ಪಿಎಫ್‌ಐ ಸಂಘಟನೆಯ ಮುಖಂಡರು ಸಭೆ ನಡೆಸುತ್ತಿದ್ದ ಕಟ್ಟಡಕ್ಕೆ ಬುಧವಾರ ಡಿವೈಎಸ್‌ಪಿ ಉದಯ ಭಾಸ್ಕರ್ ನೇತೃತ್ವದಲ್ಲಿ ಪೆನ್ಷನ್ ಮೊಹಲ್ಲಾ ಠಾಣೆಯ ಪೊಲೀಸರು ಬೀಗ ಮುದ್ರೆ ಹಾಕಿದ್ದಾರೆ.

ನಗರದ ಹೊಸಲೈನ್ ರಸ್ತೆಯಲ್ಲಿರುವ ಮೂರು ಅಂತಸ್ತಿನ ಕಟ್ಟಡದ ಎರಡನೇ ಮಹಡಿಯಲ್ಲಿ ಕಚೇರಿ ನಿರ್ಮಿಸಿ, ಪ್ರತಿ ತಿಂಗಳು ಪಿಎಫ್‌ಐ ಹಾಗೂ ಎಸ್‌ಡಿಪಿಐ ಸದಸ್ಯರು ಸಭೆ ನಡೆಸುತ್ತಿದ್ದರು ಎಂಬ ಮಾಹಿತಿ ದೊರೆತಿದ್ದು, ಯಾವುದಾದರೂ ವಸ್ತುಗಳು ಅಥವಾ ದೇಶದ್ರೋಹ ಚಟುವಟಿಕೆಗಳ ಸಾಕ್ಷಾಧಾರಗಳು ಇದ್ದಲ್ಲಿ ಅವುಗಳನ್ನು ವಶಕ್ಕೆ ಪಡೆದು, ಸಂರಕ್ಷಿಸುವ ಸಲುವಾಗಿ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಟ್ಟಡ ಮಾಲೀಕ ಮೊಹಮ್ಮದ್ ಆರೀಫ್ ಅವರನ್ನು ವಿಚಾರಣೆಗೆ ಒಳಪಡಿಸಿದ ಪೊಲೀಸರು ಹೆಚ್ಚಿನ ಮಾಹಿತಿ ಕಲೆಹಾಕಿದ್ದಾರೆ.

ಕಾಂಗ್ರೆಸ್‌ನಿಂದ ‘ಪೇ ಮೇಯರ್’ ಪೋಸ್ಟರ್ ಅಭಿಯಾನ– ದೂರು

ಹುಬ್ಬಳ್ಳಿ: ಕೆಲ ದಿನಗಳ ಹಿಂದೆ ಬೆಂಗಳೂರಿನಲ್ಲಿ ಕಾಂಗ್ರೆಸ್ ‘ಪೇ ಸಿಎಂ’ ಪೋಸ್ಟರ್ ಅಭಿಯಾನ ನಡೆಸಿ ಆಡಳಿತಾರೂಢ ಬಿಜೆಪಿಗೆ ಮುಜುಗರ ಉಂಟು ಮಾಡಿತ್ತು. ಅದೇ ಮಾದರಿಯಲ್ಲಿ ಇದೀಗ ಹುಬ್ಬಳ್ಳಿಯಲ್ಲೂ ಬುಧವಾರ ‘ಪೇ ಮೇಯರ್’ ಪೋಸ್ಟರ್ ಅಭಿಯಾನ ನಡೆಸಿದೆ.

ದೇಶಪಾಂಡೆ ನಗರದ ವಿವೇಕಾನಂದ ಆಸ್ಪತ್ರೆ ಎದುರು, ಪಿಂಟೋ ವೃತ್ತ, ಸ್ಟೇಷನ್ ರಸ್ತೆ, ದೇಸಾಯಿ ವೃತ್ತ, ತೋಳನಕೆರೆ ಸುತ್ತಮುತ್ತ ‘ಪೇ ಮೇಯರ್’ ಪೋಸ್ಟರ್‌ಗಳನ್ನು ಅಂಟಿಸ ಲಾಗಿದೆ. ‘ಪೌರ ಸನ್ಮಾನಕ್ಕೆ ದುಂದುವೆಚ್ಚ ಮಾಡಲಾಗಿದೆ’ ಎಂದು ಆರೋಪಿಸಿ ಕಾಂಗ್ರೆಸ್ ಹಮ್ಮಿಕೊಂಡಿರುವ ಈ ಪೋಸ್ಟರ್ ಅಭಿಯಾನ, ರಾಜಕೀಯ ಜಿದ್ದಾಜಿದ್ದಿಗೆ ಕಾರಣವಾಗಿದೆ.

ಪೋಸ್ಟರ್ ಅಭಿಯಾನ ನಡೆಸಿದ ವಿದ್ಯಾನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಜತ್ ಉಳ್ಳಾಗಡ್ಡಿಮಠ ಸೇರಿದಂತೆ ಮೂವರ ವಿರುದ್ಧ ಮೇಯರ್ ಈರೇಶ ಅಂಚಟಗೇರಿ ದೂರು ಕೊಟ್ಟಿದ್ದಾರೆ.

ಮಲೆಮಹದೇಶ್ವರ ದೇವಾಲಯ: ₹1.73 ಕೋಟಿ ಸಂಗ್ರಹ

ಮಹದೇಶ್ವರ ಬೆಟ್ಟ: ಮಲೆ ಮಹದೇಶ್ವರ ಸ್ವಾಮಿ ದೇವಾಲಯದ ಹುಂಡಿಯಲ್ಲಿ ₹ 1.73 ಕೋಟಿ, 56 ಗ್ರಾಂ ಚಿನ್ನ, 2.125 ಕೆ.ಜಿ ಬೆಳ್ಳಿ ಪದಾರ್ಥ ಸಂಗ್ರಹವಾಗಿದೆ.

ಬುಧವಾರ ಸಾಲೂರು ಬೃಹನ್ಮಠದ ಪೀಠಾಧಿಪತಿ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ ನೇತೃತ್ವದಲ್ಲಿ ಬೆಟ್ಟದ ಬಸ್ ನಿಲ್ದಾಣದಲ್ಲಿರುವ ವಾಣಿಜ್ಯ ಸಂಕೀರ್ಣದಲ್ಲಿ ಪರ್ಕಾವಣೆ ನಡೆಯಿತು.

ಎರಡು ವರ್ಷಗಳ ನಂತರ ನಡೆಯುತ್ತಿರುವ ಹಬ್ಬ: ಸಿದ್ಧತೆ ಜೋರು • 140ಕ್ಕೂ ಹೆಚ್ಚು ಪೆಂಡಾಲ್

ವಿಜೃಂಭಣೆಯ ದುರ್ಗಾ ಪೂಜೆ

ಪ್ರಜಾವಾಣಿ ವಾರ್ತೆ

ನಗರದ ಕಾಕ್ಸ್‌ಟೌನ್‌ನಲ್ಲಿ ದುರ್ಗಾ ಮೂರ್ತಿ ತಯಾರಕರೊಬ್ಬರು ಅಂತಿಮ ಟಚಪ್ ನೀಡುತ್ತಿರುವುದು.
ಪ್ರಜಾವಾಣಿ ಚಿತ್ರ/ರಿಷಿತಾ ಖನ್ನಾ

ಬೆಂಗಳೂರು: ಎರಡು ವರ್ಷಗಳ ನಂತರ ದುರ್ಗಾ ಪೂಜೆಯನ್ನು ವಿಜೃಂಭಣೆಯಿಂದ ಆಚರಿಸಲು ನಗರದ ಜನ ಸಜ್ಜಾಗುತ್ತಿದ್ದಾರೆ. ನಗರದಾದ್ಯಂತ 140ಕ್ಕೂ ಹೆಚ್ಚು ಪೆಂಡಾಲುಗಳು ನಿರ್ಮಾಣ ಆಗುವ ಸಾಧ್ಯತೆ ಇದೆ.

ಪೆಂಡಾಲ್‌ಗಳಿಗೆ ಅನುಮತಿ ನೀಡುವ ಕಾರ್ಯವನ್ನು ಬಿಬಿಎಂಪಿ ವಲಯವಾರು ಆರಂಭಿಸಿದೆ. ‘100ಕ್ಕೂ ಹೆಚ್ಚು ಅರ್ಜಿಗಳಿಗೆ ಈಗಾಗಲೇ ಅನುಮೋದನೆ ನೀಡಲಾಗಿದೆ. ಇವುಗಳ ಪೈಕಿ ಹೆಚ್ಚಿನ ಅರ್ಜಿಗಳು ಪೂರ್ವ ವಲಯದ ಹಲಸೂರು ಮತ್ತು ಸುತ್ತಮುತ್ತಲ ಪ್ರದೇಶಗಳಿಂದ ಬಂದಿವೆ. ದಕ್ಷಿಣ ವಲಯದಿಂದಲೂ ಹೆಚ್ಚಿನ ಅರ್ಜಿಗಳು ಬಂದಿವೆ. ಉಳಿದ ವಲಯಗಳಲ್ಲಿ ದುರ್ಗಾ ಪೂಜೆ ಆಚರಣೆ ಕಡಿಮೆ ಇದೆ’ ಎಂದು ಬಿಬಿಎಂಪಿ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ಹಲವು ಸಂಘ–ಸಂಸ್ಥೆಗಳು ಈಗಾಗಲೇ ಆಚರಣೆಗೆ ಸಿದ್ಧತೆ ನಡೆಸುತ್ತಿವೆ. ಕೋವಿಡ್ ಕಾರಣದಿಂದ ಕಳೆದ ಎರಡು ವರ್ಷ ಸರಳವಾಗಿ ಆಚರಿಸಲಾಗಿತ್ತು. ಈ ವರ್ಷ ಭಾರಿ ಜನ ಸೇರುವ ನಿರೀಕ್ಷೆ ಇದೆ. ‘ಕನಿಷ್ಠ 140 ಪೆಂಡಾಲುಗಳು ನಿರ್ಮಾಣವಾಗುವ ಸಾಧ್ಯತೆ ಇದೆ. ಮ್ಯಾನ್ಪೋ ಕನ್ವೆನ್ಷನ್ ಸೆಂಟರ್‌ನಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ದುರ್ಗಾ ಪೂಜೆಯನ್ನು ಅ.1 ರಂದು ಉದ್ಘಾಟನೆ ಮಾಡುವರು.

ದಸರಾ

ಅ.4 ರವರೆಗೆ ಪ್ರತಿದಿನ ಕನಿಷ್ಠ 50 ಸಾವಿರ ಜನ ಸೇರುವ ನಿರೀಕ್ಷೆ ಇದೆ’ ಎಂದು ಬೆಂಗಳೂರು ದುರ್ಗಾ ಪೂಜಾ ಸಮಿತಿಯ(ಬಿಡಿಪಿಸಿ) ರುದ್ರ ಶಂಕರ್ ರಾಯ್ ಹೇಳಿದರು.

‘ಹಿರಿಯ ಕಲಾವಿದ ಜಾಮಿನಿ ರಾಯ್ ಅವರ ಕಲಾಕೃತಿಗಳೊಂದಿಗೆ ದುರ್ಗಾಪೂಜೆ ಆಚರಿಸಲು ಯೋಚಿಸಿದ್ದೇವೆ. ಹಲವು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿದ್ದೇವೆ. ಪಶ್ಚಿಮ ಬಂಗಾಳದ ಕಲಾವಿದರು ಪ್ರೇಕ್ಷಕರನ್ನು ರಂಜಿಸಲಿದ್ದಾರೆ’ ಎಂದು 45ನೇ ವರ್ಷದ ದುರ್ಗಾಪೂಜೆ ಆಚರಣೆ ಮಾಡುತ್ತಿರುವ ಉತ್ತರ ಬೆಂಗಳೂರು ಸಾಂಸ್ಕೃತಿಕ ಸಮಿತಿಯ ಕಲ್ಯಾಣ್ ಪಾಠಕ್ ತಿಳಿಸಿದರು.

‘ಕಲಾ ವಸ್ತು ವಿಷಯ ಆಧರಿಸಿಕೊಂಡು ಕಾರ್ಯಕ್ರಮಗಳನ್ನು ಆಯೋಜಿಸಲು ಉದ್ದೇಶಿಸಿದ್ದೇವೆ. ಭಾರತದ ಅತ್ಯಂತ ಹಳೆಯ ಕಲಾ ಪ್ರಕಾರವಾದ ಮಂಡಲ ಕಲೆಯನ್ನು ಮೊದಲ ಆಧುನಿಕ ಕಲಾ ಪ್ರಕಾರವಾದ ಪಶ್ಚಿಮ ಬಂಗಾಳದ ಕಾಳಿ ಘಾಟ್ ಚಿತ್ರಗಳೊಂದಿಗೆ ಸಂಯೋಜಿಸಲು ಉದ್ದೇಶಿಸಿದ್ದೇವೆ’ ಎಂದು ಬೊಂಗೋಧರ ಸಾಂಸ್ಕೃತಿಕ ಸಂಘದ ಅಪರಾಜಿತಾ ರಾಯ್ ಅವರು ಹೇಳಿದರು.

ಅ.1ರಂದು ಪೂಜೆ ಆರಂಭವಾಗಿ 5ರವರೆಗೆ ನಡೆಯಲಿವೆ. ದುರ್ಗಾ ಮೂರ್ತಿಗಳನ್ನು ಹಲವು ಕೆರೆಗಳಲ್ಲಿ ಬಿಡಲು ಬಿಬಿಎಂಪಿ ವ್ಯವಸ್ಥೆ ಮಾಡಿಕೊಂಡಿದೆ. ಹಲಸೂರು ಕೆರೆ ಮತ್ತು ಸ್ಯಾಂಕಿ ಕೆರೆಗಳಲ್ಲಿ ಹೆಚ್ಚಿನ ಮೂರ್ತಿಗಳನ್ನು ಬಿಡಿಸಲು ಸಿದ್ಧತೆ ಮಾಡಿಕೊಂಡಿದೆ.

ಪಶ್ಚಿಮ ಬಂಗಾಳದ ಕಲಾವಿದರು

ಕೋವಿಡ್ ಪೂರ್ವ ಆಚರಣೆಗಳಿಗೆ ಮರಳುತ್ತಿರುವುದರಿಂದ ದುರ್ಗಾ ಮೂರ್ತಿಗಳಿಗೆ ಬೇಡಿಕೆ ಹೆಚ್ಚಾಗಿದ್ದು, ಬಣ್ಣ ಬಣ್ಣದ ಮೂರ್ತಿಗಳು ಈಗಾಗಲೇ ಮಾರುಕಟ್ಟೆಗೆ ಬಂದಿವೆ. ದೇವಿಯ ವಿವಿಧ ಅವತಾರ ಮತ್ತು ಪುರಾಣದ ದೃಶ್ಯಗಳನ್ನು ಚಿತ್ರಿಸಲಾಗಿದೆ.

‘ಬೇಡಿಕೆ ಹೆಚ್ಚಿರುವುದರಿಂದ ಪಶ್ಚಿಮ ಬಂಗಾಳದಿಂದ ಕಲಾವಿದರು ಬೆಂಗಳೂರಿಗೆ ಬಂದಿದ್ದಾರೆ. ಪಶ್ಚಿಮ ಬಂಗಾಳದ ಕುಮಾರ್‌ಟುಲಿ ಕಲಾವಿದ ತರುಣ್ ಪಾಲ್ ನಮಗೆ ದೇವಿ ಮೂರ್ತಿ ಸಿದ್ಧಪಡಿಸಿಕೊಟ್ಟಿದ್ದಾರೆ. ನಗರದಲ್ಲಿ ಅವರು 60 ಮೂರ್ತಿಗಳನ್ನು ವಿನ್ಯಾಸಗೊಳಿಸಿದ್ದಾರೆ’ ಎಂದು ಬಿಡಿಪಿಸಿಯ ರುದ್ರ ಶಂಕರ್ ರಾಯ್ ಹೇಳಿದರು.

ಸುದ್ದಿ 2 ನಿಮಿಷ

ನಕ್ಷತ್ರ ಆಮೆ ಮಾರಾಟಕ್ಕೆ ಯತ್ನ ಆರೋಪಿ ಬಂಧನ

ಮಡಿಕೇರಿ: ನಕ್ಷತ್ರ ಆಮೆಯನ್ನು ಮಾರಾಟ ಮಾಡಲು ಯತ್ನಿಸುತ್ತಿದ್ದ ಆರೋಪಿ ಯಾಸಿನ್ ಪಾಷಾ ಎಂಬಾತನನ್ನು ಸಿಐಡಿ ಪೊಲೀಸ್ ಅರಣ್ಯ ಘಟಕದ ಅಧಿಕಾರಿಗಳು ಬಂಧಿಸಿ, ಆಮೆ ವಶಪಡಿಸಿಕೊಂಡಿದ್ದಾರೆ.

ಇಲ್ಲಿ ಸುದರ್ಶನ ವೃತ್ತ ಸಮೀಪದ ಬಸ್ ತಂಗುದಾಣದಲ್ಲಿ ಆಮೆಯೊಂದಿಗೆ ಆರೋಪಿಯನ್ನು ಬಂಧಿಸಲಾಯಿತು ಎಂದು ಪೊಲೀಸರು ತಿಳಿಸಿದ್ದಾರೆ.

ಸಿಐಡಿ ಪೊಲೀಸ್ ಅರಣ್ಯ ಘಟಕದ ಎಸ್‌.ಪಿ.ಕೆ.ಬಿ.ವಿಶ್ವನಾಥ್, ಸಬ್ ಇನ್‌ಸ್ಪೆಕ್ಟರ್ ಸಿ.ಯು.ಸವಿ, ಹೆಡ್ ಕಾನ್‌ಸ್ಟೆಬಲ್‌ಗಳಾದ ಶೇಖರ್, ರಾಜೇಶ್, ರಾಘವೇಂದ್ರ, ಯೋಗೇಶ್, ಮೋಹನ, ಕಾನ್‌ಸ್ಟೆಬಲ್‌ಗಳಾದ ಸ್ವಾಮಿ, ಮಂಜುನಾಥ ಕಾರ್ಯಾಚರಣೆ ತಂಡದಲ್ಲಿದ್ದರು.

ಬಿಜೆಪಿ, ಕಾಂಗ್ರೆಸ್ ಕಾರ್ಯಕರ್ತರ ಮಧ್ಯೆ ಘರ್ಷಣೆ: ಹಲವರಿಗೆ ಗಾಯ

ಸಿದ್ದಾಪುರ (ಕೊಡಗು ಜಿಲ್ಲೆ): ಬಿಜೆಪಿ ಕಾರ್ಯಕರ್ತರಾದ ಮೂವರು ಸೋದರರು ಹಾಗೂ ಇಬ್ಬರು ಕಾಂಗ್ರೆಸ್ ಕಾರ್ಯಕರ್ತರ ಮಧ್ಯೆ ಇಲ್ಲಿನ ಅರೆಕಾಡು ಸಮೀಪದ ಚಹಾ ಅಂಗಡಿಯೊಂದರಲ್ಲಿ ಘರ್ಷಣೆ ಸಂಭವಿಸಿದ್ದು, ಬ್ಲಾಕ್ ಕಾಂಗ್ರೆಸ್ ಕಾರ್ಯದರ್ಶಿ ಯಶ್ವಂತ್ ಹಾಗೂ ಕೋಶಾಧಿಕಾರಿ ಚಂದನ್ ಅಪ್ಪಯ್ಯ ಗಂಭೀರವಾಗಿ ಗಾಯಗೊಂಡಿದ್ದಾರೆ.

ಘಟನೆ ನಡೆದ ಬೆನ್ನಲ್ಲೇ ಆರೋಪಿಗಳನ್ನು ಬಂಧಿಸುವಂತೆ ಒತ್ತಾಯಿಸಿ ಕೊಡಗು ಜಿಲ್ಲಾ ಕಾಂಗ್ರೆಸ್ ಡಿವೈಎಸ್‌ಪಿ ಕಚೇರಿ ಮುಂಭಾಗ ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆಸಲು ನಿರ್ಧರಿಸಿದೆ.

‘ಯಶ್ವಂತ್ ಹಾಗೂ ಚಂದನ್ ಅಪ್ಪಯ್ಯ ಚಹಾ ಕುಡಿಯುತ್ತಿದ್ದಾಗ ಸ್ಥಳೀಯ ಬಿಜೆಪಿ ಮುಖಂಡರಾದ ಅರೆಕಾಡು ಗ್ರಾಮ ಪಂಚಾಯಿತಿ ಅಧ್ಯಕ್ಷ ಪ್ರಭುಶೇಖರ್ ಹಾಗೂ ಅವರ ಸೋದರರಾದ ಅಪ್ಪು ರವೀಂದ್ರ, ಆನಂದ್ ರಘು ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದರು ಎಂದು ದೂರಲಾಗಿದೆ.

‘ಬಿಎಸ್‌ವೈ ಅವಧಿಯಲ್ಲಿ ಶಿಕ್ಷಕರ ನೇಮಕಾತಿ ಅಕ್ರಮ’

ಪ್ರಜಾವಾಣಿ ವಾರ್ತೆ

ಸಿದ್ದರಾಮಯ್ಯ

ಬೆಂಗಳೂರು: ‘ಶಿಕ್ಷಕರ ನೇಮಕಾತಿ ಹಗರಣ ಯಾರ ಅವಧಿಯಲ್ಲಿ ನಡೆದಿದ್ದರೂ, ಅಕ್ರಮ ಚಟುವಟಿಕೆಯಲ್ಲಿ ಭಾಗಿಯಾದವರ ಮೇಲೆ ಕಠಿಣ ಕ್ರಮ ಜರುಗಿಸಲೇಬೇಕು. ತಪ್ಪಿತಸ್ಥರಿಗೆ ಶಿಕ್ಷೆಯಾಗುವಂತೆ ನೋಡಿಕೊಳ್ಳಬೇಕು’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆಗ್ರಹಿಸಿದ್ದಾರೆ.

‘ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಶಿಕ್ಷಕರ ನೇಮಕ ಹಗರಣ ನಡೆದಿದೆ ಎಂದು ಸುದ್ದಿಯಾಗುತ್ತಿದೆ. ಆದರೆ, ಆರ್ಥಿಕ ಇಲಾಖೆ ಅನುಮೋದನೆ ನೀಡಿದ ನಂತರ ನೇಮಕಾತಿ ಪ್ರಾಧಿಕಾರದಿಂದ ಪ್ರಕ್ರಿಯೆಗಳು ನಡೆಯುತ್ತದೆ. ನೇಮಕಾತಿ ಪಟ್ಟಿಯು ಡಿಡಿಪಿಐ ಮತ್ತು ಜಂಟಿ ನಿರ್ದೇಶಕರಿಂದ ಅನುಮೋದನೆಗೊಳ್ಳುತ್ತದೆ. ನೇರ ನೇಮಕಾತಿ ಆಗಿರುವುದರಿಂದ ಬೇರೆಯವರ ಹಸ್ತಕ್ಷೇಪ ಇರುವುದಿಲ್ಲವೆಂದು ಮಾಜಿ ಶಿಕ್ಷಣ ಸಚಿವ ಕಿಮ್ಮನೆ ರತ್ನಾಕರ್ ಸ್ಪಷ್ಟಪಡಿಸಿದ್ದಾರೆ’ ಎಂದೂ ಹೇಳಿಕೆಯಲ್ಲಿ ತಿಳಿಸಿದ್ದಾರೆ.

‘ಬಂಧಿತ 12 ಶಿಕ್ಷಕರಲ್ಲಿ ಏಳು ಮಂದಿ ಸುರೇಶ್ ಕುಮಾರ್ ಶಿಕ್ಷಣ ಸಚಿವರಿದ್ದಾಗ ನೇಮಕಗೊಂಡಿದ್ದಾರೆ. ಐದು ಮಂದಿಯಲ್ಲಿ ಇಬ್ಬರು ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ನೇಮಕಗೊಂಡಿದ್ದಾರೆ. ತಲಾ ಒಬ್ಬರಂತೆ 2015, 2017 ಮತ್ತು 2018ರಲ್ಲಿ ನೇಮಕಾತಿ ಆದೇಶ ಪಡೆದಿದ್ದಾರೆಂದು ದಾಖಲೆಗಳಲ್ಲಿವೆ. 2012-13ರಲ್ಲಿ ನಡೆದ ನೇಮಕಾತಿಯಲ್ಲೂ ಒಬ್ಬ ಸೇರಿಕೊಂಡಿದ್ದಾನೆಂಬ ಮಾಹಿತಿ ಇದೆ. 2015ರಲ್ಲಿ ನಡೆದ ನೇಮಕಾತಿ ಅವಧಿಗಳಲ್ಲಿ ವಿಶ್ವೇಶ್ವರ ಹೆಗಡೆ ಕಾಗೇರಿ ಮತ್ತು ಕಿಮ್ಮನೆ ರತ್ನಾಕರ ಶಿಕ್ಷಣ ಸಚಿವರಾಗಿದ್ದರು. ನೇಮಕಾತಿ ಪ್ರಕ್ರಿಯೆ ಹೇಗೆ ನಡೆಯುತ್ತದೆಂದು ಕಿಮ್ಮನೆ ಈಗಾಗಲೇ ಹೇಳಿದ್ದಾರೆ’ ಎಂದು ಅವರು ವಿವರಿಸಿದ್ದಾರೆ.

‘ನಿರುದ್ಯೋಗದ ಸಮಸ್ಯೆ ನಿವಾರಿಸುವ ಕಡೆಗೆ ಸರ್ಕಾರ ಗಂಭೀರ ಪ್ರಯತ್ನಗಳನ್ನು ಮಾಡಬೇಕು. ಜೊತೆಗೆ, ಮಾಧ್ಯಮಗಳಿಗೆ ತಪ್ಪು ಮಾಹಿತಿ ಕೊಡುವುದನ್ನು ಸರ್ಕಾರ ಮತ್ತು ಸಚಿವಾಲಯ ನಿಲ್ಲಿಸಬೇಕು. ಈ ವಿಷಯದಲ್ಲಿ ಪಾರದರ್ಶಕವಾಗಿ ನಡೆದುಕೊಳ್ಳಬೇಕು’ ಎಂದೂ ಸಿದ್ದರಾಮಯ್ಯ ಒತ್ತಾಯಿಸಿದ್ದಾರೆ.

ಹೆಸರು ಉಲ್ಲೇಖ; ಸುರೇಶ್ ಕುಮಾರ್ ಆಕ್ಷೇಪ

ಬೆಂಗಳೂರು: ‘ಸಿದ್ದರಾಮಯ್ಯ ಅವರು ಶಿಕ್ಷಕರ ನೇಮಕಾತಿ ಹಗರಣ ಕುರಿತು ವಿವರಣೆ ಕೊಡುವ ಭರದಲ್ಲಿ ನನ್ನ ಹೆಸರು ಬಳಸಿದ್ದಾರೆ. ನೇಮಕಾತಿಯಲ್ಲಿ ನನ್ನ ಪಾತ್ರ ಇಲ್ಲ’ ಎಂದು ಮಾಜಿ ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ಹೇಳಿದ್ದಾರೆ.

‘ನೇಮಕಾತಿ ಪ್ರಕ್ರಿಯೆಯಲ್ಲಿ ಸಚಿವರ ಪಾತ್ರ ಇರುವುದಿಲ್ಲ ಎಂದು ಅವರ ಸರ್ಕಾರದಲ್ಲೇ ಸಚಿವರಾಗಿದ್ದ ಕಿಮ್ಮನೆ ರತ್ನಾಕರ ಅವರೂ ಸ್ಪಷ್ಟಪಡಿಸಿದ್ದಾರೆ. ನಾನು ಆಗಸ್ಟ್ 2019ರಲ್ಲಿ ಸಚಿವ ಸ್ಥಾನ ವಹಿಸಿಕೊಂಡಾಗಲೇ ಎಲ್ಲ ಪ್ರಕ್ರಿಯೆಗಳು ಮುಗಿದಿದ್ದವು. ನೇಮಕಾತಿ ಪಟ್ಟಿ ನನ್ನ ಗಮನಕ್ಕೆ ಬಂದಿರಲಿಲ್ಲ’ ಎಂದು ಹೇಳಿದ್ದಾರೆ.

ಮೂತ್ರ ಎರಚಿದರು: ಆರೋಪ

ರಾಮಮೂರ್ತಿನಗರ ಠಾಣೆ ಅಧಿಕಾರಿಗಳ ಮೇಲೆ ದೂರು

ಪ್ರಜಾವಾಣಿ ವಾರ್ತೆ

> ಈ ಘಟನೆಯು ನನ್ನ ಗಮನಕ್ಕೆ ಬಂದಿಲ್ಲ
> **ಭೀಮಶಂಕರ್ ಗುಳೇದ**, ಡಿಸಿಪಿ, ಪೂರ್ವ ವಲಯ

> ರಾಜೇಶ್ ಯಾವುದೇ ತಪ್ಪು ಮಾಡದಿದ್ದರೂ ಪೊಲೀಸರು ಚಿತ್ರ ಹಿಂಸೆ ನೀಡಿದ್ದಾರೆ
> **ಜಗನ್**, ಸಾಮಾಜಿಕ ಕಾರ್ಯಕರ್ತ

ಅಪರಾಧ ಸುದ್ದಿ

ಬೆಂಗಳೂರು: ರಾಮಮೂರ್ತಿನಗರ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್, ಇಬ್ಬರು ಸಬ್ ಇನ್‌ಸ್ಪೆಕ್ಟರ್ ಹಾಗೂ ಎಂಟು ಮಂದಿ ಸಿಬ್ಬಂದಿ, ಆರ್.ಆರ್.ಲೇಔಟ್‌ನ 2ನೇ ಕ್ರಾಸ್‌ನ ನಿವಾಸಿ ಎ.ರಾಜೇಶ್ (29) ಅವರನ್ನು ಅಕ್ರಮ ಬಂಧನದಲ್ಲಿ ಇಟ್ಟುಕೊಂಡು, ದೊಣ್ಣೆ ಹಾಗೂ ಹಾಕಿ ಸ್ಟಿಕ್‌ನಿಂದ ಹಲ್ಲೆ ನಡೆಸಿ ಮೈಮೇಲೆ ಮೂತ್ರ ಎರಚಿ ಚಿತ್ರಹಿಂಸೆ ನೀಡಿರುವ ಆರೋಪ ಕೇಳಿಬಂದಿದೆ. ಈ ಕುರಿತು ದೂರು ನೀಡಲಾಗಿದೆ.

ಪೊಲೀಸರ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಕುಟುಂಬಸ್ಥರು ಹಾಗೂ ಸಾಮಾಜಿಕ ಕಾರ್ಯಕರ್ತರು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ, ಸರ್ಕಾರದ ಮುಖ್ಯ ಕಾರ್ಯದರ್ಶಿ ಹಾಗೂ ಮಾನವ ಹಕ್ಕುಗಳ ಆಯೋಗಕ್ಕೆ ದಾಖಲೆ ಸಹಿತ ದೂರು ಸಲ್ಲಿಸಿದ್ದಾರೆ. ಪೊಲೀಸ್ ಮಹಾನಿರ್ದೇಶಕ ಹಾಗೂ ನಗರ ಪೊಲೀಸ್ ಆಯುಕ್ತರಿಗೂ ದೂರು ನೀಡಿದ್ದಾರೆ.

‘ಕೋಳಿ ರಾಜ ಆಲಿಯಾಸ್ ಪುಷ್ಪರಾಜ್ ಹಲ್ಲೆ ಪ್ರಕರಣವನ್ನು ಒಪ್ಪಿಕೊಳ್ಳುವಂತೆ ನನಗೆ ಬೆದರಿಕೆ ಹಾಕಿದರು. ನಾನು ಒಪ್ಪದ ಕಾರಣಕ್ಕೆ ಕೈಕಾಲು ಕಟ್ಟಿಹಾಕಿ ಎದೆಯ ಮೇಲೆ ಕುಳಿತು ಬೂಟಿನಿಂದ ಥಳಿಸಿದರು. ಬಟ್ಟೆ ಕಳಚಿ ದೊಣ್ಣೆ ಹಾಗೂ ಹಾಕಿ ಸ್ಟಿಕ್‌ನಿಂದ ಹಲ್ಲೆ ನಡೆಸಿದರು. ನೋವು ತಾಳದೆ ಅಲ್ಲಿಯೇ ಮೂತ್ರ ವಿಸರ್ಜನೆ ಮಾಡಿಕೊಂಡೆ. ಅವಾಚ್ಯ ಶಬ್ದಗಳಿಂದ ನಿಂದಿಸಿ ಮೂತ್ರವನ್ನು ಕಾಲಿನಿಂದ ನನ್ನ ಮೇಲೆ ಎರಚಿದರು’ ಎಂದು ದೂರಿನಲ್ಲಿ ಆರೋಪಿಸಿದ್ದಾರೆ.

‘12 ದಿನ ಅಕ್ರಮ ಬಂಧನದಲ್ಲಿ ಇಟ್ಟುಕೊಂಡು ಮರ್ಮಾಂಗಕ್ಕೆ ಎಲೆಕ್ಟ್ರಿಕ್ ಶಾಕ್ ನೀಡಿದರು. ಗುದದ್ವಾರಕ್ಕೂ ಗಾಯವಾಗಿದೆ. ಪರಿಶಿಷ್ಟ ಜಾತಿಗೆ ಸೇರಿದ ನಾನು ಬಿ.ನಾರಾಯಣಪುರ ಬಸ್ ನಿಲ್ದಾಣದ ಬಳಿ ಮೊಬೈಲ್‌ನಲ್ಲಿ ಮಾತನಾಡುವಾಗ ಏಕಾಏಕಿ ಇಬ್ಬರು ಬಂದು ಪೊಲೀಸ್ ಠಾಣೆಗೆ ಕರೆದೊಯ್ದಿದ್ದರು’ ಎಂದು ರಾಜೇಶ್ ನೋವು ತೋಡಿಕೊಂಡಿದ್ದಾರೆ.

ರಾಜೇಶ್

‘ವಿಕ್ಟೋರಿಯಾ ಆಸ್ಪತ್ರೆಗೆ ಕರೆದೊಯ್ದು, ಗಾಡಿಯಿಂದ ಕೆಳಗೆ ಬಿದ್ದು ಗಾಯವಾಗಿದೆ ಎಂದು ಹೇಳುವಂತೆ ಬೆದರಿಕೆ ಹಾಕಿದರು. ಚಿಕಿತ್ಸೆ ಬಳಿಕ ಮತ್ತೆ ಠಾಣೆಗೆ ಕರೆಸಿ ಖಾರದ ಪುಡಿ ಎರಚಿ ಚಿತ್ರಹಿಂಸೆ ನೀಡಿದರು. ಬಲಗಾಲು ಹಾಗೂ ಎಡಗೈ ಮುರಿದಿದೆ. ಖಾಲಿ ಹಾಳೆಗೆ ಸಹಿ ಹಾಕಿಸಿಕೊಂಡು ಯಾರಿಗೂ ಈ ತಿಳಿಸದಂತೆ ಬೆದರಿಕೆ ಹಾಕಿದರು’ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಈ ದೂರಿನ ಜತೆಗೆ ಹೊಸಕೋಟೆ ತಾಲ್ಲೂಕು ಆಸ್ಪತ್ರೆಯಲ್ಲಿ ರಾಜೇಶ್‌ಗೆ ಚಿಕಿತ್ಸೆ ನೀಡಿದ ಮಾಹಿತಿಯ ಪ್ರತಿಯನ್ನೂ ಲಗತ್ತಿಸಲಾಗಿದೆ.

‘ಬಿಜೆಪಿ ಸರ್ಕಾರ ಭಂಡತನ ಪ್ರದರ್ಶಿಸುತ್ತಿದೆ’

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ: ಬಿಎಂಎಸ್ ಟ್ರಸ್ಟ್ ವಿಚಾರದಲ್ಲಿ ಸಚಿವರ ಭ್ರಷ್ಟಾಚಾರ ಸಂಬಂಧ ಸದನದ ಮುಂದೆ ಎಲ್ಲಾ ದಾಖಲೆ ಇಟ್ಟಿದ್ದೇನೆ. ಈ ಪ್ರಕರಣವನ್ನು ತನಿಖೆಗೆ ಒಳಪಡಿಸದೆ ಬಿಜೆಪಿ ಸರ್ಕಾರ ಭಂಡತನ ಪ್ರದರ್ಶಿಸುತ್ತಿದೆ ಎಂದು ಎಚ್‌.ಡಿ.ಕುಮಾರಸ್ವಾಮಿ ಕಿಡಿಕಾರಿದರು.

ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ದಾಖಲೆಗಳನ್ನು ಸದನದ ಮುಂದೆ ಇಟ್ಟಾಗ ಮುಖ್ಯಮಂತ್ರಿ ಸಮೇತ, ಒಬ್ಬ ಮಂತ್ರಿ ಕೂಡ ಈ ಬಗ್ಗೆ ಮಾತನಾಡಲಿಲ್ಲ. ಅವರಿಗೆ ನೈತಿಕತೆ ಇಲ್ಲ. ಎಲ್ಲರೂ ತಲೆ ತಗ್ಗಿಸಿಕೊಂಡು ಕೂತಿದ್ದರು. ಇವರ ಬಳಿ ಉತ್ತರ ಇಲ್ಲ’ ಎಂದು ಅವರು ವಾಗ್ದಾಳಿ ನಡೆಸಿದರು.

‘ಪಗಡೆ ಆಟದಲ್ಲಿ ದ್ರೌಪದಿಯನ್ನು ಪಣಕ್ಕೆ ಇಟ್ಟು ಧರ್ಮರಾಯ ಸೋತ ಸಂದರ್ಭದಲ್ಲಿ ಭೀಷ್ಮ, ದ್ರೋಣಾಚಾರ್ಯ ಸೇರಿದಂತೆ ಎಲ್ಲರೂ ಮೂಕವಿಸ್ಮಿತವಾಗಿ ಕೂತಿದ್ದರಲ್ಲ, ಅದೇ ಪರಿಸ್ಥಿತಿ ನಾನು ಅವತ್ತು ದಾಖಲೆ ಬಿಡುಗಡೆ ಮಾಡಿದ್ದಾಗ ಸದನದಲ್ಲಿ ಕಂಡಿತ್ತು’ ಎಂದು ಕುಟುಕಿದರು.

‘ಈ ವಿಚಾರವನ್ನು ಅಷ್ಟು ಸುಲಭವಾಗಿ ನಾನು ಬಿಡುವುದಿಲ್ಲ. ಕಾನೂನು ಕ್ರಮ ತೆಗೆದುಕೊಳ್ಳುವಂತೆ ಮಾಡುತ್ತೇನೆ. ಪ್ರಧಾನಿ ಭ್ರಷ್ಟಾಚಾರ ನಿಲ್ಲಿಸುತ್ತೇನೆ ಎಂದಿದ್ದಾರೆ. ಈಗ ದಾಖಲೆ ಸಮೇತ ಕಳುಹಿಸುತ್ತೇನೆ. ಏನು ಉತ್ತರ ಕೊಡುತ್ತಾರೋ ನೋಡೋಣ’ ಎಂದು ಅವರು ಹೇಳಿದರು.

ಬಿಎಂಎಸ್ ಟ್ರಸ್ಟ್ ಹಗರಣ ವಿಚಾರವಾಗಿ ಸದನದಲ್ಲಿ ಸಮರ್ಥವಾಗಿ ಉತ್ತರ ಕೊಟ್ಟಿದ್ದೇನೆ ಎಂಬ ಅಶ್ವತ್ಥ ನಾರಾಯಣ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ‘ಈ ಸರ್ಕಾರ ಭಂಡತನದಿಂದ ವರ್ತಿಸುತ್ತಿದೆ. ಇಂತಹವರಿಗೆ ಏನು ಹೇಳಲು ಸಾಧ್ಯ?. ಸದನದಲ್ಲಿ ಮುಖ್ಯಮಂತ್ರಿಯಾದಿಯಾಗಿ ಎಲ್ಲರೂ ಮೌನಕ್ಕೆ ಶರಣಾಗಿದ್ದು ಯಾಕೆ?, ಯಾರು ಸಹ ಅಶ್ವತ್ಥನಾರಾಯಣ ಬೆಂಬಲಕ್ಕೆ ನಿಲ್ಲಲಿಲ್ಲ ಏಕೆ? ಕೋಟ್ಯಾಂತರ ರೂಪಾಯಿ ಹಣ ಲೂಟಿ ಮಾಡಿದ್ದಾರೆ. ಮುಂದೆ ಜನ ಇವರಿಗೆ ಬುದ್ಧಿ ಕಲಿಸುತ್ತಾರೆ’ ಎಂದು ಟೀಕಿಸಿದರು.

ದಸರಾ ಬೊಂಬೆ ನಿನ್ನನು ನೋಡಲು........

ದಸರಾ ಹಬ್ಬದ ಪ್ರಯುಕ್ತ ವಿಜಯನಗರದ ಸಂಕಲ್ಪ ಮಾಂಟೆಸ್ಸರಿ ಶಾಲೆಯಲ್ಲಿ ಏರ್ಪಡಿಸಿರುವ ದಸರಾ ಬೊಂಬೆಗಳ ಪ್ರದರ್ಶನದಲ್ಲಿ ಮೈಸೂರಿನ ಜಂಬೂ ಸವಾರಿ ಗೊಂಬೆಗಳು ನೋಡುಗರ ಗಮನ ಸೆಳೆಯುತ್ತಿವೆ.

ಸಿಟಿಜನ್ ಮ್ಯಾಟರ್ಸ್‌ನ ಸಲಹಾ ಸಂಪಾದಕ ಅಭಿಮತ

‘ಸತ್ಯ ಪ್ರತಿಪಾದನೆ ಪತ್ರಕರ್ತನ ಕರ್ತವ್ಯ’

ಪ್ರಜಾವಾಣಿ ವಾರ್ತೆ

ಜೈನ್ ವಿಶ್ವವಿದ್ಯಾಲಯದ ಪತ್ರಿಕೋದ್ಯಮ ಹಾಗೂ ಸಮೂಹ ಸಂವಹನ ವಿಭಾಗವು ಆಯೋಜಿಸಿದ್ದ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ವಿವಿ ಉಪ ಕುಲಪತಿ ಎನ್. ಸುಂದರ್ ರಾಜನ್ (ಎಡದಿಂದ ಮೊದಲನೆಯವರು) ಸ್ಮರಣ ಸಂಚಿಕೆ ಬಿಡುಗಡೆ ಮಾಡಿದರು. ಟಿ.ಆರ್‌.ಗೋಪಾಲಕೃಷ್ಣನ್, ಭಾರ್ಗವಿ ಹೆಮ್ಮಿಗೆ, ಪ್ರೊ.ಶ್ಯಾಮಲಾ ಬ್ಯಾನರ್ಜಿ, ಮೈಥಿಲಿ ಪಿ. ರಾವ್ ಇದ್ದಾರೆ –ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಸತ್ಯ ಪ್ರತಿಪಾದನೆ ಪತ್ರಕರ್ತನ ಮೂಲ ಕರ್ತವ್ಯ’ ಎಂದು ಸಿಟಿಜನ್ ಮ್ಯಾಟರ್ಸ್‌ನ ಸಲಹಾ ಸಂಪಾದಕ ಟಿ.ಆರ್‌.ಗೋಪಾಲಕೃಷ್ಣನ್ ಪ್ರತಿಪಾದಿಸಿದರು.

ಜೈನ್ ವಿಶ್ವವಿದ್ಯಾಲಯದ ಪತ್ರಿಕೋದ್ಯಮ ಹಾಗೂ ಸಮೂಹ ಸಂವಹನ ವಿಭಾಗವು ಮಂಗಳವಾರ ಆಯೋಜಿಸಿದ್ದ ‘ಸಂಶೋಧನೆಯಲ್ಲಿ ನೀತಿಶಾಸ್ತ್ರ ಮತ್ತು ನೈತಿಕ ಪತ್ರಿಕೋದ್ಯಮದ ತತ್ವಗಳು’ ವಿಷಯ ಕುರಿತ ಎರಡು ದಿನಗಳ ಅಂತರರಾಷ್ಟ್ರೀಯ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

‘ಪತ್ರಕರ್ತ ಸತ್ಯಾಂಶವನ್ನು ಬಹಿರಂಗ ಪಡಿಸಬೇಕು. ಅದು ಪತ್ರಕರ್ತರ ಮೂಲಕರ್ತವ್ಯ’ ಎಂದರು.

‘ವಿದ್ಯಾರ್ಥಿಗಳು ಮಾಹಿತಿಗೆ ಸಾಮಾಜಿಕ ಮಾಧ್ಯಮ ಅವಲಂಬಿಸದೇ ದಿನಪತ್ರಿಕೆಗಳ ಓದಿಗೆ ಹೆಚ್ಚು ಒತ್ತು ನೀಡಬೇಕು’ ಎಂದರು.

ಜೈನ್ ವಿಶ್ವವಿದ್ಯಾಲಯದ ಕುಲಪತಿ ಡಾ.ಎನ್‌.ಸುಂದರರಾಜನ್ ಅವರು, ‘ಶಿಕ್ಷಣವು ಸಹಜತೆಯಿಂದ ಬೌದ್ಧಿಕವಾಗಿ ಹಾಗೂ ಬೌದ್ಧಿಕತೆಯಿಂದ ಸಾಂಸ್ಥಿಕ ಮಟ್ಟಕ್ಕೆ ವಿಮೋಚನೆಗೊಳಿಸುತ್ತದೆ. ಶಿಕ್ಷಣವು ಕುಟುಂಬ ಹಾಗೂ ರಾಷ್ಟ್ರದ ಬೆಳವಣಿಗೆಗೆ ಸಹಕಾರಿ ಆಗಲಿದೆ’ ಎಂದು ಹೇಳಿದರು.

ವಿ.ವಿ ನಿರ್ದೇಶಕ ಡಾ.ದಿನೇಶ್ ನೀಲಕಂಠ್ ಮಾತನಾಡಿ, ‘ಪ್ರತಿಯೊಂದು ಕ್ರಿಯೆಗೆ ಪ್ರತಿಕ್ರಿಯೆ ಇರುತ್ತದೆ. ಆಯಾ ಪ್ರತಿಕ್ರಿಯೆಗೆ ಸಾಮಾಜಿಕ ಮಾಧ್ಯಮದ ಹಸ್ತಕ್ಷೇಪ ಮತ್ತು ಅತಿಯಾದ ಪ್ರತಿಕ್ರಿಯೆ ಇರುತ್ತದೆ’ ಎಂದು ಹೇಳಿದರು.

ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಮುಖ್ಯಸ್ಥೆ ಡಾ.ಭಾರ್ಗವಿ ಡಿ. ಹೆಮ್ಮಿಗೆ ಮಾತನಾಡಿ, ’ಮಾಧ್ಯಮಗಳಿಗೆ ನೈತಿಕ ಪತ್ರಿಕೋದ್ಯಮದ ಅಗತ್ಯ ಇದೆ. ರಾಜಕೀಯ ಪಕ್ಷಗಳು ಹಾಗೂ ಕಾರ್ಪೊರೇಟ್ ಕೈಗಳಿಗೆ ಸಿಲುಕಿ ನೈತಿಕತೆ ಮಾಯವಾಗಿದೆ’ ಎಂದರು.

ಗ್ಲೋಬೆಥಿಕ್ಸ್‌ನ ಪ್ರಾದೇಶಿಕ ನಿರ್ದೇಶಕ ಡಾ.ಜೋಸ್ ನಂದಿಕ್ಕಾರ ಹಾಜರಿದ್ದರು.

ಮೈಸೂರು ರೇಸ್

ಸೀಝ್ಘ್ ಪೆರಿಲಸ್ ಗೆಲ್ಲುವ ನಿರೀಕ್ಷೆ

ಚೀಫ್ ಮಿನಿಸ್ಟರ್ಸ್ ಟ್ರೋಫಿ ಗುರುವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಸೀಝ್ಘ್ ಪೆರಿಲಸ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಸೀ ಬ್ಲಶ್ 6, ಡಾನ್ ರೈಸಿಂಗ್ 2, ಆರ್ಟಿಕಲ್ ಫಿಫ್ಟೀನ್ 4
2ನೇ ರೇಸ್: ಅನ್ ಇಮಾಜಿನಬಲ್ 3, ಸ್ಪಿರಿಚ್ಯುಯಲ್ ಕ್ವೀನ್ 8, ಕಂಟ್ರೆಸ್ ಪೇಸ್ 5
3ನೇ ರೇಸ್: ಸ್ವಾರ್ಕಲ್ಸ್ 7, ಇಂಪೀರಿಯಸ್ 8, ಇಂಪೆಲ್ಲಿಂಗ್ ಪವರ್ 5
4ನೇ ರೇಸ್: ಪಾರ್ಕರ್ 4, ಲಕ್ಕಿ ಲೂಸಿಯಾನೊ 3, ಆಂಟಿನೊರಿ 1
5ನೇ ರೇಸ್: ಸೀಝ್ಘ್ ಪೆರಿಲಸ್ 4, ವಿಜ್ಡೊ 7, ಅಬರ್ಲರ್ 1
6ನೇ ರೇಸ್: ಅನಕಿನ್ 1, ಟೈಗರ್ ರಿಟರ್ನ್ಸ್ 6, ಎಂಬೋಸಮ್ 10
7ನೇ ರೇಸ್: ಪರ್ಫೆಕ್ಟ್ ರೆಂಡಿಶನ್ 4, ಎಕ್ಸ್ಟ್ರಾ ಆರ್ಡಿನರಿ 5, ಡೆಲ್ ಮಾರ್ 7

ಉತ್ತಮ ಬೆಟ್: ಅನ್ ಇಮಾಜಿನಬಲ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ನಗರದಲ್ಲಿ ಇಂದು

ಹಿರಿಯ ನಾಗರಿಕರ ವೈದ್ಯಕೀಯ ತಪಾಸಣಾ ಶಿಬಿರ: ಆಯೋಜನೆ: ವಿಕಲ ಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಸ್ಥಳ: ಡಿ.ಡಿ.ಆರ್‌.ಸಿ., ಕೇಂದ್ರ 19, ರವಿ ಕಿರ್ಲೋಸ್ಕರ್ ಮೆಮೋರಿಯಲ್ ಆಸ್ಪತ್ರೆ, ಪೀಣ್ಯ, ಬೆಳಿಗ್ಗೆ 9.30

ವಸ್ತ್ರಾಭರಣ–2022: ಉದ್ಘಾಟನೆ: ವಂದಿತಾ ಶರ್ಮಾ, ಆಯೋಜನೆ: ಕ್ರಾಫ್ಟ್ ಕೌನ್ಸಿಲ್ ಆಫ್ ಕರ್ನಾಟಕ, ಸ್ಥಳ: ಚಿತ್ರಕಲಾ ಪರಿಷತ್, ಬೆಳಿಗ್ಗೆ 10

ಎನ್‌ಇಪಿ ಸಿದ್ಧತೆ ಕುರಿತು ರಾಷ್ಟ್ರೀಯ ವಿಚಾರಸಂಕಿರಣ: ಉದ್ಘಾಟನೆ: ಟಿ.ಆರ್. ಪರಶುರಾಮನ್, ಟಿ.ಜಿ. ಸೀತಾರಾಮನ್, ಎಸ್. ಸಿ. ಶರ್ಮಾ, ಬಿ.ಎಸ್. ರಾಮಪ್ರಸಾದ್, ಅಧ್ಯಕ್ಷತೆ: ಎಂ.ಕೆ. ಶ್ರೀಧರ್, ಆಯೋಜನೆ: ಸೆಂಟರ್ ಫಾರ್ ಎಜುಕೇಷನಲ್ ಆ್ಯಂಡ್ ಸೋಶಿಯಲ್ ಸ್ಟಡೀಸ್, ಸ್ಥಳ: ಎ.ಪಿ.ಜೆ. ಅಬ್ದುಲ್ ಕಲಾಂ ಸಭಾಂಗಣ, ರಾಮಯ್ಯ ಪಾಲಿಟೆಕ್ನಿಕ್ ಕಾಲೇಜ್, ಬೆಳಿಗ್ಗೆ 10

ನಿರ್ಮಲಾ ಸೀತಾರಾಮನ್

ವಾರ್ಷಿಕ ಸಾಮಾನ್ಯ ಸಭೆ: ಅತಿಥಿಗಳು: ನಿರ್ಮಲಾ ಸೀತಾರಾಮನ್, ಅಧ್ಯಕ್ಷತೆ: ಐ.ಎಸ್. ಪ್ರಸಾದ್, ಆಯೋಜನೆ: ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ, ಸ್ಥಳ: ಸರ್ ಎಂ.ವಿ. ಸಭಾಂಗಣ, ಎಫ್‌ಕೆಸಿಸಿಐ, ಬೆಳಿಗ್ಗೆ 11

ಎಂ.ಎನ್. ಉಮಾಶಂಕರ್ ಸಂಪಾದಿಸಿದ ‘ಸಿವಿಲ್ ರೆಡಿ ರೆಫರೆನ್ಸರ್’ ಪುಸ್ತಕ ಬಿಡುಗಡೆ: ಸೂರಜ್ ಗೋವಿಂದರಾಜ್, ವಿವೇಕ್ ಸುಬ್ಬಾರೆಡ್ಡಿ, ಆಯೋಜನೆ: ದಿ ಅಡ್ವೊಕೇಟ್ಸ್ ಅಸೋಸಿಯೇಷನ್ ಆ್ಯಂಡ್ ಲಾಯರ್ಸ್ ಲಾ ಬುಕ್, ಸ್ಥಳ: ಹೈಕೋರ್ಟ್ ಯೂನಿಟ್, ಹಾಲ್ ನಂಬರ್ 1, ಮಧ್ಯಾಹ್ನ 1.30

ಚಿದಾನಂದ ಅವಧೂತ ವಿರಚಿತ ಶ್ರೀದೇವಿ ಮಹಾತ್ಮೆ ಷಟ್ಪದಿ ಕಾವ್ಯದ ಆಯ್ದ ಭಾಗಗಳ ವಾಚನ ಹಾಗೂ ವ್ಯಾಖ್ಯಾನ: ಸುಮಾ ಪ್ರಸಾದ್, ಸಂಧ್ಯಾ.ವಿ., ಅತಿಥಿಗಳು: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೆಗೌಡನಗರ, ಸಂಜೆ 6.30

ನವರಾತ್ರಿ ವಿಶೇಷ ಕಾರ್ಯಕ್ರಮ

ನವರಾತ್ರಿ ವಿಜಯದಶಮಿ: ಆಶಯ ನುಡಿ: ಎಸ್. ಪಿನಾಕಪಾಣಿ, ಉಪನ್ಯಾಸ: ದಿವ್ಯಾ ಉಮೇಶ್, ವಚನ ಗಾಯನ: ಸುಶೀಲಮ್ಮ ಮತ್ತು ತಂಡ, ಶೈಲಜಾ ಬಸವರಾಜ್ ಮತ್ತು ತಂಡ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಪದ್ಮಜ ಪ್ರಸನ್ನ ಮನೆಯಂಗಳ, ಕಲ್ಯಾಣ ಗೃಹ ನಿರ್ಮಾಣ ಸಹಕಾರ ಸಂಘ ಬಡಾವಣೆ, ಸಂಜೆ 5.30

ನವರಾತ್ರಿ ವಿಶೇಷ ಹೋಮ: ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಸ್ಥಳ: ಪ್ಲಾಟ್‌ಫಾರಂ ರಸ್ತೆ, ರಾಜೀವ್ ಗಾಂಧಿ ವೃತ್ತ, ಶೇಷಾದ್ರಿಪುರ, ಬೆಳಿಗ್ಗೆ 9.30

ನವರಾತ್ರಿ ಉತ್ಸವ: ದೇವಿಗೆ ಕಾಮಾಕ್ಷಿ ಅಲಂಕಾರ, ನೃತ್ಯ ನಾಟ್ಯಾಂಜಲಿ: ಶ್ವೇತಾಬಾಬು ಮತ್ತು ತಂಡದವರಿಂದ, ಆಯೋಜನೆ: ದುರ್ಗಾ ಮಹೇಶ್ವರಮ್ಮ ದೇವಾಲಯ, ಸ್ಥಳ: ಕೃಷ್ಣರಾಜಪುರ, ಸಂಜೆ 6

ಶರನ್ನರಾತ್ರಿ, ಶ್ರೀರಾಮ ಮಂದಿರದ ಶತಮಾನೋತ್ಸವ ಸಮಾರಂಭ: ಗಾಯನ: ಸುಬ್ಬುಲಕ್ಷ್ಮಿ, ಪಿಟೀಲು: ಸಿ.ಎನ್. ಉಷಾ, ಮೃದಂಗ: ಎಚ್‌.ಎಸ್. ಕೃಷ್ಣಮೂರ್ತಿ, ಆಯೋಜನೆ: ಶ್ರೀರಾಮ ಮಂದಿರ, ಈಸ್ಟ್ ಪಾರ್ಕ್, ಮಲ್ಲೇಶ್ವರ, ಸಂಜೆ 6.30

ನವರಾತ್ರಿ ಸಂಗೀತ ನೃತ್ಯೋತ್ಸವ: ಪ್ರಸ್ತುತಿ: ನೃತ್ಯ ಕುಟೀರ ಕಲಾವಿದರಿಂದ ಕುಚಿಪುಡಿ ನೃತ್ಯ, ನಿರ್ದೇಶನ: ಅಖಿಲಾ ದೀಪಕ್, ಸ್ಥಳ: ಮಹಾಯಾಗ ಕ್ಷೇತ್ರ ಗಾಯತ್ರಿ ದೇವಸ್ಥಾನ, ಗಾಯತ್ರಿ ರಂಗಮಂದಿರ, ಯಶವಂತಪುರ ಸರ್ಕಲ್ ಬಳಿ, ಸಂಜೆ 6.30

ನವರಾತ್ರಿ ಉತ್ಸವ: ಭಕ್ತಿ ಗೀತೆಗಳು: ಪ್ರಸ್ತುತಿ: ಹಿರೇಮಗಳೂರು ಪ್ರದೀಪ್ ಮತ್ತು ತಂಡದವರಿಂದ, ಆಯೋಜನೆ: ವರಸಿದ್ಧಿ ವಿನಾಯಕ ದೇವಾಲಯ, ಸ್ಥಳ: ಕೆನರಾ ಬ್ಯಾಂಕ್ ಕಾಲೊನಿ, ನಾಗರಬಾವಿ ರಸ್ತೆ, ಸಂಜೆ 6.30

ಶರನ್ನವರಾತ್ರಿ ಉತ್ಸವ: ದೇವಿಗೆ ನಾಗದೇವತೆ ಅಲಂಕಾರ, ಆಯೋಜನೆ: ಯಲ್ಲಮ್ಮದೇವಿ ದೇವಾಲಯ, ಸ್ಥಳ: ದೇಶದಪೇಟೆ ರಸ್ತೆ, ಯಲಹಂಕ

ಶರನ್ನವರಾತ್ರಿ ಉತ್ಸವ: ದೇವಿಗೆ ವಿಭೂತಿ ಅಲಂಕಾರ, ಆಯೋಜನೆ: ದೊಡ್ಡಮ್ಮ ದೇವಿ ಅಭಿವೃದ್ಧಿ ಸಮಿತಿ, ಸ್ಥಳ: ಚಿಕ್ಕದೇವಸಂದ್ರ, ಕೃಷ್ಣರಾಜಪುರ

ನ್ಯಾಷನಲ್ ಟೀಚರ್ಸ್ ಅವಾರ್ಡ್–2022: ಅತಿಥಿಗಳು: ಡಾ.ಸಿ.ಎನ್. ಅಶ್ವತ್ಥನಾರಾಯಣ, ಎನ್. ಸಂತೋಷ್ ಹೆಗ್ಡೆ, ಚಂದ್ರಶೇಖರ್ ಶೆಟ್ಟಿ, ಎಸ್. ಸಚ್ಚಿದಾನಂದ್, ಕಲ್ಪಜಾ ಡಿ.ಎ., ಆಯೋಜನೆ:ನ್ಯಾಷನಲ್ ಪ್ರೆಸ್ ಕೌನ್ಸಿಲ್ ಆಫ್ ಇಂಡಿಯಾ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ 4

ಎನ್‌.ಸಂತೋಷ್ ಹೆಗ್ಡೆ

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು

ಮಿಸಳ್ ಹಾಪ್ಚಾ
ಹಬ್ಬದ ನಂತರ ದೇವಿ ಕಾಳಜಿ

ಸೆ.29 ವಿಶ್ವ ಹೃದಯ ದಿನ
ಹೃದಯದ ಮಾತು ಕೇಳಿಸಿಕೊಳ್ಳಿ
ಡಾ.ಸಿ.ಪ್ರಭಾಕರ ಕೋರೆಗೋಳ್
ಹಿರಿಯ ಸಲಹೆಗಾರ, ಇಂಟರ್ವೆನ್ಷನಲ್ ಕಾರ್ಡಿಯಾಲಜಿಸ್ಟ್, ಫೋರ್ಟಿಸ್ ಆಸ್ಪತ್ರೆ
ವೈದ್ಯರೊಂದಿಗೆ ಮಾತುಕತೆ
ಮಾತುಕತೆ
ಬೆಳಿಗ್ಗೆ 11 ರಿಂದ 12

ಪಾಡ್‌ಕಾಸ್ಟ್: ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8. ಪ್ರಚಲಿತ: ಬೆಳಿಗ್ಗೆ 9. ಸಂಪಾದಕೀಯ: ಬೆಳಿಗ್ಗೆ 9.30
ಕನ್ನಡ ಧ್ವನಿ

ಪ್ರಜಾವಾಣಿ ಅರ್ಪಿಸುವ
ನವರಾತ್ರಿ ಸಾಂಸ್ಕೃತಿಕ ಉತ್ಸವ- 2022 Live
ಸಹಯೋಗ: ಕಾಸ್ಮೋಪಾಲಿಟನ್ ಕ್ಲಬ್, ಜಯನಗರ, ಬೆಂಗಳೂರು
ಸೆಪ್ಟೆಂಬರ್ 26ರಿಂದ ಅಕ್ಟೋಬರ್ 4, 2022 ಪ್ರತಿ ಸಂಜೆ 4 ರಿಂದ

ದಾಂಡಿಯಾ - ಗರ್ಬಾ ನೃತ್ಯ
ನರ್ತನ ಅಕಾಡೆಮಿ ಆಫ್ ಡ್ಯಾನ್ಸ್ ಆ್ಯಂಡ್ ಮ್ಯೂಸಿಕ್ ಮತ್ತು ಕ್ಲಬ್ ಸದಸ್ಯರಿಂದ. ನಿರ್ವಹಣೆ: ಸೌಮ್ಯಾ ಪ್ರಭು

ನಾಳೆ

ದಾಂಡಿಯಾ ಧಮಾಲ್
ನಾದಂ ಹಾಗೂ ಕಾಸ್ಮೋಪಾಲಿಟನ್ ಕ್ಲಬ್ ಯುವ ಸದಸ್ಯರಿಂದ. ನಿರ್ವಹಣೆ: ಧರಣಿ ಕಾಂಗೋವಿ

ಮೈಸೂರಿನಿಂದ ದಸರಾ ಲೈವ್ LIVE
ಮೈಸೂರು ಅರಮನೆ ವೇದಿಕೆಯಲ್ಲಿ ನಡೆಯುವ ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳ ನೇರ ಪ್ರಸಾರ ಪ್ರಜಾವಾಣಿ ಫೇಸ್‌ಬುಕ್ ಪುಟದಲ್ಲಿ ಪ್ರತಿದಿನ ಸಂಜೆ 5.30ರಿಂದ

ರಾಣಿ ಭೈರಾದೇವಿಯನ್ನು ಗುರುತಿಸದಿರುವುದು ಬೇಸರದ ಸಂಗತಿ: ಡಾ.ಶರ್ಮ

ವರ್ಧಮಾನ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಮೂಡುಬಿದಿರೆ (ದಕ್ಷಿಣ ಕನ್ನಡ): ಬೆಂಗಳೂರಿನ ಲೇಖಕ ಡಾ.ಗಜಾನನ ಶರ್ಮ ಅವರಿಗೆ ವರ್ಧಮಾನ ಸಾಹಿತ್ಯ ಪ್ರಶಸ್ತಿ ಮತ್ತು ಚಿಕ್ಕಮಗಳೂರಿನ ಡಾ.ಎಚ್. ಸತ್ಯನಾರಾಯಣ ಅವರಿಗೆ ವರ್ಧಮಾನ ಉದಯೋನ್ಮುಖ ಸಾಹಿತ್ಯ ಪ್ರಶಸ್ತಿ ಪ್ರದಾನ ಮಾಡಲಾಯಿತು.

ವರ್ಧಮಾನ ಪ್ರಶಸ್ತಿ ಪೀಠದ 2021ರ ಸಾಲಿನ ವರ್ಧಮಾನ ಪ್ರಶಸ್ತಿ ಪ್ರದಾನ ಸಮಾರಂಭ ದಸರಾ ಸಾಹಿತ್ಯ ಉತ್ಸವದ ಅಂಗವಾಗಿ ಸಮಾಜ ಮಂದಿರದಲ್ಲಿ ಬುಧವಾರ ರಾತ್ರಿ ನಡೆಯಿತು.

ವರ್ಧಮಾನ ಸಾಹಿತ್ಯ ಪ್ರಶಸ್ತಿಯು ₹25 ಸಾವಿರ ಹಾಗೂ ವರ್ಧಮಾನ ಉದಯೋನ್ಮುಖ ಸಾಹಿತ್ಯ ಪ್ರಶಸ್ತಿಯು ₹15 ಸಾವಿರ ನಗದು ಒಳಗೊಂಡಿದೆ.

ಸಮಾಜ ಮಂದಿರ ಸಭಾದ ಅಧ್ಯಕ್ಷ ಅಭಯಚಂದ್ರ ಜೈನ್ ಅಧ್ಯಕ್ಷತೆ ವಹಿಸಿದ್ದರು. ಪೀಠದ ಕಾರ್ಯಾಧ್ಯಕ್ಷ ಸಂಪತ್ ಸಾಮ್ರಾಜ್ಯ, ಎಂಸಿಎಸ್ ಬ್ಯಾಂಕ್ ಅಧ್ಯಕ್ಷ ಬಾಹುಬಲಿ ಪ್ರಸಾದ್, ಸಮಾಜ ಮಂದಿರ ಸಭಾದ ಕಾರ್ಯದರ್ಶಿ ಸುರೇಶ್ ಪ್ರಭು, ಪುಂಡಿಕಾಯ್ ಗಣಪಯ್ಯ ಭಟ್, ಗಣೇಶ್ ಕಾಮತ್ ಇದ್ದರು.

ಪೀಠದ ಪ್ರಧಾನ ನಿರ್ದೇಶಕ ಡಾ.ನಾ. ಮೊಗಸಾಲೆ ಪ್ರಾಸ್ತಾವಿಕ-ವಾಗಿ ಮಾತನಾಡಿದರು. ಮುನಿರಾಜ ರೆಂಜಾಳ ನಿರೂಪಿಸಿದರು. ಸದಾನಂದ ನಾರಾವಿ ಪ್ರಶಸ್ತಿ ಪತ್ರ ವಾಚಿಸಿದರು.

‘ಸಕಾರಾತ್ಮಕ ಚಿಂತನೆ ವೃದ್ಧಿಸಲಿ’

ಜೈನ ಮಠದ ಭಟ್ಟಾರಕ ಚಾರು ಕೀರ್ತಿ ಸ್ವಾಮೀಜಿ ಮಾತನಾಡಿ, ‘ಸಮಾಜದಲ್ಲಿ ಸಕಾರಾತ್ಮಕ ಚಿಂತನೆ ಗಳನ್ನು ವೃದ್ಧಿಸುವ ಕೆಲಸ ಸಾಹಿತಿ ಗಳಿಂದ ಆಗಬೇಕು. ಪುಸ್ತಕಗಳನ್ನು ಕೊಂಡು ಓದುವುದೇ ಸಾಹಿತಿಗಳಿಗೆ ನೀಡುವ ಗೌರವ’ ಎಂದರು.

ಮೂಡುಬಿದಿರೆಯ ಸಮಾಜ ಮಂದಿರದಲ್ಲಿ ಬುಧವಾರ ನಡೆದ ದಸರಾ ಉತ್ಸವ ಸಮಾರಂಭದಲ್ಲಿ ಡಾ.ಸತ್ಯನಾರಾಯಣ ಮತ್ತು ಡಾ.ಗಜಾನನ ಶರ್ಮ ಅವರಿಗೆ ವರ್ಧಮಾನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಜೈನ ಮಠದ ಭಟ್ಟಾರಕ ಚಾರುಕೀರ್ತಿ ಸ್ವಾಮೀಜಿ, ಅಭಯಚಂದ್ರ ಜೈನ್, ಡಾ.ನಾ ಮೊಗಸಾಲೆ ಇದ್ದರು.

ನೂತನ ಎ.ಜಿಯಾಗಿ ವೆಂಕಟರಮಣಿ

ಆರ್. ವೆಂಕಟರಮಣಿ

ನವದೆಹಲಿ: ದೇಶದ ನೂತನ ಅಟಾರ್ನಿ ಜನರಲ್ (ಎ.ಜಿ) ಆಗಿ ಸುಪ್ರೀಂ ಕೋರ್ಟ್‌ನ ಹಿರಿಯ ವಕೀಲ ಆರ್. ವೆಂಕಟರಮಣಿ ಅವರನ್ನು ಕೇಂದ್ರ ಸರ್ಕಾರ ಬುಧವಾರ ನೇಮಕ ಮಾಡಿದೆ. ಅವರ ಅಧಿಕಾರ ಅವಧಿ ಮೂರು ವರ್ಷ ಇರಲಿದೆ.

ಸದ್ಯ ಎ.ಜಿ ಆಗಿರುವ ಕೆ.ಕೆ. ವೇಣುಗೋಪಾಲ್ (91) ಅವರ ಅಧಿಕಾರಾವಧಿ ಇದೇ 30ರಂದು ಮುಕ್ತಾಯವಾಗಲಿದೆ. ಹೀಗಾಗಿ ಆರ್. ವೆಂಕಟರಮಣಿ ಅವರನ್ನು ನೇಮಕ ಮಾಡಿ ಕೇಂದ್ರ ಕಾನೂನು ಮತ್ತು ನ್ಯಾಯ ಸಚಿವಾಲಯ ಅಧಿಸೂಚನೆ ಹೊರಡಿಸಿದೆ.

1950ರ ಏಪ್ರಿಲ್ 13ರಂದು ಪುದುಚೇರಿಯಲ್ಲಿ ಜನಿಸಿದ ಇವರು, 1977ರಲ್ಲಿ ತಮಿಳುನಾಡಿನಿಂದ ವಕೀಲ ವೃತ್ತಿ ಆರಂಭಿಸಿದರು. 2014ರಿಂದ 2017ರವರೆಗೆ ಎ.ಜಿ ಆಗಿದ್ದ ಮುಕುಲ್ ರೋಹಟಗಿ ಅವರನ್ನು ಮತ್ತೊಂದು ಅವಧಿಗೆ ನೇಮಿಸಲಾಗುತ್ತದೆ ಎನ್ನಲಾಗಿತ್ತು. ಆದರೆ, ಕೇಂದ್ರದ ಈ ಪ್ರಸ್ತಾವವನ್ನು ರೋಹಟಗಿ ತಿರಸ್ಕರಿಸಿದ್ದರು.

ಪೈಗಂಬರರ ಪ್ರಬಂಧ ಸ್ಪರ್ಧೆ: ಮುಖ್ಯಶಿಕ್ಷಕ ಅಮಾನತು

ಪ್ರಜಾವಾಣಿ ವಾರ್ತೆ

ಗದಗ: ಸರ್ಕಾರದ ನಿರ್ದೇಶನ ಇಲ್ಲದಿದ್ದರೂ, ಗೋಪ್ಯವಾಗಿ ಪ್ರವಾದಿ ಪೈಗಂಬರರ ಕುರಿತು ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ಧೆ ನಡೆಸಿದ ಆರೋಪದ ಮೇಲೆ ಗದಗ ತಾಲ್ಲೂಕಿನ ನಾಗಾವಿ ಗ್ರಾಮದ ಸರ್ಕಾರಿ ಪ್ರೌಢಶಾಲೆ ಮುಖ್ಯ ಶಿಕ್ಷಕ ಅಬ್ದುಲ್ ಮುನಾಫ್ ಬಿಜಾಪೂರ ಅವರನ್ನು ಸಾರ್ವಜನಿಕ ಶಿಕ್ಷಣ ಇಲಾಖೆ ಹೆಚ್ಚುವರಿ ಆಯುಕ್ತ ಸಿದ್ರಾಮಪ್ಪ ಎಸ್.ಬಿರಾದಾರ ಅಮಾನತುಗೊಳಿಸಿ ಆದೇಶ ಹೊರಡಿಸಿದ್ದಾರೆ.

‘ಶಾಲೆಯ ಒಟ್ಟು 43 ವಿದ್ಯಾರ್ಥಿಗಳಿಗೆ ‘ಮಹನ್ನದ (ಸ) ಎಲ್ಲರಿಗಾಗಿ’ ಹಾಗೂ ‘ಅಂತಿಮ ಪ್ರವಾದಿ ಮಹಮ್ಮದ (ಸ)’ ಪುಸ್ತಕವನ್ನು ತರಗತಿಯಲ್ಲಿ ವಿತರಿಸಿ, ಶಿಕ್ಷಣ ಇಲಾಖೆ ಹಾಗೂ ಶಿಕ್ಷಕರಿಗೂ ಮಾಹಿತಿ ನೀಡದೇ ಪ್ರಬಂಧ ಸ್ಪರ್ಧೆ ನಡೆಸಿದ್ದಾರೆ. ಬಹುಮಾನ ನೀಡುವ ಆಮಿಷವನ್ನೂ ಒಡ್ಡಿದ್ದಾರೆ. ಜವಾಬ್ದಾರಿಯುತ ಸ್ಥಾನದಲ್ಲಿದ್ದು, ಈ ರೀತಿ ಮಾಡಿರುವುದರಿಂದ ಹಾಗೂ ಪ್ರಾಥಮಿಕ ವಿಚಾರಣೆಯಲ್ಲಿ ಮೇಲ್ನೋಟಕ್ಕೆ ಆರೋಪ ಸಾಬೀತಾಗಿರುವುದರಿಂದ ಈ ಆದೇಶ ಹೊರಡಿಸಲಾಗಿದೆ’ ಎಂದು ಅವರು ತಿಳಿಸಿದ್ದಾರೆ.

‘ಶಾಲೆಯ ಎಂಟನೇ ತರಗತಿ ವಿದ್ಯಾರ್ಥಿಗಳಿಗೆ ಪ್ರವಾದಿ ಮೊಹಮ್ಮದ್ ಪೈಗಂಬರ್ ಕುರಿತಾದ ಪುಸ್ತಕ ನೀಡಿ, ಇದೇ ವಿಷಯದ ಬಗ್ಗೆ ಪ್ರಬಂಧ ಸ್ಪರ್ಧೆ ಆಯೋಜಿಸಿದ್ದಾರೆ’ ಎಂದು ಆರೋಪಿಸಿ ಶ್ರೀರಾಮ ಸೇನೆಯ ಗದಗ ಜಿಲ್ಲಾ ಘಟಕದ ಕಾರ್ಯಕರ್ತರು ಮಂಗಳವಾರ ಶಾಲೆಗೆ ನುಗ್ಗಿ ಮುಖ್ಯಶಿಕ್ಷಕರನ್ನು ತರಾಟೆಗೆ ತೆಗೆದುಕೊಂಡಿದ್ದರು.

ಪುಸ್ತಕ ಪ್ರದರ್ಶನಕ್ಕೆ ಕೊಕ್: ಕುಮಾರಸ್ವಾಮಿ ಖಂಡನೆ

ಬೆಂಗಳೂರು: ಮೈಸೂರು ದಸರಾ ಉತ್ಸವದಲ್ಲಿ ಕನ್ನಡ ಪುಸ್ತಕ ಪ್ರದರ್ಶನ-ಕ್ಕೆ ಅವಕಾಶ ನೀಡಿಲ್ಲ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್. ಡಿ.ಕುಮಾರಸ್ವಾಮಿ ರಾಜ್ಯ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಅವರು, ಕನ್ನಡ ಭಾಷೆ, ಸಂಸ್ಕೃತಿಯ ಕುರಿತ ನಿರ್ಲಕ್ಷ್ಯ ಮಾತೃಭಾಷೆಗೆ ಮಾಡಿದ ಅವಮಾನ, ದಸರಾದಲ್ಲಿ ಕನ್ನಡ ಪುಸ್ತಕ ಪ್ರದರ್ಶನ ಹಿಂದಿನಿಂದಲೂ ಇರುತ್ತಿತ್ತು. ಈ ಬಾರಿ ಪ್ರದರ್ಶನಕ್ಕೆ ಅವಕಾಶ ನೀಡದೆ ಕನ್ನಡ ವಿರೋಧಿ ನೀತಿ ಅನುಸರಿಸುತ್ತಿದೆ ಎಂದು ಕಿಡಿಕಾರಿದ್ದಾರೆ.

ಬಿಜೆಪಿಯು ಕನ್ನಡವನ್ನು ಧಿಕ್ಕರಿಸಿ ತನ್ನ 'ರಹಸ್ಯ ಕಾರ್ಯಸೂಚಿ' ಹೇರಲು ಹೊರಟಿದೆ. ಹಿಂದಿ ಭಾಷೆಯ ವಕ್ತಾರಿಕೆ ಮಾಡುವ ಬಿಜೆಪಿಯಿಂದ ಇನ್ನೇನು ನಿರೀಕ್ಷೆ ಮಾಡಲು ಸಾಧ್ಯ ಎಂದು ಕುಟುಕಿದ್ದಾರೆ.

ಕನ್ನಡ ಮತ್ತು ಸಂಸ್ಕೃತಿ ಸಚಿವ ಸುನಿಲ್ ಕುಮಾರ್ ತಕ್ಷಣ ಪ್ರತಿಕ್ರಿಯಿಸ-ಬೇಕು. ಪುಸ್ತಕ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಬೇಕು ಎಂದು ಒತ್ತಾಯಿಸಿದ್ದಾರೆ.

7ನೇ ವೇತನ ಆಯೋಗ ರಚನೆಗೆ ಆಗ್ರಹಿಸಿ ಧರಣಿ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರಿ ನೌಕರರ ವೇತನ ಸೌಲಭ್ಯಗಳ ಪರಿಷ್ಕರಣೆಗೆ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿಯ ಅಧ್ಯಕ್ಷತೆಯಲ್ಲಿ 7ನೇ ವೇತನ ಆಯೋಗ ರಚಿಸಬೇಕು ಎಂಬುದೂ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಎಂ.ಎಸ್ ಬಿಲ್ಡಿಂಗ್ (ಬಹುಮಹಡಿ ಕಟ್ಟಡ) ಮುಂಭಾಗದಲ್ಲಿ ರಾಜ್ಯ ಸರ್ಕಾರಿ ನೌಕರರ ವಿವಿಧ ಸಂಘಟನೆಗಳ ಮತ್ತು ಇಲಾಖಾ ಹಾಗೂ ವೃಂದ ಸಂಘಗಳ ಜಂಟಿ ಕ್ರಿಯಾ ಸಮಿತಿ ಗುರುವಾರ ಪ್ರತಿಭಟನೆ ಹಮ್ಮಿಕೊಂಡಿದೆ.

‘ಬೆಳಿಗ್ಗೆ 10.30ರಿಂದ 5 ಗಂಟೆಯವರೆಗೆ ಈ ಧರಣಿ ನಡೆಯಲಿದೆ. ಎಲ್ಲ ನೌಕರರು ಸಾಮೂಹಿಕವಾಗಿ ರಜೆ ಹಾಕಿ ಈ ಪ್ರತಿಭಟನೆಯಲ್ಲಿ ಭಾಗವಹಿಸುವಂತೆ ಕರೆ ನೀಡಲಾಗಿದೆ’ ಎಂದು ಸಚಿವಾಲಯ ನೌಕರರ ಸಂಘದ ಅಧ್ಯಕ್ಷ ಎಂದು ಪಿ. ಗುರುಸ್ವಾಮಿ ತಿಳಿಸಿದ್ದಾರೆ.

‘ಕೋವಿಡ್ ಅವಧಿಯಲ್ಲಿ ಮುಟ್ಟಗೋಲು ಹಾಕಿಕೊಂಡಿರುವ ನೌಕರರ ಮತ್ತು ಪಿಂಚಣಿದಾರರ 18 ತಿಂಗಳ ತುಟ್ಟಿಭತ್ಯೆ ತಕ್ಷಣ ಬಿಡುಗಡೆ ಮಾಡಬೇಕು, 2022ರ ಜುಲೈನಿಂದ ಜಾರಿಗೆ ಬರುವಂತೆ ಶೇ 25ರಷ್ಟು ಮಧ್ಯಂತರ ಪರಿಹಾರವನ್ನೂ ಕೂಡಲೇ ಘೋಷಿಸಬೇಕು, ನೂತನ ಪಿಂಚಣಿ ಪದ್ಧತಿಯನ್ನು ರದ್ದುಪಡಿಸಿ ನಿಶ್ಚಿತ ಪಿಂಚಣಿ ಪದ್ಧತಿ ಮತ್ತೆ ಆರಂಭಿಸಬೇಕು, ಆಡಳಿತ ಸುಧಾರಣಾ ಆಯೋಗ–2 ರ ವರದಿಯಲ್ಲಿರುವ ನೌಕರ ವಿರೋಧಿ ಶಿಫಾರಸುಗಳನ್ನು ಕೈಬಿಡಬೇಕು, ಖಾಲಿ ಇರುವ 2.80 ಲಕ್ಷ ಹುದ್ದೆಗಳನ್ನು ಭರ್ತಿ ಮಾಡಬೇಕು’ ಎಂದೂ ಕ್ರಿಯಾ ಸಮಿತಿ ಬೇಡಿಕೆ ಮುಂದಿಟ್ಟಿದೆ.

BENGALURU SOLID WASTE MANAGEMENT LIMITED

Office of the Chief General Manager (Tech), 1st Floor, UNI Building,
Thimmaiah Road, Millers Tank Bund Area, Vasanthnagar Bengaluru – 560 052

No: CGM(TECH)/BSWML/TEND/02/2022-23 Date: 28.09.2022

REQUEST FOR PROPOSAL (RFP) (THROUGH GOK E–PROCUREMENT PORTAL ONLY)

1. The Chief General Manager (Tech), on behalf of Managing Director, BSWML is withdrawing the earlier tender notification No:CGM(TECH)/BSWML/TEND/02/2022-23, Dated: 22.08.2022 and invites fresh proposals for "Selection of Service Provider for Primary Collection & Transportation Services in Covered Vehicle along with the Secondary Transportation of Waste in Segregated Manner to designated locations". Any reputed NGO/Sole Proprietor/Trust/HUF/Partnership/ Companies registered under Companies Act 1956/2013 is eligible for undertaking the above services. In this tender a bidder can bid for all packages. But, he/she shall not be awarded more than one package.
2. Any Bidder blacklisted/ barred by Bengaluru Solid Waste Management Company Limited ("BSWML") /any other entity of Government of Karnataka or by any State Government or Central Government /department/Urban local body/name lender of the officials of the corporation or the corporators, including nominated members or other elected member/such agency in India from participating in bidding process individually as on the Bid Due Date and if such bar subsists, such Bidder/s shall not be eligible to participate in this RFP.
3. RFP documents may be downloaded from Government of Karnataka e-Procurement website **https://eproc.karnataka.gov.in** under login for Contractors: After login to Contractors, please scroll down to the right-side bottom to see List of Tenders, please click there to find the details of RFP and download copy of the tender. The tender document can be downloaded in the portal from **30.09.2022.** Only Interested Service Provider who wishes to participate should remit online transaction fee for tender after registering in the portal. The transaction fee is non-refundable.
4. Tenders must be submitted online through e-procurement portal **on or before 16.00 hours on 31.10.2022** and the opening of tenders will be as per the e-procurement portal guidelines.
5. Other details can be seen in the tender documents.

Sl No	Package Name		Amount Put to Tender per annum (Rs. in Lakhs)	EMD (Rs. in Lakhs)
1	Pkg-1	Ward No: 117 (C V Raman Nagar), 118 (Lal Bahadur Nagar) &123 (Jalakanteshwara Nagar)	614.96	9.22
2	Pkg-2	Ward No: 121 (Old Tippasandra), 122 (New Tippasandra), 124 (Jeevanabhima Nagar) & 125 (Konena Agrahara)	665.76	10.00
3	Pkg-3	Ward No: 120 (Hoysala Nagar) & 119 (New Byappanahalli)	402.15	6.03
4	Pkg-4	Ward No:178 (Dommalur), 179 (Jogupalya), 180 (Agaram) & 181 (Shanthala Nagar)	839.98	12.60
5	Pkg-5	Ward No: 182 (Shanthi Nagar), 183 (Neelasandra) & 184 (Vannarapete)	766.59	11.50
6	Pkg-6	Ward no : 94 (Hennur) & 95 (Nagawara)	576.31	8.64
7	Pkg-7	Ward No: 98 (Kacharakanahalli), 99 (HRBR Layout) & 100 (Banasawadi)	862.26	12.93
8	Pkg-8	Ward No: 96 (Kadugondanahalli), 97 (Venkateshpura) & 101 (Kammanahalli)	685.81	10.29
9	Pkg-9	Ward No: 102 (Lingarajapura) & 103 (Maruthi Seva Nagar)	566.35	8.50
10	Pkg-10	Ward No: 126 (Ramaswamy palya), 127 (Jayamahal) & 130 (Bharathi Nagar)	636.86	9.55
11	Pkg-11	Ward No: 131 (Halsur), 129 (Sampangiram Nagar), & 128 (Vasanth Nagar)	732.93	10.99
12	Pkg-12	Ward No: 66 (Radhakrishna Temple Ward), 67 (Sanjaya Nagar), 70 (Hebbal) & 72 (Ganga Nagar)	708.10	10.62
13	Pkg-13	Ward No: 68 (V Nagenahalli), 69 (Manorayana Palya), 71 (Chamundi Nagar) & 73 (J C Nagar)	686.27	10.29
14	Pkg-14	Ward No: 74 (Kavalbyrasandra), 75 (Kushal Nagar) & 76 (Muneshwara Nagar)	539.93	8.10
15	Pkg-15	Ward No: 77 (Devarajeevana Halli) & 78 (S.K.Garden), 79 (Sagayapuram) & 80 (Pulikeshi Nagar)	689.63	10.34
16	Pkg-16	Ward No: 132 (Dattatreya temple) & 133 (Gandhi Nagar)	543.45	8.15
17	Pkg-17	Ward No: 134 (Subhash Nagar), 135 (Okalipuram) & 136 (Binnipete)	726.70	10.90
18	Pkg-18	Ward No: 137 (Cottonpet) & 138 (Chikpete)	679.99	10.20
19	Pkg-19	Ward No: 147 (Agrahara Dasarahalli), 148 (Govindhraja Nagara), 149 (Kaveripura) & 152 (Moodalapalya)	812.31	12.18
20	Pkg-20	Ward No: 146 (Dr. Rajkumar), 150 (Marenahalli) & 151 (Maruthi Mandira)	636.18	9.54
21	Pkg-21	Ward No: 153 (Nagarabhavi), 154 (Chandra layout) & 155 (Nayandahalli)	625.89	9.39
22	Pkg-22	Ward No: 139 (Dayananda Nagara), 140 (Prakasha Nagara), 142 (Sri Rama mandira) & 143 (Shiva Nagara)	814.87	12.22
23	Pkg-23	Ward No: 141 (Rajaji Nagara), 144 (Basaveshwara Nagara) & 145 (Kamakshipalya)	627.03	9.40
24	Pkg-24	Ward No: 59 (Mathikere), 60 (Aramane Nagara) & 61 (Malleshwaram)	726.58	10.90
25	Pkg-25	Ward No: 62 (Subramanya Nagar), 63 (Gayathri Nagara), 64 (Kadu Malleshwara) & 65 (Rajmahal Guttahalli)	942.00	14.13
26	Pkg-26	Ward No: 50 (Marappanapalya), 53 (Nandhini layout) & 54 (Jaymaruthy Nagara)	723.69	10.85
27	Pkg-27	Ward No: 51 (Nagapura), 52 (Mahalakshmi Puram) & 55 (Punith Rajkumar)	663.59	9.95
28	Pkg-28	Ward No: 56 (Shankarmutt), 57 (Shakthi ganapathi Nagar) & 58 (Vrushabhavathi Nagar)	713.07	10.70
29	Pkg-29	Ward No: 167 (Jagajeevanaram Nagar) & 168 (Padarayanapura)	559.63	8.99
30	Pkg-30	Ward No: 165 (Chamrajpete) & 166 (Chalavadipalya)	686.64	10.30
31	Pkg-31	Ward No: 169 (Devaraj URS Nagara) & 170 (Ajad Nagara)	535.60	8.03
32	Pkg-32	Ward No: 171 (Sudham Nagar) & 172 (Dharamarayaswamy Temple)	840.41	12.61
33	Pkg-33	Ward No: 173 (Sunkenahalli) & 174 (Vishweshwarapuram)	631.64	9.47
34	Pkg-34	Ward No: 175 (Ashokapillar), 176 (Someshwara Nagar) & 177 (Hombegowda Nagar)	766.74	11.50
35	Pkg-35	Ward No: 210 (Basavanagudi), 211 (Hanumanth Nagar) & 213 (Sri Nagar)	617.70	9.26
36	Pkg-36	Ward No: 212 (Srinivasa Nagar), 214 (Giri Nagar), 215 (Katriguppe) & 216 (Vidyapeeta)	821.70	12.32
37	Pkg-37	Ward No: 156(K.P.Agrahara), 157 (Vijaya Nagar) & 158 (Hosahalli)	709.40	10.64
38	Pkg-38	Ward No: 159 (Hampi Nagara), 160 (Bapooji Nagar) & 161 (Attiguppe)	734.90	11.02
39	Pkg-39	Ward No: 162 (Gali Anjaneya Temple), 163 (Veerabhadra Nagara) & 164 (Avalahalli)	792.35	11.88
40	Pkg-40	Ward No: 200 (Yediyur) & 201 (Uma Maheshwara)	472.81	7.09
41	Pkg-41	Ward No: 202 (Ganesh mandhira) & 203 (Banashankari Temple)	510.39	7.65
42	Pkg-42	Ward No: 204 (K S Layout). 205 (Vikram Nagar) & 206 (Padhmanabha Nagar)	645.33	9.68
43	Pkg-43	Ward No: 207 (Kamakya Nagar), 208 (Deena Dayalu Nagar) & 209 (Hosakerehalli)	610.78	9.16
44	Pkg-44	Ward No: 194 (Gurappanapalya), 195 (Tilaka Nagara) & 196(Byrsandra)	646.42	9.70
45	Pkg-45	Ward No: 197 (Shakambari Nagar), 198 (JP Nagar) & 199 (Sarakki)	700.80	10.51
46	Pkg-46	Ward No: 185 (Ejipura) & 187 (Adugodi)	535.44	8.03
47	Pkg-47	Ward No: 186 (Koramangala) & 191 (Jakkasandra)	470.09	7.05
48	Pkg-48	Ward No: 189 (Sudduguntepalya) & 188 (Lakkasandra)	503.40	7.55
49	Pkg-49	Ward No: 190 (Madiwala), Ward No: 192 (BTM Layout) & 193 (N.S.Palya)	670.36	10.05
50	Pkg-50	Ward No: 229 (Ibluru), 230 (Agara) & 243 (Koodlu)	528.44	7.93
51	Pkg-51	Ward No: 231 (M.G.Palya), 232 (HSR-Singasandra) & 233 (Rupena agrahara)	675.04	10.13
52	Pkg-52	Ward No: 234 (Hongasandra), 235 (Bommanahalli) & 236 (Devara Chikanahalli)	718.33	10.77
53	Pkg-53	Ward No: 237 (Bilekahalli), 238 (Arakere) & 239 (Hulimavu)	615.98	9.24
54	Pkg-54	Ward No: 240 (Vinayaka Nagar), 241 (Puttenahalli-Sarakki lake) & 242 (Jaraganahalli)	604.01	9.06
55	Pkg-55	Ward No: 217 (Uttarahalli) & 218 (Subramanyapura)	557.19	8.36
56	Pkg-56	Ward No:219 (Vasanthpura), 220 (Yelachenahalli) & 221 (Konanakunte)	666.66	10.00
57	Pkg-57	Ward No: 222 (RBI Layout), 223 (Chunchagatta) & 224 (Anjanapura)	624.40	9.37
58	Pkg-58	Ward No: 227 (Begur) & 228 (Naganathapura)	537.85	8.07
59	Pkg-59	Ward No: 225 (Gottigere) & 226 (Kalena agrahara)	575.35	8.63
60	Pkg-60	Ward No: 16 (Kammagondanahalli), 17 (Shettihalli) & 20 (Mallasandra)	663.98	9.96
61	Pkg-61	Ward No: 18 (Bagalagunte), 19 (Defence Colony) & 21 (T.Dasarahalli)	596.44	8.95
62	Pkg-62	Ward No: 22 (Chokkasandra), 23 (Nelagadaranahalli) & 24 (Rajagopala Nagara)	607.22	9.11
63	Pkg-63	Ward No: 25 (Rajeshwari Nagara), 26 (Hegganahalli) & 27 (Sunkadakatte)	644.71	9.67
64	Pkg-64	Ward No: 104 (Kadugodi) & 105 (Belattur)	587.45	8.81
65	Pkg-65	Ward No: 106 (Hoody), 107 (Garudacharpalya) & 108 (Doddanekkundi)	859.60	12.89
66	Pkg-66	Ward No: 109 (A.E.C.S Layout) & 110 (Whitefield)	668.66	10.03
67	Pkg-67	Ward No:114 (Marathalli) & 113 (Munnekolalu)	585.91	8.79
68	Pkg-68	Ward No: 111 (Hagadur) & 112 (Varthur)	594.72	8.92
69	Pkg-69	Ward No: 115(Bellandur) & 116 (Doddakannalli)	579.85	8.70
70	Pkg-70	Ward No: 81 (Horamavu) & 82 (Babusabpalya)	507.22	7.60
71	Pkg-71	Ward No: 83 (Kalkere), 84 (Ramamurthy Nagara) & 85 (Vijinapura)	669.21	10.04
72	Pkg-72	Ward No: 86 (KR Puram), 87 (Medahalli) & 88 (Basavanapura)	646.69	9.70
73	Pkg-73	Ward No: 89 (Devasandra), 90(Mahadevapura) & 91 (A. Narayanapura)	616.71	9.25
74	Pkg-74	Ward No: 92(Vignana Nagara) & 93 (HAL Airport)	514.28	7.71
75	Pkg-75	Ward No: 28 (Doddabidarukallu) & 29 (Vidyamanya Nagar)	999.16	14.99
76	Pkg-76	Ward No: 30(Herohalli) & 31 (Doddagollarahatti)	796.01	11.94
77	Pkg-77	Ward No: 32 (Ullala) & 33 (Kengeri)	700.08	10.50
78	Pkg-78	Ward No: 34 (Bandematta) & 35 (Hemmigepura)	942.37	14.13
79	Pkg-79	Ward No: 37 (Chanakya), 38 (J P Park), 39 (Kanneshwara Rama) & 40 (Veera Madakari)	769.20	11.54
80	Pkg-80	Ward No: 36 (Chatrapati Shivaji), 41 (Peenya), 42 (Lakshmi Devi Nagara)	659.82	9.90
81	Pkg-81	Ward No: 43 (Ranadheera Kanteerava), 44 (Veera Sindhura Lakshmana) & 45 (Vijaya Nagar Krishna Devaraya)	747.71	11.22
82	Pkg-82	Ward No: 46 (Sir M Vishweshwaraiah) & 47 (Nalvadi Krishnaraja Wodayar Park)	783.50	11.75
83	Pkg-83	Ward No: 48 (Jnana Bharathi) & 49 (Rajarajeshwari Nagar)	895.11	13.43
84	Pkg-84	Ward No: 01 (Kempegowda) & 02 (Chowdeshwari)	449.78	6.75
85	Pkg-85	Ward No: 03 (Someshwara), 04 (Atturu Layout) & 05 (Yelahanka Satellite Town)	724.30	10.86
86	Pkg-86	Ward No: 06 (Kogilu) & 07 (Thanisandra)	529.43	7.94
87	Pkg-87	Ward No: 08 (Jakkur) & 09 (Amruthahalli)	520.18	7.80
88	Pkg-88	Ward No: 10 (Kempapura), 11 (Byatarayanapura) & 12 (Kodigehalli)	608.22	9.12
89	Pkg-89	Ward No: 13 (Doddabommasandra), 14 (Vidyaranyapura) & 15 (Kuvempu Nagara)	633.79	9.51

Cost of Tender Document: As per e-Portal, **Contract period:** 60 Months

NOTE:

1. Pre bid meeting will be held **on 12-10-2022 at 15:00 hours** in office of the Chief General Manager (Tech) BSWML, 1st Floor, UNI Buidling, Thimmaiah Road, Vasanth nagar, Bengaluru-560052.
2. Technical qualification documents along with necessary information/documents must be uploaded to the e-procurement portal **https://eproc.karnataka.gov.in** as per tender document **on or before 16:00 hours on 31-10-2022** and First Folder containing the Techno-Commercial tender will be opened through e-portal only **on 02-11-2022 after 16:30 hours** at the stipulated venue, in the presence of the Tenderers or their authorized representatives who wish to attend. If the office happens to be closed on the date of opening of the tenders as specified, the tenders will be opened on the next working day at the same time and venue.
3. The Employer shall not be liable for any delays due to system failure beyond its control. Even though the system will attempt to notify the Tenderers of any tender updates, the Employer shall not be liable for any information not received by the Tenderers. It is the Tenderer's responsibility to verify the e-procurement portal for the latest information related to the tender, E-mail address of the Helpdesk is hphelpdesk.blr@intarvo.com. E-procurement portal help desk telephone numbers are: 080-22371090/22373788. The tenderer is required to ensure browser capability of the computer well in advance to the last date and time for receipt of the tenders. The employer shall not be responsible for non-accessibility of e-procurement portal due to internet connectivity issues and technical glitches.
4. Any corrigendum/addendum will be published in the E-Procurement portal only.
5. GST shall be paid separately if applicable.

Time Schedule/Calendar of events: 1) Last Date & Time for uploading Qualification documents : **On 31-10-2022 upto 16:00 Hrs. 2)** Pre Bid Meeting : **On 12-10-2022 at 15.00 Hrs. 3)** Opening of Tender : **On 02-11-2022 at 16.30 Hrs.**

Sd/-
Chief General Manager (Tech)
BSWML

ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ

EXAM DH ಪ್ರಜಾವಾಣಿ MASTERMIND™

ಸ್ಪರ್ಧಾತ್ಮಕ ಪರೀಕ್ಷೆಯ ಮಾಹಿತಿಗಾಗಿ

ನಾಗರಿಕ ಸೇವಾ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಸಿದ್ಧಪಡಿಸಿರುವ ವಿಡಿಯೊ ಸಹಿತ ಸರಳಗನ್ನಡದ ವಿವರಣೆಗಳಿಗಾಗಿ ಪ್ರಜಾವಾಣಿ–ಡೆಕ್ಕನ್‌ಹೆರಾಲ್ಡ್‌ನ 'ಮಾಸ್ಟರ್‌ಮೈಂಡ್'ಗೆ ಚಂದಾದಾರರಾಗಿ. ಚಂದಾಕ್ಕಾಗಿ ಪಕ್ಕದಲ್ಲಿರುವ ಈ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

www.exammastermind.com

'ಎಸ್‌ಬಿಐ': 1673 ಪ್ರೊಬೆಷನರಿ ಆಫೀಸರ್ಸ್ ಹುದ್ದೆಗಳು

ಭಾರತೀಯ ಸ್ಟೇಟ್ ಬ್ಯಾಂಕ್ 1673 ಪ್ರೊಬೆಷನರಿ ಆಫೀಸರ್(ಪಿಒ) ಹುದ್ದೆಗಳ ಭರ್ತಿಗಾಗಿ ಅರ್ಜಿ ಆಹ್ವಾನಿಸಿದೆ. ಅರ್ಜಿ ಸಲ್ಲಿಕೆ ಪ್ರಕ್ರಿಯೆ ಮತ್ತು ನೇಮಕಾತಿಯಲ್ಲಿನ ಹೊಸ ನಿಯಮಗಳ ಕುರಿತು ಇಲ್ಲಿ ವಿವರಿಸಲಾಗಿದೆ

ಆರ್.ಕೆ ಬಾಲಚಂದ್ರ

ಪ್ರಸಕ್ತ ವರ್ಷ ಪ್ರಾದೇಶಿಕ ಗ್ರಾಮೀಣ ಬ್ಯಾಂಕ್, ರಾಷ್ಟ್ರೀಕೃತ ಬ್ಯಾಂಕ್‌ಗಳು ಹಾಗೂ ವಿಶೇಷವಾಗಿ ಭಾರತೀಯ ಸ್ಟೇಟ್ ಬ್ಯಾಂಕ್(ಎಸ್‌ಬಿಐ) ತಮ್ಮಲ್ಲಿ ಖಾಲಿ ಇರುವ ವಿವಿಧ ಹಂತದ ಹುದ್ದೆಗಳಿಗೆ ಅರ್ಜಿಯನ್ನು ಆಹ್ವಾನಿಸಿವೆ. ಎಸ್‌ಬಿಐ ಕಳೆದ ವಾರವಷ್ಟೇ ಜೂನಿಯರ್ ಅಸೋಸಿಯೇಟ್ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಿತ್ತು. ಈ ಹುದ್ದೆಗೆ ಅರ್ಜಿ ಸಲ್ಲಿಸುವ ಕೊನೆ ದಿನಾಂಕ ಪೂರ್ಣಗೊಳ್ಳುವುದರೊಳಗೆ, 1673 ಪ್ರೊಬೆಷನರಿ ಆಫೀಸರ್‌ಗಳು(ಪಿಒ) ಹುದ್ದೆಗಳ ಭರ್ತಿಗಾಗಿ ಅರ್ಜಿ ಆಹ್ವಾನಿಸಿದೆ.

ಭಾರತೀಯ ಸ್ಟೇಟ್ ಬ್ಯಾಂಕ್, ದೇಶದಾದ್ಯಂತವಿರುವ ತನ್ನ ಬ್ಯಾಂಕ್‌ನ ವಿವಿಧ ಶಾಖೆಗಳಲ್ಲಿ ಖಾಲಿ ಇರುವ 73 ಬ್ಯಾಕ್‌ಲಾಗ್ ಹುದ್ದೆಗಳೂ ಸೇರಿದಂತೆ 1673 ಪ್ರೊಬೆಷನರಿ ಆಫೀಸರ್ಸ್ ಹುದ್ದೆಗಳಿಗಾಗಿ ಅರ್ಜಿ ಆಹ್ವಾನಿಸಿದೆ. ಈ ಒಟ್ಟು ಹುದ್ದೆಗಳಲ್ಲಿ ಸಾಮಾನ್ಯ ವರ್ಗದವರಿಗೆ 648,ಆರ್ಥಿಕವಾಗಿ ದುರ್ಬಲ ವರ್ಗದವರಿಗೆ 160, ಪರಿಶಿಷ್ಟ ಜಾತಿಯವರಿಗೆ 270, ಪರಿಶಿಷ್ಟ ವರ್ಗಕ್ಕೆ 131 ಮತ್ತು ಹಿಂದುಳಿದ ವರ್ಗದವರಿಗೆ 464 ಹುದ್ದೆಗಳನ್ನು ಮೀಸಲಿಡಲಾಗಿದೆ. ಆಸಕ್ತರು ಬ್ಯಾಂಕ್‌ನ ಅಧಿಕೃತ ಜಾಲತಾಣದ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಕೆಗೆ ಅಕ್ಟೋಬರ್ 12 ಕೊನೆಯ ದಿನ.

ಶೈಕ್ಷಣಿಕ ಅರ್ಹತೆ

ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಯಾವುದೇ ವಿಷಯದಲ್ಲಿ ಪದವಿ ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರಬೇಕು. ಪದವಿ ಅಂತಿಮ ವರ್ಷ/ಸೆಮಿಸ್ಟರ್ ನಲ್ಲಿರುವವರು ತಾತ್ಕಾಲಿಕವಾಗಿ ಅರ್ಜಿ ಸಲ್ಲಿಸಬಹುದು. ಈ ರೀತಿ ಅರ್ಜಿ ಸಲ್ಲಿಸಿದವರಿಗೆ ಒಂದೊಮ್ಮೆ ಸಂದರ್ಶನಕ್ಕೆ ಕರೆ ಬಂದರೆ, ಡಿಸೆಂಬರ್ 31, 2022 ಅಥವಾ ಅದಕ್ಕಿಂತ ಮೊದಲು ಪದವಿ ಪರೀಕ್ಷೆ ಉತ್ತೀರ್ಣರಾಗಿರುವುದಕ್ಕೆ ಪುರಾವೆಗಳನ್ನು ಒದಗಿಸಬೇಕಾಗುತ್ತದೆ.

ಇಂಟಿಗ್ರೇಟೆಡ್ ಡ್ಯುಯಲ್ ಡಿಗ್ರಿ (ಐಡಿಡಿ) ಪ್ರಮಾಣಪತ್ರ ಹೊಂದಿರುವ ಅಭ್ಯರ್ಥಿಗಳೂ ಡಿಸೆಂಬರ್ 31, 2022 ಅಥವಾ ಅದಕ್ಕಿಂತ ಮುಂಚೆಯೇ ಈ ಕೋರ್ಸ್‌ನಲ್ಲಿ ಉತ್ತೀರ್ಣರಾಗಿರುವುದನ್ನು ದೃಢೀಕರಿಸಬೇಕು. ವೈದ್ಯಕೀಯ, ಎಂಜಿನಿಯರಿಂಗ್ ಚಾರ್ಟರ್ಡ್ ಅಕೌಂಟೆಂಟ್ ಅಥವಾ ಕಾಸ್ಟ್ ಅಕೌಂಟೆಂಟ್ ಪದವಿ ಪಡೆದವರೂ ಅರ್ಜಿ ಸಲ್ಲಿಸಬಹುದು.

ವಯೋಮಿತಿ

ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ಕನಿಷ್ಠ 21 ವರ್ಷ, ಗರಿಷ್ಠ 30 ವರ್ಷಗಳು (01.04.2022ಕ್ಕೆ ಅನ್ವಯವಾಗುವಂತೆ). ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ 5 ವರ್ಷಗಳು, ಒಬಿಸಿ ಅಭ್ಯರ್ಥಿಗಳಿಗೆ 3 ವರ್ಷಗಳು ಹಾಗೂ ಅಂಗವಿಕಲ ಅಭ್ಯರ್ಥಿಗಳಿಗೆ 10 ವರ್ಷಗಳಷ್ಟು ವಯೋಮಿತಿಯನ್ನು ವಿಸ್ತರಿಸಲಾಗಿದೆ.

ಕೆಟಗರಿ ಕೋಡ್ ಗಮನಿಸಿ: ಅರ್ಜಿಯಲ್ಲಿ 01 ರಿಂದ 25 ರವರೆಗೆ ಆಯಾ ವರ್ಗಕ್ಕೆ ಸಂಬಂಧಿಸಿದಂತೆ ಕೆಟಗರಿ ಕೋಡ್ ನೀಡಲಾಗಿದೆ. ಅಭ್ಯರ್ಥಿಗಳು ಅರ್ಜಿ ಭರ್ತಿ ಮಾಡುವ ವೇಳೆ, ಸಂಬಂಧಿಸಿದ ಕೋಡ್ ನಮೂದಿಸುವುದನ್ನು ಮರೆಯಬಾರದು.
ಅರ್ಜಿ ಶುಲ್ಕ: ಸಾಮಾನ್ಯ ಹಾಗೂ ಒಬಿಸಿ ಅಭ್ಯರ್ಥಿಗಳಿಗೆ ₹750 ಅರ್ಜಿ ಶುಲ್ಕ ನಿಗದಿಪಡಿಸಲಾಗಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಅಂಗವಿಕಲ ಅಭ್ಯರ್ಥಿಗಳಿಗೆ ಸಂಪೂರ್ಣ ಶುಲ್ಕ ವಿನಾಯಿತಿ ನೀಡಲಾಗಿದೆ.
ಶುಲ್ಕಪಾವತಿ: ನೋಂದಣಿ ನಂತರ ಅಭ್ಯರ್ಥಿಗಳು ಡೆಬಿಟ್ ಕಾರ್ಡ್/ಕ್ರೆಡಿಟ್ ಕಾರ್ಡ್/ಇಂಟರ್ನೆಟ್ ಬ್ಯಾಂಕಿಂಗ್ ಬಳಸಿ ಆನ್‌ಲೈನ್ ಮೂಲಕ ಅರ್ಜಿ ಶುಲ್ಕವನ್ನು ಪಾವತಿಸಬೇಕು.
ಅರ್ಜಿ ಸಲ್ಲಿಕೆ ವಿಧಾನ: ನಿಗದಿತ ಜಾಲತಾಣದ ಮೂಲಕ ಆನ್‌ಲೈನ್‌ನಲ್ಲೇ ಅರ್ಜಿ ಸಲ್ಲಿಸಬೇಕು.

ಬ್ಯಾಂಕಿಂಗ್ ನೇಮಕಾತಿ ಪರೀಕ್ಷೆ

ಪರೀಕ್ಷಾ ಪ್ರಕ್ರಿಯೆ

ಪೂರ್ವಭಾವಿ ಹಾಗೂ ಮುಖ್ಯ ಪರೀಕ್ಷೆ ಎರಡು ಲಿಖಿತ ಪರೀಕ್ಷೆಗಳು ಆನ್‌ಲೈನ್‌ನಲ್ಲೇ ನಡೆಯಲಿವೆ.
ಮೊದಲ ಹಂತ: ಪೂರ್ವಭಾವಿ ಪರೀಕ್ಷೆ – ಡಿಸೆಂಬರ್ 17ರಿಂದ 20, 2022ರವರೆಗೆ
ಎರಡನೇ ಹಂತ: ಮುಖ್ಯ ಪರೀಕ್ಷೆ – ಜನವರಿ- ಫೆಬ್ರುವರಿ– 2023.
ಮೂರನೇ ಹಂತ: ಸೈಕೋಮೆಟ್ರಿಕ್ ಪರೀಕ್ಷೆ (ಇದು ಈ ಬಾರಿಯಲ್ಲಾಗಿರುವ ಬದಲಾವಣೆ)

ಮೂರನೇ ಹಂತದಲ್ಲಿ ಶಾರ್ಟ್‌ಲಿಸ್ಟ್ ಆದ ಅಭ್ಯರ್ಥಿಗಳನ್ನು ಮುಂದೆ ಸಂದರ್ಶನಕ್ಕೆ ಆಯ್ಕೆ ಮಾಡಲು ಸೈಕೊಮೆಟ್ರಿಕ್ ಪರೀಕ್ಷೆ ನಡೆಸಲಾಗುತ್ತದೆ. ಇದೇ ಮೊದಲ ಬಾರಿಗೆ ಇಂಥದ್ದೊಂದು ಹೊಸ ಬದಲಾವಣೆ ತರಲಾಗಿದೆ. ಅಭ್ಯರ್ಥಿಗಳ ವ್ಯಕ್ತಿತ್ವ ಪ್ರೊಫೈಲಿಂಗ್‌ಗಾಗಿ ಬ್ಯಾಂಕ್ ಸೈಕೊಮೆಟ್ರಿಕ್ ಪರೀಕ್ಷೆಯನ್ನು ನಡೆಸುತ್ತಿದೆ. ಅಭ್ಯರ್ಥಿಗಳ ದೃಷ್ಟಿಕೋನವನ್ನು ಪರಿಶೀಲಿಸುವುದು ಇದರ ಉದ್ದೇಶ. ಈ ಸೈಕೊಮೆಟ್ರಿಕ್ ಪರೀಕ್ಷೆ, ಸಂದರ್ಶನ ಮತ್ತು ಗುಂಪು ಚರ್ಚೆ ಫೆಬ್ರುವರಿ / ಮಾರ್ಚ್ 2023ರಂದು ನಡೆಯಲಿದೆ.

ನೇಮಕ ಹೇಗೆ?

ಮೊದಲ ಹಂತದಲ್ಲಿ ಪೂರ್ವಭಾವಿ ಪರೀಕ್ಷೆ (ಪ್ರಿಲಿಮ್ಸ್) ನಡೆಯಲಿದೆ. ಬೆಳಗಾವಿ, ಬೆಂಗಳೂರು, ಬೀದರ್, ದಾವಣಗೆರೆ, ಧಾರವಾಡ ಕಲಬುರಗಿ, ಹಾಸನ, ಹುಬ್ಬಳ್ಳಿ, ಮಂಡ್ಯ, ಮಂಗಳೂರು, ಮೈಸೂರು, ಶಿವಮೊಗ್ಗ ಮತ್ತು ಉಡುಪಿಯಲ್ಲಿ ಪೂರ್ವಭಾವಿ ಪರೀಕ್ಷಾ ಕೇಂದ್ರಗಳಿರಲಿವೆ.

ಪೂರ್ವಭಾವಿ ಪರೀಕ್ಷೆ ವಿವರಗಳು

ಕ್ರಮ ಸಂಖ್ಯೆ	ವಿಷಯ	ಪ್ರಶ್ನೆ	ಅಂಕ	ಅವಧಿ (ನಿ.)
1	ಇಂಗ್ಲಿಷ್ ಭಾಷೆ	30	30	20
2	ನ್ಯೂಮರಿಕಲ್ ಎಬಿಲಿಟಿ	35	35	20
3	ರೀಸನಿಂಗ್ ಎಬಿಲಿಟಿ	35	35	20
	ಒಟ್ಟು	100	100	60

ಪ್ರತಿ ಪರೀಕ್ಷೆಯಲ್ಲೂ ಕನಿಷ್ಠ ಅಂಕ ಗಳಿಸಬೇಕೆಂಬ ನಿಯಮವಿಲ್ಲ. ಆದರೆ ಒಟ್ಟಾರೆ ಹೆಚ್ಚು ಅಂಕಗಳಿಸುವುದು ಮುಖ್ಯ. (ಆಯಾ ವರ್ಗಗಳಿಗೆ ಇರುವ ಹುದ್ದೆಗಳ ಸಂಖ್ಯೆಗಿಂತ 10 ಪಟ್ಟು (1:10 ಅನುಪಾತ) ಹೆಚ್ಚು ಅಭ್ಯರ್ಥಿಗಳನ್ನು ಮುಖ್ಯ ಪರೀಕ್ಷೆಗೆ ಆಯ್ಕೆ ಮಾಡಲಾಗುತ್ತದೆ)

ಈ ಪರೀಕ್ಷೆಯಲ್ಲಿ ಉತ್ತೀರ್ಣರಾದವರು ಮುಖ್ಯ ಪರೀಕ್ಷೆಗೆ ಅರ್ಹತೆ ಪಡೆಯುತ್ತಾರೆ. ಮುಖ್ಯ ಪರೀಕ್ಷೆಯು ಬೆಂಗಳೂರಿನಲ್ಲಿ ಮಾತ್ರ ನಡೆಯಲಿದೆ. ಎರಡು ಹಂತಗಳಲ್ಲಿ ಈ ಪರೀಕ್ಷೆ ನಡೆಯಲಿದೆ. ಮೂರು ಗಂಟೆಗಳ ಅವಧಿಯ ಈ ಪರೀಕ್ಷೆಯಲ್ಲಿ 200 ಅಂಕಗಳಿಗೆ 155 ಪ್ರಶ್ನೆಗಳನ್ನು ಕೇಳಲಾಗುತ್ತದೆ.

ಅರ್ಜಿ ಭರ್ತಿ ಮಾಡುವ ಮುನ್ನ

ಆನ್‌ಲೈನ್‌ನಲ್ಲಿ ಅರ್ಜಿ ಭರ್ತಿ ಮಾಡುವ ಮುನ್ನ ಅಧಿಸೂಚನೆಯನ್ನು ಪೂರ್ಣವಾಗಿ ಪರಿಶೀಲಿಸಿ. ಅದರಲ್ಲಿರುವ ಅರ್ಹತಾ ಮಾನದಂಡಗಳನ್ನು ನೀವು ಪೂರೈಸುತ್ತೀರಾ ಎಂಬುದನ್ನು ಖಚಿತಪಡಿಸಿಕೊಳ್ಳಿ. ಜೊತೆಗೆ, ಸಂವಹನದ ಉದ್ದೇಶಕ್ಕಾಗಿ ನಿಮ್ಮ ಇಮೇಲ್ ಐಡಿ ಮತ್ತು ಮೊಬೈಲ್ ಸಂಖ್ಯೆ ಐಡಿ ಪುರಾವೆ, ವಯಸ್ಸು, ಶೈಕ್ಷಣಿಕ ಅರ್ಹತೆ, ಇತ್ತೀಚಿನ ಫೋಟೊಗ್ರಾಫ್, ಇತ್ಯಾದಿ ದಾಖಲೆಗಳನ್ನು ಅಣಿಗೊಳಿಸಿಕೊಳ್ಳಿ. ನಿಮ್ಮ ವರ್ಗಕ್ಕೆ ಅನುಗುಣವಾಗಿ ಅರ್ಜಿ ಶುಲ್ಕವನ್ನು ಪಾವತಿಸಿ. ಅದರ ಮಾಹಿತಿ ಅಪ್ಲೋಡ್ ಮಾಡಿ.

ಎಲ್ಲಾ ಮಾಹಿತಿಯನ್ನು ಅರ್ಜಿಯಲ್ಲಿ ಭರ್ತಿ ಮಾಡಿದ ನಂತರ, ನಮೂದಿಸಿದ ವಿವರಗಳು ಸರಿಯಾಗಿವೆಯೇ ಎಂದು ಪರಿಶೀಲಿಸಿ. ಆ ನಂತರವೇ ಕಂಪ್ಯೂಟರ್‌ನಲ್ಲಿರುವ 'ಸಲ್ಲಿಸು' ಅಥವಾ Submit ಬಟನ್ ಕ್ಲಿಕ್ ಮಾಡಿ. ಅರ್ಜಿ ಸಲ್ಲಿಸಲು ಈ ವೆಬ್ ಲಿಂಕ್ ಬಳಸಿ: https://bank.sbi/careers or https://www.sbi.co.in/careers.

(ಲೇಖಕರು: ಬ್ಯಾಂಕಿಂಗ್ ಹಾಗೂ ವ್ಯಕ್ತಿತ್ವ ವಿಕಸನ ತರಬೇತುದಾರರು ಮತ್ತು ವೃತ್ತಿ ಮಾರ್ಗದರ್ಶಕರು, ಮಡಿಕೇರಿ)

ಪರೀಕ್ಷೆ ಬರೆಯುವ ಅವಕಾಶ

ಪ್ರತಿ ವರ್ಗಕ್ಕೆ ಇಂತಿಷ್ಟು ಬಾರಿ ಪರೀಕ್ಷೆ ಬರೆಯಬೇಕೆಂಬ ನಿಯಮವನ್ನು ವಿಧಿಸಲಾಗಿದೆ. ಆ ಪ್ರಕಾರ, ಸಾಮಾನ್ಯ ವರ್ಗ ಹಾಗೂ ಆರ್ಥಿಕ ದುರ್ಬಲ ವರ್ಗದ ಅಭ್ಯರ್ಥಿಗಳಿಗೆ ನಾಲ್ಕು ಬಾರಿ, ಒಬಿಸಿ ವರ್ಗದ ಅಭ್ಯರ್ಥಿಗಳಿಗೆ ಏಳು ಬಾರಿ ಅವಕಾಶ ನೀಡಲಾಗಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಅಂಗವಿಕಲ ಅಭ್ಯರ್ಥಿಗಳು ಎಷ್ಟು ಬಾರಿ ಬೇಕಾದರೂ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿದೆ.

ಗಮನಿಸಿ: ಏಪ್ರಿಲ್ 18, 2010ರಿಂದ ನಡೆದಿರುವ ಪರೀಕ್ಷೆಗಳ ಸಂಖ್ಯೆಯನ್ನು ಎಣಿಕೆ ಮಾಡಲಾಗುತ್ತದೆ. ಕೇವಲ ಪೂರ್ವಭಾವಿ ಪರೀಕ್ಷೆಯಷ್ಟನ್ನೇ ಎದುರಿಸಿ, ಮುಖ್ಯ ಪರೀಕ್ಷೆ ಬರೆಯದಿದ್ದರೆ ಅದನ್ನು 'ಅವಕಾಶ'ವೆಂದು ಪರಿಗಣಿಸಲಾಗುವುದಿಲ್ಲ. ಮುಖ್ಯ ಪರೀಕ್ಷೆ ಬರೆದಿದ್ದರೆ ಮಾತ್ರ ಅದನ್ನು ಒಂದು ಅವಕಾಶವೆಂದು ಪರಿಗಣಿಸಲಾಗುತ್ತದೆ.

(ಮುಂದಿನ ವಾರ :ಮುಖ್ಯ ಪರೀಕ್ಷೆಯಲ್ಲಿನ ವಿಷಯಗಳ ವಿವರ, ಯಾವ ಮಾಧ್ಯಮದಲ್ಲಿ ಪರೀಕ್ಷೆ ಬರೆಯುವುದು?)

ಉದ್ಯೋಗ ವಾರ್ತೆ

ಜಿಲ್ಲಾ ನ್ಯಾಯಾಧೀಶರ ಹುದ್ದೆಗಳು

ಕರ್ನಾಟಕ ಹೈಕೋರ್ಟ್ 16 ಜಿಲ್ಲಾ ನ್ಯಾಯಾಧೀಶರ ಹುದ್ದೆಗಳ ಭರ್ತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ. ಈ ಕುರಿತು ಸೆಪ್ಟೆಂಬರ್ 20, 2022 ರಂದು ಅಧಿಸೂಚನೆ ಹೊರಡಿಸಿದೆ.

ಅಭ್ಯರ್ಥಿಗಳು ಹೈಕೋರ್ಟ್ ಜಾಲತಾಣ http://karnatakajudiciary.kar.nic.in/recruitment.php – ಇದರ ಮೂಲಕ ಅರ್ಜಿ ಸಲ್ಲಿಸಬೇಕು. ಅರ್ಜಿ ಸಲ್ಲಿಸಲು ಅಕ್ಟೋಬರ್ 19, 2022 ಕೊನೆ ದಿನ.

ಶೈಕ್ಷಣಿಕ ಅರ್ಹತೆ: ● ಅಭ್ಯರ್ಥಿಯು ಯಾವುದೇ ಮಾನ್ಯತೆ ಪಡೆದ ವಿಶ್ವವಿದ್ಯಾಲಯಗಳಿಂದ ಕಾನೂನು ಪದವಿ (ಎಲ್‌ಎಲ್‌ಬಿ) ಪೂರ್ಣಗೊಳಿಸಿರಬೇಕು.

● ಹೈ ಕೋರ್ಟ್ ಅಥವಾ ಕೆಳ ಹಂತದ ನ್ಯಾಯಾಲಯಗಳಲ್ಲಿ ಕನಿಷ್ಠ 7 ವರ್ಷಗಳಿಂದ ವಕೀಲರಾಗಿ ಕಾರ್ಯನಿರ್ವಹಿಸುತ್ತಿರಬೇಕು.

ಗಮನಿಸಿ: ಈ ಹುದ್ದೆಗೆ ಅರ್ಜಿ ಸಲ್ಲಿಸುವ ಪಬ್ಲಿಕ್ ಪ್ರಾಸಿಕ್ಯೂಟರ್/ ಸಹಾಯಕ ಪಬ್ಲಿಕ್ ಪ್ರಾಸಿಕ್ಯೂಟರ್/ಸರ್ಕಾರಿ ವಕೀಲರು ಕನಿಷ್ಠ ಏಳು ವರ್ಷಗಳ ಕಾಲ ನಿರಂತರವಾಗಿ ತಮ್ಮ ಹುದ್ದೆಯಲ್ಲಿ ಕಾರ್ಯನಿರ್ವಹಿಸಿರಬೇಕು.

ವಯೋಮಿತಿ: ಗರಿಷ್ಠ ವಯೋಮಿತಿ (19 ಅಕ್ಟೋಬರ್ 2022) 45 ವರ್ಷಗಳು. ಎಸ್.ಸಿ, ಎಸ್.ಟಿ ಅಭ್ಯರ್ಥಿಗಳಿಗೆ 3 ವರ್ಷಯ ವಯೋಮಿತಿ ಸಡಿಲಿಕೆ ಇದೆ.

ಅರ್ಜಿ ಶುಲ್ಕ: ಪೂರ್ವಭಾವಿ ಪರೀಕ್ಷಾ ಶುಲ್ಕ: ಸಾಮಾನ್ಯ ಅಭ್ಯರ್ಥಿಗಳಿಗೆ ₹500. ಎಸ್.ಸಿ/ ಎಸ್.ಟಿ/ಪ್ರವರ್ಗ 1ರ ಅಭ್ಯರ್ಥಿಗಳಿಗೆ ₹250

ಮುಖ್ಯ ಪರೀಕ್ಷಾ ಶುಲ್ಕ : ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ₹ 1ಸಾವಿರ, ಎಸ್.ಸಿ/ ಎಸ್.ಟಿ/ಪ್ರವರ್ಗ 1ರ ಅಭ್ಯರ್ಥಿಗಳಿಗೆ ₹750/-

ಶುಲ್ಕ ಪಾವತಿ ವಿಧಾನ : ಅಭ್ಯರ್ಥಿಗಳು ಅರ್ಜಿಯನ್ನು ಆನ್‌ಲೈನ್ ಮೂಲಕ ಸಲ್ಲಿಸುವಂತೆ, ಅರ್ಜಿ ಶುಲ್ಕವನ್ನು ರಾಜ್ಯ ಹೈಕೋರ್ಟ್‌ನ ಅಧಿಕೃತ ಜಾಲತಾಣದಲ್ಲಿ (http://karnatakajudiciary.kar.nic.in/distJudges2022.php) ನಿಗದಿಪಡಿಸಿರುವ ಸ್ಟೇಟ್‌ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ಮೂಲಕ ಪಾವತಿಸಬಹುದು. ಇಲ್ಲವೇ, ಜಾಲತಾಣದಲ್ಲಿರುವ ಎಸ್‌ಬಿಐ ಬ್ಯಾಂಕ್ ಚಲನ್ ಡೌನ್‌ಲೋಡ್ ಮಾಡಿಕೊಂಡು, ಸಮೀಪದ ಯಾವುದೇ ಬ್ಯಾಂಕ್‌ನ ಶಾಖೆಯ ಮೂಲಕ ಶುಲ್ಕವನ್ನು ಪಾವತಿಸಬಹುದು. ಅರ್ಜಿ ಶುಲ್ಕ ಪಾವತಿಸಲು ಅಕ್ಟೋಬರ್ 21,2022 ಕೊನೆ ದಿನ.

ಜಲ ಸಂಪನ್ಮೂಲ ಇಲಾಖೆ– 155 ಎಸ್‌ಡಿಎ ಹುದ್ದೆಗಳು

ಕರ್ನಾಟಕ ಜಲ ಸಂಪನ್ಮೂಲ ಇಲಾಖೆಯಲ್ಲಿ ಖಾಲಿ ಇರುವ ದ್ವಿತೀಯ ದರ್ಜೆ ಸಹಾಯಕ (SDA) ಹುದ್ದೆಗಳ ನೇಮಕಾತಿಗೆ ಅಧಿಸೂಚನೆ ಬಿಡುಗಡೆ ಮಾಡಲಾಗಿದೆ.

ಹುದ್ದೆಗಳು ಬ್ಯಾಕ್‌ಲಾಗ್ (ಎಸ್‌ಸಿ) ಹುದ್ದೆಗಳಾಗಿರುತ್ತೇವೆ. ಆಸಕ್ತಿ ಇರುವ, ದ್ವಿತೀಯ ಪಿಯು ಪಾಸಾದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು.

ಹುದ್ದೆಗಳ ಹೆಸರು : ದ್ವಿತೀಯ ದರ್ಜೆ ಸಹಾಯಕ (ಎಸ್‌ಡಿಎ)
ಹುದ್ದೆಗಳ ಸಂಖ್ಯೆ : 155
ಶೈಕ್ಷಣಿಕ ಅರ್ಹತೆ: ದ್ವಿತೀಯ ಪಿಯುಸಿ /12ನೇ ತರಗತಿ ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರಬೇಕು.
ವೇತನ ಶ್ರೇಣಿ : ₹21,400 ರಿಂದ ₹ 42,000
ವಯಸ್ಸು: ಕನಿಷ್ಠ 18 ವರ್ಷ, ಗರಿಷ್ಠ 40 ವರ್ಷ
ಅರ್ಜಿ ಸಲ್ಲಿಸಲು ಕೊನೆ ದಿನಾಂಕ: 25-10-2022 ನೇಮಕಾತಿ ಕುರಿತ ಹೆಚ್ಚಿನ ಮಾಹಿತಿಗೆ ಈ ಕೆಳಗೆ ನೀಡಿರುವ ಅಧಿಸೂಚನೆಯನ್ನು ನೋಡಬಹುದು: https://bit.ly/3RduMD4 ವೆಬ್‌ಸೈಟ್: https://waterresources.karnataka.gov.in/

ಮಾದರಿ ಪ್ರಶ್ನೋತ್ತರ

ಕೆಪಿಎಸ್‌ಸಿ ಗ್ರೂಪ್ 'ಸಿ'ಯ ವಿವಿಧ ಹುದ್ದೆಗಳು, ಕೆಎಸ್‌ಆರ್‌ಪಿ ಆ್ಯಂಡ್ ಐಆರ್‌ಬಿಯ ಸಬ್‌ಇನ್‌ಸ್ಪೆಕ್ಟರ್ ಹಾಗೂ ಕೆಎಸ್‌ಐಎಸ್‌ಎಫ್‌ನ ಸಬ್ ಇನ್‌ಸ್ಪೆಕ್ಟರ್ ಹುದ್ದೆಗಳ ನೇಮಕಾತಿಗಾಗಿ ಶೀಘ್ರದಲ್ಲೇ ಸ್ಪರ್ಧಾತ್ಮಕ ಪರೀಕ್ಷೆಗಳು ನಡೆಯಲಿವೆ. ಈ ಮೂರು ಪರೀಕ್ಷೆಗಳಲ್ಲಿರುವ 'ಸಾಮಾನ್ಯ ಜ್ಞಾನ' ವಿಷಯಕ್ಕೆ ಸಂಬಂಧಿಸಿದ ಮಾದರಿ ಪ್ರಶ್ನೋತ್ತರಗಳನ್ನು ಇಲ್ಲಿ ನೀಡಲಾಗಿದೆ.

ಸಾಮಾನ್ಯ ಜ್ಞಾನ

1) ಚಿರತೆ ಮತ್ತು ಚೀತಾ ನಡುವಿನ ವ್ಯತ್ಯಾಸಗಳನ್ನು ಗುರುತಿಸಿ

1. ಚಿರತೆಗಳು ತಮ್ಮ ಕಣ್ಣುಗಳಲ್ಲಿ ಹೆಚ್ಚಿನ ಸಂಖ್ಯೆಯ ಬೆಳಕಿನ ಸಂವೇದನಾಶೀಲ ಕೋಶಗಳನ್ನು ಹೊಂದಿವೆ ಹಾಗೂ ಕಣ್ಣಿನ ಪಾಪೆ ಕೂಡ ದೊಡ್ಡದಾಗಿದೆ. ಇದರಿಂದ ಚಿರತೆಗಳಿಗೆ ರಾತ್ರಿ ವೇಳೆಯೂ ಕಣ್ಣು ಚೆನ್ನಾಗಿ ಕಾಣಿಸುತ್ತದೆ. ಅವು ಕತ್ತಲೆಯಲ್ಲಿ ಚಲನೆ ಮತ್ತು ಆಕಾರವನ್ನು ಗುರುತಿಸಿ ಸುಲಭವಾಗಿ ಬೇಟೆಯಾಡುತ್ತವೆ. ಆದರೆ ಚೀತಾಗಳಿಗೆ ರಾತ್ರಿ ವೇಳೆ ಅಷ್ಟಾಗಿ ಕಣ್ಣು ಕಾಣುವುದಿಲ್ಲ ಹೀಗಾಗಿ ರಾತ್ರಿ ವೇಳೆ ಬೇಟೆ ಆಡುವುದಿಲ್ಲ.

2. ಚೀತಾಗಳು ಅತ್ಯಂತ ವೇಗವಾಗಿ ಓಡುವ ಪ್ರಾಣಿಗಳಾಗಿವೆ. ಅವು ಗಂಟೆಗೆ 120 ಕಿ.ಮೀ ವೇಗದಲ್ಲಿ ಓಡುತ್ತವೆ. ಆದರೆ ಚಿರತೆಗಳು 58 ಕಿ.ಮೀ ವೇಗದಲ್ಲಿ ಓಡುತ್ತವೆ.

3. ಚೀತಾ ಕಾಲುಗಳು ಚಿರತೆ ಕಾಲುಗಳಿಂತಲೂ ಉದ್ದ ಇವೆ.

4. ಚೀತಾಗಳು ಗಾತ್ರದಲ್ಲಿ ಚಿರತೆಗಳಿಗಿಂತ ದೊಡ್ಡದಾಗಿವೆ, ಆದರೆ ಇವು ಚಿರತೆಯಷ್ಟು ಬಲಶಾಲಿಯಾಗಿಲ್ಲ.

ಉತ್ತರ ಸಂಕೇತಗಳು
ಎ)1, 2 ಮತ್ತು 3ನೇ ಹೇಳಿಕೆ ಮಾತ್ರ ಸರಿಯಾಗಿದೆ.
ಬಿ 2, 3 ಮತ್ತು 4ನೇ ಹೇಳಿಕೆ ಮಾತ್ರ ಸರಿಯಾಗಿದೆ.
ಸಿ)1ಮತ್ತು 3ನೇ ಹೇಳಿಕೆ ಮಾತ್ರ ಸರಿಯಾಗಿದೆ
ಡಿ)1ರಿಂದ 4ರವರೆಗೆ ಎಲ್ಲ ಹೇಳಿಕೆಗಳು ಸರಿಯಾಗಿವೆ

ಉತ್ತರ: ಡಿ

2) ರೆಡಾರ್‌ಗಳನ್ನು ಕಣ್ಣು ತಪ್ಪಿಸಿ ಸಂಚರಿಸುವ ಸಾಮರ್ಥ್ಯವುಳ್ಳ ಭಾರತೀಯ ನೌಕಾಪಡೆಯ ಸ್ಟೆಲ್ತ್ ಫ್ರಿಗೇಟ್ ನೌಕೆಯಾದ ತಾರಾಗಿರಿಯನ್ನು ಅರಬ್ಬಿ ಸಮುದ್ರದಲ್ಲಿ ನೀರಿಗೆ ಇಳಿಸಲಾಗಿದೆ. ಇದು ನೀರಿಗಿಳಿಯುತ್ತಿರುವ (ಇದೇ ಮಾದರಿಯ) ಮೂರನೇ ನೌಕೆಯಾಗಿದೆ. ಹಾಗಾದರೆ ಇದೇ ಮಾದರಿಯ ಮೊದಲ ನೌಕೆಯ ಹೆಸರೇನು?
ಎ) ಉದಯಗಿರಿ, ಬಿ) ಹೇಮಗಿರಿ ಸಿ) ನೀಲಗಿರಿ ಡಿ) ರಾಜಗಿರಿ

ಉತ್ತರ: ಸಿ

3) ರಾಜ್ಯ ಮಾನವ ಹಕ್ಕುಗಳ ಆಯೋಗವು ಸಜಾ ಬಂಧಿಗಳು ಹಾಗೂ ವಿಚಾರಣಾಧೀನ ಕೈದಿಗಳ ಆರೋಗ್ಯ ರಕ್ಷಣೆಗಾಗಿ ಹಲವಾರು ಶಿಫಾರಸುಗಳನ್ನು ಮಾಡಿವೆ. ಆ ಹಿನ್ನೆಲೆಯಲ್ಲಿ ಕೆಳಗಿನ ಹೇಳಿಕೆಗಳನ್ನು ಗಮನಿಸಿ

1) ಎಲ್ಲಾ ಕಾರಾಗೃಹ ಅಧಿಕಾರಿಗಳು ಕೈದಿಗಳಿಗೆ ಸ್ಥಳೀಯ ಆರೋಗ್ಯಾಧಿಕಾರಿಗಳಿಂದ ಅಥವಾ ಸರ್ಕಾರಿ ಆಸ್ಪತ್ರೆಗಳಲ್ಲಿ ನಿಯಮಿತ ಆರೋಗ್ಯ ತಪಾಸಣೆ ಮಾಡಿಸಬೇಕು.

2) ಬಂಧಿತರ ಆರೋಗ್ಯ ಕಾರ್ಡ್ ಸಿದ್ದಪಡಿಸಬೇಕು. ಮನೋವೈದ್ಯರಿಂದ ಸಮಾಲೋಚನೆ ನಡೆಸಬೇಕು,

3) ಯೋಗ ವ್ಯಾಯಾಮದಲ್ಲಿ ತೊಡಗಿಸಿಕೊಳ್ಳಲು ಪ್ರೋತ್ಸಾಹಿಸಬೇಕು. ಓದು ಹಾಗೂ ಬರೆಯುವ ಹವ್ಯಾಸ ಉಳ್ಳವರಿಗೆ ಅಗತ್ಯ ಸಾಮಗ್ರಿ ಒದಗಿಸಬೇಕು.

ಉತ್ತರ ಸಂಕೇತಗಳು
ಎ)1 ಮತ್ತು 2ನೇ ಹೇಳಿಕೆ ಮಾತ್ರ ಸರಿಯಾಗಿದೆ.
ಬಿ) 2 ಮತ್ತು 3ನೇ ಹೇಳಿಕೆ ಮಾತ್ರ ಸರಿಯಾಗಿದೆ.
ಸಿ) 1 ಮತ್ತು 3ನೇ ಹೇಳಿಕೆ ಮಾತ್ರ ಸರಿಯಾಗಿದೆ
ಡಿ) 1 ರಿಂದ 3ವರೆಗೆ ಎಲ್ಲ ಹೇಳಿಕೆಗಳು ಸರಿಯಾಗಿವೆ

ಉತ್ತರ: ಡಿ

4) ರಸ್ತೆ ಅಪಘಾತಗಳಲ್ಲಿ ಸಂಭವಿಸುವ ಸಾವು ಮತ್ತು ಗಾಯಾಳುಗಳಾಗುವುದನ್ನು ತಗ್ಗಿಸುವುದಕ್ಕೆ ಸಂಬಂಧಿಸಿದಂತೆ ವಿಶ್ವ ಆರೋಗ್ಯ ಸಂಸ್ಥೆಯ ಮಾರ್ಗ ಸೂಚಿಗಳನ್ನು ಬಿಡುಗಡೆ ಮಾಡಿದೆ. ಆ ಹಿನ್ನೆಲೆಯಲ್ಲಿ ಹೇಳಿಕೆಗಳನ್ನು ಗಮನಿಸಿ.

1) ಬೈಕ್ ಸವಾರರು ಪೂರ್ತಿಯಾಗಿ ಮುಖ ಮುಚ್ಚುವ ಹೆಲ್ಮೆಟ್ ಧರಿಸುವುದರಿಂದ ಮಾರಣಾಂತಿಕ ಗಾಯಗಳಾಗುವ ಪ್ರಮಾಣ ಶೇ 64ರಷ್ಟು ತಗ್ಗುತ್ತದೆ, ಮಿದುಳಿಗೆ ಪೆಟ್ಟಾಗುವ ಪ್ರಮಾಣ ಶೇ 74ರಷ್ಟು ಕಡಿಮೆಯಾಗುತ್ತದೆ.

2) 2030ರ ಹೊತ್ತಿಗೆ ರಸ್ತೆ ಅಪಘಾತಗಳಿಂದಾಗುವ ಪ್ರಮಾಣವನ್ನು ಶೇ 50ಕ್ಕೆ (ಈಗ ಆಗುತ್ತಿರುವುದಕ್ಕೆ ಹೋಲಿಸಿ) ಕಡಿಮೆ ಮಾಡಬೇಕಾಗಿದೆ. ಅದಕ್ಕಾಗಿ ಎಲ್ಲಾ ರಾಷ್ಟ್ರಗಳು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ.

ಮೇಲಿನ ಹೇಳಿಕೆಗಳ ಪೈಕಿ ಯಾವ ಹೇಳಿಕೆಗಳು ಸರಿಯಾಗಿವೆ?

ಉತ್ತರ ಸಂಕೇತಗಳು
ಎ) 1ನೇ ಹೇಳಿಕೆ ಮಾತ್ರ ಸರಿಯಾಗಿದೆ. ಬಿ) 2ನೇ ಹೇಳಿಕೆ ಮಾತ್ರ ಸರಿಯಾಗಿದೆ.
ಸಿ) 1 ಮತ್ತು 2 ಹೇಳಿಕೆ ಸರಿಯಾಗಿವೆ ಡಿ) 1 ರಿಂದ 2 ಹೇಳಿಕೆಗಳು ತಪ್ಪಾಗಿವೆ

ಉತ್ತರ: ಸಿ

5) ಶಾಂಘೈ ಸಹಕಾರ ಸಂಘಟನೆಯಲ್ಲಿ ಭಾರತ, ಚೀನಾ, ರಷ್ಯಾ, ಕಜಕಿಸ್ತಾನ ಸೇರಿದಂತೆ 8 ರಾಷ್ಟ್ರಗಳಿವೆ. ಇದು ವಿಶ್ವದ ಅತಿದೊಡ್ಡ ಪ್ರಾದೇಶಿಕ ಸಂಘಟನೆಯಾಗಿದೆ. ಜಗತ್ತಿನ ಶೇ 40ರಷ್ಟು ಜನರು ಈ ಸಂಘಟನೆಯ ವ್ಯಾಪ್ತಿಗೆ ಒಳಪಡುತ್ತಾರೆ. ವಿಶ್ವದ ಒಟ್ಟು ಜಿಡಿಪಿಯಲ್ಲಿ ಶೇ.......ರಷ್ಟನ್ನು ಇದು ಹೊಂದಿದೆ.
ಎ) 30 ಬಿ) 50 ಸಿ) 80 ಡಿ) 20

ಉತ್ತರ: ಎ

6) ನಮ್ಮ ರಾಜ್ಯದಲ್ಲಿ ....ಕೆರೆಗಳಿಗೆ ಸೇರಿದ 50 ಸಾವಿರಕ್ಕೂ ಹೆಚ್ಚು ಎಕರೆ ಜಮೀನು ಒತ್ತುವರಿಯಾಗಿದೆ. ಅದರಲ್ಲಿ 21 ಸಾವಿರ ಕೆರೆಗಳಲ್ಲಿ ಒತ್ತುವರಿಯನ್ನು ಅಳತೆಯನ್ನೇ ಮಾಡಿಲ್ಲ.
ಎ) 40 ಸಾವಿರ ಬಿ) 50 ಸಾವಿರ ಸಿ) 10 ಸಾವಿರ ಡಿ) 60 ಸಾವಿರ

ಉತ್ತರ: ಎ

7) ಹೊಂದಿಸಿ ಬರೆಯಿರಿ

ಪಟ್ಟಿ:1	ಪಟ್ಟಿ : 2
ಎ) ಸತಿ ಸಹಗಮನ ನಿಷೇಧ	1) ರಾಜಾರಾಮ್‌ಮೋಹನ್ ರಾಯ್
ಬಿ) ಹೆಣ್ಣು ಮಕ್ಕಳಿಗೆ ಪ್ರೌಢ ಶಾಲೆ	2) ದಯಾನಂದ ಸರಸ್ವತಿ
ಸಿ) ಇಂಗ್ಲಿಷ್ ಶಿಕ್ಷಣ ಅಗತ್ಯ	3) ವಿಲಿಯಂ ಬೆಂಟಿಂಕ್
ಡಿ) ವೇದಗಳಿಗೆ ಹಿಂದಿರುಗಿ	4) ಎಂ. ಜಿ. ರಾನಡೆ

ಉತ್ತರ ಸಂಕೇತಗಳು
ಎ) ಎ-1, ಬಿ-4, ಸಿ-2, ಡಿ-3 ಬಿ) ಎ-4, ಬಿ-1, ಸಿ-2, ಡಿ-3
ಸಿ) ಎ-2, ಬಿ-3, ಸಿ-4, ಡಿ-1 ಡಿ) ಎ-3, ಬಿ-4, ಸಿ-1, ಡಿ-2

ಉತ್ತರ: ಡಿ

(ಮಾಹಿತಿ: Spardha Bharati UPSC ಯೂಟ್ಯೂಬ್ ಚಾನೆಲ್)

ನಿಮಗಿದು ಗೊತ್ತೇ?

ಭೌತವಿಜ್ಞಾನಿ ಚಂದ್ರಶೇಖರ್ ಕೊಡುಗೆ

ಡಾ. ಸುಬ್ರಮಣಿಯನ್ ಚಂದ್ರಶೇಖರ್ ವಿಶ್ವವಿಖ್ಯಾತ ಖಗೋಳ ಭೌತವಿಜ್ಞಾನಿ. ಖಗೋಳವಿಜ್ಞಾನದಲ್ಲಿ ನಡೆಸಿದ ಅಸಾಧಾರಣ ಸಂಶೋಧನೆಗಾಗಿ ಚಂದ್ರಶೇಖರ್ ಅವರಿಗೆ1983ರಲ್ಲಿ ನೊಬೆಲ್ ಪಾರಿತೋಷಕ ನೀಡಿ ಗೌರವಿಸಲಾಗಿತ್ತು. ಚಂದ್ರಶೇಖರ್ ಅವರು ಈ ಪಾರಿತೋಷಕವನ್ನು ಅಮೆರಿಕದ ಪ್ರೊಫೆಸರ್ ವಿಲಿಯಮ್ ಫೌಲರ್(William Alfred Fowler) ಅವರೊಂದಿಗೆ ಹಂಚಿಕೊಂಡಿದ್ದರು.

ನೊಬೆಲ್ ಪುರಸ್ಕೃತ ವಿಜ್ಞಾನಿ ಡಾ.ಸಿ.ವಿ. ರಾಮನ್ ಅವರ ಸೋದರನ ಪುತ್ರ ಡಾ.ಎಸ್. ಚಂದ್ರಶೇಖರ್ ಅವರು 1910ರ ಅಕ್ಟೋಬರ್19ರಂದು ಇಂದಿನ ಪಾಕಿಸ್ತಾನದಲ್ಲಿರುವ ಲಾಹೋರ್‌ನಲ್ಲಿ ಜನಿಸಿದರು. ಮದ್ರಾಸ್‌ನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಅವರು ಶಿಕ್ಷಣ ಪಡೆದರು. ಅನಂತರ ಕೇಂಬ್ರಿಡ್ಜ್ ಟ್ರಿನಿಟಿ ಕಾಲೇಜಿನಲ್ಲಿ ಡಾಕ್ಟರೇಟ್ ಪದವಿ ಪಡೆದರು. 1933 ರಿಂದ 1937ರ ವರೆಗೆ ತಾರೆಗಳ ವಿಕಾಸದ(Stellar evolution) ಬಗ್ಗೆ ಅಧ್ಯಯನ ನಡೆಸಿದರು. 24ನೇ ವಯಸ್ಸಿನಲ್ಲೇ ಟ್ರಿನಿಟಿ ಕಾಲೇಜಿನ ಫೆಲೊ ಆದರು. ಹೀಗೆ ಕಿರಿಯ ವಯಸ್ಸಿನಲ್ಲೆ ಅವರ ಪ್ರತಿಭೆ ಬೆಳಕಿಗೆ ಬಂತು. 25ನೇ ವಯಸ್ಸಿನಲ್ಲಿ ಶಿಥಿಲಗೊಳ್ಳುತ್ತಿದ್ದ ತಾರೆಗಳ ಒಂದು ಸಿದ್ಧಾಂತವನ್ನು ಅವರು ಮಂಡಿಸಿ ಇಡೀ ವಿಶ್ವವನ್ನೆ ಚಕಿತಗೊಳಿಸಿದರು.

1939ರಲ್ಲಿ ಅವರು ಬರೆದ 'ಅನ್ ಇಂಟ್ರೊಡಕ್ಷನ್ ಟು ದಿ ಸ್ಟಡಿ ಆಫ್ ಸ್ಟೆಲ್ಲರ್ ಸ್ಟ್ರಕ್ಚರ್' (An Introduction to the study of stellar structure) ಎಂಬ ಪುಸ್ತಕ, ಈಗಲೂ ವಿಶ್ವಾದ್ಯಂತ ಆಕರ ಗ್ರಂಥವಾಗಿ ಬಳಕೆಯಾಗುತ್ತಿದೆ. ಇವರ ಇನ್ನೊಂದು ಪ್ರಸಿದ್ಧ ಪುಸ್ತಕವೆಂದರೆ 'ದಿ ಮೆಥೆಮೆಟಿಕಲ್ ಥಿಯರಿ ಆಫ್ ಬ್ಲಾಕ್ ಹೋಲ್ಸ್' (The Mathematical Theory of Black Holes (1983). ಇದಲ್ಲದೇ Principles of Stellar Dynamics (1942), Radiative Transfer (1950), Hydrodynamic and Hydromagnetic Stability (1961), Truth and Beauty: Aesthetics and Motivations in Science (1987), and Newton's Principia for the Common Reader(1995) ಮತ್ತಿತರ ಕೃತಿಗಳನ್ನು ಬರೆದಿದ್ದಾರೆ

ವೈಟ್ ಡ್ವಾರ್ಫ್‌ಸ್(White Dwarfs) ಬಗ್ಗೆ ಅವರು ಕಂಡುಹಿಡಿದಿರುವ ಅಂಶಗಳು ವಿಶ್ವ ವಿಖ್ಯಾತವಾಗಿವೆ. 'ಚಂದ್ರಶೇಖರ್ ಲಿಮಿಟ್' (Chandrashekar Limit) ಎಂದು ಹೆಸರು ಪಡೆದಿರುವ ತಾರೆಗಳಿಗೆ ಸಂಬಂಧಿಸಿದ ಇವರ ಶೋಧನೆಯು ಹೊಸ ಯುಗಾರಂಭಕ್ಕೆ ನಾಂದಿಯಾಯಿತೆಂದರೂ ಅತಿಶಯವಿಲ್ಲ.

1973ರಲ್ಲಿ ಡಾ.ಚಂದ್ರಶೇಖರ್ ಅವರನ್ನು ನೊಬೆಲ್ ಪಾರಿತೋಷಕ ನೀಡುವ ಸ್ವೀಡನ್ನಿನ ಅಕಾಡೆಮಿಯ ಸದಸ್ಯರನ್ನಾಗಿ ಮಾಡಲಾಯಿತು. ಅವರು 1985ರಲ್ಲಿ ಇಹಲೋಕ ಯಾತ್ರೆಯನ್ನು ಮುಗಿಸಿದರು.

ವಿವರಣಾತ್ಮಕ ಓದಿಗೆ ಸ್ಕ್ಯಾನಿಂಗ್

ಆರ್.ಬಿ.ಗುರುಬಸವರಾಜ

ಓದಿನ ತಂತ್ರ

ಕೆಲವೊಂದು ಪಠ್ಯವನ್ನು ಕೇವಲ ಮೇಲ್ನೋಟಕ್ಕೆ ಓದುವುದಿಲ್ಲ. ಅದನ್ನು ವಿವರವಾಗಿ ಓದುವ ಅಗತ್ಯವಿರುತ್ತದೆ. ವಿವರವಾದ ಓದಿನ ತಂತ್ರವೇ ಸ್ಕ್ಯಾನಿಂಗ್. ವೈದ್ಯಕೀಯ ಕ್ಷೇತ್ರದಲ್ಲಿ ದೇಹದ ನಿರ್ದಿಷ್ಟ ಭಾಗದ ಸಂಪೂರ್ಣ ಮಾಹಿತಿ ತಿಳಿಯಲು ಸ್ಕ್ಯಾನಿಂಗ್ ಮಾಡಲಾಗುತ್ತದೆ. ಅಂತೆಯೇ ಪಠ್ಯದಲ್ಲಿನ ನಿರ್ದಿಷ್ಟ ಮಾಹಿತಿಯನ್ನು ಹುಡುಕಲು ಅದನ್ನು ವಿವರವಾಗಿ ಓದುವುದೇ ಸ್ಕ್ಯಾನಿಂಗ್. ಸ್ಕಿಮ್ಮಿಂಗ್ ಓದಿನ ತಂತ್ರದಲ್ಲಿ ಸಾಮಾನ್ಯ ಮಾಹಿತಿ ಮತ್ತು ಪ್ರಮುಖ ಅಂಶಗಳನ್ನು ಹುಡುಕಿದರೆ, ಸ್ಕ್ಯಾನಿಂಗ್ ತಂತ್ರದಲ್ಲಿ ನಿರ್ದಿಷ್ಟ ಮಾಹಿತಿಯನ್ನು ಹುಡುಕುವುದಾಗಿದೆ.

ಸ್ಕ್ಯಾನಿಂಗ್, ಪೂರ್ವ ಓದುವಿಕೆಯ ಒಂದು ರೂಪವಾಗಿದೆ. ಜನಪ್ರಿಯ SQ3R(survey, question, read, recite, and review) ವಿಧಾನದಲ್ಲಿ, ಅಂದರೆ ಸಮೀಕ್ಷೆ, ಪ್ರಶ್ನೆ, ಓದುವಿಕೆ, ಪಠಣ ಮತ್ತು ವಿಮರ್ಶೆ ವಿಧಾನಗಳ ಸಂಗಮವಾಗಿದೆ. ಪಠ್ಯವನ್ನು ಸ್ಕ್ಯಾನ್ ಮಾಡುವುದರಿಂದ ಸಾಮಾನ್ಯ ಕಲ್ಪನೆಯು ನಿರ್ದಿಷ್ಟ ಪರಿಕಲ್ಪನೆಯಾಗಿ ಪರಿವರ್ತನೆಯಾಗುತ್ತದೆ. ಪ್ರತಿ ಪದ/ ಪದಪುಂಜದ ನಿರ್ದಿಷ್ಟತೆ ಅರ್ಥವಾಗುತ್ತದೆ.

ಸ್ಕ್ಯಾನಿಂಗ್ ತಂತ್ರದ ಪ್ರಯೋಜನಗಳು

- ಪಠ್ಯದ ಸಮಗ್ರ ಮಾಹಿತಿ ತಿಳಿಯಲು ಸಹಾಯಕ.
- ನಿರ್ದಿಷ್ಟ ಮಾಹಿತಿ ತಿಳಿಯಲು ಸಹಕಾರಿ.
- ವಿಷಯದ ವಿಸ್ತೃತತೆ ತಿಳಿಸುತ್ತದೆ.
- ವಿಮರ್ಶಾತ್ಮಕ ಓದಿಗೆ ಪೂರಕ.
- ಅಪರಿಚಿತ ಪರಿಕಲ್ಪನೆಯನ್ನು ಪರಿಚಯಿಸುತ್ತದೆ.
- ಪಠ್ಯದಲ್ಲಿನ ಹೊಸ ಪದ, ದತ್ತಾಂಶ ತಿಳಿಯಲು ಸಹಾಯಕ.

ಅನುಸರಿಸಬೇಕಾದ ಕ್ರಮಗಳು

- ನಿರ್ದಿಷ್ಟ ಮಾಹಿತಿಗಾಗಿ ಪಠ್ಯವನ್ನು ಸ್ಕ್ಯಾನ್ ಮಾಡಲು ಪ್ರಾರಂಭಿಸುವ ಮೊದಲು, ಆ ಪಠ್ಯದ ಕುರಿತು ಕೆಲವು ಮೂಲ ವಿಷಯಗಳನ್ನು ನೀವು ತಿಳಿದಿರಬೇಕು. ಆ ಬಗ್ಗೆ ಮೂಲ ಕಲ್ಪನೆ ಇಲ್ಲದಿದ್ದರೆ ಪಠ್ಯವನ್ನು ಪರಿಣಾಮಕಾರಿಯಾಗಿ ಸ್ಕ್ಯಾನ್ ಮಾಡಲು ಸಾಧ್ಯವಾಗುವುದಿಲ್ಲ.
- ಪಠ್ಯವು ನಿಮಗೆ ಸಂಪೂರ್ಣವಾಗಿ ತಿಳಿದಿಲ್ಲದಿದ್ದರೆ, ಈ ಕುರಿತು ಕೆಲವು ವಿಚಾರಗಳನ್ನು ಪಡೆಯಲು ನೀವು ಅದನ್ನು ಮೊದಲು 'ಸ್ಕಿಮ್' ಮಾಡಬೇಕು(ಸ್ಕಿಮ್ಮಿಂಗ್ ಎನ್ನುವುದು ಓದುವ ಪಠ್ಯದಲ್ಲಿನ ಮೂಲ ಕಲ್ಪನೆಯನ್ನು ಸಂಗ್ರಹಿಸಲು ಬಳಸುವ ಕ್ರಿಯೆಯಾಗಿದೆ). ನಿಮಗೆ ಅಗತ್ಯವಿರುವ ಮಾಹಿತಿಯನ್ನು ನೀವು ಕಂಡುಕೊಳ್ಳಬಹುದಾದ ಪಠ್ಯದ ಭಾಗವನ್ನು ಊಹಿಸಲು ಇದು ಸಹಾಯ ಮಾಡುತ್ತದೆ.
- ನಂತರ ಮಾಹಿತಿಯನ್ನು ಹೇಗೆ ಜೋಡಿಸಲಾಗಿದೆ ಎಂಬುದನ್ನು ಗಮನಿಸಿ. ಇದನ್ನು ವರ್ಣಮಾಲೆಯಂತೆ ಅಥವಾ ಸಂಖ್ಯಾತ್ಮಕವಾಗಿ ಜೋಡಿಸಿರಬಹುದು. ಆದಾಗ್ಯೂ, ಕೆಲವು ಪಠ್ಯಗಳನ್ನು ಜೋಡಿಸಲಾಗಿಲ್ಲ. ಆ ಸಂದರ್ಭದಲ್ಲಿ, ನಿಮ್ಮ ಮಾಹಿತಿಯನ್ನು ಪಡೆಯಲು ನೀವು ವಿಭಾಗವನ್ನು ಊಹಿಸಬೇಕು ಮತ್ತು ಅದನ್ನು ಸ್ಕ್ಯಾನ್ ಮಾಡಬೇಕು.
- ಪುಟದಲ್ಲಿ ನಿರ್ದಿಷ್ಟ ಮಾಹಿತಿ ಹುಡುಕಲು ನಿಮ್ಮ ತೋರು ಬೆರಳನ್ನು ಬಳಸಬಹುದು. ಸ್ಪರ್ಧಾತ್ಮಕ ಪರೀಕ್ಷೆ ಬರೆಯುವವರು, ಪರೀಕ್ಷೆಗಾಗಿ ಅಗತ್ಯ ವಿವರಗಳನ್ನು ಪಡೆಯಲು ಪಠ್ಯವನ್ನು ಸ್ಕ್ಯಾನಿಂಗ್ ಮಾಡುವುದು ಅವಶ್ಯಕ. ಹೀಗೆ ಸ್ಕ್ಯಾನ್ ಮಾಡಿದ ಮಾಹಿತಿಯನ್ನು ಹೈಲೈಟ್ ಮಾಡಬಹುದು ಅಥವಾ ಟಿಪ್ಪಣಿ ರೂಪದಲ್ಲಿ ಬರೆದಿಟ್ಟುಕೊಳ್ಳಬಹುದು.



ವಿವಿಧ ಜಿಲ್ಲೆಗಳ ಸೂಕ್ಷ್ಮ ಪ್ರದೇಶದಲ್ಲಿ ಬಂದೋಬಸ್ತ್, ಮಾಹಿತಿ ಕಲೆ ಹಾಕಿದ್ದ ಕೇಂದ್ರ

ಶಾಂತಿಭಂಗದ ಸಂಚಿಗೆ ದಾಖಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲೂ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಹಾಗೂ ಈ ಸಂಘಟನೆಯ ಅಂಗಸಂಸ್ಥೆಗಳು ಶಾಂತಿಭಂಗಕ್ಕೆ ಸಂಚು ರೂಪಿಸಿದ ಬಗ್ಗೆ ಮಾಹಿತಿ ಹಾಗೂ ದಾಖಲೆ ದಾಳಿ ವೇಳೆ ಪತ್ತೆಯಾಗಿತ್ತು' ಎಂದು ಗೃಹ ಇಲಾಖೆ ಹೇಳಿದೆ.

'ಪಿಎಫ್‌ಐ ಮುಖಂಡರ ಮನೆಗಳ ಮೇಲೆ ದಾಳಿ ನಡೆಸಿದಾಗ ಸಿಕ್ಕಿದ ಡೈರಿಯಲ್ಲಿ ಸಂಘಟನೆಯ ಸಂಚು ಗೊತ್ತಾಗಿತ್ತು. ಶಾಂತಿಗೆ ಭಂಗ, ಕಾನೂನುಬಾಹಿರ ಚಟುವಟಿಕೆಗೆ ಸಂಚು ರೂಪಿಸಿದ್ದ ಆರೋಪದ ಮೇಲೆ ರಾಜ್ಯದ ವಿವಿಧ ಪೊಲೀಸ್ ಠಾಣೆಗಳಲ್ಲಿ ಈ ಸಂಘಟನೆಗಳ ವಿರುದ್ಧ ದಾಖಲಾಗಿರುವ ಪ್ರಕರಣ, ನಡೆಸಿದ ಸಭೆ, ವಿದೇಶಿ ಮೂಲದಿಂದ ಹರಿದುಬಂದ ಹಣದ ಮಾಹಿತಿಯನ್ನೂ ಕೇಂದ್ರವು ಕಲೆ ಹಾಕಿತ್ತು' ಎಂದೂ ಇಲಾಖೆ ವಿವರಿಸಿದೆ.

ಪಿಎಫ್‌ಐ ನಿಷೇಧಿಸಿದ ಆದೇಶ ಹೊರಬೀಳುತ್ತಿದ್ದಂತೆ, ರಾಜ್ಯದ ಸೂಕ್ಷ್ಮಪ್ರದೇಶಗಳಲ್ಲಿ ಬಂದೋಬಸ್ತ್ ಹೆಚ್ಚಿಸಲಾಗಿದೆ. ಆಯಾ ಜಿಲ್ಲೆಯ ಪೊಲೀಸ್ ವರಿಷ್ಠಾಧಿಕಾರಿಗಳು ತೀವ್ರ ನಿಗಾ ವಹಿಸುವಂತೆ ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ಸೂಚನೆ ನೀಡಿದ್ದಾರೆ.

ಬೆಂಗಳೂರಿನ ಚಾಮರಾಜಪೇಟೆ, ಶಿವಾಜಿನಗರ, ಡಿ.ಜೆ. ಹಳ್ಳಿ, ಕೆ.ಜಿ. ಹಳ್ಳಿ, ಕೆ.ಆರ್.ಮಾರುಕಟ್ಟೆ ಪ್ರದೇಶದಲ್ಲಿ ಪೊಲೀಸ್ ಭದ್ರತೆ ಹೆಚ್ಚಿಸಲಾಗಿದೆ. ದಕ್ಷಿಣ ಕನ್ನಡ, ಕೊಡಗು, ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಯ ಸೂಕ್ಷ್ಮ ಪ್ರದೇಶದಲ್ಲಿ ಕಟ್ಟೆಚ್ಚರ ವಹಿಸಲಾಗಿದೆ. ನಿಷೇಧಿತ ಸಂಘಟನೆಗಳ ಪರವಾಗಿ ಪ್ರತಿಭಟನೆ ನಡೆಸಿದರೆ ಅವರನ್ನು ವಶಕ್ಕೆ ಪಡೆಯುವಂತೆ ಸೂಚನೆ ನೀಡಲಾಗಿದ್ದು, ಸ್ಥಳೀಯವಾಗಿ ಶಾಂತಿಸಭೆ ನಡೆಸಲು ಗೃಹ ಇಲಾಖೆ ತಿಳಿಸಿದೆ.

'ಕೇಂದ್ರದ ಆದೇಶದಂತೆ ನಿಷೇಧಿತ ಸಂಘಟನೆ ವಿರುದ್ಧ ಕ್ರಮ ಕೈಗೊಳ್ಳುತ್ತೇವೆ. ನಿಷೇಧಿತ ಸಂಘಟನೆ ಪರ ಪ್ರತಿಭಟನೆ ನಡೆಸಿದರೆ ಪ್ರತಿಭಟನಕಾರರನ್ನು ವಶಕ್ಕೆ ಪಡೆಯಲಾಗುವುದು' ಎಂದು ಪ್ರವೀಣ್ ಸೂದ್ ಎಚ್ಚರಿಕೆ ನೀಡಿದ್ದಾರೆ.

'ನಗರದಲ್ಲಿ ಕಟ್ಟೆಚ್ಚರ ವಹಿಸಲು ಎಲ್ಲ ಡಿಸಿಪಿಗಳಿಗೆ ಸೂಚನೆ ನೀಡಲಾಗಿದೆ. ಸರ್ಕಾರದ ಆದೇಶದಂತೆ ರಾಜಧಾನಿಯಲ್ಲಿ ಬಂದೋಬಸ್ತ್ ಹೆಚ್ಚಿಸಲಾಗಿದೆ' ಎಂದು ನಗರ ಪೊಲೀಸ್ ಆಯುಕ್ತ ಪ್ರತಾಪ ರೆಡ್ಡಿ ತಿಳಿಸಿದರು.

ರಾಜ್ಯದಲ್ಲಿ ಪಿಎಫ್‌ಐ ವಿರುದ್ಧದ ಕೇಸು

522 ಶಾಂತಿಗೆ ಭಂಗ ಹಾಗೂ ಕಾನೂನು ಬಾಹಿರ ಚಟುವಟಿಕೆಯ ಪ್ರಕರಣ

355 2012ರಿಂದ ಇಲ್ಲಿಯ ತನಕ ದೋಷಾರೋಪ ಪಟ್ಟಿ ಸಲ್ಲಿಕೆ

122 ತನಿಖಾ ಹಂತದ ಪ್ರಕರಣಗಳು

18 ಕೊಲೆ ಪ್ರಕರಣಗಳು

(ಪೊಲೀಸ್ ಮೂಲಗಳ ಮಾಹಿತಿ)

ಪಿಎಫ್‌ಐ ಕಚೇರಿಗೆ ಬೀಗ ಹಾಕಲು ಸಿದ್ಧತೆ

ರಾಜ್ಯದ ಎಲ್ಲ ಪಿಎಫ್‌ಐ ಕಚೇರಿಯಲ್ಲಿನ ದಾಖಲೆ ಸಂಗ್ರಹಿಸಿ, ಪೊಲೀಸ್ ಭದ್ರತೆಯಲ್ಲಿ ಬೀಗ ಹಾಕಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಬೆಂಗಳೂರಿನ ಪ್ರಧಾನ ಕಚೇರಿ ಬಳಿ ಬುಧವಾರ ಎಸಿಪಿಯೊಬ್ಬರ ನೇತೃತ್ವದಲ್ಲಿ ಭದ್ರತೆ ಕಲ್ಪಿಸಲಾಗಿತ್ತು.

ಮುಖಂಡರ ಹತ್ಯೆಯಲ್ಲಿ ಪಿಎಫ್‌ಐ ಪಾತ್ರ ಉಲ್ಲೇಖ

- ರುದ್ರೇಶ್ (2016)
- ಪ್ರವೀಣ್ ಪೂಜಾರಿ (2016)
- ಶರತ್ ಮಡಿವಾಳ (2017)
- ಪ್ರವೀಣ್ ನೆಟ್ಟಾರು (2022)

ನಿಷೇಧ ಅನುಷ್ಠಾನದ ಜವಾಬ್ದಾರಿ ರಾಜ್ಯ ಸರ್ಕಾರಗಳಿಗೆ: ಗೃಹ ಸಚಿವ

ಬೆಂಗಳೂರು: ಪಿಎಫ್‌ಐ ಮತ್ತು ಅದರ ಸಹವರ್ತಿ ಸಂಘಟನೆಗಳ ಮೇಲೆ ನಿಷೇಧ ಹೇರಿರುವ ಕೇಂದ್ರ ಸರ್ಕಾರ ಅದರ ಅನುಷ್ಠಾನದ ಸಂಪೂರ್ಣ ಅಧಿಕಾರವನ್ನು ರಾಜ್ಯ ಸರ್ಕಾರಗಳಿಗೆ ನೀಡಿದೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದ್ದಾರೆ.

ನಿಷೇಧದ ನಂತರದ ಪ್ರಕ್ರಿಯೆಗಳಾದ ನಿಷೇಧಕ್ಕೆ ಒಳಪಟ್ಟ ಸಂಘಟನೆಗಳ ಕಚೇರಿಗಳನ್ನು ಜಪ್ತಿ ಮಾಡುವುದು, ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುವುದು ಮತ್ತು ಕಾನೂನು ಕ್ರಮಕೈಗೊಳ್ಳುವ ಜವಾಬ್ದಾರಿಯನ್ನು ರಾಜ್ಯ ಸರ್ಕಾರಗಳೇ ನಿರ್ವಹಿಸಲಿವೆ ಎಂದೂ ಅವರು ಹೇಳಿದ್ದಾರೆ.

ಕೇಂದ್ರದ ನಿರ್ದೇಶನದ ಅನ್ವಯ ರಾಜ್ಯ ಸರ್ಕಾರ ಮುಂದಿನ ಪ್ರಕ್ರಿಯೆಗಳ ಸಮರ್ಪಕ ಅನುಷ್ಠಾನಕ್ಕೆ ಸಂಬಂಧಿಸಿದಂತೆ ರಾಜ್ಯದ ಎಲ್ಲ ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಿ ಸುತ್ತೋಲೆ ಹೊರಡಿಸಿದೆ ಎಂದಿದ್ದಾರೆ.

ಬಿಜೆಪಿ ಬೆಂಬಲಿಸಲು 'ಹಿಂದ' ಸಮಾವೇಶ: ಮುಕುಡಪ್ಪ

ಬೆಂಗಳೂರು: ಅಹಿಂದ ಮಾದರಿಯಲ್ಲಿ ರಾಜ್ಯವ್ಯಾಪಿ 'ಹಿಂದ' ಸಮಾವೇಶ ನಡೆಸಿ ಬಿಜೆಪಿಗೆ ಬಲ ನೀಡುವ ಕೆಲಸ ಮಾಡಲಾಗುವುದು ಎಂದು ಹಿಂದುಳಿದ ದಲಿತ ಸಮುದಾಯಗಳ ಒಕ್ಕೂಟದ ಅಧ್ಯಕ್ಷ ಕೆ.ಮುಕುಡಪ್ಪ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, ಶೀಘ್ರದಲ್ಲೇ ಬೆಂಗಳೂರಿನಲ್ಲಿ ಮೊದಲ ಸಮಾವೇಶ ನಡೆಯಲಿದ್ದು, ಬಳಿಕ ಜಿಲ್ಲಾ ಮಟ್ಟದಲ್ಲೂ ಸಮಾವೇಶ ನಡೆಸಲು ಉದ್ದೇಶಿಸಲಾಗಿದೆ. ಹಿಂದುಳಿದ, ದಲಿತರಿಗೆ ರಾಜಕೀಯ ಸ್ಥಾನಮಾನ ಸಿಗಬೇಕು. ಈ ನಿಟ್ಟಿನಲ್ಲಿ ಹೋರಾಟ ನಡೆಸಲು ಒಕ್ಕೂಟ ರಚಿಸಲಾಗಿದೆ ಎಂದರು.

'ಬಿಜೆಪಿ ಅಧಿಕಾರಕ್ಕೆ ಬಂದ ಬಳಿಕ ದಲಿತ ಸಮುದಾಯಗಳಿಗೆ ಕೇಂದ್ರ ಸಚಿವ ಸಂಪುಟದಲ್ಲಿ ಅವಕಾಶ ಸಿಕ್ಕಿದೆ. ರಾಷ್ಟ್ರಪತಿ, ರಾಜ್ಯಪಾಲರ ಹುದ್ದೆಗಳಿಗೆ ದಲಿತ ಸಮುದಾಯವರಿಗೆ ಹೆಚ್ಚಿನ ಅವಕಾಶ ನೀಡಲಾಗಿದೆ. ಪಕ್ಷದ ತತ್ವ ಸಿದ್ಧಾಂತ ಅಪ್ಪಿಕೊಂಡು ಪ್ರಚಾರ ನಡೆಸಲಾಗುವುದು. ಬೆಳಗಾವಿ ಸೇರಿ ಹಲವು ಜಿಲ್ಲೆಗಳಲ್ಲಿ ಈಗಾಗಲೇ 'ಹಿಂದ' ಸಭೆಗಳನ್ನು ನಡೆಸಲಾಗಿದೆ. ಉತ್ತಮ ಬೆಂಬಲ ವ್ಯಕ್ತವಾಗಿದೆ' ಎಂದು ಹೇಳಿದರು.

IN THE COURT OF THE XI ADDL CITY CIVIL AND SESSIONS JUDGE AT BANGALORE
P & SC No.490/2022

BETWEEN: Smt. Lakshmi, W/o Late B.R.Ramesh Aged about 52 years, R/at No.13, Venkataswamy Reddy Layout, Kormangala, Bengaluru South Taluk, Bengaluru-560095. **... Petitioner**

AND

1. Tally Education Private Limited, AMR Tech Park II, No.23 & 24, Hongasandra, Hosur Main Road, Bengaluru-560068
2. Sandeep.H S/o Hanumanthiah, Aged about 32 years, R/at Flat No.401, DS Max Starlet Apartment, Near Skalvi School, J.P.Nagar 8th Phase, Bengaluru-560078. **... Respondents**

PUBLIC NOTICE

Whereas the above named petitioner has presented a petition before CCH-8 Under Section 372 of Indian Succession Act, praying for grant of Succession Certificate in her favour in respect of estates/assets of Late Asha.R mentioned under the Schedule below so kept by Late Asha.R who died on 03.12.2021.

SCHEDULE

All that amount of Rs.5,00,000/- (Rupees Five Lakhs Only) in provident fund Vide PF account No. PY/BOM/1008257/000/10079, UAN No. 100545351176 with the 1st Respondent Company and other benefits and other assets/ estates of the deceased ASHA.R

That the above case is posted on **18th Day of November 2022 at 11AM,**

If any person/s having any objections for the issue of Succession Certificate in petitioner's favour, may appear either in person or through a authorized Advocate, failing wherein the matter will be heard and determined as exparte.

Given under my hand and seal of the Hon'ble Court on 18.11.2022.

By Order of the Court Assistant Registrar
City Civil Court Bangalore
Advocate for Petitioner : **Balaram.S, Vijaya Kumar.M**
No.521, 1st Floor, 1st Main, Teachers Colony, Near Silk Board, Bangalore.

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದು ಏನೆಂದರೆ, ನಮ್ಮ ಕಕ್ಷಿದಾರರು ಇಲ್ಲಿ ಕೆಳಗೆ ಹೆಚ್ಚು ಸ್ಪಷ್ಟವಾಗಿ ವಿವರಿಸಲಾಗಿರುವ, ಇಲ್ಲಿ ಇನ್ನುಮುಂದೆ "ಷೆಡ್ಯೂಲ್ ಪ್ರಾಪರ್ಟಿ" ಎನ್ನಲಾಗುವ ಸ್ಥಿರಾಸ್ತಿಯನ್ನು ಅದರ ಪ್ರಸ್ತುತ ಮಾಲಿಕರಾದ ಡಿ. ರಾಜೇಂದ್ರ ಕುಮಾರ್, ವಿಳಾಸ ಅಪಾರ್ಟ್‌ಮೆಂಟ್ ನಂ. 504, ಮ್ಯಾಟ್ರಿಕ್ಸ್ ಟ್ರಾಂಕ್ವಿಲ್, ಗಣೇಶರಾವ್ ಲೇನ್, ಕೊಡಿಯಾಲಬೈಲ್, ಮಂಗಳೂರು – 575003 (ಇಲ್ಲಿ ಇನ್ನುಮುಂದೆ "ಮಾಲಿಕರು" ಎನ್ನಲಾಗುವ) ಇವರಿಂದ ಖರೀದಿಸಲು ಉದ್ದೇಶಿಸಿದ್ದಾರೆ.

ಕಾರಣ ಈ ಪ್ರಕಟಣೆಯ ಮೂಲಕ ಸಾಮಾನ್ಯ ಸಾರ್ವಜನಿಕರಿಗೆ ತಿಳಿಸುವುದು ಏನೆಂದರೆ, ಸದರಿ ಷೆಡ್ಯೂಲ್ ಪ್ರಾಪರ್ಟಿಗೆ ಅಥವಾ ಷೆಡ್ಯೂಲ್ ಪ್ರಾಪರ್ಟಿಯ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಗಾಗಲಿ, ಸಂಸ್ಥೆಗಾಗಲಿ, ಕಂಪನಿಗಾಗಲಿ, ಸಂಘಕ್ಕಾಗಲಿ (ಕಾರ್ಪೊರೇಟ್ ಅಥವಾ ಕಾರ್ಪೊರೇಟ್ ಅಲ್ಲದ) ಯಾವುದೇ ರೀತಿಯ ಕ್ಲೇಮ್ ಅಥವಾ ಹಕ್ಕು, ಬಾಧ್ಯತೆ, ಹಿತಾಸಕ್ತಿ, ಬಾಕಿ ವ್ಯಾಜ್ಯ, ಟೆನೆನ್ಸಿ, ಅಡಮಾನ, ಚಾರ್ಜ್, ಲೀನ್ ಅಥವಾ ಡಿಮಾಂಡ್ ಅಥವಾ ಇನ್ನಿತರ ಯಾವುದೇ ಸ್ವರೂಪದ ಯಾವುದೇ ಹಿತಾಸಕ್ತಿ ಹೊಂದಿದ್ದಲ್ಲಿ, ಅಂತಹವರು ಸದರಿ ಪ್ರಕಟಣೆಯು ಪ್ರಕಟಗೊಂಡ ದಿನಾಂಕದಿಂದ 10 (ಹತ್ತು) ದಿನಗಳೊಳಗೆ ತಮ್ಮ ಕ್ಲೇಮ್‌ಗಳನ್ನು ಲಿಖಿತ ರೂಪದಲ್ಲಿ ಎಲ್ಲಾ ವಿವರಗಳೊಂದಿಗೆ ಹಾಗೂ ಪೂರಕ ದಾಖಲಾತಿಗಳ ಸಮೇತ ಈ ಕೆಳಗೆ ಸಹಿ ಹಾಕಿರುವವರಿಗೆ ಸಲ್ಲಿಸುವುದು, ಇಲ್ಲವಾದಲ್ಲಿ ಮೇಲ್ಕಂಡ ಮಾಲಿಕರೇ ಸದರಿ ಷೆಡ್ಯೂಲ್ ಪ್ರಾಪರ್ಟಿಯ ಸ್ಪಷ್ಟ ಹಾಗೂ ಮಾರಾಟ ಹಕ್ಕು ಹೊಂದಿರುತ್ತಾರೆ ಮತ್ತು ಸದರಿ ಷೆಡ್ಯೂಲ್ ಪ್ರಾಪರ್ಟಿಗೆ ಸಂಬಂಧಿಸಿದಂತೆ ಇನ್ನಿತರ ಯಾರೂ ಯಾವುದೇ ರೀತಿಯ ಹಕ್ಕು, ಬಾಧ್ಯತೆ, ಹಿತಾಸಕ್ತಿ ಅಥವಾ ಕ್ಲೇಮ್ ಹೊಂದಿರುವುದಿಲ್ಲ ಎಂದು ಪರಿಗಣಿಸಲಾಗುತ್ತದೆ; ಹಾಗೂ ನಮ್ಮ ಕಕ್ಷಿದಾರರು ಸದರಿ ಷೆಡ್ಯೂಲ್ ಪ್ರಾಪರ್ಟಿಯ ಖರೀದಿಗೆ ಉದ್ದೇಶಿತ ಎಲ್ಲಾ ವ್ಯವಹಾರಗಳನ್ನು ಪೂರೈಸಿಕೊಳ್ಳಲು ಸ್ವತಂತ್ರರಾಗಿರುತ್ತಾರೆ ಎಂದು ಪರಿಭಾವಿಸಲಾಗುತ್ತದೆ ಮತ್ತು ನಮ್ಮ ಕಕ್ಷಿದಾರರು ವ್ಯವಹಾರವನ್ನು ಪೂರ್ಣಗೊಳಿಸಿಕೊಳ್ಳುತ್ತಾರೆ. ಮೇಲೆ ತಿಳಿಸಲಾಗಿರುವ ನಿಗದಿತ ಅವಧಿಯು ಮುಗಿದ ನಂತರ ಸಲ್ಲಿಕೆ ಆಗುವ ಯಾವುದೇ ಆಕ್ಷೇಪಣೆಗಳನ್ನು ಮತ್ತು/ಅಥವಾ ಕ್ಲೇಮ್‌ಗಳನ್ನು ಪರಿಗಣಿಸಲಾಗುವುದಿಲ್ಲ ಮತ್ತು ಅಂತಹವುಗಳು ನಮ್ಮ ಕಕ್ಷಿದಾರರಿಗೆ ಯಾವುದೇ ನಿರ್ಬಂಧಗಳನ್ನು ಕೂಡ ರೂಪಿಸುವುದಿಲ್ಲ.

ಷೆಡ್ಯೂಲ್ ಪ್ರಾಪರ್ಟಿ

4ನೇ 'ಬಿ' ಬ್ಲಾಕ್, ಕೋರಮಂಗಲ ಎಕ್ಸ್‌ಟೆನ್ಷನ್, ಬೆಂಗಳೂರು – 560 034 ವಿಳಾಸದಲ್ಲಿರುವ, ನಂ.41 ಹೊಂದಿರುವ, ಪೂರ್ವ ದಿಂದ ಪಶ್ಚಿಮ – 12.19 ಮೀಟರ್ ಹಾಗೂ ಉತ್ತರ ದಿಂದ ದಕ್ಷಿಣ – (20.42+19.81)/2 ಮೀಟರ್ (ಅಂದಾಜು 20.12 ಮೀಟರ್), ಒಟ್ಟಾರೆ 245.14 ಚದರ ಮೀಟರ್ ವಿಸ್ತೀರ್ಣವುಳ್ಳ, ಅದರಲ್ಲಿ ನಿರ್ಮಿಸಲಾಗಿರುವ ಅಂದಾಜು 1,300 ಚದರ ಅಡಿ ವಿಸ್ತೀರ್ಣದ ಬಿಲ್ಟಪ್ ಪ್ರದೇಶವುಳ್ಳ ಕಟ್ಟಡವೂ ಸೇರಿದ ವಸತಿಯೋಗ್ಯ ಸ್ವತ್ತಿನ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಸದರಿ ಸ್ವತ್ತಿನ ಚಕ್ಕುಬಂದಿ ಕೆಳಗಿನಂತಿರುತ್ತದೆ:

ಪೂರ್ವಕ್ಕೆ : ಸೈಟ್ ನಂ. 40;
ಪಶ್ಚಿಮಕ್ಕೆ : ಸೈಟ್ ನಂ. 42;
ಉತ್ತರಕ್ಕೆ : ಸೈಟ್ ನಂ. 22; ಮತ್ತು
ದಕ್ಷಿಣಕ್ಕೆ : ರಸ್ತೆ.

ಸ್ಥಳ: ಬೆಂಗಳೂರು
ದಿನಾಂಕ: 29/09/2022

ಮಹೇಶ್ ಮದನ್ ಭಟ್
ವಕೀಲರು
ಎಂಎಂಬಿ ಲೀಗಲ್
634, 2ನೇ ಮಹಡಿ, 5ನೇ ಅಡ್ಡರಸ್ತೆ, 4ನೇ ಬ್ಲಾಕ್ ಕೋರಮಂಗಲ, ಬೆಂಗಳೂರು – 560034
ದೂರವಾಣಿ: 91–80–41284444/41285555
ಇ–ಮೇಲ್: mahesh@mmblegal.in

ಪಿಎಫ್‌ಐಗೆ 5 ವರ್ಷ ನಿಷೇಧ

ಒಂದನೇ ಪುಟದಿಂದ...

ಪಿಎಫ್‌ಐ ಮುಖಂಡರಿಗೆ ಭದ್ರತೆ ಒದಗಿಸುವುದು ಮತ್ತು ಆಯಾ ಪ್ರದೇಶದ ಹಿಂದೂ ಮುಖಂಡರ ಚಲನವಲನಗಳ ಮೇಲೆ ನಿಗಾ ಇರಿಸುವುದು, ಅವರ ಮೇಲೆ ದಾಳಿಗೆ ಯೋಜನೆ ರೂಪಿಸುವುದು ಈ ರಹಸ್ಯ ತಂಡದ ಉದ್ದೇಶ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪಿಎಫ್‌ಐನ ಸ್ಥಾಪಕರು ಈಗ ನಿಷೇಧಕ್ಕೆ ಒಳಗಾಗಿರುವ ಸ್ಟೂಡೆಂಟ್ ಇಸ್ಲಾಮಿಕ್ ಮೂವ್‌ಮೆಂಟ್ ಆಫ್ ಇಂಡಿಯಾದ (ಸಿಮಿ) ಸದಸ್ಯರಾಗಿದ್ದರು. ಇವರಿಗೆ ಜಮಾತ್ ಉಲ್ ಮುಜಾಹಿದೀನ್ ಬಾಂಗ್ಲಾದೇಶದ ಜತೆಗೆ ನಂಟು ಇದೆ ಎಂದು ಕೇಂದ್ರ ಗೃಹ ಸಚಿವಾಲಯವು ಮಂಗಳವಾರ ತಡರಾತ್ರಿ ಹೊರಡಿಸಿದ ಅಧಿಸೂಚನೆಯಲ್ಲಿ ಹೇಳಲಾಗಿದೆ.

ಪ್ರಾಧ್ಯಾಪಕ ಟಿ.ಜೆ. ಜೋಸೆಫ್ ಅವರು ನಿಷೇಧಕ್ಕೆ ಪ್ರತಿಕ್ರಿಯೆ ನೀಡಲು ನಿರಾಕರಿಸಿದ್ದಾರೆ. 'ಕೆಲವೊಮ್ಮೆ ಮಾತನಾಡುವುದಕ್ಕಿಂತ ಮಾತನಾಡದೆ ಇರುವುದೇ ಉತ್ತಮ' ಎಂದು ಅವರು ಹೇಳಿದ್ದಾರೆ.

₹11 ಕೋಟಿ ಸಂಗ್ರಹಿಸಿದ ಎಸ್‌ಡಿಪಿಐ

ಪಿಎಫ್‌ಐನ ಭಾಗವಾಗಿರುವ ರಾಜಕೀಯ ಪಕ್ಷ ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾವು (ಎಸ್‌ಡಿಪಿಐ) 2018–19ರ ಬಳಿಕ ಈವರೆಗೆ ₹11 ಕೋಟಿ ದೇಣಿಗೆ ಸಂಗ್ರಹಿಸಿದೆ ಎಂಬ ಮಾಹಿತಿ ಚುನಾವಣಾ ಆಯೋಗದಲ್ಲಿ ಇದೆ. ಮಾನ್ಯತೆ ಹೊಂದಿಲ್ಲದ ಈ ಪಕ್ಷವನ್ನು ದೆಹಲಿಯಲ್ಲಿ ನೋಂದಾಯಿಸಲಾಗಿದೆ. ಇದನ್ನು 2009ರಲ್ಲಿ ಆರಂಭಿಸಲಾಗಿದೆ. 2018–19ರಲ್ಲಿ ಪಕ್ಷವು ₹5.17 ಕೋಟಿ, 2019–20ರಲ್ಲಿ ₹3.74 ಕೋಟಿ, 2020–21ರಲ್ಲಿ ₹2.86 ಕೋಟಿ ದೇಣಿಗೆ ಸಂಗ್ರಹಿಸಿದೆ. ತಮಿಳುನಾಡು, ಕೇರಳ ಮತ್ತು ಕರ್ನಾಟಕದಿಂದಲೇ ಹೆಚ್ಚು ದೇಣಿಗೆ ಸಂಗ್ರಹ ಆಗಿದೆ.

ಪಿಎಫ್‌ಐ ಜತೆ ಸಿದ್ದರಾಮಯ್ಯ ನೆಂಟಸ್ತಿಕೆ: ಸಿ.ಎಂ

ಒಂದನೇ ಪುಟದಿಂದ...

ಪಿಎಫ್‌ಐ ದೇಶ ವಿರೋಧಿ ಸಂಘಟನೆ:'ಪಿಎಫ್‌ಐ ಹಲವು ವರ್ಷಗಳಿಂದ ದೇಶದ್ರೋಹಿ ಚಟುವಟಿಕೆಗಳನ್ನು ನಡೆಸುತ್ತಿದೆ. ಈ ಸಂಘಟನೆಯ ಮೇಲೆ ನಿಷೇಧ ಹೇರಬೇಕು ಎಂದು ಬಿಜೆಪಿ ಮಾತ್ರ ಅಲ್ಲ ಕಮ್ಯುನಿಸ್ಟ್ ಸರ್ಕಾರ ಇರುವ ಕೇರಳ, ಕಾಂಗ್ರೆಸ್ ಅಧಿಕಾರ ಇರುವ ರಾಜ್ಯಗಳೂ ಸೇರಿ ಹಲವು ರಾಜ್ಯಗಳು ಕೇಂದ್ರದ ಮೇಲೆ ಒತ್ತಡ ಹೇರುತ್ತಲೇ ಬಂದಿದ್ದವು' ಎಂದು ಬೊಮ್ಮಾಯಿ ಹೇಳಿದರು.

'ಕಾಂಗ್ರೆಸ್ ನೇತೃತ್ವದ ಯುಪಿಎ ಅವಧಿಯಲ್ಲಿ 'ಸಿಮಿ'ಯನ್ನು ನಿಷೇಧ ಮಾಡಲಾಗಿತ್ತು. ಅಲ್ಲಿದ್ದವರೇ ಬಳಿಕ ಪಿಎಫ್‌ಐಯನ್ನು ಹುಟ್ಟುಹಾಕಿದರು. ಈ ಸಂಘಟನೆ ಮುಖ್ಯವಾಹಿನಿಯಿಂದ ದೂರ ಉಳಿದಿದೆ. ಇದರ ಕಾರ್ಯಕರ್ತರು ವಿಧ್ವಂಸಕ ಕೃತ್ಯ ಎಸಗಲು ವಿದೇಶಗಳಲ್ಲಿ ತರಬೇತಿ ಪಡೆದು ಭಾರತದಲ್ಲಿ ಕಾರ್ಯಾಚರಣೆ ನಡೆಸುತ್ತಾರೆ. ಇತ್ತೀಚಿನ ದಿನಗಳಲ್ಲಿ ಅವರ ಚಟುವಟಿಕೆಗಳು ದಮನಕಾರಿ ಆಗಿದ್ದವು. ದೇಶ ಕಾನೂನು ಸುವ್ಯವಸ್ಥೆ ಹದಗೆಡಿಸುವ ಕೆಲಸ ಮಾಡುತ್ತಲೇ ಬಂದಿದೆ' ಎಂದು ಹೇಳಿದರು.

'ಪಿಎಫ್‌ಐನ ರಾಜಕೀಯ ಘಟಕವಾದ ಎಸ್‌ಡಿಪಿಐ ನೋಂದಾಯಿತ ರಾಜಕೀಯ ಪಕ್ಷ. ಅದನ್ನು ನಿಷೇಧಿಸಲು ಕಾನೂನಿನಲ್ಲಿ ಬೇರೆ ನಿಯಮಾವಳಿಗಳಿವೆ. ಈ ಬಗ್ಗೆ ಕೇಂದ್ರ ನಿರ್ಧರಿಸಲಿದೆ. ನಿಷೇಧಗೊಂಡ ಪಿಎಫ್‌ಐ ಸಂಘಟನೆ ಜತೆಗೆ ಯಾರೂ ಸಂಪರ್ಕ ಇಟ್ಟುಕೊಳ್ಳುವಂತಿಲ್ಲ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ಮಾಣಿಪ್ಪಾಡಿ ವರದಿ–ನಿಲುವು ತಿಳಿಸಿ'

ಬೆಂಗಳೂರು: 'ರಾಜ್ಯದಲ್ಲಿನ ವಕ್ಫ್ ಆಸ್ತಿಗಳ ಕಬಳಿಕೆಗೆ ಸಂಬಂಧಿಸಿದಂತೆ ರಾಜ್ಯ ಅಲ್ಪಸಂಖ್ಯಾತರ ಆಯೋಗದ ಮಾಜಿ ಅಧ್ಯಕ್ಷ ಅನ್ವರ್ ಮಾಣಿಪ್ಪಾಡಿ ಸಲ್ಲಿಸಿದ್ದ ವರದಿಯನ್ನು ವಿಧಾನ ಮಂಡಲದ ಉಭಯ ಸದನಗಳಲ್ಲಿ ಯಾವಾಗ ಮಂಡಿಸಲಾಗುತ್ತದೆ ಎಂಬ ಬಗ್ಗೆ ಮಾಹಿತಿ ನೀಡಿ' ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಸೂಚಿಸಿದೆ.

ಈ ಕುರಿತಂತೆ ಮಾಜಿ ಸಚಿವ ಎಸ್.ಕೆ. ಕಾಂತಾ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ವಕ್ಫ್ ಆಸ್ತಿ ಕಬಳಿಕೆ ಮತ್ತು ದುರ್ಬಳಕೆ ಕುರಿತ ತನಿಖೆಗೆ ಒಪ್ಪಿಸುವ ಬಗ್ಗೆಗಿನ ನಿಮ್ಮ ನಿಲುವು ಏನೆಂಬುದನ್ನು ತಿಳಿಸಬೇಕು' ಎಂದು ಸೂಚಿಸಿ, ವಿಚಾರಣೆಯನ್ನು ಅ. 20ಕ್ಕೆ ಮುಂದೂಡಲಾಗಿದೆ.

ಪಿಎಫ್‌ಐ ನಿಷೇಧ: 'ಸೆಪ್ಟೆಂಬರ್ ಕ್ರಾಂತಿ' ಎಂದು ಬಣ್ಣಿಸಿದ ಅಲೋಕ್‌ಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಎಫ್‌ಐ ಸಂಘಟನೆ ನಿಷೇಧವನ್ನು ಕಾನೂನು ಸುವ್ಯವಸ್ಥೆ ವಿಭಾಗದ ಎಡಿಜಿಪಿ ಅಲೋಕ್ ಕುಮಾರ್ ಅವರು 'ಸೆಪ್ಟೆಂಬರ್ ಕ್ರಾಂತಿ' ಎಂದು ಬಣ್ಣಿಸಿ ಟ್ವೀಟ್ ಮಾಡಿದ್ದಾರೆ.

'2001ರ ಸೆ.26ರಂದು ಸಿಮಿ ಸಂಘಟನೆ ನಿಷೇಧಿಸಲಾಗಿತ್ತು. 2022ರ ಸೆ.28ರಂದು ಪಿಎಫ್‌ಐ ಸಂಘಟನೆ ನಿಷೇಧಿಸಲಾಗಿದೆ. ಇದು ಸೆಪ್ಟೆಂಬರ್ ಕ್ರಾಂತಿ. ಜನಸಾಮಾನ್ಯರ ರಕ್ಷಣೆಗೆ ನಾವು ಬದ್ಧರಿದ್ದೇವೆ. ಕಾನೂನುಬಾಹಿರ ಚಟುವಟಿಕೆ ನಾವು ವಿರುದ್ಧ' ಎಂದು ಟ್ವೀಟ್ ಮಾಡಿದ್ದಾರೆ.

ಜತೆಗೆ, 'ಪರಿತ್ರಾಣಾಯ ಸಾಧೂನಾಂ ವಿನಾಶಾಯಚ ದುಷ್ಕೃತಾಮ್' ಎಂದೂ ಟ್ವೀಟ್‌ನಲ್ಲಿ ಉಲ್ಲೇಖಿಸಿದ್ದಾರೆ.

ಬಿ.ಎಲ್.ಡಿ.ಇ. ಸಂಸ್ಥೆ

ಬಂಗಾರಮ್ಮ ಸಜ್ಜನ ಆವರಣ, ಬಿ. ಎಂ. ಪಾಟೀಲ ರಸ್ತೆ (ಸೋಲಾಪುರ ರಸ್ತೆ), ವಿಜಯಪುರ–586103 (ಕರ್ನಾಟಕ), ದೂರವಾಣಿ: 08352–262770, ಫ್ಯಾಕ್ಸ್: 262609

ತಿದ್ದುಪಡಿ ಪ್ರಕಟಣೆ

ದಿನಾಂಕ : 21.09.2022 ರಂದು ಪ್ರಜಾವಾಣಿ ಪತ್ರಿಕೆಯ ಪುಟ ಸಂಖ್ಯೆ 5 ಮತ್ತು ವಿಜಯವಾಣಿ ಪತ್ರಿಕೆಯ ಪುಟ ಸಂಖ್ಯೆ 03 ರಲ್ಲಿ ಪ್ರಕಟಗೊಂಡ ಪ್ರಕಟಣೆಯಲ್ಲಿ ಅನುಕ್ರಮ ಸಂಖ್ಯೆ 02 ಮತ್ತು 07 ಕ್ಕೆ ಸಂಬಂಧಪಟ್ಟಂತೆ ವಿದ್ಯಾರ್ಹತೆ ಆರ್.ಬಿ.ವಿ.ಎಚ್.ಎಸ್. ಎಂದು ತಪ್ಪಾಗಿ ಪ್ರಕಟಗೊಂಡಿದ್ದು, ಅದನ್ನು ಬಿ.ಎ.ಬಿ.ಇಡಿ. ಎಂದು ಓದಿಕೊಳ್ಳಬೇಕು. ಆರ್.ಬಿ.ವಿ.ಎಚ್.ಎಸ್. ವಿದ್ಯಾರ್ಹತೆಯೊಂದಿಗೆ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳ ಅರ್ಜಿ ಹಾಗೂ ಡಿ.ಡಿ.ಯನ್ನು ಸದರಿ ಅಭ್ಯರ್ಥಿಗಳಿಗೆ ಮರಳಿ ಕಳುಹಿಸಲಾಗುವುದು ಎಂದು ತಿಳಿಸಿದೆ.

ದಿ: 28.09.2022

ಜಿ. ಕೆ. ಪಾಟೀಲ
ಪ್ರಧಾನ ಕಾರ್ಯದರ್ಶಿಗಳು

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

ನಂ. 16 ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560052. ಫೋನ್: 080–22268677/78/79 ಫ್ಯಾಕ್ಸ್: 080–22268667
ಇ–ಮೇಲ್: kerc-ka@nic.in ವೆಬ್‌ಸೈಟ್: https://kerc.karnataka.gov.in

ಸಂಖ್ಯೆ: ಸಿಟಿ/01/15 (Vol-IV)/1019 ದಿನಾಂಕ: 28–09–2022

ಸಾರ್ವಜನಿಕ ವಿಚಾರಣೆ ಬಗ್ಗೆ ಸೂಚನೆ

ವಿಷಯ: ಕರಡು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಪವನ ಮತ್ತು ಸೌರ ವಿದ್ಯುಚ್ಛಕ್ತಿ ಉತ್ಪಾದನೆ ಮೂಲಗಳ ಮೊದಲೇ ಅಂದಾಜು ಮಾಡುವುದು, ತೇದಿ ಹೂಡುವುದು, ಉಲ್ಲಂಘನೆ ಇತ್ಯರ್ಥ ಮತ್ತು ಸಂಬಂಧಿಸಿದ ವಿಷಯಗಳು) (ಒಂದನೇ ತಿದ್ದುಪಡಿ) ವಿನಿಯಮಗಳು, 2022 ರ ಮೇಲೆ ಸಾರ್ವಜನಿಕ ವಿಚಾರಣೆ.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಪವನ ಮತ್ತು ಸೌರ ವಿದ್ಯುಚ್ಛಕ್ತಿ ಉತ್ಪಾದನೆ ಮೂಲಗಳ ಮೊದಲೇ ಅಂದಾಜು ಮಾಡುವುದು, ತೇದಿ ಹೂಡುವುದು, ಉಲ್ಲಂಘನೆ ಇತ್ಯರ್ಥ ಮತ್ತು ಸಂಬಂಧಿಸಿದ ವಿಷಯಗಳು) (ಒಂದನೇ ತಿದ್ದುಪಡಿ) ವಿನಿಯಮಗಳು, 2022 ರ ಕರಡು ಅಧಿಸೂಚನೆಯನ್ನು ಆಯೋಗವು ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ: **18–08–2022ರ ಗುರುವಾರದಂದು** ಅಧಿಸೂಚಿಸಿದೆ.

ಆಯೋಗವು ದಿನಾಂಕ: **13–10–2022ರಂದು ಗುರುವಾರ ಬೆಳಿಗ್ಗೆ 11.00 ಘಂಟೆಗೆ ಮೇಲಿನ ವಿಷಯದ ಬಗ್ಗೆ ಸಾರ್ವಜನಿಕ ವಿಚಾರಣೆಯನ್ನು ಆಯೋಜಿಸಿದೆ.**

ಸಾರ್ವಜನಿಕ ವಿಚಾರಣೆಯಲ್ಲಿ ಭಾಗವಹಿಸಲು ಆಸಕ್ತಿ ಉಳ್ಳವರು ಆಯೋಗದ ಮುಂದೆ ತಮ್ಮ ಅಭಿಪ್ರಾಯ / ಸಲಹೆ / ಅನಿಸಿಕೆಗಳನ್ನು ವ್ಯಕ್ತಪಡಿಸಲು ತಿಳಿಸಿದೆ.

ಸಹಿ/– ಕಾರ್ಯದರ್ಶಿ
ವಾಸಾಸಂಇ/ವಾ.ಪ್ರ/2416/2022–23 ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಪರವಾಗಿ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕಂಟೋನ್‌ಮೆಂಟ್ ಬಳ್ಳಾರಿ. ದೂರವಾಣಿ: 08392–242293

ಸಂ: ಕಾನಿಇಂ/ಸನೀ&ಅಂ.ಅ.ವಿ/ಬ/ಸ.ಇಂ–1/2022–23/1233 ದಿ: 27.09.2022.

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಕೆ.ಡಬ್ಲ್ಯೂ– 4 ಮುಖಾಂತರ)

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಲೆಕ್ಕಶೀರ್ಷಿಕೆ 4702 ಪ್ಲಾನ್ ಯೋಜನೆಯಡಿ ಬಳ್ಳಾರಿ ಜಿಲ್ಲೆ ಸಿರುಗುಪ್ಪ ತಾಲ್ಲೂಕಿನ **02** ಏ.ನೀ.ಯೋ. ಕಾಮಗಾರಿಗಳು ಕೆ.ಡಬ್ಲ್ಯೂ–4 ರನ್ವಯ **ದ್ವಿಲಕೋಟೆ** ಪದ್ಧತಿಯಲ್ಲಿ, ಹಾಗೂ 4702 ಪ್ಲಾನ್ ಯೋಜನೆಯಡಿ ವಿಜಯನಗರ ಜಿಲ್ಲೆ ಹಾಗೂ ಹರಪನಹಳ್ಳಿ ತಾಲ್ಲೂಕಿನ **01** ಪಿಕಪ್ ನಿರ್ಮಿಸಿ ಕಾಲುವೆ ಮುಖಾಂತರ ಕೆರೆಗೆ ನೀರು ತುಂಬಿಸುವ ಕಾಮಗಾರಿಗಯು ಕೆ.ಡಬ್ಲ್ಯೂ–4 ರನ್ವಯು **ದ್ವಿಲಕೋಟೆ** ಪದ್ಧತಿಯಲ್ಲಿ ಕಾರ್ಯನಿರ್ವಾಹಕ ಇಂಜಿನೀಯರವರಿಂದ ಟೆಂಡರ್ ಆಹ್ವಾನಿಸಲಾಗಿದೆ. **ಟೆಂಡರಿಗಿಟ್ಟ ಕನಿಷ್ಠ ಅಂದಾಜು ಮೊತ್ತ ರೂ. 105.98 ಲಕ್ಷಗಳು ಹಾಗೂ ಟೆಂಡರಿಗಿಟ್ಟ ಗರಿಷ್ಠ ಅಂದಾಜು ಮೊತ್ತ ರೂ. 264.47 ಲಕ್ಷಗಳಿರುತ್ತದೆ.** ಟೆಂಡರ್‌ನ್ನು **ದಿನಾಂಕ: 28.09.2022 ರಿಂದ ದಿನಾಂಕ: 12.10.2022 ರ ಸಂಜೆ 5.30** ಗಂಟೆಯವರಗೆ ಸಲ್ಲಿಸಬಹುದು. **ಟೆಂಡರಿನ ತಾಂತ್ರಿಕ ಬಿಡ್‌ನ್ನು ದಿನಾಂಕ: 14.10.2022 ರಂದು ಹಾಗೂ ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು. ಆರ್ಥಿಕ ಬಿಡ್‌ನ್ನು ದಿನಾಂಕ: 18.10.2022 ರಂದು (ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ) ಬೆಳಿಗ್ಗೆ 11.00** ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಳನ್ನು "ಇ–ಪ್ರಕ್ಯೂರ್‌ಮೆಂಟ್" ವೆಬ್‌ಸೈಟ್ **http://eproc.karntaka.gov.in/e-portal/ index.seam** ನಲ್ಲಿ ಪಡೆಯಬಹುದು.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/496/ಎಂಸಿಎ/2022–23

ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ–571401
(Autonomous Medical Institution, Government of Karnataka)
(Fax & Phone : 08232-231001, 222086, E-mail:mimsmandyaoffice@gmail.com,
Website:www.mimsmandya.org
ಸಂಖ್ಯೆ:ಮಿಮ್ಸ್/ಬೋ.ಆ/ಬ.ವೆ/ಇ–ಟೆಂಡರ್/08/2022–23
ದಿನಾಂಕ:27.09.2022

ಇ–ಟೆಂಡರ್ ಪ್ರಕಟಣೆ
(ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಮಿಮ್ಸ್ ಸಂಸ್ಥೆಗೆ ಹಾಗೂ ಬೋಧಕ ಆಸ್ಪತ್ರೆಯಲ್ಲಿನ ಬಯೋತ್ಯಾಜ್ಯ ವಿಲೇವಾರಿಯನ್ನು ನಿರ್ವಹಿಸಲು ಅಂಗೀಕೃತ ಸಂಸ್ಥೆಗಳಿಂದ ದ್ವಿ–ಬಿಡ್ ಪದ್ಧತಿಯಲ್ಲಿ ಇ–ಟೆಂಡರ್ ಆಹ್ವಾನಿಸಲಾಗಿದೆ.

ಕ್ರಮ ಸಂಖ್ಯೆ : 01. ಟೆಂಡರ್ ವಿವರ : 2022–23ನೇ ಸಾಲಿನಲ್ಲಿ ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಹಾಗೂ ಬೋಧಕ ಆಸ್ಪತ್ರೆಯಲ್ಲಿ ದಿನನಿತ್ಯ ಸಂಗ್ರಹವಾಗುವ ಬಯೋಮೆಡಿಕಲ್ ತ್ಯಾಜ್ಯ ವಿಲೇವಾರಿಗಾಗಿ. ಪ್ರಕಟಣೆ ಸಂಖ್ಯೆ : ಸಂಖ್ಯೆ:ಮಿಮ್ಸ್/ಬೋ.ಆ/ಬ.ವೆ/ಇ–ಟೆಂಡರ್/08/2022–23 ದಿನಾಂಕ: 27.09.2022. ಟೆಂಡರ್‌ಗಳ ಒಟ್ಟು ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) : ರೂ.15.00. ಇ.ಎಂ.ಡಿ (ರೂ.ಲಕ್ಷಗಳಲ್ಲಿ) : ರೂ.0.50 ಲಕ್ಷಗಳು.

ಇ–ಪೋರ್ಟಲ್ ಮುಖಾಂತರ ನಿಗದಿತ ಶುಲ್ಕ (ಹಿಂದಿರುಗಿಸಲಾಗುವುದಿಲ್ಲ) ದೊಂದಿಗೆ ಟೆಂಡರ್ ಅರ್ಜಿ ಸಲ್ಲಿಸುವ ದಿನಾಂಕ : **27.09.2022** ರಿಂದ ಪ್ರಾರಂಭವಾಗುವುದು ಭರ್ತಿ ಮಾಡಿದ ಟೆಂಡರ್ ಅರ್ಜಿಗಳನ್ನು ಸಲ್ಲಿಸುವ ಅಂತಿಮ **ದಿನಾಂಕ : 13.10.2022 ರ ಸಂಜೆ 5.30 ಗಂಟೆವರೆಗೆ.** ಟೆಂಡರ್ ಪ್ರಕ್ರಿಯೆ ದಿನಾಂಕಗಳನ್ನು ಹಾಗೂ ಇತರೆ ವಿವರಗಳನ್ನು ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಸಿಸ್ಟಮ್ ಮುಖಾಂತರ www.eproc.karnataka.gov.in ವೆಬ್ ಸೈಟ್‌ನಲ್ಲಿ ನೋಡಬಹುದು. ಹೆಚ್ಚಿನ ಮಾಹಿತಿಯನ್ನು ಕಛೇರಿ ಕೆಲಸದ ವೇಳೆಯಲ್ಲಿ (ರಜಾ ದಿನಗಳನ್ನು ಹೊರತುಪಡಿಸಿ) ಪಡೆಯಬಹುದಾಗಿದೆ.

ಸಹಿ/–ನಿರ್ದೇಶಕರು, ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ
ವಾಸಾಸಂಇ/ಸನಿ–ಮಂಡ್ಯ/ಎಂಸಿ&ಎ/358/2022–23

ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ
ಕರ್ನಾಟಕ ರಾಜ್ಯ ಶುಶ್ರೂಷಾ ಪರೀಕ್ಷಾ ಮಂಡಳಿ
1ನೇ ಮಹಡಿ, ಲೈಬ್ರರಿ ಬ್ಲಾಕ್, ಬಿ.ಎಂ.ಸಿ.ಆರ್.ಐ ಆವರಣ, ಕೆ.ಆರ್.ರೋಡ್, ಬೆಂಗಳೂರು-560 002. ದೂರವಾಣಿ: 080-26700074, 26700075
ಇ-ಮೇಲ್: ksdneb@gmail.com ವೆಬ್‌ಸೈಟ್: www.ksdneb.org
ಸಂ: ಕ.ರಾ.ಶು.ಪ.ಮಂ./ಸಿಬ್ಬಂದಿ/14/2022–23 ದಿನಾಂಕ: 28.09.2022

2022–23ನೇ ಸಾಲಿನ ಶೈಕ್ಷಣಿಕ ಶುಶ್ರೂಷಾ ವಿದ್ಯಾರ್ಥಿಗಳ ಪ್ರವೇಶಾತಿ ಪ್ರಕಟಣೆ

ಕರ್ನಾಟಕ ರಾಜ್ಯ ಶುಶ್ರೂಷಾ ಪರೀಕ್ಷಾ ಮಂಡಳಿಯು ಸರ್ಕಾರಿ ಕೋಟಾದ ಡಿಪ್ಲೋಮಾ ಇನ್ ನರ್ಸಿಂಗ್ ಕೋರ್ಸ್‌ನ (ಜಿ.ಎನ್.ಎಮ್) ಸೀಟುಗಳಿಗೆ ಅರ್ಜಿ ಸಲ್ಲಿಸಿ, ದಾಖಲಾತಿಗಳನ್ನು ಪರಿಶೀಲಿಸಿರುವ ಅಭ್ಯರ್ಥಿಗಳಿಗೆ ಮೊದಲನೇ ಸುತ್ತಿನ ಆಯ್ಕೆಗಳನ್ನು ನಮೂದಿಸುವ ಪ್ರಕ್ರಿಯೆಯನ್ನು ದಿನಾಂಕ: **06.10.2022** ರಿಂದ **12.10.2022** ರವರೆಗೆ ಆನ್‌ಲೈನ್‌ನಲ್ಲಿ ನಮೂದಿಸಲು ಉದ್ದೇಶಿಸಲಾಗಿದೆ. **www.ksdneb.org** ಜಾಲತಾಣದಲ್ಲಿ ಆಯ್ಕೆಗಳನ್ನು ನಮೂದಿಸುವ ಮಾದರಿ ನಮೂನೆಯನ್ನು ನೀಡಿದ್ದು, ಇದನ್ನು ವೀಕ್ಷಿಸಿ ಆನ್‌ಲೈನ್‌ನಲ್ಲಿ ಆಯ್ಕೆಗಳನ್ನು ನಮೂದಿಸುವಂತೆ ಸೂಚಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಮಂಡಳಿಯ ಜಾಲತಾಣವನ್ನು ಸಂಪರ್ಕಿಸಿ.

ಸಹಿ/–ಕಾರ್ಯದರ್ಶಿಗಳು, ಕ.ರಾ.ಶು.ಪ.ಮಂ. ಬೆಂಗಳೂರು.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ ವಿಜಯಪುರ.
ಐ.ಎಫ್.ಟಿ.ಸಂ:ಕಾ.ನಿ.ಇಂ./ಲೋ.ಇ./ವಿ.ಜೆ.ಪಿ/ಪಿ.ಬಿ/8443/2022–23/3520
ದಿನಾಂಕ:27.09.2022

ಗುತ್ತಿಗೆ ಆಹ್ವಾನ ಪ್ರಕಟಣೆ (ಇ–ಪ್ರಕ್ಯೂರ್‌ಮೆಂಟ್)

ಕಾರ್ಯನಿರ್ವಾಹಕ ಇಂಜಿನಿಯರರು ಲೋಕೋಪಯೋಗಿ ಇಲಾಖೆ ವಿಭಾಗ, ವಿಜಯಪುರ ಅಡಿಯಲ್ಲಿ ಐಟಂವಾರು ಗುತ್ತಿಗೆಗಳನ್ನು ಇ–ಪ್ರೋಕ್ಯೂರಮೆಂಟನಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ ಟೆಂಡರ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–4 ರಲ್ಲಿ ಲೆಕ್ಕ ಶೀರ್ಷಿಕೆ 8443–ಠೇವಣಿ ವಂತಿಕೆ ಅಡಿಯಲ್ಲಿ ವಿ ವಿಜಯಪುರ ಜಿಲ್ಲೆಯ ವಿಜಯಪುರ ತಾಲೂಕಿನ ಅರಕೇರಿ ಗ್ರಾಮದಲ್ಲಿ ಶಿಥೀಲ ಗೃಹ ನಿರ್ಮಾಣ. (ಇಂಡೆಂಟ ನಂ. 158009) ಕಾಮಗಾರಿಗೆ ಗುತ್ತಿಗೆಯನ್ನು ಕರೆಯಲಾಗಿದ್ದು **ಅಂದಾಜು ಮೊತ್ತ ರೂ. 250.00 ಲಕ್ಷಗಳು. ಸದರಿ ಕಾಮಗಾರಿಯ ಟೆಂಡರ ಅವಧಿ 11 ತಿಂಗಳು ಮಳೆಗಾಲ ಸಹಿತ ಹಾಗೂ ಮುಂಗಡ ಠೇವಣಿ ಮೊತ್ತ 3,75,000/– ರೂ.ಗಳು.** ಸದರ ಕಾಮಾಗಾರಿಗಳ ಗುತ್ತಿಗೆ ಮೊತ್ತಕ್ಕೆ ಅನುಗುಣವಾಗಿ ಜಿ.ಎಸ್.ಟಿ ಪ್ರತ್ಯೇಕವಾಗಿ ನೀಡಲಾಗುವದು. ಹಾಗೂ ವಿಸ್ತೃತ ಗುತ್ತಿಗೆ ಅವಧಿಯಲ್ಲಿ, ಗುತ್ತಿಗೆ ಅವಧಿಯು ಗುತ್ತಿಗೆದಾರರ ವಿಳಂಭದಿಂದ ಉಂಟಾದಲ್ಲಿ ಆ ಅವಧಿಯಲ್ಲಿ ಜಿ.ಎಸ್.ಟಿ ದರಗಳಲ್ಲಿ ಹೆಚ್ಚಾಳವಾದಲ್ಲಿ ಇದನ್ನು ಗುತ್ತಿಗೆದಾರರೇ ಭರಿಸುವದು. 1) ಗುತ್ತಿಗೆದಾರರ ಪೂರ್ವ ಭಾವಿ ಸಭೆ **ದಿನಾಂಕ:– 08–11–2022** ರ ಮುಂಜಾನೆ 11.00 ಗಂಟೆಗೆ, 2) ಟೆಂಡರಗಳನ್ನು ಸ್ವೀಕರಿಸುವ **ದಿನಾಂಕ:–15.11.2022** ರ ಸಂಜೆ 4.30 ಗಂಟೆಯವರೆಗೆ, 3) ಟೆಂಡರಗಳ ತಾಂತ್ರಿಕ್ ಬೀಡ್‌ಗಳನ್ನು ತೆರೆಯುವ **ದಿನಾಂಕ: 17.11.2022** ರ ಮುಂಜಾನೆ 11.00 ಘಂಟೆಯ ನಂತರ 4) ಟೆಂಡರಗಳ ಆರ್ಥಿಕ ಬೀಡ್‌ಗಳನ್ನು ತೆರೆಯುವ **ದಿನಾಂಕ: 18.11.2022** ರ ಮುಂಜಾನೆ 11.00 ಘಂಟೆಯ ನಂತರ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ ಹಾಗೂ ಅಂತರ್ ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.eproc.karnataka.gov.in (ಪೋನ್ ನಂ. 918025501216 & 918025501227) ರಲ್ಲಿ ಪಡೆಯಬಹುದು.

ವಾಸಾಸಂಇ/ವಿಜಯಪುರ/452/ಎಂಸಿಎ/2022–23
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ವಿಭಾಗ, ವಿಜಯಪುರ

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ,
(ಜಿಲ್ಲಾ ನಗರಾಭಿವೃದ್ಧಿ ಕೋಶ) ಹಾವೇರಿ ಜಿಲ್ಲೆ, ಹಾವೇರಿ–581110
ದೂರವಾಣಿ ಸಂಖ್ಯೆ : 08375–249097 ಫ್ಯಾಕ್ಸ್ : 08375–249088
e-mail : dc_haveri@yahoo.co.in
ನಂ:ಪುಸ (2)/ವಹಿ–50/2018–19 ದಿನಾಂಕ : 26–09–2022

ಮರು ಇ–ಟೆಂಡರ್ ಅಧಿಸೂಚನೆ

ಯೋಜನಾ ನಿರ್ದೇಶಕರು ಜಿಲ್ಲಾ ನಗರಾಭಿವೃದ್ಧಿಕೋಶ ಹಾವೇರಿ ರವರು ಜಿಲ್ಲಾಧಿಕಾರಿಗಳು ಹಾವೇರಿ ಜಿಲ್ಲೆ ಹಾವೇರಿ ರವರ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದೇಶ 1999–2000 ರ ಪ್ರಕಾರ ನಿಯಮದಂತೆ ಬಿಡ್‌ದಾರರು ಮತ್ತು ನೊಂದಾಯಿತ ಸಂಸ್ಥೆಗಳಿಂದ ಇ–ಪ್ರೊಕ್ಯೂರಮೆಂಟ್ ಮುಖಾಂತರ, ಈ ಕೆಳಗಿನ ಕಾಮಗಾರಿಗೆ ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಅಡಿಯಲ್ಲಿ ಟೆಂಡರನ್ನು ಆಹ್ವಾನಿಸಲಾಗಿದೆ. ಸಾಮಾನ್ಯ ಸೂಚನೆಗಳು 1) ಬಿಡ್‌ದಾರರು ಬಿಡ್ ಅನ್ನು ಆನ್‌ಲೈನ್ ಮೂಲಕ ಸಲ್ಲಿಸುವುದು 2) ಇ.ಎಂ.ಡಿ ಇ–ಪ್ರೊಕ್ಯೂರಮೆಂಟ್ ಪೋರ್ಟಲ್‌ನಲ್ಲಿ ಸೂಚಿಸಿರುವಂತೆ 3) ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಯೋಜನಾ ನಿರ್ದೇಶಕರು ಜಿಲ್ಲಾ ನಗರಾಭಿವೃದ್ಧಿಕೋಶ ಹಾವೇರಿ ಜಿಲ್ಲೆ ಹಾವೇರಿ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ. ಟೆಂಡರ ದಾಖಲೆಗಳನ್ನು ಕರ್ನಾಟಕ ಸರ್ಕಾರ ಇ–ಪ್ರೊಕ್ಯೂರಮೆಂಟ್‌ನಲ್ಲಿ ಅಂತರ್‌ಜಾಲ ವೆಬ್‌ಸೈಟ್ ವಿಳಾಸ http://www.eproc.karnataka.gov.in (Indent No: **MUN3CR50/2018-19/CALL-3**) ರಲ್ಲಿ ಪಡೆಯಬಹುದು. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಟೆಂಡರನಲ್ಲಿ ಯಾವುದಾದರೂ ಬದಲಾವಣೆಯಾದಲ್ಲಿ, ಸದರಿ ಬದಲಾವಣೆಯ ವಿವರಗಳನ್ನು ಇ–ಪೋರ್ಟಲ್‌ನಲ್ಲಿ ಮಾತ್ರ ದಾಖಲಿಸಿ ಪ್ರಕಟಿಸಲಾಗುವುದು.

(1) Name of the Work : Implementation of Energy Efficiency Project for streetlights by replacement of existing conventional lamps with LED lamps along with Centralized Control & Monitoring System (CCMS) in Haveri DUDC limits through PPP mode (Indent No : MUN3CR50/2018-19/CALL-3) (2) EMD amount **33.00** Lakhs (3) Tender cost **3279.00** Lakhs (4) Tender Document available from : **26-09-2022** (5) Pre bid meeting will be held on : **15-10-2022** (6) Last date of submission of tender documents : **29-10-2022** (7) Technical Proposals will be opened on : **31-10-2022** (8) Financial bid will be opened on : **09-11-2022** (9) Period of Completion : 8 months (including monsoon period) and operation and Maintenance for seven years.

ಸಹಿ/– ಜಿಲ್ಲಾಧಿಕಾರಿಗಳು, ಹಾವೇರಿ ಜಿಲ್ಲೆ, ಹಾವೇರಿ.
ವಾಸಾಸಂಇ/ಹಾವೇರಿ/ಎಂಸಿಎ/281/2022–23

Infosys
Navigate your next
Infosys Limited
CIN : L85110KA1981PLC013115
44, Infosys Avenue, Electronics City, Hosur Road, Bengaluru - 560 100
Phone: 91 80 2852 0261, Fax: 91 80 2852 0362
investors@infosys.com, www.infosys.com

NOTICE OF LOSS OF SHARE CERTIFICATES

The following share certificate(s) of the company have been reported as lost/misplaced and the holder(s) of the said share certificate(s) have requested the company for issue of duplicate share certificate(s).

Notice is hereby given that the company will proceed to issue duplicate share certificate(s) to the below mentioned person(s) unless a valid objection is received by the company within 15 days from the date of publication of this notice. No claims will be entertained by the company with respect to the original share certificate(s) subsequent to the issue of duplicates thereof.

Name of Shareholder	Folio No.	Certificate No.	Distinctive Nos.		No. of Shares
			From	To	
AMIT KUMAR	ITL000141	1000042	1148847222	1148861621	14400

Any person who has/have a claim in respect of the said certificate(s) should lodge his/her/ their claim with all supporting documents with the company at its registered office. If no valid and legitimate claim is received within 15 days from the appearance of this notice, the company will proceed to issue duplicate share certificate(s) to the person listed above and no further claim would be entertained from any other person(s).

Registered Office:
Electronics City, Hosur Road,
Bengaluru - 560 100

September 28, 2022
Bengaluru, India

For **Infosys Limited**
Sd/-
A.G.S. Manikantha
Company Secretary

INNOVATE KARNATAKA K-tech

ಮಾನವ ಸಂಪನ್ಮೂಲದ ಅಯ್ಕೆ

ಕರ್ನಾಟಕ ನಾವೀನ್ಯತೆ ಮತ್ತು ತಂತ್ರಜ್ಞಾನ ಸೊಸೈಟಿ (ಕಿಟ್ಸ್)ಯು ವಿದ್ಯುನ್ಮಾನ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಂಗ ಸಂಸ್ಥೆಯಾಗಿದ್ದು ಕರ್ನಾಟಕದಲ್ಲಿ ನಾವೀನ್ಯತೆ ಮತ್ತು ತಂತ್ರಜ್ಞಾನಗಳಿಗೆ ಸಂಬಂಧಿಸಿದ ಕಾರ್ಯಚಟುವಟಿಕೆಗಳನ್ನು ನಿರ್ವಹಿಸುವುದು ಇದರ ಮೂಲ ಉದ್ದೇಶ. ಕಿಟ್ಸ್ ಸಂಸ್ಥೆಯು ನವೋದ್ಯಮ (ಸ್ಟಾರ್ಟ್ ಅಪ್) ನೀತಿಯಡಿಯಲ್ಲಿ ಯೋಜನೆಗಳನ್ನು / ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ನೋಡಲ್ ಏಜನ್ಸಿಯಾಗಿದೆ. ಕಿಟ್ಸ್ ಸಂಸ್ಥೆಯು ನವೋದ್ಯಮ ಪರಿಸರ ವ್ಯವಸ್ಥೆಯನ್ನು ಪ್ರಚುರಪಡಿಸಲು ಇತರೆ ಸರ್ಕಾರಿ ಇಲಾಖೆಗಳೊಂದಿಗೆ ಸಂಯೋಜನೆ ಮಾಡುವುದು.

ಕಿಟ್ಸ್ ಎಲ್ಲಾ ಸಂಪನ್ಮೂಲಗಳನ್ನು ಗುತ್ತಿಗೆ ಆಧಾರದ ಮೇಲೆ ಪಡೆಯಲು ಇಚ್ಛಿಸಿದ್ದು ವಿವರಗಳು ಕೆಳಕಂಡಂತಿವೆ.

ಕ್ರಮ ಸಂಖ್ಯೆ	ಹುದ್ದೆಯ ವಿವರ	ಕನಿಷ್ಠ ಅರ್ಹತೆ / ಅನುಭವ	ಕ್ರೋಢೀಕರಿಸಿದ ವೇತನ
1	**ವ್ಯವಸ್ಥಾಪಕರು** – ಕಾರ್ಯಕ್ರಮ ಅನುದಾನ **ಹುದ್ದೆಗಳ ಸಂಖ್ಯೆ: 01 ಸಂ.**	02 ವಷಗಳ ಪೂರ್ಣಾವಧಿಯ ಎಂಬಿಎ/ಪಿಜಿಡಿಎಂ/ಪಿಜಿಡಿಬಿಎ/ಎಂ.ಎಸ್‌ಸಿ (ಬಯೋ ಟೆಕ್ನಾಲಜಿ/ಮೈಕ್ರೋ ಬಯೋಲಜಿ) ಯೊಂದಿಗೆ ಉತ್ತಮ ವಿಶ್ಲೇಷಣಾತ್ಮಕ ಕೌಶಲ್ಯತೆಯೊಂದಿಗೆ ಅನುದಾನ ಕಾರ್ಯಕ್ರಮದಲ್ಲಿ ಹಾಗೂ ಡಾಟಾ ಪಾಲನೆ ಮತ್ತು ನಿರ್ವಹಣೆಯಲ್ಲಿ ಕನಿಷ್ಠ 6 ವರ್ಷಗಳ ಕೆಲಸದ ಅನುಭವ ಹೊಂದಿರಬೇಕು.	ರೂ.80,000/–.
2	**ತಾಂತ್ರಿಕ ಸಮಾಲೋಚಕರು ಹುದ್ದೆಗಳ ಸಂಖ್ಯೆ: 01 ಸಂ.**	ಬಿ.ಇ. (ಸಿಎಸ್‌ಇ/ಐಎಸ್‌ಇ)/ಎಂ.ಸಿ.ಎ ಕೋಡಿಂಗ್ ಜ್ಞಾನದೊಂದಿಗೆ, ಅಗತ್ಯತೆ ಪ್ರಕಾರವಾಗಿ ಕೋಡನ್ನು ಅಪ್‌ಡೇಟ್ ಮಾಡುವ ಸಲುವಾಗಿ, ಡಾಟಾಬೇಸ್, ವೆಬ್‌ಸೈಟ್ ನಿರ್ವಹಣೆ ಹಾಗೂ ಇತರೆ ಸಂಬಂಧಿತ ತಾಂತ್ರಿಕ ಕೌಶಲ್ಯತೆಯಲ್ಲಿ ಕನಿಷ್ಠ 5 ವರ್ಷಗಳ ಅನುಭವ ಹೊಂದಿರಬೇಕು.	ರೂ.45,000/–.
3	**ಯೋಜನಾ ನಿರ್ವಾಹಕರು ಹುದ್ದೆಗಳ ಸಂಖ್ಯೆ: 01 ಸಂ.**	ಕಂಪ್ಯೂಟರ್ ಜ್ಞಾನದೊಂದಿಗೆ ಯಾವುದೇ ಪದವಿ, ಇನ್ಕ್ಯೂಬೇಟರ್ಸ್ / ಆಕ್ಸಲೇಟರ್ಸ್ / ನವೋದಯ ಪರಿಸರ ವ್ಯವಸ್ಥೆಯಲ್ಲಿ ಕನಿಷ್ಠ 5 ವರ್ಷಗಳ ಕೆಲಸದ ಅನುಭವ ಹೊಂದಿರಬೇಕು.	ರೂ.45,000/–.
4	**ಲೆಕ್ಕಪತ್ರ ಸಹಾಯಕರು ಹುದ್ದೆಗಳ ಸಂಖ್ಯೆ: 01 ಸಂ.**	ಕಂಪ್ಯೂಟರ್ ಜ್ಞಾನದೊಂದಿಗೆ ಬಿ.ಕಾಂ/ಎಂ.ಕಾಂ, ಲೆಕ್ಕ ಪತ್ರ, ಟ್ಯಾಲಿ ಎಂಟ್ರಿ, ಯುಸಿಗಳ ತಯಾರಿಕೆ ಹಾಗೂ ಸಲ್ಲಿಕೆ ಇತ್ಯಾದಿಗಳಲ್ಲಿ ಕನಿಷ್ಠ 5 ವರ್ಷಗಳ ಅನುಭವ ಹೊಂದಿರಬೇಕು.	ರೂ.35,000/–.

ಮೇಲ್ಕಂಡ ಹುದ್ದೆಗಳಿಗೆ 35 ವರ್ಷಗಳ ವಯೋಮಿತಿಯೊಳಗಿನ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಹುದ್ದೆಗಳು ಗರಿಷ್ಠ 12 ತಿಂಗಳ ಅವಧಿಯ ಗುತ್ತಿಗೆ ಆಧಾರದ್ದಾಗಿರುತ್ತದೆ.

ಹುದ್ದೆಗಳ ವಿವರಗಳು https//itbtst.karnataka.gov.in ಯಲ್ಲಿ ಲಭ್ಯವಿರುತ್ತದೆ. ಅರ್ಹ ಅಭ್ಯರ್ಥಿಗಳು ತಮ್ಮ ಅಪ್‌ಡೇಟ್ ಆಗಿರುವ ಬಯೋ–ಡಾಟಾ ಹಾಗೂ ಇತ್ತೀಚಿನ ಒಂದು ಪಾಸ್‌ಪೋರ್ಟ್ ಅಳತೆಯ ಬಣ್ಣದ ಭಾವಚಿತ್ರ ಮತ್ತು ಇತರ ಪೂರಕ ದಾಖಲೆಗಳೊಂದಿಗೆ gm1.ktech@ka.gov.in ಮತ್ತು ipokbits@gmail.com ಇಲ್ಲಿಗೆ 25.10.2022ರ ಸಂಜೆ 5.00 ಗಂಟೆಗೆ ಮುಂಚಿತವಾಗಿ ತಲುಪುವಂತೆ ಇ–ಮೇಲ್ ಮೂಲಕ ಸಲ್ಲಿಸತಕ್ಕದ್ದು. ಆಯ್ದ ಅಭ್ಯರ್ಥಿಗಳಿಗೆ ಮಾತ್ರ ಸಂದರ್ಶನ ಏರ್ಪಡಿಸಲಾಗುವುದು. ಆಯ್ಕೆ ಮಂಡಳಿಯ ನಿರ್ಧಾರವೇ ಅಂತಿಮವಾಗಿರುತ್ತದೆ.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು

ಕರ್ನಾಟಕ ನಾವೀನ್ಯತೆ ಮತ್ತು ತಂತ್ರಜ್ಞಾನ ಸೊಸೈಟಿ (ಕಿಟ್ಸ್)
ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ
ಬಿಎಂಟಿಸಿ ಕೇಂದ್ರ ಕಛೇರಿಗಳ ಕಟ್ಟಡ, ಟಿಟಿಎಂಸಿ 'ಬಿ' ಬ್ಲಾಕ್, 4ನೇ ಮಹಡಿ, ಶಾಂತಿನಗರ, ಕೆ. ಹೆಚ್. ರಸ್ತೆ, ಬೆಂಗಳೂರು–560027. ದೂರವಾಣಿ: 080–22231006/8. ಇ–ಮೇಲ್: kitsgok@karnataka.gov.in

ವಾ.ಸಾ.ಸಂ.ಇ/ವಾಪ್ರ/2410/ಆಕಾರ್/22–23

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ನಮ್ಮಲ್ಲಿ ಎಲ್ಲರೂ ಒಂದೇ ರೀತಿಯ ಪ್ರತಿಭೆಯನ್ನು ಹೊಂದಿರುವುದಿಲ್ಲ. ಆದರೆ, ನಮ್ಮ ಪ್ರತಿಭೆಯನ್ನು ಬೆಳೆಸಿಕೊಳ್ಳಲು ನಮ್ಮೆಲ್ಲರಿಗೂ ಸಮಾನವಾದ ಅವಕಾಶಗಳು ಇರುತ್ತವೆ.

–ಡಾ. ಎ.ಪಿ.ಜೆ. ಅಬ್ದುಲ್ ಕಲಾಂ

ವಿರೋಧ ಪಕ್ಷಗಳಿಗೆ ಸ್ಥಾನ ನಿರಾಕರಣೆ ಆಡಳಿತಾರೂಢ ಪಕ್ಷದ ನಡೆ ಸಲ್ಲದು

ಸಂಸತ್ತಿನ ಕೆಲವು ಸ್ಥಾಯಿ ಸಮಿತಿಗಳ ಅಧ್ಯಕ್ಷ ಸ್ಥಾನವನ್ನು ವಿರೋಧ ಪಕ್ಷಗಳಾದ ಕಾಂಗ್ರೆಸ್ ಹಾಗೂ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪ್ರತಿನಿಧಿಗಳಿಗೆ ನಿರಾಕರಿಸಿರುವ ಕೇಂದ್ರ ಸರ್ಕಾರದ ಕ್ರಮವು ತಪ್ಪು. ಇದು ಅತ್ಯುತ್ತಮ ಸಂಸದೀಯ ಪರಂಪರೆಗೆ ವಿರುದ್ಧವಾದ ನಡೆ. ಗೃಹ ವ್ಯವಹಾರಗಳಿಗೆ ಸಂಬಂಧಿಸಿದ ಸ್ಥಾಯಿ ಸಮಿತಿಯ ಅಧ್ಯಕ್ಷ ಸ್ಥಾನವನ್ನು ಕಾಂಗ್ರೆಸ್ ಕಳೆದುಕೊಳ್ಳಲಿದೆ. ಆಹಾರ ಮತ್ತು ಗ್ರಾಹಕ ವ್ಯವಹಾರಗಳಿಗೆ ಸಂಬಂಧಿಸಿದ ಸಮಿತಿಯ ಅಧ್ಯಕ್ಷ ಸ್ಥಾನವನ್ನು ಟಿಎಂಸಿ ಕಳೆದುಕೊಳ್ಳುವ ಸಾಧ್ಯತೆ ಇದೆ. ಕಾಂಗ್ರೆಸ್ ಪಕ್ಷವು ಸಂಸತ್ತಿನ ಮೂರು ಸಮಿತಿಗಳ ನೇತೃತ್ವ ವಹಿಸಿದೆ. ಅವುಗಳ ಪೈಕಿ ಗೃಹ ವ್ಯವಹಾರಗಳದ್ದೂ ಒಂದು. ಕಾಂಗ್ರೆಸ್ಸಿನ ಶಶಿ ತರೂರ್ ಅವರು ಮಾಹಿತಿ ತಂತ್ರಜ್ಞಾನಕ್ಕೆ ಸಂಬಂಧಿಸಿದ ಸಮಿತಿಯೊಂದರ ನೇತೃತ್ವ ವಹಿಸಿದ್ದಾರೆ. ಪರಿಸರ, ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದ ಸಮಿತಿಯ ನೇತೃತ್ವವು ಕಾಂಗ್ರೆಸ್ಸಿನ ಜೈರಾಂ ರಮೇಶ್ ಅವರದ್ದು. ಐ.ಟಿ. ಸಮಿತಿಯ ಮುಖ್ಯಸ್ಥ ಸ್ಥಾನದಿಂದ ತರೂರ್ ಅವರನ್ನು ಕೆಳಗಿಳಿಸಲು ಯತ್ನ ನಡೆದಿದೆ ಎಂಬ ವರದಿಗಳು ಇವೆ. ಈ ಯತ್ನವನ್ನು ಕಾಂಗ್ರೆಸ್ಸಿನ ಉಭಯ ಸದನಗಳ ನಾಯಕರು ವಿರೋಧಿಸಿದ್ದಾರೆ. ಅಲ್ಲದೆ, ಐ.ಟಿ. ಕುರಿತ ಸಮಿತಿಯ ಐದು ಮಂದಿ ಸದಸ್ಯರು ತರೂರ್ ಅವರನ್ನು ಅಧ್ಯಕ್ಷ ಸ್ಥಾನದಲ್ಲಿಯೇ ಉಳಿಸಿಕೊಳ್ಳುವಂತೆ ಆಗ್ರಹಿಸಿದ್ದಾರೆ. ಹೀಗೆ ಆಗ್ರಹಿಸಿರುವವರಲ್ಲಿ ಬಿಜೆಪಿಯ ಒಬ್ಬ ಸಂಸದ ಕೂಡ ಸೇರಿದ್ದಾರೆ.

ಸಂಸತ್ತಿನ ಒಳಗೆ ಅಥವಾ ಹೊರಗೆ ವಿರೋಧ ಪಕ್ಷಗಳನ್ನು ಒಳಗೊಳ್ಳದೇ ಇರುವುದರಿಂದ ತನಗೆ ಹಾಗೂ ದೇಶಕ್ಕೆ ಆಗಬಹುದಾದ ನಷ್ಟ ಏನು ಎಂಬುದನ್ನು ಸರ್ಕಾರ ಅರಿಯಬೇಕು

ರಾಜ್ಯಸಭೆಯಲ್ಲಿ ಕಾಂಗ್ರೆಸ್ಸಿನ ಸಂಖ್ಯಾಬಲವು ಮೊದಲು 34 ಇದ್ದಿದ್ದು ಈಗ 31ಕ್ಕೆ ಇಳಿಕೆಯಾಗಿರುವ ಕಾರಣದಿಂದಾಗಿ ಆ ಪಕ್ಷಕ್ಕೆ ಸಮಿತಿಯೊಂದರ ಅಧ್ಯಕ್ಷ ಸ್ಥಾನವನ್ನು ನಿರಾಕರಿಸಲಾಗುತ್ತಿದೆ ಎಂದು ಕೇಂದ್ರವು ಹೇಳಿದೆ. ಪಶ್ಚಿಮ ಬಂಗಾಳದ ವಿಧಾನಸಭೆಯಲ್ಲಿ ಟಿಎಂಸಿ ಪಕ್ಷವು ಸಮಿತಿಗಳನ್ನು ರಚಿಸಿದ ಬಗೆಗೆ ತಿರುಗೇಟು ನೀಡುವ ಉದ್ದೇಶದಿಂದ ಸಂಸತ್ತಿನಲ್ಲಿ ಆ ಪಕ್ಷಕ್ಕೆ ಸಮಿತಿಯೊಂದರ ಅಧ್ಯಕ್ಷ ಸ್ಥಾನ ನಿರಾಕರಿಸಲಾಗುತ್ತಿದೆ ಎಂದು ಹೇಳಲಾಗಿದೆ. ಸ್ಥಾಯಿ ಸಮಿತಿಗಳ ಅಧ್ಯಕ್ಷ ಸ್ಥಾನವನ್ನು ನಿರಾಕರಿಸುವುದು ಸಣ್ಣ ವಿಷಯವಾಗಿ ಕಾಣಬಹುದು. ಆದರೆ, ಸಂಸದೀಯ ವ್ಯವಹಾರಗಳಲ್ಲಿ ಇಂತಹ ಸಮಿತಿಗಳ ಪ್ರಾಮುಖ್ಯವನ್ನು ಪರಿಗಣಿಸಿ, ಚಾಲ್ತಿಯಲ್ಲಿ ಇರುವ ಸಂಪ್ರದಾಯಗಳನ್ನು ಗೌರವಿಸಬೇಕಾದ ಅಗತ್ಯವನ್ನು ಗಮನಿಸಿ ಹೇಳುವುದಾದಲ್ಲಿ, ಆಡಳಿತಾರೂಢ ಪಕ್ಷವು ವಿರೋಧ ಪಕ್ಷಗಳ ಜೊತೆ ವ್ಯವಹರಿಸುವಾಗ ಇನ್ನಷ್ಟು ಒಳಗೊಳ್ಳುವ ಮನೋಭಾವ ತೋರಿಸಬೇಕು. ಸಂಸತ್ತು ಎಂದರೆ ಅಲ್ಲಿ ಸಂಖ್ಯೆ ಮಾತ್ರವೇ ಮುಖ್ಯವಲ್ಲ. ವಿರೋಧ ಪಕ್ಷಗಳ ಸಂಖ್ಯಾ ಬಲ ಕಡಿಮೆ ಆಗಿದ್ದರೂ, ಅವು ಸಂಸತ್ತಿನ ಬಹುಮುಖ್ಯ ಭಾಗ. ವಿರೋಧ ಪಕ್ಷಗಳ ಅಸ್ತಿತ್ವವು ಇತರರ ಗಮನಕ್ಕೆ ಬರುವಂತೆ ಹಾಗೂ ಅವುಗಳ ಧ್ವನಿಯು ಇತರರ ಕಿವಿಗೂ ಬೀಳುವಂತೆ ಕೇಂದ್ರ ಸರ್ಕಾರ ನೋಡಿಕೊಳ್ಳಬೇಕು. ಆಗಮಾತ್ರ ಸರ್ಕಾರದ ಕೆಲಸವೂ ಸರಿಯಾದ ರೀತಿಯಲ್ಲಿ ಸಾಗುತ್ತದೆ.

ಆದರೆ, ಕೇಂದ್ರ ಸರ್ಕಾರವು ಸಂಸತ್ತಿನ ಒಳಗೆ ಅಥವಾ ಹೊರಗೆ ವಿರೋಧ ಪಕ್ಷಗಳನ್ನು ಒಳಗೊಳ್ಳುವ ಪ್ರವೃತ್ತಿಯನ್ನು ಹೊಂದಿಲ್ಲ. ಆದರೆ ಈ ರೀತಿ ಮಾಡುವುದರಿಂದ ತನಗೆ ಹಾಗೂ ದೇಶಕ್ಕೆ ಆಗಬಹುದಾದ ನಷ್ಟ ಏನು ಎಂಬುದು ಸರ್ಕಾರಕ್ಕೆ ಅರಿವಾಗಬೇಕು. ಮುಂದೆ ಸಂಸತ್ತಿನಲ್ಲಿ ಮಂಡನೆ ಆಗಬಹುದಾದ ಮಸೂದೆಗಳನ್ನು ಆಮೂಲಾಗ್ರವಾಗಿ ಚರ್ಚಿಸುವ ವೇದಿಕೆಗಳು ಸಂಸತ್ತಿನ ಸ್ಥಾಯಿ ಸಮಿತಿಗಳು. ಸಂಸತ್ತಿನಲ್ಲಿ ಮಸೂದೆಗಳನ್ನು ವಿಸ್ತೃತವಾಗಿ ಪರಿಶೀಲನೆಗೆ ಒಳಪಡಿಸುವುದು ಸುಲಭದ ಕೆಲಸವಲ್ಲ. ಹಾಗಾಗಿ, ಸ್ಥಾಯಿ ಸಮಿತಿಗಳು ಮಾಡಬೇಕಾದ ಕೆಲಸವು ಮಹತ್ವ ಪಡೆಯುತ್ತದೆ. ಮಸೂದೆಗಳನ್ನು ಸೂಕ್ಷ್ಮವಾಗಿ ಹಾಗೂ ವಿಮರ್ಶಾತ್ಮಕವಾಗಿ ಪರಿಶೀಲಿಸಿ, ಅವುಗಳಿಗೆ ಸೂಕ್ತ ಬದಲಾವಣೆಗಳನ್ನು ಸೂಚಿಸುವ ಮೂಲಕ ವಿರೋಧ ಪಕ್ಷಗಳು ಮಸೂದೆಗಳನ್ನು ಇನ್ನಷ್ಟು ಪರಿಣಾಮಕಾರಿ ಆಗಿಸುತ್ತವೆ. ಇಂತಹ ಸಮಾಲೋಚನೆ ಪ್ರಕ್ರಿಯೆಗಳ ಕಾರಣದಿಂದಾಗಿ ಹಿಂದೆ ಹಲವು ಮಸೂದೆಗಳು ಪ್ರಯೋಜನ ಪಡೆದುಕೊಂಡಿವೆ. ಈಗ ಸಂಸತ್ತಿನಲ್ಲಿ ಮತ್ತು ಸಂಸತ್ತಿನ ಸಮಿತಿಗಳಲ್ಲಿ ವಿರೋಧ ಪಕ್ಷಗಳಿಗೆ ಹೆಚ್ಚಿನ ಪ್ರಾತಿನಿಧ್ಯ ಇಲ್ಲ. ಈಗಿರುವ ಸಣ್ಣ ಪ್ರಾತಿನಿಧ್ಯವನ್ನೂ ನಿರಾಕರಿಸುವ ಕೆಲಸವು ಆಡಳಿತಾರೂಢ ಪಕ್ಷದ ಕಡೆಯಿಂದ ಆಗಬಾರದು. ಅಧ್ಯಕ್ಷ ಸ್ಥಾನವನ್ನು ತನ್ನ ಜೊತೆ ಸ್ನೇಹದಿಂದ ಇರುವ ಇನ್ನೊಂದು ಪಕ್ಷಕ್ಕೆ ನೀಡುವುದೂ ಸರಿಯಲ್ಲ. ಏಕೆಂದರೆ, ಇಂತಹ ಸಮಿತಿಗಳು ಮಸೂದೆಗಳನ್ನು ವಿಮರ್ಶಾತ್ಮಕವಾಗಿ, ಚಿಕಿತ್ಸಕವಾಗಿ ನೋಡುವ ಅಗತ್ಯ ಇದೆ.

ದಿನದ ಟ್ವೀಟ್

ಇಷ್ಟು ವರ್ಷಗಳ ಬಳಿಕ...

2016ರ ನವೆಂಬರ್ 8ರಂದು ನೋಟು ರದ್ದತಿಯ ತೀರ್ಮಾನವನ್ನು ಪ್ರಕಟಿಸಲಾಯಿತು. ಆರು ವರ್ಷಗಳ ನಂತರ, ಸುಪ್ರೀಂ ಕೋರ್ಟ್‌ನ ಐವರು ನ್ಯಾಯಮೂರ್ತಿಗಳ ಪೀಠವು ಅದು ಸಂವಿಧಾನಬದ್ಧ ಆಡಗಿತ್ತೇ ಎಂಬುದರ ಬಗ್ಗೆ ಸಮಯ ವಿನಿಯೋಗಿಸಲಿದೆ.

ಶಿಶಿರ, ಸಹಸಂಸ್ಥಾಪಕ, ಬಾರ್ ಆ್ಯಂಡ್ ಬೆಂಚ್ ಆನ್‌ಲೈನ್ ಪೋರ್ಟಲ್

ಕಿಡಿನುಡಿ

ಪಂಜಾಬ್‌ನಲ್ಲಿ ಕಾಂಗ್ರೆಸ್ ಒಡೆಯಿತು. ಗೋವಾದಲ್ಲಿ 8 ಶಾಸಕರು ಕಾಂಗ್ರೆಸ್ ತೊರೆದರು. ರಾಜಸ್ಥಾನದಲ್ಲಿ ಅಶೋಕ್ ಗೆಹಲೋತ್ ಮತ್ತು ಸಚಿನ್ ಪೈಲಟ್ ಮಧ್ಯೆ ಕಾಳಗ ಮುಂದುವರಿದಿದೆ. ಕರ್ನಾಟಕದಲ್ಲೂ ಸಿದ್ದರಾಮಯ್ಯ- ಡಿ.ಕೆ.ಶಿವಕುಮಾರ್ ಮಧ್ಯೆ ಭಿನ್ನಮತ ಭುಗಿಲೇಳಲಿದೆ.

ಅರುಣ್ ಸಿಂಗ್, ಬಿಜೆಪಿ ಕರ್ನಾಟಕ ಉಸ್ತುವಾರಿ

25 ವರ್ಷಗಳ ಹಿಂದೆ

ಸೋಮವಾರ, 29-9-1997

• ದೇಶದ ರಕ್ಷಣಾ ತಂತ್ರಜ್ಞಾನ ಸ್ವಾವಲಂಬನೆಗೆ ಪ್ರಧಾನಿ ಕರೆ

ನವದೆಹಲಿ, ಸೆ. 28 (ಪಿಟಿಐ)– ಕೆಲವು ಆಯಕಟ್ಟಿನ ಕ್ಷೇತ್ರಗಳಲ್ಲಿ ಭಾರತಕ್ಕೆ ಅತ್ಯಾಧುನಿಕ ತಂತ್ರಜ್ಞಾನವನ್ನು 'ಬಲಿಷ್ಠ ಶಕ್ತಿಗಳು' ನಿರಾಕರಿಸುತ್ತಿರುವ ಹಿನ್ನೆಲೆಯಲ್ಲಿ ಅದನ್ನು ಸವಾಲಾಗಿ ತೆಗೆದುಕೊಂಡು ರಕ್ಷಣೆ ಹಾಗೂ ಇತರೆ ಕ್ಷೇತ್ರದಲ್ಲಿ ದೇಶವನ್ನು ಸ್ವಾವಲಂಬಿಯನ್ನಾಗಿ ಮಾಡಬೇಕು ಎಂದು ಪ್ರಧಾನಿ ಐ.ಕೆ. ಗುಜ್ರಾಲ್ ಅವರು ವಿಜ್ಞಾನಿಗಳಿಗೆ ಕರೆ ನೀಡಿದ್ದಾರೆ.

ರಕ್ಷಣಾ ಸಂಶೋಧನೆ ಹಾಗೂ ಅಭಿವೃದ್ಧಿ ಸಂಘಟನೆಯ ನಿರ್ದೇಶಕರ 23ನೇ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಪ್ರಧಾನಿ, ರಾಷ್ಟ್ರದ ವಿದೇಶಾಂಗ ಹಾಗೂ ಆಂತರಿಕ ನೀತಿಗಳ ಯಶಸ್ಸಿಗೆ ಸ್ವಾವಲಂಬನೆ ಪ್ರಮುಖವಾಗಿದೆ ಎಂದರು.

ಯಾವುದೇ ರಾಷ್ಟ್ರದ ಹೆಸರನ್ನು ಪ್ರಸ್ತಾಪಿಸದೆ, ರಾಷ್ಟ್ರಕ್ಕೆ ಆತ್ಮವಿಶ್ವಾಸವಿಲ್ಲದೆ ಅಥವಾ ತನ್ನ ಅಗತ್ಯಗಳಿಗೆ ಇತರೆಯವರ ಮೇಲೆ ಅವಲಂಬಿಯಾದಾಗ ಯಾವ ವಿದೇಶಾಂಗ ನೀತಿಯೂ ಫಲಪ್ರದವಾಗುವುದಿಲ್ಲ ಎಂದು ಹೇಳಿದರು.

• ಇಂದು ಐಆರ್‌ಎಸ್– 1ಡಿ ಉಪಗ್ರಹ ಉಡಾವಣೆ

ಚೆನ್ನೈ, ಸೆ. 28(ಪಿಟಿಐ)– ಇದೇ ಪ್ರಥಮ ಬಾರಿ ದೇಶದಲ್ಲಿ ನಿರ್ಮಿಸಲಾದ ರಾಕೆಟ್ ಮೂಲಕ ನಾಳೆ ಬೆಳಿಗ್ಗೆ ಅಂತರಿಕ್ಷಕ್ಕೆ ಹಾರಲಿರುವ ಅತ್ಯಾಧುನಿಕ ದೂರಸಂವೇದಿ ಉಪಗ್ರಹ ಐಆರ್‌ಎಸ್– 1ಡಿಯ ಐತಿಹಾಸಿಕ ಉಡಾವಣೆ ವೀಕ್ಷಿಸಲು ಪ್ರಧಾನಿ ಐ.ಕೆ. ಗುಜ್ರಾಲ್ ಅವರು ಶ್ರೀಹರಿಕೋಟಾದಲ್ಲಿ ಉಪಸ್ಥಿತರಿರಲಿದ್ದಾರೆ. 'ನಮ್ಮ ರಾಕೆಟ್‌ನಿಂದಲೇ ನಾವು ಉಪಗ್ರಹ ಉಡಾವಣೆ ಮಾಡುತ್ತಿರುವುದು ನನಗೆ ಅತ್ಯಂತ ಹೆಮ್ಮೆ ಎನಿಸುತ್ತದೆ' ಎಂದು ಪ್ರಧಾನಿ ಹೇಳಿದ್ದಾರೆ.

50 ವರ್ಷಗಳ ಹಿಂದೆ

ಶುಕ್ರವಾರ, 29-9-1972

• ಚೀನಾ, ಜಪಾನ್ ನಡುವೆ ರಾಯಭಾರಿ ವಿನಿಮಯ– ಸಮರ ಸ್ಥಿತಿ ಅಂತ್ಯ

ಪೀಕಿಂಗ್, ಸೆ. 28– ಚೀನಾ ಮತ್ತು ಜಪಾನ್ ನಡುವೆ 'ಸಮರ ಪರಿಸ್ಥಿತಿ'ಯನ್ನು ಅಂತ್ಯಗೊಳಿಸಿ ರಾಜತಾಂತ್ರಿಕ ಬಾಂಧವ್ಯ ಸ್ಥಾಪಿಸಲು ಉಭಯ ರಾಷ್ಟ್ರಗಳು ನಿರ್ಧರಿಸಿವೆ ಎಂದು ಚೀನಾದ ಪ್ರಧಾನಿ ಚೌ ಎನ್ ಲೈ ಅವರು ಇಂದು ಪ್ರಕಟಿಸಿದರು.

ಚೀನಾ– ಜಪಾನ್ ಶೃಂಗಸಭೆ ಈ ದಿನ ರಾತ್ರಿ ಕೊನೆಗೊಂಡಿತು. ಉಭಯ ರಾಷ್ಟ್ರಗಳ ನಡುವಣ ಎಲ್ಲ ಸಮಸ್ಯೆಗಳನ್ನೂ ಬಗೆಹರಿಸಲಾಗಿದೆ ಎಂದು ಜಪಾನಿನ ವಕ್ತಾರರು ಹೇಳಿದ್ದಾರೆ.

ರಾಜತಾಂತ್ರಿಕ ಬಾಂಧವ್ಯದ ಸ್ಥಾಪನೆಯನ್ನು ವಿಧ್ಯುಕ್ತವಾಗಿ ಪ್ರಕಟಿಸುವ ಜಂಟಿ ಹೇಳಿಕೆಗೆ ನಾಳೆ ಬೆಳಿಗ್ಗೆ ಪೀಕಿಂಗ್‌ನಲ್ಲಿ ಸಹಿ ಬೀಳಲಿದೆ.

• ಹರಟೆಪ್ರಿಯ ಮಾವೊಗೆ ಸಂಧಿವಾತ

ಟೋಕಿಯೋ, ಸೆ. 28– ಚೀನಾದ ನಾಯಕ ಮಾವೊ-ತ್ಸೆ-ತುಂಗ್ ದಿನೇದಿನೇ ನಿಶ್ಶಕ್ತರಾಗುತ್ತಿದ್ದಾರೆ. ಕಾಲುಗಳಲ್ಲಿ ಸಂಧಿವಾತದಿಂದ ಅವರು ನರಳುತ್ತಿದ್ದಾರೆ. ಆದ್ದರಿಂದಲೇ ಅವರು ಬಹುತೇಕ ಅಧ್ಯಯನದಲ್ಲೋ ಇಲ್ಲ ಹಾಸಿಗೆ ಮೇಲೋ ಇರುತ್ತಾರೆ. ಅವರು ಹೊರಗೆ ಕಾಣಿಸಿಕೊಳ್ಳುತ್ತಿಲ್ಲ.

ಎಂಬತ್ತು ವರ್ಷ ವಯಸ್ಸನ್ನು ಸಮೀಪಿಸುತ್ತಿರುವ ಅವರ ಆರೋಗ್ಯದಲ್ಲಿ ಏರುಪೇರಾಗುತ್ತಿರುವುದು ಸಂಧಿವಾತದಿಂದಲೇ ಎಂದು ಹೇಳಲಾಗಿದೆ.

ಜಪಾನಿನ ಪ್ರಧಾನಿ ತನಾಕ ಅವರನ್ನು ಅವರು ಇಂದು ಸ್ವಾಗತಿಸಬೇಕಿತ್ತು. ಅವರ ಅನಿಶ್ಚಿತತೆ ಸ್ವಭಾವದಿಂದ ಅವರು ನಿನ್ನೆ ರಾತ್ರಿ ಚೀನಾದ ಇತಿಹಾಸ, ಆಹಾರ, ಪಾನೀಯಗಳ ಬಗ್ಗೆ ಹರಟೆ ಹೊಡೆಯಲು ಜಪಾನಿನ ನಾಯಕರಿಗೆ ಹೇಳಿ ಕಳಿಸಿದರು.

ಸದ್ಯದ ಸ್ಥಿತಿಯಲ್ಲಿ ರಾಹುಲ್ ಗಾಂಧಿ ಮುಂದೆ ಇರುವುದು ಎರಡೇ ಮಾರ್ಗ

ರಾಹುಲ್ ಮತ್ತು ರಾಜಕೀಯ ತಂತ್ರಗಾರಿಕೆ

ವಿಶ್ಲೇಷಣೆ

ದಿನೇಶ್ ಅಮಿನ್ ಮಟ್ಟು

ರಾಜಕಾರಣದಲ್ಲಿದ್ದು ರಾಜಕಾರಣಿಯಾಗಲು ನಿರಾಕರಿಸುತ್ತಿರುವುದೇ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ನಿಜವಾದ ಸಮಸ್ಯೆ. ಇದು, ಕಳೆದ 18 ವರ್ಷಗಳ ಸಕ್ರಿಯ ರಾಜಕಾರಣದಲ್ಲಿ ಅವರು ಎದುರಿಸಿಕೊಂಡು ಬರುತ್ತಿರುವ ಆಂತರಿಕ ಸಂಘರ್ಷವೂ ಹೌದು. ರಾಜಕಾರಣದಲ್ಲಿ ರಾಜಕಾರಣಿಗಳಿಗಷ್ಟೇ ಜಾಗ, ಸಂತ-ಸನ್ಯಾಸಿಗಳಿಗಲ್ಲ ಎನ್ನುವ ಸರಳ ಸತ್ಯ ಅವರಿಗಿನ್ನೂ ಅರ್ಥವಾದಂತಿಲ್ಲ.

ಮಹಾತ್ಮ ಗಾಂಧೀಜಿಯೂ ಸಂತರಾಗಿರಲಿಲ್ಲ, ಅವರು ಈ ದೇಶ ಕಂಡ ಅತ್ಯಂತ ಚಾಣಾಕ್ಷ ರಾಜಕಾರಣಿಯಾಗಿದ್ದರು. ಸುಭಾಷ್‌ಚಂದ್ರ ಬೋಸ್ ಅವರಿಂದ ಹಿಡಿದು ಬಾಬಾಸಾಹೇಬ್ ಅಂಬೇಡ್ಕರ್ ಅವರವರೆಗೆ ತಮ್ಮ ಎಲ್ಲ ಪ್ರತಿಸ್ಪರ್ಧಿಗಳನ್ನೂ ಗಾಂಧೀಜಿ ರಾಜಕಾರಣಿಯಾಗಿಯೇ ಎದುರಿಸಿ ಪಕ್ಕಕ್ಕೆ ಸರಿಸಿದ್ದರು. ಅವರ ಅಹಿಂಸಾ ಹೋರಾಟವೂ ಶಸ್ತ್ರಪ್ರಯೋಗ ಮಾಡದೆ ಎದುರಾಳಿಯನ್ನು ನಿಶ್ಶಸ್ತ್ರಗೊಳಿಸುವ ರಾಜಕೀಯ ತಂತ್ರವಾಗಿತ್ತು.

ಅಧಿಕಾರ ಬೇಡ ಎನ್ನುವವರು ಮೊದಲು ಅದನ್ನು ಗಳಿಸಬೇಕಾಗುತ್ತದೆ. ಕೈಯಲ್ಲಿ ಇಲ್ಲದ ಅಧಿಕಾರವನ್ನು ತ್ಯಾಗ ಮಾಡಲು ಬರುವುದಿಲ್ಲ ಎನ್ನುವ ಸರಳ ಸತ್ಯವನ್ನು ತಮ್ಮ ತಾಯಿಯಿಂದಾದರೂ ರಾಹುಲ್ ಕಲಿಯಬೇಕಿತ್ತು. 'ಸೋನಿಯಾ ಲಾವೋ ಕಾಂಗ್ರೆಸ್ ಬಚಾವೋ' ಎಂದು ಮನೆ ಎದುರು ಉರುಳು ಸೇವೆ ಮಾಡಿ ತಮ್ಮನ್ನು ರಾಜಕೀಯಕ್ಕೆ ಎಳೆದು ತಂದಿದ್ದ ಇದೇ ಪವಾರ್-ಸಂಗ್ಮಾ-ತಾರೀಕ್ ಗ್ಯಾಂಗ್ 'ನೀವೊಬ್ಬರು ವಿದೇಶಿ' ಎಂದು ಜರಿದಾಗ ಸೋನಿಯಾ ಗಾಂಧಿ ಕುಸಿದುಹೋಗಿದ್ದರಂತೆ. ಆಗಲೂ 'ಸಾಕಮ್ಮಾ ರಾಜಕೀಯ, ರಾಜೀನಾಮೆ ಎಸೆದುಬಿಡು' ಎಂದು ರಾಜೀನಾಮೆ ಬರೆಸಿದ್ದು ಇದೇ ರಾಹುಲ್ ಮತ್ತು ಪ್ರಿಯಾಂಕಾ.

ಸೋನಿಯಾ ಗಾಂಧಿಯವರ ಯೋಜನೆಯೇ ಬೇರೆಯಾಗಿತ್ತು. ಆ ಹೊತ್ತಿನಲ್ಲಿ ಅವರು ಕೈಗೊಂಡಿದ್ದ ನಿರ್ಧಾರವು ಮಹಾಭಾರತದಲ್ಲಿ ದ್ರೌಪದಿ ತೆಗೆದುಕೊಂಡ ನಿರ್ಧಾರವಾಗಿತ್ತು. ತನ್ನವರಿಂದಲೇ ಅವಮಾನಿತರಾದ ಆ ದಿನದಿಂದ 2004ರ ಲೋಕಸಭಾ ಚುನಾವಣೆಯ ಫಲಿತಾಂಶದ ದಿನದವರೆಗಿನ ನಾಲ್ಕು ವರ್ಷಗಳ ಕಾಲ ಸೋನಿಯಾ ಗಾಂಧಿ ನಡೆಸಿದ್ದ ಹೋರಾಟದಲ್ಲಿ ಸೇಡಿನ ಜ್ವಾಲೆ, ಸ್ವಾಭಿಮಾನದ ಸಂಘರ್ಷ ಮತ್ತು ರಾಜಕೀಯ ಎಲ್ಲವೂ ಇದ್ದವು. ಕೊನೆಗೂ ಕೈಗೆ ಬಂದ ಅಧಿಕಾರವನ್ನು ತ್ಯಾಗ ಮಾಡಿ ಅವರು ನಾಯಕಿಯಾದರು. ಆ ಬಲದಿಂದಲೇ ಇಂದಿಗೂ ಅವರು ನಾಯಕಿಯಾಗಿಯೇ ಉಳಿದಿದ್ದಾರೆ. ಒಂದೊಮ್ಮೆ ಆ ಚುನಾವಣೆಯಲ್ಲಿ ಕಾಂಗ್ರೆಸ್ ಸೋತಿದ್ದರೆ? ದೇಶದ ಜನ ಮಾತ್ರವಲ್ಲ ಕಾಂಗ್ರೆಸ್ಸಿಗರೂ ಸೋನಿಯಾ ಅವರನ್ನು ಮರೆತುಬಿಟ್ಟು ವರ್ಷಗಳೇ ಆಗಿರುತ್ತಿದ್ದವು.

ರಾಹುಲ್ ಆಗಾಗ ನೆನಪು ಮಾಡಿಕೊಳ್ಳುವ ಅವರ ಅಜ್ಜಿ ಇಂದಿರಾ ಗಾಂಧಿಯವರೂ ಇದೇ ರೀತಿ ರಾಜಕೀಯ ಅಸ್ತಿತ್ವದ ಸಂಘರ್ಷವನ್ನು ಎದುರಿಸಿಗೆದ್ದವರು. ಕಾಮರಾಜ್ ನಾಡಾರ್ ಅವರಿಂದ ಹಿಡಿದು ಎಸ್.ನಿಜಲಿಂಗಪ್ಪನವರವರೆಗೆ ಪಕ್ಷದ ಘಟಾನುಘಟಿ ನಾಯಕರು ತಿರುಗಿಬಿದ್ದಾಗ ಇಂದಿರಾ ಗಾಂಧಿ ಉತ್ತರ ಕೊಟ್ಟದ್ದು 1971ರ ಚುನಾವಣೆಯ ಫಲಿತಾಂಶದ ಮೂಲಕ. ಕಾಂಗ್ರೆಸ್ ಪಕ್ಷದ ಇಬ್ಬರೂ ನಾಯಕಿಯರು ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿಯೇ ತಮ್ಮ ರಾಜಕೀಯ ಅಸ್ತಿತ್ವದ ಹೋರಾಟವನ್ನು ನಡೆಸಿದ್ದರು ಎನ್ನುವುದನ್ನು ರಾಹುಲ್ ಮರೆತಂತಿದೆ. ಪಕ್ಷದ ಅಧ್ಯಕ್ಷರಾಗಲು ನಿರಾಕರಿಸುವವರನ್ನು ಯಾರೂ ತ್ಯಾಗಮಯಿ ಎನ್ನುವುದಿಲ್ಲ, ಜವಾಬ್ದಾರಿ ವಹಿಸಿಕೊಳ್ಳಲು ನಿರಾಕರಿಸುತ್ತಿರುವ ಪುಕ್ಕಲ ಎನ್ನುತ್ತಾರೆ ಅಷ್ಟೆ. ತ್ಯಾಗಮಯಿ ಅನಿಸಿಕೊಳ್ಳಬೇಕಾದರೆ ಮೊದಲು ಪಕ್ಷವನ್ನು ಅಧಿಕಾರಕ್ಕೆ ತಂದು ನಂತರ ಅಧಿಕಾರವನ್ನು ನಿರಾಕರಿಸಬೇಕಾಗುತ್ತದೆ.

ತಮ್ಮ ಅಜ್ಜಿ ಮತ್ತು ತಂದೆಯ ಸಾವು, ತಾಯಿ ಎದುರಿಸಿದ ಅವಮಾನ ಹಾಗೂ ನಂಬಿದವರ ಆತ್ಮಘಾತುಕತನವನ್ನು ಕಂಡು ಬೆಳೆದ ರಾಹುಲ್ ಅವರಲ್ಲಿ ಅಧಿಕಾರದ ಬಗ್ಗೆ ವೈರಾಗ್ಯ ಇದ್ದ ಹಾಗಿದೆ. ಅಧಿಕಾರದಿಂದ ದೂರ ಇರಬೇಕು ಎನ್ನುವ ಪ್ರಜ್ಞಾಪೂರ್ವಕ ನಿರ್ಧಾರವನ್ನು ಅವರು ಸಕ್ರಿಯ ರಾಜಕೀಯ ಪ್ರವೇಶದ ದಿನದಿಂದಲೇ ಕೈಗೊಂಡಿರುವಂತೆ ಕಾಣುತ್ತಿದೆ. ಹಾಗಿಲ್ಲದಿದ್ದರೆ 2004ರಲ್ಲಿಯೇ ಅವರು ಮನಮೋಹನ್ ಸಿಂಗ್ ನೇತೃತ್ವದ ಸಂಪುಟ ಸೇರಿಕೊಳ್ಳಬಹುದಿತ್ತು. ಆ ಕಾಲದಲ್ಲಿ ಸಚಿವರಾಗಲು ನಿರಾಕರಿಸಿದ ರಾಹುಲ್ ಉತ್ತರಪ್ರದೇಶದಲ್ಲಿ ಪಕ್ಷ ಕಟ್ಟಲು ಹೊರಟುಬಿಟ್ಟಿದ್ದರು.

2004ರಲ್ಲಿ ಲೋಕಸಭಾ ಸದಸ್ಯರಾದ ದಿನದಿಂದ ಇಲ್ಲಿಯವರೆಗೆ ರಾಹುಲ್ ಆವೇಶದಿಂದ, ಅಜ್ಞಾನದಿಂದ ಹಲವು ಬಾರಿ ಆಡಬಾರದ ಮಾತುಗಳನ್ನು ಆಡಿದ್ದಾರೆ. ಆದರೆ ಎಂದು ಕೂಡಾ 'ನಾನು ಪ್ರಧಾನಮಂತ್ರಿಯಾದರೆ...' ಎಂದು ತಪ್ಪಿಯೂ ಹೇಳಿಲ್ಲ. 2013ರಲ್ಲಿ ಕಾಂಗ್ರೆಸ್ ಪಕ್ಷದ ಉಪಾಧ್ಯಕ್ಷರಾಗಿ ನೇಮಕಗೊಂಡಾಗ ರಾಹುಲ್ ಅವರು 'ಅಧಿಕಾರ ಎಂದರೆ ವಿಷ' ಎಂದು ಹೇಳಿ ಎಲ್ಲರನ್ನೂ ಚಕಿತಗೊಳಿಸಿದ್ದರು.

ಅಧಿಕಾರ ಮತ್ತು ಜವಾಬ್ದಾರಿಯ ನಡುವೆ ತೆಳ್ಳನೆಯ, ಆದರೆ ಸ್ಪಷ್ಟವಾದ ಗೆರೆ ಇದೆ. ಯಾವುದೇ ರಾಜಕೀಯ ಪಕ್ಷದ ಅಧ್ಯಕ್ಷ ಸ್ಥಾನ ಅಧಿಕಾರ ಅಲ್ಲ, ಅದೊಂದು ಜವಾಬ್ದಾರಿ ಎನ್ನುವುದು ರಾಹುಲ್ ಅವರಿಗೆ ಮನವರಿಕೆಯಾದಂತಿಲ್ಲ. ಹಾಗೆ ನೋಡಿದರೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮಂತ್ರಿ- ಪ್ರಧಾನಮಂತ್ರಿಯ ಸ್ಥಾನವೂ ಸೇವೆ ಮಾಡುವ ಅವಕಾಶವೇ ವಿನಾ ಅಧಿಕಾರದ ಕುರ್ಚಿಯಲ್ಲ (ಇದನ್ನೇ ಪ್ರಧಾನಿ ನರೇಂದ್ರ ಮೋದಿ ಅವರು ನಾಟಕೀಯವಾಗಿ ತಮ್ಮನ್ನು ಪ್ರಧಾನ ಸೇವಕ ಎಂದು ಕರೆದುಕೊಂಡದ್ದು).

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಜಕೀಯ ಪಕ್ಷಗಳ ಗುರುತು ಅವುಗಳ ಸಿದ್ಧಾಂತಗಳು. ಬಿಜೆಪಿಯ ಸಾಮಾನ್ಯ ಕಾರ್ಯಕರ್ತನನ್ನು ಹಿಡಿದು ನಿಲ್ಲಿಸಿ 'ನಿಮ್ಮ ಸಿದ್ಧಾಂತ ಏನು' ಎಂದು ಕೇಳಿದರೆ ಆತ ಥಟ್ಟನೆ 'ಹಿಂದುತ್ವ ನಮ್ಮ ಸಿದ್ಧಾಂತ' ಎಂದು ಹೇಳಿಬಿಡುತ್ತಾನೆ. ಇದನ್ನೇ ಆ ಪಕ್ಷದ ವರಿಷ್ಠರು 'ಸಾಂಸ್ಕೃತಿಕ ರಾಷ್ಟ್ರೀಯತೆ' ಎಂದು ಹೇಳಬಹುದು. ಇದೇ ರೀತಿ ಒಬ್ಬ ಕಾಂಗ್ರೆಸ್ ಕಾರ್ಯಕರ್ತನನ್ನು ಸಿದ್ಧಾಂತದ ಬಗ್ಗೆ ಪ್ರಶ್ನಿಸಿದರೆ ಆತ ತಡವರಿಸುತ್ತಾನೆ. ಈ ಗೊಂದಲ ಆ ಪಕ್ಷದ ನಾಯಕರಲ್ಲಿಯೂ ಇದೆ. ಈ ಪ್ರಶ್ನೆಗೆ 'ಸಂವಿಧಾನದ ಆಶಯಗಳೇ ನಮ್ಮ ಸಿದ್ಧಾಂತ' ಎಂಬ ಸರಳವಾದ ಉತ್ತರ ಇದೆ ಎಂದು ಅವರಿಗೂ ತಿಳಿದಿಲ್ಲ.

ಬಿಜೆಪಿಯ ಸಿದ್ಧಾಂತವನ್ನು ಒಪ್ಪದೆ ಇದ್ದವರು ಕೂಡಾ ಅದೊಂದು ಸೈದ್ಧಾಂತಿಕ ಪಕ್ಷ ಎನ್ನುವುದನ್ನು ಒಪ್ಪುತ್ತಾರೆ. ಒಂದು ಸೈದ್ಧಾಂತಿಕ ಪಕ್ಷವನ್ನು ಇನ್ನೊಂದು ಸೈದ್ಧಾಂತಿಕ ಪಕ್ಷ ಮಾತ್ರ ಎದುರಿಸಲು ಸಾಧ್ಯ. ಸೈದ್ಧಾಂತಿಕ ಪಕ್ಷಕ್ಕೆ ಕಾರ್ಯಕರ್ತರ ಕ್ಯಾಡರ್ ಇರುತ್ತದೆ. ಲೀಡರ್ ಹೇಳಿದ್ದನ್ನು ಕ್ಯಾಡರ್ ಅನುಕರಿಸುತ್ತದೆ. ನರೇಂದ್ರ ಮೋದಿಯವರು 'ತಟ್ಟೆ ಬಡಿಯಿರಿ' ಎಂದು ಹೇಳಿದರೆ ಬಿಜೆಪಿ ಕಾರ್ಯಕರ್ತರು ಬಡಿಯುತ್ತಾರೆ.

ನೋಟು ರದ್ದತಿ ವಿರೋಧಿಸಿ ರಾಹುಲ್ ಎಟಿಎಂ ಎದುರು ಕ್ಯೂನಲ್ಲಿ ನಿಂತಾಗ ಕಾಂಗ್ರೆಸ್ ನಾಯಕರು ಅದರಲ್ಲಿ ಒಳ್ಳೆಯದೆಷ್ಟು, ಕೆಟ್ಟದ್ದೆಷ್ಟು ಎಂದು ಚರ್ಚಿಸುತ್ತಾ ಕೂತಿದ್ದರು. ರಾಹುಲ್ ರೀತಿಯಲ್ಲಿಯೇ ಆರ್‌ಎಸ್‌ಎಸ್ ಅನ್ನು ನೇರವಾಗಿ, ಸ್ಪಷ್ಟವಾಗಿ, ದಿಟ್ಟತನದಿಂದ ವಿರೋಧಿಸುವ ಎಷ್ಟು ನಾಯಕರು ಕಾಂಗ್ರೆಸ್ಸಿನಲ್ಲಿದ್ದಾರೆ? ಕಾಂಗ್ರೆಸ್ ಪಕ್ಷಕ್ಕೆ ಈಗ ತುರ್ತಾಗಿ ಬೇಕಾಗಿರುವುದು ನಾಯಕತ್ವ ಮಾತ್ರವಲ್ಲ, ಅದು ಸೈದ್ಧಾಂತಿಕ ನಾಯಕತ್ವ. ಆ ನಾಯಕತ್ವ ನೀಡುವ ಸೈದ್ಧಾಂತಿಕ ಸ್ಪಷ್ಟತೆ ಮತ್ತು ಬದ್ಧತೆ ಇರುವುದು ರಾಹುಲ್ ಅವರಿಗೆ ಮಾತ್ರ.

ಪಕ್ಷದ ಅಧ್ಯಕ್ಷರಾಗಲು ರಾಹುಲ್ ಹಿಂದೇಟು ಹಾಕಲು ವಂಶಪರಂಪರೆಯ ಆರೋಪದ ಭಯವೂ ಕಾರಣ ಎನ್ನುವುದು ಸತ್ಯ. ವಂಶಪರಂಪರೆ ಎನ್ನುವುದು ಭಾರತದ ಸಮಕಾಲೀನ ರಾಜಕಾರಣದ ಅವಿಭಾಜ್ಯ ಅಂಗವಾಗಿ ಹೋಗಿದೆ. ವಂಶಪರಂಪರೆ ಎನ್ನುವುದು ಕಳಂಕ ಎಂಬ ನಿಯಮವನ್ನು ಪ್ರಧಾನಮಂತ್ರಿ ಹುದ್ದೆಗೆ ಮಾತ್ರ ಅನ್ವಯಿಸಿದರೆ ಖಂಡಿತ ಕಾಂಗ್ರೆಸ್ ಪಕ್ಷವನ್ನು ಅಪರಾಧಿಯ ಕಟಕಟೆಯಲ್ಲಿ ನಿಲ್ಲಿಸಲೇಬೇಕಾಗುತ್ತದೆ. ಅದನ್ನು ಮಂತ್ರಿ-ಮುಖ್ಯಮಂತ್ರಿ ಪದವಿಗಳೆಲ್ಲದಕ್ಕೂ ಅನ್ವಯಿಸುವುದಾದರೆ, ಕಮ್ಯುನಿಸ್ಟರನ್ನು ಹೊರತುಪಡಿಸಿ ದೇಶದ ಯಾವ ಪಕ್ಷವೂ ಅಪರಾಧಿಯ ಕಟಕಟೆಯಿಂದ ಹೊರಗುಳಿಯಲು ಸಾಧ್ಯ ಇಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಧಿಕಾರವನ್ನು ವಂಶಪರಂಪರೆಯ ಬಲದಿಂದ ಬಹುಮಾನವಾಗಿ ಪಡೆಯುವುದಷ್ಟೇ ತಪ್ಪು, ಚುನಾವಣೆಯ ಮೂಲಕ ಗಳಿಸಿಕೊಳ್ಳುವುದು ತಪ್ಪಲ್ಲ ಎನ್ನುವಷ್ಟರಮಟ್ಟಿಗೆ ದೇಶದ ಮತದಾರರು ಮತ್ತು ರಾಜಕೀಯ ಪಕ್ಷಗಳು ಹೊಂದಾಣಿಕೆ ಮಾಡಿಕೊಂಡಿವೆ.

ವಂಶಪರಂಪರೆಯ ಭಾರವನ್ನು ಕೆಳಗಿಳಿಸಿಕೊಳ್ಳಲು ರಾಹುಲ್ ಎಷ್ಟೇ ಪ್ರಯತ್ನಪಟ್ಟರೂ ರಕ್ತಕ್ಕೆ ಅಂಟಿಕೊಂಡ ಸಂಬಂಧದಿಂದ ಮುಕ್ತಿ ಸಿಗಲಾರದು. ಈ ಸ್ಥಿತಿಯಲ್ಲಿ ರಾಹುಲ್ ಮುಂದೆ ಇರುವುದು ಎರಡೇ ಮಾರ್ಗ. ಮೊದಲನೆಯದು, ವಂಶಪರಂಪರೆಯ ಭಾರದ ಜೊತೆಯಲ್ಲಿಯೇ ಪಕ್ಷದ ನಾಯಕತ್ವದ ಜವಾಬ್ದಾರಿ ಒಪ್ಪಿಕೊಳ್ಳುವುದು, ಎರಡನೆಯದು, ಪಕ್ಷದಿಂದಲೇ ನಿರ್ಗಮಿಸಿ ವಂಶಪರಂಪರೆಯ ಭಾರದಿಂದ ಶಾಶ್ವತವಾಗಿ ಮುಕ್ತಿ ಪಡೆಯುವುದು.

ಚುರುಮುರಿ

ರಿವರ್ಸ್ ಲಂಚ

• ಆನಂದ

'ಇದೇನ್ರೀ ಅನ್ಯಾಯ? ಲಂಚ ಕೊಡೋರನ್ನ ಹಿಡಿಯೋದು ನೋಡಿದೀನಿ. ಲಂಚ ವಾಪಸ್ ಮಾಡೋರನ್ನ ಹಿಡಿದಿದಾರಲ್ಲ?' ಎಂದು ಮಡದಿ ಉದ್ಗಾರವೆತ್ತಿದಳು.

'ಅಮ್ಮಾ ತಾಯಿ, ಲಂಚ ವಾಪಸ್ ಮಾಡೋದು ಎಂದರೇನು ವಿವರಿಸುವಂತಹವಳಾಗು' ಎಂದು ಕೇಳಿಕೊಂಡೆ.

'ನನಗೂ ಅರ್ಥವಾಗುತ್ತಿಲ್ಲ. ಪೇಪರಿನಲ್ಲಿ ಬಂದಿದೆ. ಸರ್ಕಾರಿ ಅಧಿಕಾರಿಯೊಬ್ಬ ಮಾಮೂಲಿನಂತೆ ಕೆಲಸ ಮಾಡಿಕೊಡಲು ಮಾಮೂಲಿ ಕೇಳಿದಾನೆ. ಅದು ಕಚೇರಿಯಲ್ಲಿ ಮಾಮೂಲಿ ತಾನೆ? ಮಾಮೂಲಿ ಕೊಟ್ಟಾತ ಇತರರಂತೆ ಸುಮ್ಮನಿರದೆ ಲೋಕಾಯುಕ್ತಕ್ಕೆ ದೂರು ಕೊಟ್ಟಿದ್ದಾನೆ'.

'ಅದು ಮಾಮೂಲಿನಂತಲ್ಲ. ಲಂಚ ಕೊಟ್ಟ ಮೇಲೆ ದೂರು?'

'ಹೌದು. ಅದು ತಿಳಿದುಬಂದಾಗ ಮಾಮೂಲಿ ಪಡೆದುಕೊಂಡ ಅಧಿಕಾರಿ ತನ್ನ ಮೇಲೆ ಕ್ರಮ ಜರುಗಿಸಬಹುದು ಎಂದು ಹೆದರಿಕೊಂಡು...'

'ಅಂದರೆ ಲಂಚ ಪಡೆದ ಮೇಲೂ ಹೆದರುವವರಿದ್ದಾರೆ ಎಂದಾಯಿತು'.

'ಅದು ಗೊತ್ತಿಲ್ಲ. ಅದಿರಲಿ. ಸ್ವಾರಸ್ಯ ಇರುವುದೇ ಇಲ್ಲಿ. ಮಾಮೂಲಿ ಪಡೆದಾತ ಮಾಮೂಲಿ ಕೊಟ್ಟಾತನನ್ನು ಕರೆದು, ನೀನು ಕೊಟ್ಟ ಹಣ ವಾಪಸ್ ಮಾಡ್ತೀನಿ. ಅಷ್ಟೇ ಅಲ್ಲ ಅದರ ಮೇಲೆ ಒಂದಿಷ್ಟು ಹಣ ಕೊಡ್ತೀನಿ...'

'ಅಂದರೆ ಇನ್‌ಸೆಂಟಿವ್, ರಿಬೇಟ್ ತರಹ... ಎಷ್ಟು?'

'50,000 ರೂಪಾಯಿ ಎಕ್ಸ್‌ಟ್ರಾ ಕೊಡ್ತೀನಿ, ಕೇಸ್ ವಾಪಸ್ ತೊಗೋ ಎಂದು ಕೇಳಿಕೊಂಡಿದಾನೆ'.

'ಸೊ, ಈಗ ಕೊಟ್ಟ ಮಾಮೂಲಿ ಹಣ ಪ್ಲಸ್ ಇನ್‌ಸೆಂಟಿವ್ ಸೇರಿಸಿ ವಾಪಸ್ ಕೊಡುತ್ತಿದ್ದಾಗ ಪೊಲೀಸ್ ಎಂಟ್ರಿ. ಅಧಿಕಾರಿ ಅರೆಸ್ಟ್'.

'ಈ ರಿವರ್ಸ್ ಲಂಚ ಕೊಟ್ಟಿದ್ದಕ್ಕೆ ಕ್ರಮ ಇಲ್ಲವೇನು?'

'ರಿವರ್ಸ್ ಲಂಚ?'

'ಅದೇ ಕೇಸ್ ವಾಪಸ್ ಪಡೆಯಲು ಕೊಟ್ಟಿದ್ದ ಹಣ. ಅದೂ ಒಂದು ತರಹ ಲಂಚ ತಾನೇ?'

'ಅದಕ್ಕೆ ಕಾನೂನಿನಲ್ಲಿ ಅವಕಾಶ ಇಲ್ಲಾಂತ ಕಾಣುತ್ತದೆ'.

'ಸರ್ಕಾರ ಮುಂದೆ ಕಾನೂನಿಗೆ ಸೂಕ್ತ ತಿದ್ದುಪಡಿ ತರಬಹುದು' ಎಂದು ಮಾತು ಮುಗಿಸಿದೆ.

ಸಂಗತ

ಆಹಾರ ಪದಾರ್ಥಕ್ಕೇಕೆ 'ತೀರು ತೇದಿ'?

ಸುರಕ್ಷಿತವೂ ಪೌಷ್ಟಿಕವೂ ಆದ ಆಹಾರ ಸವಿಯದೆ ದಂಡವಾಗುವುದನ್ನು ಪ್ರಕೃತಿ ಕೂಡ ಕ್ಷಮಿಸದು

• ಯೋಗಾನಂದ

ವಿಶ್ವ ಕುಟುಂಬದಲ್ಲಿ ಎಲ್ಲರಿಗೂ ಸಾಕಾಗುವಷ್ಟು ಪೌಷ್ಟಿಕ ಆಹಾರ ಉತ್ಪಾದನೆಯಾಗುತ್ತಿದೆ. ಹಸಿವು ಕಾಡಿದ್ದರೆ ಅದು ಆಹಾರ ಹಾನಿ, ದುಂದು, ದುರ್ವ್ಯಯದಿಂದ. ಆಹಾರ ವ್ಯರ್ಥಗೊಳಿಸುವುದರಲ್ಲಿ ಅಭಿವೃದ್ಧಿ ಹೊಂದಿದ ರಾಷ್ಟ್ರಗಳದ್ದೇ ಸಿಂಹಪಾಲು. ಅವು ವರ್ಷಕ್ಕೆ ಒಟ್ಟು ಸುಮಾರು 23 ಕೋಟಿ ಟನ್‌ಗಳಷ್ಟು ಆಹಾರ ಪೋಲಾಗಿಸುತ್ತವೆ. ಇನ್ನು ಅಭಿವೃದ್ಧಿಶೀಲ ದೇಶಗಳಲ್ಲಿ ಯುಕ್ತ ತಂತ್ರಜ್ಞಾನದ ಸೌಲಭ್ಯ ಕಡಿಮೆ. ಹೊಲಗದ್ದೆಗಳಲ್ಲೇ ಆಹಾರದ ನಷ್ಟ, ಪೋಲು ಆರಂಭ. ಸಮಯಕ್ಕೆ ತಕ್ಕಂತೆ ಕಟಾಯಿಸಲಾಗದೆ, ಸಾಗಿಸಲಾಗದೆ, ಸಂಸ್ಕರಿಸಲಾಗದೆ ಕೈಗೆ ಬಂದಿದ್ದು ಬಾಯಿಗೆ ಬಾರದಂತಹ ಸ್ಥಿತಿ. ಹಾನಿಯ ಶೇಕಡ 40ರಷ್ಟು ಸುಗ್ಗಿಪೂರ್ವ ಮತ್ತು ಸಂಸ್ಕರಣಾ ಹಂತಗಳಲ್ಲಿ ಸಂಭವಿಸುತ್ತದೆ.

ಜಗತ್ತಿನಲ್ಲಿ ಉತ್ಪಾದನೆಯಾಗುವ, ಮನುಷ್ಯ ಸೇವನೆಗೆ ಯೋಗ್ಯವಾದ ಆಹಾರದ ಮೂರನೆಯ ಒಂದು ಭಾಗ ಹಾನಿಗೀಡಾಗುತ್ತಿದೆ ಅಥವಾ ವ್ಯರ್ಥವಾಗುತ್ತಿದೆ. ಹಣ್ಣು, ತರಕಾರಿ, ಮೊಟ್ಟೆ, ಮಾಂಸ, ಹಾಲು, ಸಾಗರ ಆಹಾರ ಹಾಗೂ ದವಸ–ಧಾನ್ಯಗಳು ಸೇರಿದಂತೆ ವರ್ಷಕ್ಕೆ ಒಟ್ಟು 130 ಕೋಟಿ ಟನ್ ಆಹಾರ ಹಾಳಾಗುತ್ತಿದೆ. ಇದರ ಮೌಲ್ಯ ಅಂದಾಜು ₹ 80 ಲಕ್ಷ ಕೋಟಿ!

ಆಹಾರ ಹಾನಿ ಮತ್ತು ಪೋಲು ಒಂದು ಜ್ವಲಂತ ಜಾಗತಿಕ ಸಮಸ್ಯೆ. ಸುರಕ್ಷಿತವೂ ಪೌಷ್ಟಿಕವೂ ಆದ ಆಹಾರ ಸವಿಯದೆ ದಂಡವಾಗುವುದನ್ನು ಪ್ರಕೃತಿ ಕೂಡ ಕ್ಷಮಿಸದು. ಕೃಷಿಗೆ ನೀರು, ಗೊಬ್ಬರ, ವಿದ್ಯುತ್‌ನಂತಹ ಸೌಕರ್ಯಗಳನ್ನು ಸಮರ್ಪಕವಾಗಿ ಒದಗಿಸದೆ ಆಹಾರ ಪದಾರ್ಥ ಉತ್ಪಾದನೆ ಪ್ರಮಾಣ ಕುಂಠಿತವಾಗಬಹುದು. 'ಹೊಲ ನೋಡದೆ ಹೋಯ್ತು' ಎನ್ನುವುದು ಆಡುಮಾತು.

ದುರ್ದೈವವೆಂದರೆ, ಗ್ರಾಹಕರೇ ಬಹುತೇಕ ಈ ದಿಸೆಯಲ್ಲಿ ಕಟಕಟೆಯಲ್ಲಿ ನಿಲ್ಲಲರ್ಹರಾಗಿದ್ದಾರೆ. 2030ರ ವೇಳೆಗೆ ಜಾಗತಿಕವಾಗಿ ಆಹಾರದ ಪೋಲನ್ನು ಶತಾಯಗತಾಯ ಶೂನ್ಯಕ್ಕಿಳಿಸಬೇಕೆಂದು ವಿಶ್ವಸಂಸ್ಥೆ ಪಣತೊಟ್ಟಿದೆ. 2050ರ ವೇಳೆಗೆ ಈಗಿರುವ ಜನಸಂಖ್ಯೆಯ ಜೊತೆಗೆ 200 ಕೋಟಿ ಮಂದಿ ಸೇರುತ್ತಾರೆ. ಹೊಸಬರಿಗೆ ಆಹಾರ ಒದಗಿಸಲು ಈಗಿನ ಲಭ್ಯ ಆಹಾರಕ್ಕಿಂತ ಹೆಚ್ಚು ಉತ್ಪಾದಿಸಲೇಬೇಕಾಗುತ್ತದೆ. ನಮ್ಮ ಜೀವನಶೈಲಿ ಸುಧಾರಿಸಬೇಕಾದುದು ಅನಿವಾರ್ಯ. ತಟ್ಟೆಯಲ್ಲಿ ಅಲ್ಪಸ್ವಲ್ಪವೂ ಬಿಡದಂತೆ ಉಂಡು, ನಾವೀಗಾಗಲೇ ವ್ಯಯಿಸಿರುವ ಹಣ ಉಳಿಸಿದ್ದೇವೆಂಬ ಸಮಾಧಾನ ನಮ್ಮದಾದರೆ ಎಷ್ಟು ಸೊಗಸು. ನಮ್ಮ ಆಹಾರ ಸೇವನೆ ನಾಜೂಕಾದರೆ ತಿನಿಸು ಪೊಟ್ಟಣಗಳ ಮೇಲೆ 'ತೀರು ತೇದಿ' (expiry date) ನಮೂದಿನ ಅಗತ್ಯವೇ ಇರದು. ವೃಥಾ ಅಮೂಲ್ಯ ಆಹಾರ ದ್ರವ್ಯಗಳ ಇಟ್ಟಾಟ ಸಲ್ಲದು. ಆಹಾರ ನಾವು ಸೃಷ್ಟಿಸಲಾಗದು.

ಭಾರತೀಯ ಪರಂಪರೆಯಲ್ಲಿ ಆಹಾರವು ದೈವವೆಂಬ ನಂಬಿಕೆಯಿದೆ. ಆಹಾರವನ್ನು ಪ್ರೀತಿಸಬೇಕು, ಅದನ್ನು ಬಳಸದೆ ದಂಡ ಮಾಡಬಾರದೆಂಬ ನಿಲುವು ವೈಜ್ಞಾನಿಕ, ಮಾನವೀಯ. ಆಹಾರದ ಮೌಲ್ಯ ಅದರ ಬೆಲೆಗಿಂತಲೂ ಅಧಿಕ. ಜಾಗತಿಕ ಮಟ್ಟದಲ್ಲಿ ಪ್ರತೀ ಮನೆಯಿಂದ ತಿಂಗಳಿಗೆ ಸರಾಸರಿ 27 ಕಿಲೊ ಗ್ರಾಂಗಳಷ್ಟು ಆಹಾರ ಕಸದ ರಾಶಿ ಸೇರುತ್ತದೆ. ಆಹಾರ ಬಿಸಾಡಿದರೆ ಅದು ಕೊಳೆತು ನಾರುತ್ತದೆ. ಇಂಗಾಲದ ಡೈ ಆಕ್ಸೈಡ್, ಮೀಥೇನ್, ನೈಟ್ರಸ್ ಆಕ್ಸೈಡ್‌ನಂತಹ ಹಸಿರುಮನೆ ಅನಿಲಗಳು ಭುಗಿಲೆದ್ದು ವಾತಾವರಣ ಸೇರುತ್ತವೆ. ಪರಿಣಾಮ ಗೊತ್ತೇ ಇದೆ, ಭೂಮಿ ಕಾವೇರತೊಡಗುತ್ತದೆ. ಆಹಾರ ಪದಾರ್ಥಗಳನ್ನು ಖರೀದಿಸುವ ಮುನ್ನವೇ ಯೋಜಿಸುವುದು ಅಗತ್ಯ. ಮನೆಗೆ ಒಯ್ದರೆ ಸೇವಿಸದೆ ಉಳಿಯಬಹುದೆ ಅಥವಾ ಕೊಳೆಯಬಹುದೆ ಎನ್ನುವ ಪ್ರಜ್ಞೆ ಮುಖ್ಯವಾಗುತ್ತದೆ. ಕನಿಷ್ಠತಮ ಖರೀದಿಯೆ ಪೋಲನ್ನು ತಡೆಯಲು ಪ್ರಬಲ ಅಸ್ತ್ರ.

ತರಕಾರಿಗಳು ಅಲ್ಪಸ್ವಲ್ಪ ಬಾಡಿದ್ದರೂ ಒಣಗಿದ್ದರೂ ಬಿಸಾಡದೆ ಉಪಯೋಗಿಸಬಹುದು. ಹಣ್ಣು, ತರಕಾರಿಯ ಸಿಪ್ಪೆ ಸಹ ವರ್ಜ್ಯವಲ್ಲ, ಉಪಯುಕ್ತ. ಬಂದವರಿಗೆ ಹೊಟ್ಟೆ ಬಿರಿಯುವಂತೆ ಬಡಿಸುವುದು ಯಶಸ್ವಿ ಅತಿಥಿ ಸತ್ಕಾರವೆನ್ನುವುದು ಕೇವಲ ಭ್ರಮೆ. ಅದು ಆತಿಥೇಯರು ವಿಧಿಸುವ ಶಿಕ್ಷೆ. ಎಷ್ಟು ಬೇಕೊ ಅಷ್ಟನ್ನೇ ಬಡಿಸಿ ಉಳಿದಿದ್ದನ್ನು ಬಳಿಕ ಉಪಯೋಗಿಸುವುದು ಪರಿಪಾಟವಾಗಬೇಕಿದೆ.

2019ರಲ್ಲಿ ವಿಶ್ವಸಂಸ್ಥೆಯು ಪ್ರತಿವರ್ಷ ಸೆಪ್ಟೆಂಬರ್ 29ನೇ ತಾರೀಕನ್ನು 'ಅಂತರರಾಷ್ಟ್ರೀಯ ಆಹಾರ ಹಾನಿ ಮತ್ತು ವ್ಯರ್ಥ ಕುರಿತ ಜಾಗೃತಿ ದಿನ' ಎಂದು ಆಚರಿಸಬೇಕಾಗಿ ತೀರ್ಮಾನಿಸಿತು. ಅದರಂತೆ ಅದರ ಆಶ್ರಯದಲ್ಲಿ ಇದೀಗ ಮೂರನೆಯ ಬಾರಿಗೆ ಆ ಅರ್ಥಪೂರ್ಣ ಸಡಗರಕ್ಕೆ ಅವಕಾಶವಾಗಿದೆ. 'ಆಹಾರದ ವ್ಯರ್ಥ ನಿಲ್ಲಿಸಿ, ಜನಕ್ಕಾಗಿ ಮತ್ತು ಭೂಗ್ರಹಕ್ಕಾಗಿ' ಎನ್ನುವುದು ಈಗ ಅಭಿಯಾನ ವಾಕ್ಯ. ನಮ್ಮ ಜನಪದರು 'ಇದ್ರೆ ಹಿರಿಯಬ್ಬ, ಇಲ್ದಿದ್ರೆ ತಿರಿಯಬ್ಬ' ಎಂದು ದುಂದನ್ನು ಕಟಕಿಯಾಡುತ್ತಾರೆ.

1965ರ ಸುಮಾರು. ಭಾರತ ಮತ್ತು ಪಾಕಿಸ್ತಾನದ ನಡುವೆ ಯುದ್ಧದ ದಿನಮಾನಗಳು. ಸೈನಿಕರ, ಉಳುವ ರೈತರ ಬಗ್ಗೆ ಭಾರತದ ಅಂದಿನ ಪ್ರಧಾನ ಮಂತ್ರಿ ಲಾಲ್ ಬಹದ್ದೂರ್ ಶಾಸ್ತ್ರಿ ಅಪಾರ ಕಾಳಜಿ ಹೊಂದಿದ್ದರು. 'ಸಮರ ಭೂಮಿಯಲ್ಲಿ ವೈರಿಗಳ ವಿರುದ್ಧ ಮಳೆ ಬಿಸಿಲೆನ್ನದೆ ಹೋರಾಡುತ್ತಿದ್ದಾರಲ್ಲ ನಮ್ಮ ಯೋಧರು, ಅವರಿಗೆ ಊಟದ ಸಮಸ್ಯೆ ಇರಬಾರದು' ಎಂದು ದೃಢವಾಗಿ ಸಂಕಲ್ಪಿಸಿದರು. ತಮ್ಮಿಂದಲೇ ಅಭಿಯಾನ ಪ್ರಾರಂಭಿಸಿಬಿಟ್ಟರು. ಪ್ರತೀ ಸೋಮವಾರ ರಾತ್ರಿಯ ಊಟ ತ್ಯಜಿಸಿದರು. ಅನೇಕ ದೇಶವಾಸಿಗಳು ಹೃದಯ ತುಂಬಿ ಈ ನಡೆ ಅನುಸರಿಸಿದರು. ಶಾಸ್ತ್ರೀಜಿ ಇಂದಿಗೂ ಮಾದರಿಯಾಗುತ್ತಾರೆ.

ವಾಚಕರ ವಾಣಿ

ಇಂದಿರಾ ಕ್ಯಾಂಟೀನ್ ಸೊರಗಿಸುತ್ತಿರುವುದೇಕೆ?

'ಇಂದಿರಾ ಕ್ಯಾಂಟೀನ್' ರಾಜ್ಯ ಸರ್ಕಾರದ ನಿರ್ಲಕ್ಷ್ಯದಿಂದ ಸೊರಗುತ್ತಿದೆ. ಲಕ್ಷಾಂತರ ಮಂದಿಯ ಹಸಿವು ತಣಿಸುತ್ತಿದ್ದ ಕ್ಯಾಂಟೀನ್ ಈಗ ಒಡಲು ಬರಿದಾಗಿಸಿಕೊಂಡು ನಿಂತಿದೆ. ಇದಕ್ಕೆ ಸರ್ಕಾರ ಸರಿಯಾಗಿ ಹಣ ಬಿಡುಗಡೆ ಮಾಡದಿರುವುದು, ತಮ್ಮ ಪಕ್ಷದ ಯೋಜನೆ ಅಲ್ಲ ಎಂಬ ತಾತ್ಸಾರ ಮನೋಭಾವ, ಜವಾಬ್ದಾರಿ ವಹಿಸಿಕೊಂಡವರಿಂದ ನಿರ್ವಹಣೆ ಲೋಪ ಮುಖ್ಯ ಕಾರಣಗಳಾಗಿವೆ.

ವಯೋವೃದ್ಧರು, ನಿರ್ಗತಿಕರು, ಕೂಲಿಕಾರ್ಮಿಕರು, ಸಣ್ಣ ವ್ಯಾಪಾರಸ್ಥರು,ಆಟೊ ಚಾಲಕರು, ವಿದ್ಯಾರ್ಥಿಗಳಂಥವರ ಹಸಿವನ್ನು ಇಂದಿರಾ ಕ್ಯಾಂಟೀನ್ ನೀಗಿಸುತ್ತಿದೆ. ಇಂತಹ ಜನಪರ ಯೋಜನೆಯನ್ನು ರಾಜಕೀಯದ ಕಾರಣಕ್ಕೆ ನಿರ್ಲಕ್ಷಿಸುತ್ತಿರುವುದು ಎಷ್ಟು ಸರಿ? ಕಳಪೆ ಮಟ್ಟದ ಊಟ-ತಿಂಡಿ ನೀಡಿ, ಜನ ಬರುವುದಿಲ್ಲ ಎಂಬ ನೆಪವೊಡ್ಡಿ ಕ್ಯಾಂಟೀನ್ ಮುಚ್ಚುವ ಹುನ್ನಾರವೇ?

ನಬಿಸಾಬ ಆರ್.ಬಿ. ದೋಟಿಹಾಳ, ಕುಷ್ಟಗಿ

ಅವರವರಿಗೇ ಅವಕಾಶ!

ದಸರಾ ಕವಿಗೋಷ್ಠಿಯಲ್ಲಿ ಹಲವರಿಗೆ ಮತ್ತೆ ವೇದಿಕೆ ಒದಗಿಸಲಾಗಿದೆ ಎಂಬ ಸುದ್ದಿ (ಪ್ರ.ವಾ., ಸೆ. 28) ಓದಿ ಬೇಸರವಾಯಿತು. ಹಲವು ಹಿರಿಯ ಸಾಹಿತಿಗಳಿಗೆ ಮತ್ತೆ ಮತ್ತೆ ಅವಕಾಶ ಸಿಗುತ್ತಿರುವುದು ಬರೀ ದಸರಾ ಕಾರ್ಯಕ್ರಮ ಅಥವಾ ಕವಿಗೋಷ್ಠಿಗಷ್ಟೇ ಸೀಮಿತವಾಗಿಲ್ಲ. ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಂತೂ ಈ ಪರಿಪಾಟವು ಮಿತಿಮೀರಿದೆ. ಒಂದು ಸಲ ಕವಿಗೋಷ್ಠಿ, ಮತ್ತೊಂದು ಸಲ ಆಶಯ ಭಾಷಣ, ಮಗದೊಂದು ಸಲ ಅತಿಥಿ, ಇನ್ನೊಂದು ಸಲ ಸನ್ಮಾನ... ಹೀಗೆ ಸಾಲು ಸಾಲು ಅವಕಾಶಗಳು ಪ್ರತಿವರ್ಷ ಮರಳಿ ಅವರವರಿಗೇ ಸಿಗುತ್ತವೆ. ಅನುಮಾನವಿದ್ದವರು ನಾಲ್ಕಾರು ವರ್ಷಗಳ ಆಮಂತ್ರಣ ಪತ್ರಿಕೆ ತೆಗೆದು ನೋಡಬಹುದು. ಅದರಂತೆ ದಸರಾ ಆಮಂತ್ರಣ ಪತ್ರಿಕೆಯನ್ನೂ ಪರಿಶೀಲಿಸಬಹುದು.

ಡಾ. ಸಿದ್ಧಲಿಂಗಪ್ಪ ಕೊಟ್ನೆಕಲ್, ಕೊಪ್ಪಳ

ಆಹಾ... ಆಹ್ವಾನ!

ಮೃತ ಕವಿಯನ್ನೂ
ಆಹ್ವಾನಿಸಲಾಗಿದೆಯಂತೆ
ಮೈಸೂರು ದಸರಾ ಕವಿಗೋಷ್ಠಿಗೆ!
ಸದ್ಯ, ಈಗ ಆಗದಿದ್ದರೆ
ಮುಂದಿನ ಜನ್ಮದಲ್ಲಾದರೂ
ಸಿಗಬಹುದಲ್ಲ ಒಂದು
ಅಪರೂಪದ ಅವಕಾಶ ನನಗೆ!

ಮ.ಗು.ಬಸವಣ್ಣ, ಸುತ್ತೂರು, ಮೈಸೂರು

ಪರ್ಯಾಯ ಹುಡುಕಾಟ: ಜಡತ್ವ ಬೇಡ

ಬೆಂಗಳೂರು– ಮೈಸೂರು ದಶಪಥ ಹೆದ್ದಾರಿಯ ಕಾರಣದಿಂದ ಚನ್ನಪಟ್ಟಣದ ಗೊಂಬೆ ಉದ್ಯಮಕ್ಕೆ ಹೊಡೆತ ಬಿದ್ದಿದೆ ಎಂದು ವರದಿಯಾಗಿದೆ. ಇದು, ಈ ಹೆದ್ದಾರಿಯ ಕಾರಣದಿಂದ ಬಿಡದಿಯ ತಟ್ಟೆ ಇಡ್ಲಿ ಹೋಟೆಲ್ ಮಾಲೀಕರು ಎದುರಿಸುತ್ತಿರುವ ಸಮಸ್ಯೆಯ ಇನ್ನೊಂದು ಮುಖ ಎನ್ನಬಹುದು. ತಂತ್ರಜ್ಞಾನವನ್ನು ಬಳಸಿಕೊಂಡು, ಇ-ಕಾಮರ್ಸ್ ಹೆಸರಿನಲ್ಲಿ ವ್ಯಾಪಾರಿಗಳು ಗ್ರಾಹಕರ ಮನೆ ಬಾಗಿಲಿಗೆ ತಲುಪುತ್ತಿದ್ದಾರೆ. ಆದರೆ ಚನ್ನಪಟ್ಟಣದ ಗೊಂಬೆ ತಯಾರಕರು ಇನ್ನೂ ಹಳೆಯ ವ್ಯಾಪಾರ ಸೂತ್ರಗಳಿಗೆ ಜೋತುಬಿದ್ದು, ಅಂಗಡಿ ಬಾಗಿಲಿಗೆ ಬಂದು ಕೊಳ್ಳುವ ಗ್ರಾಹಕರನ್ನೇ ನಂಬಿ ಉದ್ಯಮ ನಡೆಸುತ್ತಿರುವುದು ಅವರಲ್ಲಿನ ದೂರದೃಷ್ಟಿಯ ಕೊರತೆಯನ್ನು ತೋರಿಸುತ್ತದೆ.

ಹಾಗೆಯೇ, ಹೆದ್ದಾರಿ ಯೋಜನೆ ಕಾಮಗಾರಿಯ ಅವಧಿಯಲ್ಲಿ ತಮ್ಮ ಉದ್ಯಮಕ್ಕೆ ಪರ್ಯಾಯ ಮಾರುಕಟ್ಟೆ ಹಾಗೂ ಮಾರಾಟ ವಿಧಾನಗಳನ್ನು ಹುಡುಕದೇ ಇದ್ದದ್ದು ಏನನ್ನು ತೋರಿಸುತ್ತದೆ? ಪ್ರತಿಯೊಂದು ಉದ್ಯಮವೂ ಅಸ್ತಿತ್ವಕ್ಕಾಗಿ ಹೋರಾಡುವ ಪರಿಸ್ಥಿತಿ ಇದೆ. ಉದ್ಯಮದ ಉಳಿವಿಗೆ ಹಾಗೂ ಬೆಳವಣಿಗೆಗೆ ಪರ್ಯಾಯ ಮಾರ್ಗಗಳನ್ನು ಹುಡುಕಬೇಕಾಗುತ್ತದೆ. ಇಡೀ ಜಗತ್ತಿಗೆ ಮಾರುಕಟ್ಟೆಯಾಗಿರುವ ಭಾರತವು ಚನ್ನಪಟ್ಟಣದ ಗೊಂಬೆಗಳನ್ನು ಪ್ರೋತ್ಸಾಹಿಸಲಾರದೇ?

ಜಯಮಹದೇವ ಸ್ವಾಮಿ ಎಂ., ರಾಮನಗರ

ಪರಂಪರೆ ನಾಶ ಮಾಡುತ್ತಿರುವವರಾರು?

'ದೇಶ ಒಡೆಯುವ ರಾಜಕೀಯ ಕುತಂತ್ರ, ಷಡ್ಯಂತ್ರದ ಭಾಗವಾಗಿ ಹಿಂದಿಯನ್ನು ವಿರೋಧಿಸಲಾಗುತ್ತಿದೆ. ಹಿಂದಿ ರಾಷ್ಟ್ರಭಾಷೆ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ' ಎಂದು ವಿಧಾನ ಪರಿಷತ್ತಿನ ಮುಖ್ಯ ಸಚೇತಕ ವೈ.ಎ.ನಾರಾಯಣ ಸ್ವಾಮಿ ಅವರು ಅಭಿಪ್ರಾಯಪಟ್ಟಿದ್ದಾರೆ (ಪ್ರ.ವಾ., ಸೆ. 27). ಅವರ ಈ ಮಾತು ಅರ್ಥಹೀನವಾದುದು. ಭಾರತವು ಹಲವು ರಾಜ್ಯಗಳ ಒಕ್ಕೂಟ. ಸಂವಿಧಾನದಲ್ಲಿ ಇದನ್ನು ಗಣರಾಜ್ಯ ಎಂದು ಕರೆಯಲಾಗಿದೆ. ಅಂದರೆ ಭಾರತ ಎನ್ನುವುದು ಒಂದು ದೇಶವಾದರೂ ಇಲ್ಲಿರುವುದು ಒಂದೇ ಭಾಷೆ, ಒಂದೇ ಮತ, ಒಂದೇ ಸಂಸ್ಕೃತಿ, ಒಂದೇ ರೀತಿಯ ಉಡುಗೆ- ತೊಡುಗೆ, ಒಂದೇ ಆಹಾರ ಪದ್ಧತಿ ಅಲ್ಲ. ವೈವಿಧ್ಯವೇ ಇದರ ಪ್ರಧಾನ ಲಕ್ಷಣ. ಈ ವೈವಿಧ್ಯ ಇದ್ದೂ ಏಕತೆಯನ್ನು ಸಾಧಿಸಿದೆ. ಇದೇ ಇದರ ವಿಶೇಷ. ಇದನ್ನು ನಾವು ಉಳಿಸಿ, ಬೆಳೆಸಬೇಕು. ಈ ವೈವಿಧ್ಯವನ್ನು ಸವರಿಬಿಟ್ಟು ಏಕತೆಯನ್ನು ತರಲು ಪ್ರಯತ್ನಿಸುತ್ತಿರುವವರೇ ಸಾವಿರಾರು ವರ್ಷಗಳ ಈ ಅಪರೂಪದ ಪರಂಪರೆಯನ್ನು ನಾಶ ಮಾಡುತ್ತಿರುವವರು!

ಹಿಂದಿ ಕಲಿಯುವವರು ಕಲಿಯಲಿ ಎಂದು ಕನ್ನಡಿಗರು ತೋರಿದ ಔದಾರ್ಯವನ್ನು ದುರುಪಯೋಗ ಮಾಡಿಕೊಂಡು ಹಿಂದಿ ಹೇರಿಕೆಯನ್ನು ನಮ್ಮ ಮೇಲೆ ಪ್ರಯೋಗಿಸುತ್ತಿದ್ದಾರೆ. ಹೀಗಾಗಿ, ರಾಜ್ಯದಲ್ಲಿರುವ ಬ್ಯಾಂಕು, ವಿಮೆ, ರೈಲ್ವೆಯಂತಹ ಕೇಂದ್ರ ಸರ್ಕಾರದ ಸಂಸ್ಥೆಗಳಲ್ಲಿ ಕನ್ನಡಿಗರಿಗೆ ಉದ್ಯೋಗಾವಕಾಶ ದುಸ್ತರವಾಗಿದೆ. 'ನೀಟ್' ವ್ಯವಸ್ಥೆಯಿಂದಾಗಿ ಕನ್ನಡ ಮಕ್ಕಳಿಗೆ ವೈದ್ಯಕೀಯದಂತಹ ವೃತ್ತಿಶಿಕ್ಷಣದಲ್ಲಿ ಅನ್ಯಾಯವಾಗುತ್ತಿದೆ. ಕರ್ನಾಟಕದಲ್ಲೇ ಕನ್ನಡದ ನಾಮಫಲಕಗಳಿಗಾಗಿ ಹೋರಾಟ ಮಾಡಬೇಕಾಗಿದೆ. ಪರಿಸ್ಥಿತಿ ಹೀಗೆಲ್ಲ ಇರುವಾಗ ನಮ್ಮನ್ನು ಕಾಯುವವರೇ ಈ ರೀತಿ ಮಾತನಾಡತೊಡಗಿದರೆ ಇನ್ನಾರಿಗೆ ದೂರುವುದು? 'ಹರಕೊಲ್ಲಲ್ ಪರ ಕಾಯ್ವನೆ?' ಎಂಬಂತಾಗಿದೆ ನಮ್ಮ ಪರಿಸ್ಥಿತಿ!

ಪು.ಸೂ.ಲಕ್ಷ್ಮೀನಾರಾಯಣ ರಾವ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಉಗ್ರರೊಂದಿಗೆ ನಂಟು ಆರೋಪ ಪಿಎಫ್‌ಐಗೆ ಬೀಗಮುದ್ರೆ

'ರಾಜ್ಯಗಳ ಶಿಫಾರಸಿನಂತೆ ನಿಷೇಧ'

ಕರ್ನಾಟಕ, ಉತ್ತರ ಪ್ರದೇಶ ಮತ್ತು ಗುಜರಾತ್ ಸರ್ಕಾರಗಳ ಶಿಫಾರಸಿನ ಆಧಾರದಲ್ಲಿ ಪಿಎಫ್‌ಐ ಮತ್ತು ಅದರ ಅಧೀನ ಸಂಸ್ಥೆಗಳನ್ನು ಐದು ವರ್ಷಗಳವರೆಗೆ ನಿಷೇಧ ಮಾಡಲಾಗಿದೆ ಎಂದು ಕೇಂದ್ರ ಸರ್ಕಾರವು ತನ್ನ ಗೆಜೆಟ್‌ನಲ್ಲಿ ಹೇಳಿದೆ.

ದೇಶದ ಸಂವಿಧಾನ ಮತ್ತು ಸಾರ್ವಭೌಮತೆಗೆ ಗೌರವ ತೋರದೇ ಇರುವ ಆರೋಪದಲ್ಲಿ ವ್ಯಕ್ತಿ ಅಥವಾ ಸಂಘಟನೆಯನ್ನು ನಿಷೇಧಿಸುವ ಅಧಿಕಾರ ಕೇಂದ್ರ ಸರ್ಕಾರಕ್ಕೆ ಇದೆ. 1967ಕ್ಕೂ ಮುನ್ನ ಭಾರತೀಯ ದಂಡ ಸಂಹಿತೆಯ 153ಎ ಮತ್ತು 154ಬಿ ಸೆಕ್ಷನ್‌ಗಳ ಅಡಿ ತಪ್ಪಿತಸ್ಥ ಎಂದು ಸಾಬೀತಾದ ವ್ಯಕ್ತಿ ಅಥವಾ ಸಂಘಟನೆಯನ್ನು ಹೀಗೆ ನಿಷೇಧಿಸಲಾಗುತ್ತಿತ್ತು. 1967ರಲ್ಲಿ ಕಾನೂನುಬಾಹಿರ ಚಟುವಟಿಕೆಗಳ (ತಡೆ) ಕಾಯ್ದೆ (ಯುಎಪಿಎ) ಜಾರಿಗೆ ಬಂದಿತು. ಅನಂತರದಲ್ಲಿ ಯುಎಪಿಎ ಅಡಿ ಸಂಘಟನೆಗಳನ್ನು ನಿಷೇಧಿಸಲಾಗುತ್ತಿದೆ. 2008ರಲ್ಲಿ ಈ ಕಾಯ್ದೆಗೆ ಕೆಲವು ತಿದ್ದುಪಡಿಗಳನ್ನು ತಂದು, ಅದನ್ನು ಮತ್ತಷ್ಟು ಕಠಿಣಗೊಳಿಸಲಾಯಿತು. ಈಗ ಪಿಎಫ್‌ಐ ಮತ್ತು ಅದರ ಅಧೀನ ಸಂಸ್ಥೆಗಳನ್ನು ಈ ಕಾಯ್ದೆಯ ಅಡಿಯಲ್ಲೇ ಐದು ವರ್ಷಗಳವರೆಗೆ ನಿಷೇಧಿಸಲಾಗಿದೆ.

ಈ ಎಲ್ಲಾ ಕಾನೂನುಗಳ ಅಡಿಯಲ್ಲಿ ಈವರೆಗೆ ಹತ್ತಾರು ಸಂಘಟನೆಗಳನ್ನು ನಿಷೇಧಿಸಲಾಗಿದೆ. ಕೆಲವು ಸಂಘಟನೆಗಳ ಮೇಲಿನ ನಿಷೇಧವನ್ನು ತೆರವು ಮಾಡಲಾಗಿದೆ. ಪಿಎಫ್‌ಐ ಕಾನೂನುಬಾಹಿರ ಚಟುವಟಿಕೆ ನಡೆಸಿದೆ ಎಂದು ಯುಎಪಿಎ ಕಾಯ್ದೆಯ 3ನೇ ಸೆಕ್ಷನ್‌ನ ಅಡಿಯಲ್ಲಿ ಪರಿಗಣಿಸಲಾಗಿದೆ. ಜತೆಗೆ ಇದೇ ಕಾಯ್ದೆಯ 35ನೇ ಸೆಕ್ಷನ್‌ನ ಅಡಿಯಲ್ಲಿ ಪಿಎಫ್‌ಐ ಮತ್ತು ಅದರ ಅಧೀನಸಂಸ್ಥೆಗಳನ್ನು 'ಭಯೋತ್ಪಾದನಾ ಸಂಘಟನೆಗಳು' ಎಂದು ಪಟ್ಟಿ ಮಾಡಲಾಗಿದೆ. ನೇರವಾಗಿ ಭಯೋತ್ಪಾದನಾ ಚಟುವಟಿಕೆಯಲ್ಲಿ ಭಾಗಿಯಾದ ಅಥವಾ ಭಯೋತ್ಪಾದನಾ ಕೃತ್ಯಕ್ಕೆ ಸಿದ್ಧತೆ ನಡೆಸಿದ ಅಥವಾ ಭಯೋತ್ಪಾದನೆಯನ್ನು ಪ್ರೋತ್ಸಾಹಿಸಿದ ಅಥವಾ ಭಯೋತ್ಪಾದನೆಯಲ್ಲಿ ಭಾಗಿಯಾದ ಸಂಘಟನೆಗಳನ್ನು ಈ ಸೆಕ್ಷನ್ ಅಡಿಯಲ್ಲಿ ಭಯೋತ್ಪಾದನಾ ಸಂಘಟನೆ ಎಂದು ಪರಿಗಣಿಸಲು ಅವಕಾಶವಿದೆ.

ಭಯೋತ್ಪಾದನಾ ಸಂಘಟನೆ ಎಂದು ಪಟ್ಟಿ ಮಾಡಲಾದ ಸಂಘಟನೆಗೆ ಸೇರಿದ ಬ್ಯಾಂಕ್ ಖಾತೆ, ಠೇವಣಿಗಳು, ಸ್ವತ್ತುಗಳನ್ನು ಮುಟ್ಟುಗೋಲು ಹಾಕಿಕೊಳ್ಳುವ ಅಧಿಕಾರವನ್ನು ಯುಎಪಿಎ ಕಾಯ್ದೆಯ 51ನೇ ಎ ಸೆಕ್ಷನ್ ಕೇಂದ್ರ ಸರ್ಕಾರಕ್ಕೆ ನೀಡುತ್ತದೆ. ಪಿಎಫ್‌ಐ ಮತ್ತು ಅದರ ಅಧೀನ ಸಂಸ್ಥೆಗಳಿಗೆ ಸೇರಿದ ಬ್ಯಾಂಕ್ ಖಾತೆ, ಠೇವಣಿಗಳು ಮತ್ತು ಸ್ವತ್ತುಗಳನ್ನು ಇದೇ ಸೆಕ್ಷನ್‌ನ ಅಡಿಯಲ್ಲಿ ಕೇಂದ್ರ ಸರ್ಕಾರದ ವಿವಿಧ ತನಿಖಾ ಸಂಸ್ಥೆಗಳು ಮುಟ್ಟುಗೋಲು ಹಾಕಿಕೊಂಡಿವೆ.

ಸರ್ಕಾರದ ಆರೋಪಗಳು

- ಸಮಾಜದ ಬೇರೆ ಬೇರೆ ವರ್ಗ ಮತ್ತು ವೃತ್ತಿಯ ಜನರನ್ನು ತಲುಪುವ ಉದ್ದೇಶದಿಂದ ಪಿಎಫ್‌ಐ ಹಲವು ಸಂಘಟನೆಗಳನ್ನು ಸ್ಥಾಪಿಸಿದೆ. ಹೆಚ್ಚಿನ ಜನರ ಜತೆಗೆ ಸಂಪರ್ಕ ಸಾಧಿಸುವುದೇ ಇದರ ಹಿಂದಿನ ಉದ್ದೇಶ
- ಈ ಎಲ್ಲಾ ಸಂಘಟನೆಗಳು ಬಹಿರಂಗವಾಗಿ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ರಾಜಕೀಯ ಚಟುವಟಿಕೆಗಳಲ್ಲಿ ಮಾತ್ರ ತೊಡಗಿಕೊಂಡಿವೆ. ಆದರೆ, ದೇಶದ ಸಂವಿಧಾನ ಮತ್ತು ಸಾಂವಿಧಾನಿಕ ವ್ಯವಸ್ಥೆಯನ್ನು ಬುಡಮೇಲು ಮಾಡುವ ಉದ್ದೇಶದಿಂದ ಒಂದು ಸಮುದಾಯವನ್ನು ಪ್ರಚೋದಿಸುವ ಕಾರ್ಯಸೂಚಿಯನ್ನು ರಹಸ್ಯವಾಗಿ ಅನುಷ್ಠಾನಕ್ಕೆ ತರುತ್ತಿವೆ
- ದೇಶದ ಕೋಮು ಸೌಹಾರ್ದವನ್ನು ಹಾಳು ಮಾಡುವ, ಶಾಂತಿಗೆ ಭಂಗ ತರುವ ಮತ್ತು ಭಯೋತ್ಪಾದನೆಗೆ ಬೆಂಬಲ ನೀಡುವ ಕೆಲಸವನ್ನು ಈ ಸಂಘಟನೆಗಳು ಮಾಡಿವೆ
- ಪಿಎಫ್‌ಐನ ಕೆಲವು ಸಂಸ್ಥಾಪಕ ಸದಸ್ಯರು ನಿಷೇಧಿತ ಸಿಮಿ ಸಂಘಟನೆಯ ನಾಯಕರಾಗಿದ್ದರು
- ಪಿಎಫ್‌ಐನ ಸದಸ್ಯರು ಅಂತರರಾಷ್ಟ್ರೀಯ ಉಗ್ರ ಸಂಘಟನೆ ಇಸ್ಲಾಮಿಕ್ ಸ್ಟೇಟ್ (ಐಎಸ್) ಜತೆ ಸಂಪರ್ಕ ಹೊಂದಿದ್ದಾರೆ

ಮೂಲ ಯಾವುದು?

ಯಾವುದೇ ಕಾರಣಕ್ಕಾಗಿ ಒಂದು ಸಾಮಾಜಿಕ ಅಥವಾ ರಾಜಕೀಯ ಸಂಘಟನೆಯ ಮೇಲೆ ನಿಷೇಧ ಹೇರಿದಾಗ ಅದು ಬೇರೊಂದು ರೂಪದಲ್ಲಿ ಕಾಣಿಸಿಕೊಂಡ ಉದಾಹರಣೆಗಳು ಇವೆ. ಈಗ ನಿಷೇಧಿಸಲಾಗಿರುವ ಪಿಎಫ್‌ಐಯಲ್ಲಿ ಈ ಹಿಂದೆ ನಿಷೇಧಿಸಲಾಗಿದ್ದ ಸಂಘಟನೆಗಳ ಹಲವರು ಸದಸ್ಯರಾಗಿದ್ದರು.

ಸ್ಟೂಡೆಂಟ್ ಇಸ್ಲಾಮಿಕ್ ಮೂವ್‌ಮೆಂಟ್ ಆಫ್ ಇಂಡಿಯಾವನ್ನು (ಸಿಮಿ) 2001ರಲ್ಲಿ ನಿಷೇಧಿಸಲಾಗಿದೆ. ಭಾರತವನ್ನು ಮುಸ್ಲಿಂ ದೇಶವಾಗಿ ಪರಿವರ್ತಿಸಿ, ವಿಮೋಚನೆಗೊಳಿಸುವುದು ಸಿಮಿಯ ಗುರಿ ಎಂದು ಹೇಳಲಾಗಿತ್ತು. 1977ರಲ್ಲಿ ಉತ್ತರ ಪ್ರದೇಶದ ಅಲೀಗಢದಲ್ಲಿ ಈ ಸಂಘಟನೆ ಆರಂಭಗೊಂಡಿತು. ಭಾರತ ಸರ್ಕಾರವು ಸಿಮಿಯನ್ನು ಭಯೋತ್ಪಾದಕ ಸಂಘಟನೆ ಎಂದು ಪರಿಗಣಿಸಿದೆ. ಹಾಗಾಗಿಯೇ ಅಮೆರಿಕದ ವರ್ಲ್ಡ್ ಟ್ರೇಡ್ ಸೆಂಟರ್ ಮೇಲೆ 9/11ರಂದು ನಡೆದ ದಾಳಿಯ ಬಳಿಕ ಸಿಮಿಯನ್ನು ನಿಷೇಧ ಮಾಡಲಾಯಿತು.

ವಿಶೇಷ ನ್ಯಾಯಾಲಯವು ನಿಷೇಧವನ್ನು 2008ರ ಆಗಸ್ಟ್‌ನಲ್ಲಿ ರದ್ದುಪಡಿಸಿತು. ಆದರೆ, ಆಗ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿದ್ದ ಕೆ.ಜಿ. ಬಾಲಕೃಷ್ಣನ್ ಅವರು ನಿಷೇಧವನ್ನು ಎತ್ತಿ ಹಿಡಿದರು. ಸಿಮಿಯ ಮೇಲಿನ ನಿಷೇಧವನ್ನು 2019ರ ಫೆಬ್ರುವರಿಯಲ್ಲಿ ಮತ್ತೆ ಐದು ವರ್ಷಕ್ಕೆ ವಿಸ್ತರಿಸಲಾಗಿದೆ.

ನ್ಯಾಷನಲ್ ಡೆವಲಪ್‌ಮೆಂಟ್ ಫ್ರಂಟ್ (ಎನ್‌ಡಿಎಫ್) ಎಂಬ ಸಂಘಟನೆಯನ್ನು 1993ರಲ್ಲಿ ಸ್ಥಾಪಿಸಲಾಯಿತು. ಬಾಬರಿ ಮಸೀದಿ ನೆಲಸಮದ ನಂತರ ಇದು ಆರಂಭಗೊಂಡಿತು. ಸಿಮಿಯ ನಿಷೇಧದ ಬಳಿಕ, ಸಿಮಿಯ ಹಲವು ಸದಸ್ಯರು ಎನ್‌ಡಿಎಫ್ ಸೇರಿಕೊಂಡರು. 2002 ಮತ್ತು 2003ರಲ್ಲಿ ಕೇರಳದ ಕೋಯಿಕ್ಕೋಡ್ ಜಿಲ್ಲೆಯಲ್ಲಿ ನಡೆದ ಕೋಮು ಗಲಭೆಗಳಿಗೆ ಎನ್‌ಡಿಎಫ್ ಕಾರಣ ಎಂಬ ಆರೋಪ ಕೇಳಿಬಂದಿತ್ತು. ಎನ್‌ಡಿಎಫ್ ಭಯೋತ್ಪಾದಕ ಸಂಘಟನೆಯಾಗಿದ್ದು ಅದನ್ನು ನಿಷೇಧಿಸಬೇಕು ಎಂದು ಆಗ ಸಿಪಿಎಂನ ಕೇರಳ ರಾಜ್ಯ ಕಾರ್ಯದರ್ಶಿಯಾಗಿದ್ದ ಪಿಣರಾಯಿ ವಿಜಯನ್ ಒತ್ತಾಯಿಸಿದ್ದರು.

ಕರ್ನಾಟಕ ಫೋರಂ ಫಾರ್ ಡಿಗ್ನಿಟಿ ಎಂಬ ಸಂಘಟನೆ ಕರ್ನಾಟಕದಲ್ಲಿ 2001ರಲ್ಲಿ ಆರಂಭವಾಯಿತು. ತಮಿಳುನಾಡಿನಲ್ಲಿ ಮನಿತ ನೀತಿ ಪಸರೈ ಎಂಬ ಸಂಘಟನೆಯೂ ಇದೇ ಹೊತ್ತಿಗೆ ಆರಂಭವಾಗಿತ್ತು. ಈ ಎರಡೂ ಸಂಘಟನೆಗಳ ಜತೆಗೆ ಸೇರಿಕೊಂಡ ಕೆಲವರು ಪಿಎಫ್‌ಐಯನ್ನು 2006ರಲ್ಲಿ ಆರಂಭಿಸಿದರು. ಸಿಮಿ ಮತ್ತು ಎನ್‌ಡಿಎಫ್‌ನಲ್ಲಿ ಸಕ್ರಿಯರಾಗಿದ್ದ ಹಲವರು ಪಿಎಫ್‌ಐ ಸೇರಿಕೊಂಡರು ಎಂದು ಹೇಳಲಾಗುತ್ತಿದೆ.

ನಂತರದ ವರ್ಷಗಳಲ್ಲಿ, ಪಿಎಫ್‌ಐ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿತು. ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ (ಎಸ್‌ಡಿಪಿಐ) ಎಂಬ ರಾಜಕೀಯ ಪಕ್ಷವನ್ನು ಸ್ಥಾಪಿಸಲಾಯಿತು. ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾ, ನ್ಯಾಷನಲ್ ವಿಮೆನ್ಸ್ ಫ್ರಂಟ್, ರೆಹಾಬ್ ಇಂಡಿಯಾ ಫೌಂಡೇಶನ್, ಎಂಪವರ್ ಇಂಡಿಯಾ ಫೌಂಡೇಶನ್ ಮುಂತಾದ ಸಂಘಟನೆಗಳು ಪಿಎಫ್‌ಐಯ ಅಂಗ ಸಂಸ್ಥೆಗಳಾಗಿ ನಂತರ ಆರಂಭಗೊಂಡವು.

ಪಿಎಫ್‌ಐ, ಸಿಮಿಯ ಪುನರವತಾರ, ಈ ಸಂಘಟನೆಯು ಆರ್‌ಎಸ್‌ಎಸ್ ಮತ್ತು ಸಿಪಿಎಂ ಕಾರ್ಯಕರ್ತರ ಹತ್ಯೆಯಲ್ಲಿ ಸಕ್ರಿಯವಾಗಿ ಭಾಗಿಯಾಗಿದೆ ಎಂದು 2012ರಲ್ಲಿ ಕೇರಳ ಹೈಕೋರ್ಟ್‌ಗೆ ಅಲ್ಲಿನ ಸರ್ಕಾರ ಪ್ರಮಾಣಪತ್ರ ಸಲ್ಲಿಸಿತ್ತು.


SECTION V—POLITICAL

1. Withdrawal of the ban on Rashtriya Swayam Sewak Sangh.

In October 1948, Mr. Golwalkar, the leader of the R.S.S. Organisation was told that the Government of India would have no objection to the functioning of this organization provided that it adopted a written and published constitution, restricted its activities to the cultural sphere, adjured violence and secrecy, professing loyalty to the Constitution of India and the National Flag and provided for a democratic organization. After some discussion with his advisers, Mr. Golwalkar forwarded to the Government of India in March 1949 a draft constitution of the Sangh. After examining the draft in consultation with the State Governments, the Government of India conveyed their reactions to him and asked for a clarification of certain points. The clarifications furnished by him indicated that the points made by the Government of India were substantially met. The ban on the Sangh

ಆರ್‌ಎಸ್‌ಎಸ್ ಮೇಲಿನ ನಿಷೇಧ ತೆರವು ಮಾಡುವ ಸಂಬಂಧ ಕೇಂದ್ರ ಗೃಹ ಸಚಿವಾಲಯದ ವಾರ್ಷಿಕ ವರದಿಯಲ್ಲಿ ಇರುವ ಉಲ್ಲೇಖ

ಆರ್‌ಎಸ್‌ಎಸ್ ಮೂರು ಬಾರಿ ನಿಷೇಧ

ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು (ಆರ್‌ಎಸ್‌ಎಸ್) ಕೇಂದ್ರ ಗೃಹ ಸಚಿವಾಲಯವು ಈವರೆಗೆ ಮೂರು ಬಾರಿ ನಿಷೇಧ ಮಾಡಿದೆ. 1948, 1975 ಮತ್ತು 1992ರಲ್ಲಿ ಆರ್‌ಎಸ್‌ಎಸ್ ಅನ್ನು ಅಲ್ಪಾವಧಿಗೆ ನಿಷೇಧಿಸಲಾಗಿತ್ತು. ನಂತರ ನಿಷೇಧವನ್ನು ತೆರವು ಮಾಡಲಾಗಿತ್ತು.

ಮಹಾತ್ಮ ಗಾಂಧಿ ಅವರ ಹತ್ಯೆಯ ನಂತರ 1948ರ ಫೆಬ್ರುವರಿಯಲ್ಲಿ ಆರ್‌ಎಸ್‌ಎಸ್ ಅನ್ನು ಅಂದಿನ ಗೃಹ ಸಚಿವ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರು ನಿಷೇಧಿಸಿದ್ದರು. ಈ ಸಂಬಂಧ ಸರ್ಕಾರವು ಹೊರಡಿಸಿದ್ದ ಸುತ್ತೋಲೆಯಲ್ಲಿ, 'ರಾಷ್ಟ್ರೀಯ ಸ್ವಯಂಸೇವಕ ಸಂಘದ ಹಲವು ಸದಸ್ಯರು ದೇಶದಾದ್ಯಂತ ದರೋಡೆ, ಕಳ್ಳತನ, ಕೊಲೆಯಂತಹ ಹಿಂಸಾಚಾರದಲ್ಲಿ ತೊಡಗಿರುವುದು ಪತ್ತೆಯಾಗಿದೆ. ಅಕ್ರಮವಾಗಿ ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳನ್ನು ಸಂಗ್ರಹಿಸಿರುವುದೂ ಪತ್ತೆಯಾಗಿದೆ. ದ್ವೇಷ ಮತ್ತು ಹಿಂಸಾಚಾರದ ಮೂಲವನ್ನು ನಿರ್ಮೂಲನೆ ಮಾಡುವ ಉದ್ದೇಶದಿಂದ ಈ ಕ್ರಮ ತೆಗೆದುಕೊಳ್ಳಲಾಗಿದೆ. ಆರ್‌ಎಸ್‌ಎಸ್ ಅನ್ನು ಭಾರತದಾದ್ಯಂತ ನಿಷೇಧಿಸಲಾಗಿದೆ' ಎಂದು ವಿವರಿಸಲಾಗಿತ್ತು. ಈ ಸುತ್ತೋಲೆಯಲ್ಲಿನ ವಿವರವನ್ನು ಇಂಡಿಯನ್ ಎಕ್ಸ್‌ಪ್ರೆಸ್ ವರದಿ ಮಾಡಿತ್ತು ಎಂದು ದಿ ವೈರ್ ವರದಿ ಮಾಡಿದೆ.

ಆರ್‌ಎಸ್‌ಎಸ್ ಮೇಲೆ ಹೇರಲಾಗಿದ್ದ ನಿಷೇಧವನ್ನು ತೆರವು ಮಾಡುವ ಸಂಬಂಧ ಸರ್ಕಾರದ ಆದೇಶವು ಕೇಂದ್ರ ಗೃಹ ಸಚಿವಾಲಯದ ವಾರ್ಷಿಕ ವರದಿಯಲ್ಲಿ ಲಭ್ಯವಿದೆ. 1949–50ನೇ ಸಾಲಿನ ವಾರ್ಷಿಕ ವರದಿಯಲ್ಲಿ ಇದನ್ನು ಉಲ್ಲೇಖಿಸಲಾಗಿದೆ. ಇದರಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್.ಎಸ್.ಎಸ್.ಎಸ್) ಎಂದು ಉಲ್ಲೇಖಿಸಲಾಗಿದೆ. 'ದೇಶದ ಕಾನೂನಿಗೆ ನಿಷ್ಠರಾಗಿರುತ್ತೇವೆ ಮತ್ತು ಸಾಂಸ್ಕೃತಿಕ ವಲಯಕ್ಕಷ್ಟೇ ನಮ್ಮ ಚಟುವಟಿಕೆಯನ್ನು ಸೀಮಿತಗೊಳಿಸಿಕೊಳ್ಳುತ್ತೇವೆ ಎಂದು ಆರ್‌ಎಸ್‌ಎಸ್ ನಾಯಕ ಗೋಲ್ವಲ್ಕರ್ ಅವರು ಸರ್ಕಾರಕ್ಕೆ ಪತ್ರ ಬರೆದಿದ್ದಾರೆ. ಅದನ್ನು ಆಧರಿಸಿ ನಿಷೇಧವನ್ನು ತೆರವು ಮಾಡಲಾಯಿತು ಮತ್ತು ದೇಶದಾದ್ಯಂತ ಬಂಧನದಲ್ಲಿರುವ ಆರ್‌ಎಸ್‌ಎಸ್ ಸ್ವಯಂಸೇವಕರನ್ನು ಬಿಡುಗಡೆ ಮಾಡಲು ಸೂಚಿಸಲಾಯಿತು' ಎಂದು ವಾರ್ಷಿಕ ವರದಿಯ 34 ಮತ್ತು 35ನೇ ಪುಟದಲ್ಲಿ ಉಲ್ಲೇಖಿಸಲಾಗಿದೆ.

ಈಗ ಮತ್ತೆ ಆರ್‌ಎಸ್‌ಎಸ್ ಅನ್ನು ನಿಷೇಧಿಸುವಂತೆ ಕೆಲವು ವಿರೋಧ ಪಕ್ಷಗಳು ಒತ್ತಾಯಿಸುತ್ತಿವೆ.

ಅವರು ಸದಾ ಪಿಎಫ್‌ಐ ಬಗ್ಗೆ ಮಾತನಾಡುತ್ತಿರುತ್ತಾರೆ. ಆದರೆ, ಹಿಂದೂ ತೀವ್ರವಾದಕ್ಕೆ ಆರ್‌ಎಸ್‌ಎಸ್ ಕಾರಣವಾಗಿದೆ. ಹಾಗಾಗಿ, ಮೊದಲು ಆರ್‌ಎಸ್‌ಎಸ್ ಅನ್ನು ನಿಷೇಧಿಸಬೇಕಿತ್ತು
ಲಾಲು ಪ್ರಸಾದ್, ಆರ್‌ಜೆಡಿ ಮುಖ್ಯಸ್ಥ

ಇದು ನವ ಭಾರತ. ಭಯೋತ್ಪಾದಕರು, ಅಪರಾಧಿಗಳು, ದೇಶದ ಏಕತೆ, ಸಮಗ್ರತೆ ಹಾಗೂ ಭದ್ರತೆಗೆ ಬೆದರಿಕೆ ಒಡ್ಡುವವರಿಗೆ ಇಲ್ಲಿ ಅವಕಾಶವೇ ಇಲ್ಲ
ಯೋಗಿ ಆದಿತ್ಯನಾಥ, ಉತ್ತರ ಪ್ರದೇಶ ಮುಖ್ಯಮಂತ್ರಿ

ಪಿಎಫ್‌ಐನಂತಹ ಸಂಘಟನೆಗಳನ್ನು ನಿಷೇಧಿಸುವುದು ಸಮಸ್ಯೆಗೆ ಪರಿಹಾರ ಅಲ್ಲ. ರಾಜಕೀಯವಾಗಿ ಅವರನ್ನು ಏಕಾಂಗಿಯಾಗಿಸಬೇಕು ಮತ್ತು ಅಪರಾಧ ಚಟುವಟಿಕೆಗಳ ವಿರುದ್ಧ ಆಡಳಿತಾತ್ಮಕ ಕ್ರಮಗಳನ್ನು ಕೈಗೊಳ್ಳಬೇಕು
ಸೀತಾರಾಮ್ ಯೆಚೂರಿ, ಸಿಪಿಎಂ ಪ್ರಧಾನ ಕಾರ್ಯದರ್ಶಿ

ಪಿಎಫ್‌ಐನ ತೀವ್ರವಾದಿ ನಿಲುವನ್ನು ಸದಾ ವಿರೋಧಿಸಿದ್ದೇನೆ. ಆದರೆ, ಯಾರೋ ಕೆಲವರು ಮಾಡುವ ಅಪರಾಧಗಳಿಗಾಗಿ ಸಂಘಟನೆಯನ್ನೇ ನಿಷೇಧಿಸುವುದು ಸರಿಯಲ್ಲ. ನಿರ್ದಿಷ್ಟ ಸಂಘಟನೆಯೊಂದಿಗೆ ನಂಟು ಇದೆ ಎಂಬ ಕಾರಣಕ್ಕೆ ವ್ಯಕ್ತಿಯನ್ನು ಶಿಕ್ಷಿಸಲಾಗದು ಎಂದು ಸುಪ್ರೀಂ ಕೋರ್ಟ್ ಕೂಡ ಹೇಳಿದೆ
ಅಸಾದುದ್ದೀನ್ ಒವೈಸಿ, ಎಐಎಂಐಎಂ ಅಧ್ಯಕ್ಷ

ದೇಶದ ಭದ್ರತೆ ಮತ್ತು ಜನರ ಕುರಿತು ಇರುವ ಬದ್ಧತೆಯಿಂದಾಗಿ ಸರ್ಕಾರವು ನಿಷೇಧದ ನಿರ್ಧಾರ ತೆಗೆದುಕೊಂಡಿದೆ. ಆದರೆ ಈ ಕ್ರಮದಿಂದ ರಾಜಕೀಯ ಲಾಭ ಅಥವಾ ನಷ್ಟದ ಕುರಿತು ಕೆಲವರು ಲೆಕ್ಕ ಹಾಕುತ್ತಿರುವುದು ದುರದೃಷ್ಟಕರ
ಮುಕ್ತಾರ್ ಅಬ್ಬಾಸ್ ನಖ್ವಿ, ಬಿಜೆಪಿ ಮುಖಂಡ

ಧರ್ಮವನ್ನು ದುರ್ಬಳಕೆ ಮಾಡಿಕೊಂಡು ಸಮಾಜವನ್ನು ಧ್ರುವೀಕರಣ ಮಾಡುವ ಎಲ್ಲ ಸಿದ್ಧಾಂತಗಳು ಮತ್ತು ಸಂಸ್ಥೆಗಳ ವಿರುದ್ಧ ಯಾವುದೇ ರಾಜಿ ಇಲ್ಲದೆ ಹೋರಾಡುವುದೇ ಕಾಂಗ್ರೆಸ್‌ನ ನೀತಿ. ಕಾಂಗ್ರೆಸ್ ಪಕ್ಷವು ಎಲ್ಲ ರೀತಿಯ ಕೋಮುವಾದದ ವಿರುದ್ಧವೇ ಇದೆ
ಜೈರಾಮ್ ರಮೇಶ್, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ಪಿಎಫ್‌ಐ ನಿಷೇಧವು ಪ್ರಜಾತಂತ್ರದ ಮೇಲಿನ ನೇರ ದಾಳಿ. ವಿರೋಧ ಪಕ್ಷಗಳನ್ನು ಸುಮ್ಮನಿರಿಸಲು ಮತ್ತು ಭಿನ್ನಮತ ತೋರುವ ಜನರನ್ನು ಬೆದರಿಸಲು ಸರ್ಕಾರವು ತನಿಖಾ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ. ದೇಶದಲ್ಲಿ ಅಘೋಷಿತ ತುರ್ತುಪರಿಸ್ಥಿತಿ ಇರುವುದು ಸ್ಪಷ್ಟವಾಗಿ ಕಾಣಿಸುತ್ತಿದೆ
ಎಂ.ಕೆ. ಫೈಝಿ, ಎಸ್‌ಡಿಪಿಐ ಅಧ್ಯಕ್ಷ

ಮಹಾರಾಷ್ಟ್ರದಲ್ಲಿ ಕೂಡ ಗಂಭೀರವಾದ ಏನನ್ನೋ ಮಾಡುವ ಯೋಜನೆಯನ್ನು ಪಿಎಫ್‌ಐ ಹಾಕಿಕೊಂಡಿತ್ತು. ದೇಶವಿರೋಧಿ ಚಟುವಟಿಕೆಗಳನ್ನು ನಡೆಸುವಲ್ಲಿ ಮತ್ತು ಸಮಾಜವನ್ನು ಒಡೆಯುವಲ್ಲಿ ಸಮಾಜಘಾತುಕ ಶಕ್ತಿಗಳು ಯಶಸ್ವಿ ಆಗುವುದಿಲ್ಲ
ಏಕನಾಥ ಶಿಂದೆ, ಮಹಾರಾಷ್ಟ್ರ ಮುಖ್ಯಮಂತ್ರಿ

ಆಧಾರ: ಯುಎಪಿಎ–2008, ಭಾರತ ಸರ್ಕಾರದ ಗೆಜೆಟ್, ಕೇಂದ್ರ ಗೃಹ ಸಚಿವಾಲಯದ ವಾರ್ಷಿಕ ವರದಿ:1949–50, ಪಿಐಬಿ, ಪಿಟಿಐ

ಪ್ರಜಾವಾಣಿ ಪ್ರಜಾಧ್ವನಿ

ಜನರ ಮನದಾಳದ ಮಾತು



ಕಾಂಗ್ರೆಸ್ ಅಧ್ಯಕ್ಷ ಸ್ಥಾನದ ಚುನಾವಣೆ ಬಿಕ್ಕಟ್ಟು: ಪಕ್ಷದ ಪುನಶ್ಚೇತನಕ್ಕೆ ತೊಡಕಾಗಲಿದೆಯೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ | 237

ಶಿವನಿಂದನೆಗೆ ಕೆರಳಿದ ಪಾರ್ವತಿ

ವೃದ್ಧವೇಷಧಾರಿ ರುದ್ರ ಹಿಂದೆ ನಡೆದ ಸತೀದೇವಿಯ ದುರಂತ ಅಂತ್ಯವನ್ನು ಪಾರ್ವತಿಗೆ ಹೇಳುತ್ತಾನೆ. 'ದಕ್ಷನ ಮಗಳನ್ನು ಬಲವಂತದಿಂದ ಮದುವೆಯಾದ ಶಿವ, ಆಕೆಯನ್ನು ಸುಖವಾಗಿಟ್ಟುಕೊಳ್ಳಲಿಲ್ಲ. ದಕ್ಷ ಯಜ್ಞ ಮಾಡುವಾಗ ಶಿವ ಅಸ್ಪೃಶ್ಯನೆಂದು, ಅವನಿಗೆ ಯಜ್ಞಭಾಗವನ್ನೇ ಕೊಡಲಿಲ್ಲ. ಶಿವನನ್ನು ಮದುವೆಯಾದಳೆಂದು ಮಗಳು ಸತಿಯನ್ನೂ ಯಜ್ಞಕ್ಕೆ ಕರೆಯಲಿಲ್ಲ. ತಂದೆ ಆಡಿದ ತುಚ್ಛವಾದ ಮಾತುಗಳನ್ನು ಕೇಳಿ ತನ್ನ ಪ್ರಾಣವನ್ನೇ ಬಿಟ್ಟಳು. ಶಿವನ ಸಹವಾಸ ಮಾಡಿದ ಸತಿದೇವಿ ದುರಂತ ಅಂತ್ಯ ಕಂಡಳು.

'ನೀನು ಸಹ ಸಾಮಾನ್ಯಳಲ್ಲ. ಸತಿಯಂತೆಯೇ ಸ್ತ್ರೀರತ್ನವಾಗಿರುವೆ. ನಿನ್ನ ತಂದೆ ಪರ್ವತರಾಜ. ಇಂಥ ಮಹಾರಾಜನ ಮಗಳಾಗಿ ದರಿದ್ರನಾದ ಶಿವನನ್ನು ಪತಿಯನ್ನಾಗಿ ಪಡೆಯಲು ಉಗ್ರ ತಪಸ್ಸನ್ನೇಕೆ ಆಚರಿಸುತ್ತಿರುವೆ? ನೀನು ಚಂದನವನ್ನು ಬಿಟ್ಟು, ಕೆಸರನ್ನು ಹಚ್ಚಿಕೊಳ್ಳಬೇಕೆಂದಿರುವೆಯಲ್ಲಾ, ನಿನ್ನ ಮೂರ್ಖತನಕ್ಕೆ ಏನೆಂದು ಹೇಳಬೇಕು? ಸೂರ್ಯತೇಜಸ್ಸನ್ನು ಬಿಟ್ಟು, ಹುಳುವಿನಂತೆ ದೀಪದ ಪ್ರಕಾಶವನ್ನು ಅಪೇಕ್ಷಿಸುತ್ತಿರುವೆ. ರೇಶಿಮೆ ಬಟ್ಟೆಯನ್ನು ಬಿಟ್ಟು, ಚರ್ಮಾಂಬರವನ್ನ ಅಪೇಕ್ಷಿಸುತ್ತಿರುವೆ. ಮನೆಯ ವಾಸವನ್ನು ಬಿಟ್ಟು ವನವಾಸವನ್ನ ಅಪೇಕ್ಷಿಸುತ್ತಿರುವೆ. ರತ್ನನಿಧಿಯನ್ನು ಬಿಟ್ಟು ಕ್ಷುದ್ರಲೋಹವನ್ನ ಅಪೇಕ್ಷಿಸುತ್ತಿರುವೆ. ಇದು ನಿನ್ನಂಥ ಕುಲಶ್ರೇಷ್ಠಳಿಗೆ ಸರಿಯಲ್ಲ.

ತಾವರೆಯಂತೆ ಸುಂದರವಾದ ಮುಖವುಳ್ಳ ನೀನೆಲ್ಲಿ? ವಿಕಾರವಾದ ಮೂರು ಕಣ್ಣುಗಳುಳ್ಳ ಶಿವನೆಲ್ಲಿ? ಚಂದ್ರನಂತೆ ಸುಂದರವಾದ ಮುಖವುಳ್ಳ ನೀನೆಲ್ಲಿ? ಐದು ಮುಖಗಳುಳ್ಳ ಶಿವನೆಲ್ಲಿ? ನಿಮ್ಮಿಬ್ಬರಿಗೂ ವಧೂವರ ಸಾಮ್ಯತೆ ಸರಿಯಾಗುವುದೇ ಇಲ್ಲ. ನಿನ್ನ ಅಂಗದಲ್ಲಿಯಾದರೋ ಘಮಘಮಿಸುವ ಚಂದನವಿದೆ. ಶಿವನ ಅಂಗದಲ್ಲಿ ಚಿತೆಯ ಬೂದಿಯ ಘಮಲು ಇದೆ. ನಿನ್ನ ಶಿರಸ್ಸಿನಲ್ಲಿ ಸುಂದರವಾದ ಜಡೆಯು ನಾಗಿಣಿಯಂತೆ ನೀಳವಾಗಿ ಶೋಭಿಸುತ್ತಿದೆ. ಆದರೆ ಶಿವನ ಕೆಂಜೆಡೆಯ ಜಟಾಜೂಟವು ವಿಕಾರವಾಗಿ ಕಾಣುತ್ತದೆ. ನಿನ್ನ ದಿವ್ಯಾಭರಣಗಳೆಲ್ಲಿ? ಶಂಕರನ ಸರ್ಪಗಳೆಲ್ಲಿ? ಸುಂದರವಾದ ದೇವತೆಗಳೆಲ್ಲಿ? ಭೂತಬಲಿಯನ್ನ ಅಪೇಕ್ಷಿಸುವ ರುದ್ರನೆಲ್ಲಿ? ನಿನ್ನ ಅರಮನೆಯಲ್ಲಿ ಮೊಳಗುವ ಮದ್ದಳೆಯ ಶುಭ ಧ್ವನಿಯೆಲ್ಲಿ? ಶಿವನ ಡಮರುಧ್ವನಿ ಎಲ್ಲಿ? ನಿಮ್ಮ ನಗಾರಿ ಧ್ವನಿ ಎಲ್ಲಿ? ಶಿವನ ಅಮಂಗಳವಾದ ಕೊಂಬಿನ ಕೂಗೆಲ್ಲಿ?

'ಇದಲ್ಲದೆ, ನಿನಗೂ ಶಿವನಿಗೂ ರೂಪಸಾದೃಶ್ಯವೂ ಹೊಂದುವುದಿಲ್ಲ. ಶಿವನ ಬಳಿ ಧನ-ಕನಕ ಇದ್ದಿದ್ದರೆ ಅವನು ದಿಗಂಬರ ಏಕೆ ಆಗುತ್ತಿದ್ದ? ಅವನ ಬಳಿ ಮುದಿ ಎತ್ತಿನ ವಾಹನ ಬಿಟ್ಟರೆ ಬೇರೇನೂ ಇಲ್ಲ. ವಧುವಿಗೆ ಸುಖ ನೀಡುವಂತಹ ಯಾವ ಗುಣಗಳು ಸಹ ಇಲ್ಲ. ಶಿವ ಎಂಥ ಕೋಪಿಷ್ಠನೆಂದರೆ, ನಿನಗೆ ಸಹಾಯ ಮಾಡಲು ಬಂದ ಮನ್ಮಥನನ್ನು ನಿರ್ದಯವಾಗಿ ಭಸ್ಮಮಾಡಿದ. ನಿನ್ನ ಮೇಲೆ ಅವನಿಗೆ ಅನಾದರ ಇದ್ದಿದ್ದರಿಂದಲೇ, ನಿನ್ನನ್ನು ಬಿಟ್ಟು ಬೇರೆ ಕಡೆಗೆ ಹೋದ.

'ಶಿವನಿಗೆ ಜಾತಿಯಿಲ್ಲ, ವಿದ್ಯೆ ಇಲ್ಲ, ಜ್ಞಾನವೂ ಇಲ್ಲ. ಸದಾ ಒಬ್ಬಂಟಿಗನಾಗಿ ವಿರಕ್ತನಾಗಿರುವ ಅವನಿಗೆ ಪಿಶಾಚಿಗಳೇ ಪರಿವಾರ. ಆದುದರಿಂದ ನೀನು ಹರನಲ್ಲಿ ಅನುರಾಗವುಳ್ಳವಳಾಗಬೇಡ. ನನಗೇಕೋ ಈ ನಿಮ್ಮ ಸಂಬಂಧವು ಸರಿಯಾಗಿ ತೋರುವುದಿಲ್ಲ. ಶಿವನನ್ನು ವರಿಸಿ ಅಪಾಯ ಕಟ್ಟಿಕೊಳ್ಳಬೇಡ. ಶಿವನ ಮೇಲೆ ನಿನಗಿರುವ ಕುರುಡು ಮೋಹವನ್ನು ಬಿಡು' ಎಂದ ರುದ್ರ. ಆಗ ಪಾರ್ವತಿಗೆ ತುಂಬಾ ಕೋಪ ಬಂದಿತು. ಇಲ್ಲಿಗೆ ಶ್ರೀಶಿವಮಹಾಪುರಾಣದಲ್ಲಿ ಪಾರ್ವತೀಖಂಡದ ಇಪ್ಪತ್ತೇಳನೆ ಅಧ್ಯಾಯ ಮುಗಿಯುತ್ತದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'ಭಾರತೀಯರು ವಿಜ್ಞಾನ-ತಂತ್ರಜ್ಞಾನ ವಿಚಾರದಲ್ಲಿ ವಿಶ್ವದ ಬೇರೆಲ್ಲಾ ನಾಗರಿಕತೆಗಳಿಗಿಂತ ಬಹಳ ಮುಂದೆ ಇದ್ದರು. ಪಲ್ಲವ ರಾಜ 2ನೇ ನರಸಿಂಹನು 1,400 ವರ್ಷಗಳ ಹಿಂದೆ ನೆಲ್ಲೂರಿನಲ್ಲಿ ಕಟ್ಟಿಸಿದ್ದ ರಂಗನಾಥ ಸ್ವಾಮಿಯ ದೇವಾಲಯದಲ್ಲಿ ಒಂದು ಉಬ್ಬು ಶಿಲ್ಪವಿದೆ. ಅದರಲ್ಲಿ ವ್ಯಕ್ತಿಯೊಬ್ಬ ಕಂಪ್ಯೂಟರ್ ಬಳಸುತ್ತಿದ್ದಾನೆ. ನಮ್ಮ ಪೂರ್ವಜರ ಕಲ್ಪನೆ ಅಗಾಧವಾದುದಲ್ಲವೇ' ಎಂಬ ವಿವರ ಇರುವ ಪೋಸ್ಟ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ. ಈ ವಿವರಣೆಗೆ ಹೋಲುವ ಚಿತ್ರವೂ ವೈರಲ್ ಆಗಿವೆ.



ಗೂಗಲ್ ಲೆನ್ಸ್ ಮೂಲಕ ಈ ಚಿತ್ರವನ್ನು ಹುಡುಕಿದಾಗ ಈ ಕಲಾಕೃತಿಯ ಹಲವು ಫೋಟೊಗಳು ದೊರೆತವು. ಇದು ಲ್ಯಾಟಿನ್ ಅಮೆರಿಕದ ಕಲಾವಿದ ರೌಲ್ ಕ್ರೂಸ್ ಅವರ ಕಲಾಕೃತಿ. ಅವರ ಅಧಿಕೃತ ಜಾಲತಾಣದಲ್ಲಿ ಈ ಚಿತ್ರವಿದೆ. ಮಾಯನ್ ಸಂಸ್ಕೃತಿಯ ಚಿತ್ರಕಲಾ ಪ್ರಕಾರದಿಂದ ಪ್ರೇರಣೆ ಪಡೆದು ಈ ಚಿತ್ರ ರಚಿಸಿರುವುದಾಗಿ ರೌಲ್ ಹೇಳಿಕೊಂಡಿದ್ದಾರೆ. 2003ರಲ್ಲಿ ಪ್ರಕಟವಾಗಿದ್ದ 'ಕಾಸ್ಮೋಸ್ ಲ್ಯಾಟಿನ್ಸ್' ವಿಜ್ಞಾನ ಕಥಾಪುಸ್ತಕದಲ್ಲಿ ರೌಲ್ ಅವರ ಕಲಾಕೃತಿಯನ್ನು ಮುಖಪುಟದ ಚಿತ್ರವಾಗಿ ಬಳಸಲಾಗಿದೆ. ಅದೇ ಚಿತ್ರವನ್ನು ಭಾರತದ ದೇವಾಲಯದ ಉಬ್ಬುಶಿಲ್ಪ ಎಂದು ತಪ್ಪು ಮಾಹಿತಿಯೊಂದಿಗೆ ಹಂಚಿಕೊಳ್ಳಲಾಗಿದೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಇದೂ ಕಳೆದು ಹೋಗುತ್ತದೆ

ಕಡಲ್ಗಳೊಂದಾದೊಡಂ, ಪೊಡವಿ ಹಬೆಯಾದೊಡಂ |
ಬಿಡದಿರೊಳನೆಮ್ಮದಿಯ, ಬಿಡು ಗಾಬರಿಕೆಯ ||
ಕಡಲ ನೆರೆ ತಗ್ಗುವುದು, ಪೊಡವಿ ಧೂಳಿಳಿಯುವುದು |
ಗಡುವಿರುವುದೆಲ್ಲಕಂ – ಮಂಕುತಿಮ್ಮ || 725 ||

ಪದ-ಅರ್ಥ: ಕಡಲ್ಗಳೊಂದಾದೊಡಂ = ಕಡಲ್ಗಳು(ಸಮುದ್ರಗಳು) + ಒಂದು + ಆದೊಡಂ, ಪೊಡವಿ = ಭೂಮಿ, ಹಬೆಯಾದೊಡಂ = ಹಬೆ (ಆವಿ) + ಆದೊಡಂ(ಆದರೂ),ಬಿಡದಿರೊಳನೆಮ್ಮದಿಯ = ಬಿಡದಿರು + ಒಳ + ನೆಮ್ಮದಿಯ, ಧೂಳಿಳಿಯುವುದು = ಧೂಳು + ಇಳಿಯುವುದು, ಗಡುವಿರುವುದೆಲ್ಲಕಂ = ಗಡವು(ನಿಗದಿತ ವೇಳೆ) + ಇರುವುದು + ಎಲ್ಲಕಂ (ಎಲ್ಲಕ್ಕೂ).

ವಾಚ್ಯಾರ್ಥ: ಉಕ್ಕೇರಿ ಪ್ರಪಂಚದ ಎಲ್ಲ ಸಮುದ್ರಗಳು ಒಂದಾದರೂ, ಭೂಮಿ ಆವಿಯಾದರೂ ನಿನ್ನ ಅಂತರಂಗದ ನೆಮ್ಮದಿಯನ್ನು ಕಳೆದುಕೊಳ್ಳಬೇಡ. ಗಾಬರಿಯಾಗಬೇಡ. ಎಲ್ಲದಕ್ಕೂ ಅದರದೇ ಸಮಯವಿದೆ. ನಂತರ ಸಮುದ್ರದ ನೆರೆ ಇಳಿದು ಶಾಂತವಾಗುತ್ತದೆ. ಭೂಮಿ ತಂಪಾಗಿ ಧೂಳು ಕಳೆಯುತ್ತದೆ.

ವಿವರಣೆ: ಸೂಫೀ ಸಂತ ಕವಿ ಜಲಾಲುದ್ದೀನ್ ರೂಮಿ ಮತ್ತು ಫರೀದುದ್ದೀನ್ ಅತ್ತಾರ ಇಬ್ಬರೂ ಒಂದು ಸುಂದರ ಕಥೆಯನ್ನು ಬರೆದಿದ್ದಾರೆ. ಆ ಕಥೆಯಲ್ಲಿ ಒಬ್ಬ ತರುಣ, ವಿದ್ವಾಂಸ ಮರಾಂಜಬ್ ಮರುಭೂಮಿಯಲ್ಲಿ ಪ್ರವಾಸ ಮಾಡುತ್ತಿದ್ದ. ನಡೆನಡೆದು ನೆಲೆಸಿಗದೆ ಕಂಗಾಲಾಗಿದ್ದ. ಸಂಜೆಯ ಹೊತ್ತಿಗೆ ಒಂದು ಊರು ಕಂಡಿತು. ಅಲ್ಲೊಬ್ಬ ಅತ್ಯಂತ ಶ್ರೀಮಂತ ರೈತ. ಆತ ಈ ತರುಣನಿಗೆ ಇರುವುದಕ್ಕೆ ಮತ್ತು ಊಟಕ್ಕೆ ವ್ಯವಸ್ಥೆ ಮಾಡಿದ. ತರುಣನನ್ನು ನಾಲ್ಕೆಂಟು ದಿನ ಇಟ್ಟುಕೊಂಡು ಪ್ರೀತಿಯಿಂದ ನೋಡಿಕೊಂಡ.

ತರುಣ ಯಜಮಾನನ ಶ್ರೀಮಂತಿಕೆ ಮತ್ತು ಕರುಣೆಯನ್ನು ಕಂಡು ಬೆರಗಾದ. ಅಲ್ಲಿಂದ ಹೊರಡುವ ಮುನ್ನ ಯಜಮಾನನಿಗೆ ತನ್ನ ಗೌರವ, ಕೃತಜ್ಞತೆಗಳನ್ನು ತೋರಿಸಿ, ಅವನ ಶ್ರೀಮಂತಿಕೆಯನ್ನು ಹೊಗಳಿದ. ಯಜಮಾನ ಮುಗುಳ್ನಕ್ಕು, "ಇದೂ ಕಳೆದು ಹೋಗುತ್ತದೆ" ಎಂದ. ಅರ್ಥವಾಗದೆ ತರುಣ ಹೊರಟ. ವರ್ಷಗಳು ಉರುಳಿದವು. ವಿದ್ವಾಂಸ ಮತ್ತೆ ಅದೇ ಮರಾಂಜಬ್ ಮರುಭೂಮಿಯಲ್ಲಿ ಸಾಗಿ ತಾನು ಹಿಂದೆ ಇದ್ದ ಶ್ರೀಮಂತನ ಮನೆಗೆ ಬಂದ. ಅಲ್ಲಿಯ ಅವಸ್ಥೆ ಕಂಡು ಗಾಬರಿಯಾದ. ಮಹಾಪೂರ ಬಂದು ಅವನ ಹೊಲ, ಆಸ್ತಿಯೆಲ್ಲ ಕೊಚ್ಚಿ ಹೋಗಿದೆ. ಈಗ ಅವನೇ ನಿರಾಶ್ರಿತನಾಗಿ ಬೇರೆಯವರಲ್ಲಿ ಕೂಲಿ ಕೆಲಸ ಮಾಡುತ್ತಿದ್ದಾನೆ. ವಿದ್ವಾಂಸನಿಗೆ ಅತ್ಯಂತ ದುಃಖವಾಯಿತು. ಅದನ್ನು ಯಜಮಾನನಿಗೆ ಹೇಳಿದಾಗ ಆತ ಅದೇ ಹಿಂದಿನ ಪ್ರೀತಿಯ ನಗೆಯನ್ನು ಬೀರಿ, "ಇದೂ ಕಳೆದು ಹೋಗುತ್ತದೆ" ಎಂದ! ಈಗ ವಿದ್ವಾಂಸನಿಗೆ ವಯಸ್ಸಾಗಿದೆ. ಅವನನ್ನು ಒಬ್ಬ ರಾಜ ಕರೆಸಿಕೊಂಡ. ಹೆಂಡತಿ ಮಕ್ಕಳನ್ನು ಕಳೆದುಕೊಂಡು ಆತ ದುಃಖಿತನಾಗಿದ್ದಾನೆ. ಅವನಿಗೆ ಸಮಾಧಾನಬೇಕಿದೆ. ವಿದ್ವಾಂಸ ಒಂದು ಬಂಗಾರದ ಉಂಗುರವನ್ನು ಮಾಡಿಸಿ ಅದರ ಮೇಲೆ "ಇದೂ ಕಳೆದುಹೋಗುತ್ತದೆ" ಎಂದು ಕೆತ್ತಿಸಿದ್ದ. ರಾಜನಿಗೆ ಸಮಾಧಾನವಾಯಿತು. ಈ ಹೇಳಿಕೆ, ಅಹಂಕಾರದಲ್ಲಿದ್ದವರಿಗೆ ಎಚ್ಚರಿಕೆಯನ್ನು ಮತ್ತು ದುಃಖದಲ್ಲಿದ್ದವರಿಗೆ ಸಾಂತ್ವನವನ್ನು ನೀಡುತ್ತದೆ. ಈ ಕಗ್ಗದ ತಾತ್ಪರ್ಯವೂ ಅದೇ. ಸಮುದ್ರಗಳು ಉಕ್ಕೇರಲಿ, ಭೂಮಿ ಆವಿಯಾಗಲಿ, ನಿನ್ನ ಮನಸ್ಸಿನ ಸ್ಥಿಮಿತತೆಯನ್ನು ಕಳೆದುಕೊಳ್ಳಬೇಡ. ಯಾಕೆಂದರೆ ಯಾವುದೂ ಶಾಶ್ವತವಲ್ಲ. ಅದೂ ಕಳೆದುಹೋಗುತ್ತದೆ. ಸಮುದ್ರದ ನೆರೆತ ನಿಂತು ಶಾಂತವಾಗುತ್ತದೆ. ಭೂಮಿ ತಂಪಾಗುತ್ತದೆ. ಎಲ್ಲದಕ್ಕೂ ಒಂದು ಸಮಯ ಎಂದಿದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಗುರುವಾರ ಸೆಪ್ಟೆಂಬರ್ 29, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಶುಕ್ಲ ಚತುರ್ಥಿ ಗಂ. 24-09 ನಕ್ಷತ್ರ: ಸ್ವಾತಿ ಗಂ. 05-52, ವಿಶಾಖಾ ಗಂ. 29-13 ಯೋಗ: ವಿಷ್ಕಂಭ ಗಂ. 24-55, ಕರಣ: ವಣಿಜ ಗಂ. 12-51, ಕನ್ಯಾ ಮಾಸದ 12 ನೇ ದಿನ.
ರಾಹುಕಾಲ : ಮಧ್ಯಾಹ್ನ 01:30–03:00
ಸೂರ್ಯೋದಯ : 06-23 ಸೂರ್ಯಾಸ್ತ : 06-18
ಮುಸ್ಲಿಂ ದಿನಾಂಕ : 02 ರಬಿಉಲ್ಲಾವಲ್
ಅದೃಷ್ಟ ಸಂಖ್ಯೆ : 6, 10

ಮೇಷ: ನಿಮ್ಮ ಸಮಸ್ಯೆಗಳಿಗೆ ಧಾರ್ಮಿಕ ಮಾರ್ಗದಲ್ಲಿ ನಡೆದರೆ ಉತ್ತರ ಸಿಗುವುದು. ಸ್ನೇಹಿತರಿಂದ ದೂರ ಉಳಿಯುವ ಅನಿವಾರ್ಯತೆ ಬರಲಿದೆ. ಮಕ್ಕಳ ನಡವಳಿಕೆಯಿಂದ ಅಗೌರವಕ್ಕೆ ಕಾರಣವಾಗುವಿರಿ.

ವೃಷಭ: ಒಟ್ಟು ಕುಟುಂಬದ ಆಸ್ತಿಯ ವಿಷಯಕ್ಕೆ ಸಂಬಂಧಿಸಿದಂತೆ ಮನಸ್ತಾಪ ಬರದಂತೆ ನೋಡಿಕೊಳ್ಳುವುದು ಉತ್ತಮ. ಬಣ್ಣ ಮತ್ತು ಸಿಮೆಂಟ್ ವ್ಯಾಪಾರಿಗಳಿಗೆ ಲಾಭ ಅಧಿಕವಾಗುವುದು.

ಮಿಥುನ: ನಿರಂತರ ಕೆಲಸ ಕಾರ್ಯಗಳಿಂದಾಗಿ ದಣಿದ ನಿಮಗೆ ಇಂದಿನ ಸ್ವಲ್ಪ ಮಟ್ಟಿನ ಬಿಡುವು ಆರಾಮವೆನಿಸುವುದು. ಮಗಳ ಮದುವೆಯ ಸಲುವಾಗಿ ಆಭರಣವನ್ನು ಕೊಳ್ಳುವ ಬಗ್ಗೆ ಯೋಚಿಸಿ. ಅಗ್ನಿಯಿಂದ ಅಪಾಯವಾಗುವ ಭೀತಿ.

ಕರ್ಕಾಟಕ: ರಾಜಕೀಯ ವ್ಯಕ್ತಿಗಳಿಗೆ ಹಣಕಾಸಿನ ವಿಷಯದಲ್ಲಿ ತೊಂದರೆಗಳು ಸಂಭವಿಸಬಹುದು. ಕಫದ ಅಥವಾ ಉಸಿರಾಟದ ಸಮಸ್ಯೆ ಕಂಡುಬಂದಲ್ಲಿ ನಿರ್ಲಕ್ಷಿಸುವುದು ಸರಿಯಲ್ಲ. ವೈದ್ಯರ ಸಲಹೆ ಸೂಚನೆ ಪಾಲಿಸಿರಿ.

ಸಿಂಹ: ಯಾವುದೇ ಆತುರವಿಲ್ಲದೇ, ಗಾಬರಿಗೊಳ್ಳದೇ ಮೇಲಧಿಕಾರಿಗೆ ಪರಿಸ್ಥಿತಿಯನ್ನು, ನಿಮ್ಮ ಮನದ ಭಾವನೆಯನ್ನು ಸ್ಪಷ್ಟವಾಗಿ ತೆರೆದಿಡಿ. ನಿಮ್ಮ ಸಣ್ಣ- ಪುಟ್ಟ ಮಾಹಿತಿಯಿಂದ ಸಂಸ್ಥೆಗೆ ಅನುಕೂಲವಾಗುತ್ತದೆ.

ಕನ್ಯಾ: ಇನ್ನೊಬ್ಬರ ತಪ್ಪಿಗೆ ನೀವು ಹೊಣೆಗಾರರಾಗುವಿರಿ ಮತ್ತು ತಪ್ಪನ್ನು ನೀವು ಸರಿಪಡಿಸಬೇಕಾಗುವುದು. ಮರೆಯಲಾರದ ಘಟನೆಯೊಂದು ನಿಮ್ಮ ಸಂಗಾತಿಯೊಂದಿಗೆ ನಡೆಯುವುದು. ಮಹಾಲಕ್ಷ್ಮಿ ಕೃಪಾಕಟಾಕ್ಷ ಸಂಪಾದಿಸಿ.

ತುಲಾ: ಈ ದಿನ ನಿಮ್ಮ ಸಹೋದ್ಯೋಗಿಯೊಬ್ಬರು ಅತಿ ಉತ್ತಮ ಉಪಾಯಗಳನ್ನು ನೀಡಲಿದ್ದು ಅವರ ಅನುಭವಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳಲಿದ್ದಾರೆ. ನಿಮ್ಮ ಹೃದಯದ ಮಾತಿಗೆ ಬೆಲೆ ಕೊಡುವುದು ಮುಖ್ಯವಾಗಿದೆ.

ವೃಶ್ಚಿಕ: ನೆರೆಹೊರೆಯವರೊಂದಿಗಿನ ಸಂಬಂಧಗಳು ಉತ್ತಮಗೊಳ್ಳುವುದು. ಮಗಳ ಆಸೆಯಂತೆ ವಿದೇಶ ಪ್ರಯಾಣದ ಸಾಧ್ಯತೆ ಇರುವುದು. ಕಿರುತೆರೆ ಮತ್ತು ಸಿನಿಮಾ ಕಲಾವಿದರಿಗೆ ವಿಶೇಷ ಮಾನ್ಯತೆ ದೊರೆಯಲಿದೆ.

ಧನು: ನಿಮ್ಮ ಬದುಕಿಗೆ ಹಿರಿಯರಿಂದ ಆಶೀರ್ವಾದ ಲಭಿಸುವುದು. ಭೋಜನದ ಸಮಯದಲ್ಲಿ ವ್ಯತ್ಯಯಗಳು ಸಂಭವಿಸುವುದಾಗಿ ಕಾಣುವುದು. ದೇವರಲ್ಲಿ ನಂಬಿಕೆ ಹೆಚ್ಚಲಿದೆ. ವೃತ್ತಿಯಲ್ಲಿ ಅನಗತ್ಯ ವಿಷಯಗಳತ್ತ ಗಮನಹರಿಸದಿರಿ.

ಮಕರ: ಈ ದಿನ ನಿಮ್ಮ ವೃತ್ತಿ ಜೀವನದಲ್ಲಿ ಸಹೋದ್ಯೋಗಿಗಳ ಮಾತಿನಂತೆ ನಡೆದುಕೊಳ್ಳುವುದು ಉತ್ತಮವಾದದ್ದು. ವೃತ್ತಿಗೆ ಸಂಬಂಧಿಸಿದಂತೆ ಅಚ್ಚರಿಯ ಸುದ್ದಿಯೊಂದನ್ನು ಕೇಳಲಿರುವಿರಿ. ಗಣ್ಯವ್ಯಕ್ತಿಯ ಭೇಟಿಯಿಂದ ಅನುಕೂಲ

ಕುಂಭ: ನಿಮ್ಮ ಬಾಲ್ಯದ ಕನಸು ಈಡೇರುವ ಕಾಲ ಈ ದಿನವಾಗಿದೆ. ನೂತನ ಸಾಕು ಪ್ರಾಣಿಯ ಆಗಮನ ಮಕ್ಕಳಲ್ಲಿ ಸಂತೋಷ ಮೂಡಿಸಲಿದೆ. ಕೃಷಿಗೆ ಸಂಬಂಧಿಸಿದ ಯಂತ್ರಗಳು ಖರೀದಿಸಬಹುದು.

ಮೀನ: ಜವಾಬ್ದಾರಿಯಲ್ಲಿನ ಸ್ಪಷ್ಟ ವಿಷಯವೊಂದು ಮನವರಿಕೆಯಾಗುವುದು. ಮನೆಯಲ್ಲಿ ವಿವಾಹ ಸಿದ್ಧತೆಗಳು ಭರದಿಂದ ಸಾಗಲಿದೆ. ಸ್ನೇಹಿತರೊಂದಿಗಿನ ಹರಟೆ ಮನಸ್ಸನ್ನು ಹಗುರ ಗೊಳಿಸಲು ಕಾರಣವಾಗುವುದು.

ಪದಬಂಧ 5094 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಮೂಲ ಧನವಿದು (3)
3.ಈ ಪರಿ ತಪ್ಪಿಸಿಕೊಳ್ಳುವಿಕೆ! (3)
5.ಭಾರತ ಹೊತ್ತಿರುವ ಒಜ್ಜೆ! (2)
6.ಸುಟ್ಟು ಕಪ್ಪಾದುದು (3)
7.ರಿಕಾಪು ಹಿಡಿದಿರುವ ಶತ್ರು! (2)
9.ಸುಗಮವಾಗಿ ಕಿತ್ತಿರುವ ಹೂವು (2)
11.ಆನಂದದಲ್ಲಿ ಕೊನೆಗೊಂಡಿರುವುದು (3)
13.ಕಾಯಿಸುವಾಗ ಸಿಕ್ಕಿರುವ ದುಡ್ಡು (2)
14.ಗೆಳೆಯನೊಡನೆ ಬಂದಿರುವ ಸ್ನೇಹಿತೆ (3)
15.ಮಾದರಿ ಇಲ್ಲಿದೆ (3)

ಮೇಲಿಂದ ಕೆಳಕ್ಕೆ
1.ಸುರನ ಹತ್ತಿರ ಬಂದಿರುವ ರಾಕ್ಷಸ (3)
2.ಜಿಪುಣನನ್ನು ಹೀಗೂ ಕರೆವರು (3)
3.ತಪರಾಕಿನ ನಂತರ ಮಾಡಿದ ಸ್ತುತಿ! (3)
4.ದುರಸ್ತಿಯನ್ನು ಹೀಗೆನ್ನಿ (3)
5.ಈ ರೀತಿ ಅನುವಾದಿಸು (5)
8.ಪ್ರತಿ ಸಲ ಮಾತಿನಲ್ಲಿ ನಯವಾಗಿಉಬ್ಬಿಸು! (5)
10.ಕಡೆದ ಮೊಸರು (3)
11.ಒಳ್ಳೆಯ ನಡತೆ (3)
12.ತನಯ ಈ ರೀತಿ ಮಗ್ನ ! (3)
13.ಕಾಮನಿಂದ ಮೂಡಿರುವ ಆಸೆ (3)



5093ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪ್ರತಿಷ್ಠಾಪನೆ 3.ಆಸರೆ
5.ತಲೆಬರಹ 7.ನಜರು
9.ಕುಠಾರ 11.ವಾಮನ
13.ವಿಮಾನಯಾನ
15.ವಂತಿಗೆ 16.ಜಲಜನಕ

ಮೇಲಿಂದ ಕೆಳಕ್ಕೆ:
1.ಪ್ರಯೋಜನ 2.ಪರ್ವತ
4.ಸನಿಹ 6.ಬರ್ಬರ
8.ಜಟ್ಟಿ 9.ಕುಲೀನ
10.ಧೂಮ 12.ನಳಪಾಕ
13.ವಿಸ್ಮೃತಿ 14.ನಕುಲ

ಸುಡೊಕು 5480

	4					6		1
9						2	7	
	7	2						8
		4		3		1		2
2	8		6	9				
		7			8		6	5
	5			1		4		7
		6	8		2		3	
4	2			5	7	8		6

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5479 ಸುಡೊಕು

3	5	1	7	4	2	9	8	6
6	9	2	1	5	8	3	7	4
4	7	8	3	6	9	2	1	5
1	6	4	8	9	5	7	2	3
9	2	5	4	3	7	8	6	1
8	3	7	6	2	1	4	5	9
2	1	3	9	7	6	5	4	8
5	4	6	2	8	3	1	9	7
7	8	9	5	1	4	6	3	2

ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಭೇಟಿಯಾದ ಎ.ಕೆ.ಆ್ಯಂಟನಿ: ಇಂದು ಸಿಂಗ್ ನಾಮಪತ್ರ ಸಲ್ಲಿಕೆ ಸಾಧ್ಯತೆ

ಅಧ್ಯಕ್ಷ ಗಾದಿ: ದಿಗ್ವಿಜಯ ಹೆಸರು ಮುನ್ನೆಲೆಗೆ

ನವದೆಹಲಿ (ಪಿಟಿಐ): ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರು ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವ ಸಾಧ್ಯತೆ ಕ್ಷೀಣವಾಗಿದ್ದು, ಮಧ್ಯಪ್ರದೇಶದ ಮಾಜಿ ಮುಖ್ಯಮಂತ್ರಿ ಹಾಗೂ ಗಾಂಧಿ ಕುಟುಂಬಕ್ಕೆ ಆಪ್ತರಾಗಿರುವ ದಿಗ್ವಿಜಯ ಸಿಂಗ್ ಹೆಸರು ಈಗ ಮುನ್ನೆಲೆಗೆ ಬಂದಿದೆ.

ಅವರು ಗುರುವಾರ ನಾಮಪತ್ರ ಸಲ್ಲಿಸುವ ಸಾಧ್ಯತೆ ಇದೆ.

ಪಕ್ಷದ ಹಿರಿಯ ಮುಖಂಡ ಎ.ಕೆ. ಆ್ಯಂಟನಿ ಅವರು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರನ್ನು ಬುಧವಾರ ಭೇಟಿಯಾಗಿ ಚರ್ಚಿಸಿದ್ದಾರೆ. ಈ ವೇಳೆ ದಿಗ್ವಿಜಯ ಹೆಸರು ಪ್ರಸ್ತಾಪವಾಗಿದೆ ಎಂದು ಮೂಲಗಳು ತಿಳಿಸಿವೆ.

ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲಿರುವ ಸಂಭಾವ್ಯ ಅಭ್ಯರ್ಥಿಗಳ ಕುರಿತೂ ಸೋನಿಯಾ ಅವರು ಆ್ಯಂಟನಿ ಜೊತೆ ಸುಮಾರು ಒಂದು ಗಂಟೆ ಕಾಲ ಚರ್ಚಿಸಿದ್ದಾರೆ. ಅಧ್ಯಕ್ಷ ಸ್ಥಾನದಲ್ಲಿ ಮುಂದುವರಿಯುವಂತೆ ಆ್ಯಂಟನಿ ಅವರು ಸೋನಿಯಾಗೆ ಮನವಿ ಮಾಡಿದ್ದು ಇದಕ್ಕೆ ಸೋನಿಯಾ ಅವರು ಒಪ್ಪಲಿಲ್ಲ ಎಂದೂ ಹೇಳಲಾಗಿದೆ.

'ದಿಗ್ವಿಜಯ ಅವರು ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲು ಆಸಕ್ತಿ ತೋರಿದ್ದು, ಶೀಘ್ರವೇ ನಾಮಪತ್ರ ಸಲ್ಲಿಸುವ ಸಾಧ್ಯತೆ ಇದೆ. ಈ ಸಂಬಂಧ ಅವರು ಇನ್ನೂ ಪಕ್ಷದ ನಾಯಕರೊಂದಿಗೆ ಚರ್ಚಿಸಿಲ್ಲ' ಎಂದು ಅವರ ಆಪ್ತ ಮೂಲಗಳು ಹೇಳಿವೆ.

ಅಧ್ಯಕ್ಷನಾಗುವ ಆಸೆ ಇಲ್ಲ: ಕಮಲ್‌ನಾಥ್

ಭೋಪಾಲ್ (ಪಿಟಿಐ): 'ಕಾಂಗ್ರೆಸ್ ಅಧ್ಯಕ್ಷನಾಗಬೇಕೆಂಬ ಬಯಕೆ ಇಲ್ಲ. ಹೀಗಾಗಿ ಚುನಾವಣೆಗೂ ಸ್ಪರ್ಧಿಸುವುದಿಲ್ಲ. ಮುಂದಿನ ವರ್ಷ ವಿಧಾನಸಭಾ ಚುನಾವಣೆ ನಿಗದಿಯಾಗಿದೆ. ಅದರತ್ತ ಮಾತ್ರ ಗಮನಹರಿಸಿದ್ದೇನೆ' ಎಂದು ಮಧ್ಯಪ್ರದೇಶ ಕಾಂಗ್ರೆಸ್ ಮುಖ್ಯಸ್ಥ ಕಮಲ್‌ನಾಥ್ ಬುಧವಾರ ಹೇಳಿದ್ದಾರೆ.

'ರಾಹುಲ್ ಗಾಂಧಿಯವರ ಜೊತೆ ಮಾತನಾಡಿದ್ದೇನೆ. ನೀವೇ ಅಧ್ಯಕ್ಷರಾಗಬೇಕೆಂದು ಒತ್ತಾಯಿಸಿದ್ದೇನೆ. ಪರಿಸ್ಥಿತಿ ಜಟಿಲವಾಗುತ್ತಿರುವುದನ್ನೂ ಅವರ ಗಮನಕ್ಕೆ ತಂದಿದ್ದೇನೆ. ಪಕ್ಷದ ಅಧ್ಯಕ್ಷರಾಗಲು ತಮಗೆ ಆಸಕ್ತಿ ಇಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ. ಹೀಗಾಗಿ ಚುನಾವಣೆ ನಡೆಸಲು ನಿರ್ಧರಿಸಲಾಗಿದೆ. ಬಿಜೆಪಿಯವರು ಯಾವುದೇ ಚುನಾವಣೆ ನಡೆಸದೆಯೇ ಜೆ.ಪಿ.ನಡ್ಡಾ ಅವರನ್ನು ರಾಷ್ಟ್ರೀಯ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದ್ದಾರೆ. ನಡ್ಡಾ ಆಯ್ಕೆಗೂ ಮುನ್ನ ಆ ಪಕ್ಷದವರು ಕನಿಷ್ಠ 10 ಮುಖಂಡರ ಅಭಿಪ್ರಾಯವನ್ನೂ ಆಲಿಸಿರಲಿಲ್ಲ' ಎಂದಿದ್ದಾರೆ.

'ಇನ್ನೊಂದು ವರ್ಷದಲ್ಲಿ ವಿಧಾನಸಭೆ ಚುನಾವಣೆ ನಡೆಯಲಿದೆ. ಇಂತಹ ಪರಿಸ್ಥಿತಿಯಲ್ಲಿ ರಾಜ್ಯ ಬಿಟ್ಟು ಬರಲು ತಮಗೆ ಮನಸ್ಸಿಲ್ಲ ಎಂದು ಸೋನಿಯಾ ಗಾಂಧಿಯವರಿಗೆ ತಿಳಿಸಿದ್ದೇನೆ. ಒಂದೊಮ್ಮೆ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದರೆ ವಿಧಾನಸಭೆ ಚುನಾವಣೆಗೆ ಪಕ್ಷ ಬಲಪಡಿಸುವುದರತ್ತ ಗಮನ ಹರಿಸಲು ಆಗುವುದಿಲ್ಲ. ಹೀಗಾಗಿ ಅಧ್ಯಕ್ಷೀಯ ಚುನಾವಣೆಯಿಂದ ದೂರ ಉಳಿಯಲು ತೀರ್ಮಾನಿಸಿದ್ದೇನೆ' ಎಂದು ಹೇಳಿದ್ದಾರೆ.

'ನೂತನ ಅಧ್ಯಕ್ಷರಾಗುವವರು ಗುಜರಾತ್ ಹಾಗೂ ಹಿಮಾಚಲಪ್ರದೇಶ ಚುನಾವಣೆಗಳತ್ತ ಗಮನಹರಿಸಬೇಕಾಗುತ್ತದೆ. ಆಯಾ ರಾಜ್ಯಗಳಿಗೆ ಅನುಗುಣವಾಗಿ ಚುನಾವಣಾ ತಂತ್ರಗಾರಿಕೆ ರೂಪಿಸಬೇಕಾಗುತ್ತದೆ' ಎಂದೂ ತಿಳಿಸಿದ್ದಾರೆ.

ಇಂದು ಅಶೋಕ್ ಗೆಹಲೋತ್–ಸೋನಿಯಾ ಭೇಟಿ ಸಾಧ್ಯತೆ

ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರು ಗುರುವಾರ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಅವರನ್ನು ಭೇಟಿಯಾಗಿ ಚರ್ಚಿಸುವ ಸಾಧ್ಯತೆ ಇದೆ.

'ಅವರು ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಸುತ್ತಾರೊ, ಇಲ್ಲವೊ ಎಂಬ ಕುತೂಹಲಕ್ಕೆ ಗುರುವಾರ ತೆರೆಬೀಳಲಿದೆ' ಎಂದು ಮೂಲಗಳು ಹೇಳಿವೆ.

ಬುಧವಾರ ರಾತ್ರಿ ದೆಹಲಿಗೆ ಬಂದಿಳಿದ ಬಳಿಕ ಮಾತನಾಡಿದ ಅವರು, 'ಅಧ್ಯಕ್ಷೀಯ ಚುನಾವಣೆ ಬೆನ್ನಲ್ಲೇ ಪಕ್ಷದಲ್ಲಿ ಆಂತರಿಕ ಬಿಕ್ಕಟ್ಟು ಸೃಷ್ಟಿಯಾಗಿದೆ. ಅದು ಶೀಘ್ರವೇ ಶಮನಗೊಳ್ಳಲಿದೆ' ಎಂದಿದ್ದಾರೆ.

'ನಮ್ಮದು ರಾಷ್ಟ್ರೀಯ ಪಕ್ಷ. ನಮ್ಮಲ್ಲಿ ಆಂತರಿಕ ಶಿಸ್ತು ಇದೆ. ಅದನ್ನು ನಾವೆಲ್ಲಾ ಪಾಲಿಸಬೇಕಾಗುತ್ತದೆ. ಈಗ ಸಣ್ಣ ಸಮಸ್ಯೆಯೊಂದು ಉದ್ಭವಿಸಿದೆ. ಮಾಧ್ಯಮಗಳು ಅದನ್ನೇ ದೊಡ್ಡದಾಗಿ ಬಿಂಬಿಸುತ್ತಿವೆ' ಎಂದು ತಿಳಿಸಿದ್ದಾರೆ.

'ದೇಶವು ಹಲವು ಸಮಸ್ಯೆಗಳನ್ನು ಎದುರಿಸುತ್ತಿವೆ. ಅವುಗಳ ವಿರುದ್ಧ ನಾವು ಹೋರಾಟ ನಡೆಸಬೇಕಿದೆ' ಎಂದಿದ್ದಾರೆ.

ದಿಗ್ವಿಜಯ ಸಿಂಗ್

ದೆಹಲಿಗೆ ದಿಗ್ವಿಜಯ ಪ್ರಯಾಣ: ಕೇರಳದಲ್ಲಿ ನಡೆಯುತ್ತಿರುವ ಭಾರತ್ ಜೋಡೊ ಯಾತ್ರೆಯಲ್ಲಿ ಪಾಲ್ಗೊಂಡಿದ್ದ ದಿಗ್ವಿಜಯ ಅವರು ಬುಧವಾರ ರಾತ್ರಿ ಕೇರಳದಿಂದ ದೆಹಲಿಗೆ ಪ್ರಯಾಣ ಬೆಳೆಸಿದ್ದಾರೆ. ಎಐಸಿಸಿ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ. ವೇಣುಗೋಪಾಲ್ ಅವರೂ ಅವರ ಜೊತೆ ವಿಮಾನದಲ್ಲಿದ್ದರು' ಎಂದು ಮೂಲಗಳು ತಿಳಿಸಿವೆ.

'ದಿಗ್ವಿಜಯ ಅವರು ಬುಧವಾರ ರಾತ್ರಿ ತಮ್ಮ ಬೆಂಬಲಿಗರೊಂದಿಗೆ ಸಭೆ ನಡೆಸಿ ಚರ್ಚಿಸಲಿದ್ದಾರೆ. ಗುರುವಾರ ಅವರು ನಾಮಪತ್ರ ಸಲ್ಲಿಸುವ ನಿರೀಕ್ಷೆ ಇದೆ' ಎಂದೂ ಮಾಹಿತಿ ನೀಡಿವೆ.

ತಿರುವನಂತಪುರ ಕ್ಷೇತ್ರದ ಸಂಸದ ಶಶಿ ತರೂರ್ ಅವರು ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವುದಾಗಿ ಈಗಾಗಲೇ ಘೋಷಿಸಿದ್ದಾರೆ. ಅವರು ಇದೇ 30ರಂದು ನಾಮಪತ್ರ ಸಲ್ಲಿಸುವ ನಿರೀಕ್ಷೆ ಇದೆ.

ನಾಮಪತ್ರ ಸಲ್ಲಿಸಲು ಇದೇ 30 ಕೊನೆಯ ದಿನವಾಗಿದೆ. ಅಧ್ಯಕ್ಷ ಸ್ಥಾನಕ್ಕೆ ಅಕ್ಟೋಬರ್ 17ರಂದು ಚುನಾವಣೆ ನಡೆಯಲಿದ್ದು, 19ರಂದು ಫಲಿತಾಂಶ ಪ್ರಕಟವಾಗಲಿದೆ.

ಪ್ರಿಯಾಂಕಾ ಗಾಂಧಿ ವಾದ್ರಾ ಅಧ್ಯಕ್ಷರಾಗಲಿ

ನವದೆಹಲಿ (ಪಿಟಿಐ): ಕಾಂಗ್ರೆಸ್‌ನ ಅಧ್ಯಕ್ಷ ಸ್ಥಾನಕ್ಕೆ ಪ್ರಿಯಾಂಕಾ ಗಾಂಧಿ ವಾದ್ರಾ ಅವರೇ ಸೂಕ್ತ ಅಭ್ಯರ್ಥಿ ಎಂದು ಕಾಂಗ್ರೆಸ್ ಸಂಸದ ಅಬ್ದುಲ್ ಖಲೀಕ್ ಬುಧವಾರ ಹೇಳಿದ್ದು, ಭಾರತೀಯ ಸಂಪ್ರದಾಯದ ಪ್ರಕಾರ ಮದುವೆಯಾದ ಬಳಿಕ ಪ್ರಿಯಾಂಕಾ ಅವರು, ವಾದ್ರಾ ಕುಟುಂಬದ ಸೊಸೆಯಾಗಿದ್ದಾರೆ. ಅವರೀಗ ಗಾಂಧಿ ಕುಟುಂಬದ ಸದಸ್ಯರಲ್ಲ ಎಂದೂ ಕಾರಣ ನೀಡಿದ್ದಾರೆ.

'ರಾಹುಲ್ ಗಾಂಧಿ ಮತ್ತೊಮ್ಮೆ ಕಾಂಗ್ರೆಸ್ ಅಧ್ಯಕ್ಷರಾಗಲು ನಿರಾಕರಿಸಿದ್ದಾರೆ. ಹಾಗಾಗಿ, ಆ ಸ್ಥಾನಕ್ಕೆ ಪ್ರಿಯಾಂಕಾ ಸೂಕ್ತ ಅಭ್ಯರ್ಥಿ ಎಂದು ನಾನು ಪರಿಗಣಿಸುತ್ತೇನೆ' ಎಂದು ಅಸ್ಸಾಂನ ಬಾರ್ಪೇಟಾ ಸಂಸದ ಅಬ್ದುಲ್ ಟ್ವೀಟ್ ಮಾಡಿದ್ದಾರೆ.

'ಪಕ್ಷದ ಕಾರ್ಯಕರ್ತರ ಆಶಯ ಗೌರವಿಸುತ್ತೇನೆ. ಆದರೆ, ಗಾಂಧಿ ಕುಟುಂಬದಿಂದ ಯಾರೂ ಮುಂದಿನ ಕಾಂಗ್ರೆಸ್ ಅಧ್ಯಕ್ಷರಾಗುವುದಿಲ್ಲ' ಎಂದು ರಾಹುಲ್ ಗಾಂಧಿ ಅವರು ಅಶೋಕ್ ಗೆಹಲೋತ್ ಅವರಿಗೆ ಹೇಳಿದ ಕೆಲವೇ ದಿನಗಳ ಬಳಿಕ ಅಬ್ದುಲ್ ಅವರು ಪ್ರಿಯಾಂಕಾ ಅವರ ಹೆಸರನ್ನು ಸೂಚಿಸಿದ್ದಾರೆ.

'ಸರ್ಕಾರ ಕಾಂಡೋಮ್ ನೀಡಬೇಕೇ'

ಪಟ್ನಾ/ಬೆಂಗಳೂರು: 'ಸರ್ಕಾರವು ಕಾಂಡೋಮ್ ಸಹ ನೀಡಲಿ ಎಂದು ನೀವು ಬಯಸುತ್ತೀರಿ ಅಲ್ಲವೇ' ಎಂದು ಐಎಎಸ್ ಅಧಿಕಾರಿಯೊಬ್ಬರು ಶಾಲಾ ಬಾಲಕಿಯನ್ನು ಪ್ರಶ್ನಿಸುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.

ಈ ಘಟನೆ ಬಿಹಾರದ ಪಟ್ನಾದಲ್ಲಿ ಮಹಿಳಾ ಅಭಿವೃದ್ಧಿ ನಿಗಮವು ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ, ನಿಗಮದ ನಿರ್ದೇಶಕಿ ಹರ್ಜೋತ್ ಕೌರ್ ಭಮ್ರಾ ಅವರು ಕೇಳಿರುವ ಪ್ರಶ್ನೆ ಇದು.

ಭಮ್ರಾ ಅವರ ಹೇಳಿಕೆಗೆ ವಿದ್ಯಾರ್ಥಿ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಆಗ ಭಮ್ರಾ ವಿದ್ಯಾರ್ಥಿನಿ ಮೇಲೆ ಕಿಡಿಕಾರಿದ್ದಾರೆ.

ಸಂವಾದದಲ್ಲಿ ವಿದ್ಯಾರ್ಥಿನಿಯೊಬ್ಬಳು, 'ಸರ್ಕಾರವು ಶಾಲಾ ವಿದ್ಯಾರ್ಥಿನಿಯರಿಗೆ ಕಡಿಮೆ ದರದಲ್ಲಿ ಸ್ಯಾನಿಟರಿ ಪ್ಯಾಡ್ ನೀಡುವ ವ್ಯವಸ್ಥೆ ಮಾಡಬಹುದೇ' ಎಂದು ಪ್ರಶ್ನಿಸಿದ್ದಾಳೆ. ಆಗ ಭಮ್ರಾ ಅವರು, 'ಸರ್ಕಾರವು ಜೀನ್ಸ್ ಸಹ ನೀಡಲಿ ಎಂದು ನಾಳೆ ಬಯಸುತ್ತೀರಿ. ಕೊನೆಗೆ, ಕಾಂಡೋಮ್ ಅನ್ನೂ ಸರ್ಕಾರ ನೀಡಲಿ ಎಂದು ಬಯಸುತ್ತೀರಿ. ಸರ್ಕಾರ ಕಾಂಡೋಮ್ ನೀಡಬೇಕೆ' ಎಂದು ಕೇಳಿದ್ದಾರೆ.

ಆಗ ವಿದ್ಯಾರ್ಥಿನಿ, 'ಸೇವೆ ಮಾಡಲಿ ಎಂದಲ್ಲವೇ ನಾವು ಮತ ನೀಡುವುದು' ಎಂದು ಪ್ರಶ್ನಿಸಿದ್ದಾಳೆ. ಅದಕ್ಕೆ ಭಮ್ರಾ ಅವರು, 'ಇದು ಮೂರ್ಖತನದ ಪರಮಾವಧಿ. ಹಾಗಿದ್ದಲ್ಲಿ ಮತ ಹಾಕಬೇಡಿ. ಇದು ಪಾಕಿಸ್ತಾನವಾಗಲಿ' ಎಂದಿದ್ದಾರೆ. ಇದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ವಿದ್ಯಾರ್ಥಿನಿ, 'ಇದ್ಯಾಕೆ ಪಾಕಿಸ್ತಾನವಾಗಬೇಕು. ಇದು ಭಾರತ. ನಾನು ಭಾರತೀಯಳು' ಎಂದು ತಿರುಗೇಟು ನೀಡಿದ್ದಾಳೆ.

ಫೇಸ್‌ಬುಕ್ ಮತ್ತು ಟ್ವಿಟರ್‌ನಲ್ಲಿ ಈ ವಿಡಿಯೊ ಸಾವಿರಾರು ಬಾರಿ ಹಂಚಿಕೆಯಾಗಿದೆ. ಆದರೆ, 'ನಾನು ಆ ಹೇಳಿಕೆ ನೀಡಿಯೇ ಇಲ್ಲ' ಎಂದು ಭಮ್ರಾ ಹೇಳಿದ್ದಾರೆ.

ಸುದ್ದಿ 2 ನಿಮಿಷ

ನಿರ್ಧಾರ ಕೈಗೊಳ್ಳದ ಕೇಂದ್ರದ ನಡೆ ಬಗ್ಗೆ 'ಸುಪ್ರೀಂ' ಅಸಮಾಧಾನ

ನವದೆಹಲಿ (ಪಿಟಿಐ): ಪಂಜಾಬ್ ಮಾಜಿ ಮುಖ್ಯಮಂತ್ರಿ ಬಿಯಾಂತ್ ಸಿಂಗ್ ಅವರ ಹತ್ಯೆ ಪ್ರಕರಣದಲ್ಲಿ ತನಗೆ ವಿಧಿಸಿರುವ ಮರಣ ದಂಡನೆಯನ್ನು ಜೀವಾವಧಿ ಶಿಕ್ಷೆಯನ್ನಾಗಿ ಮಾರ್ಪಡಿಸುವಂತೆ ಕೋರಿ ಬಲ್ವಂತ್ ಸಿಂಗ್ ರಾಜೋನಾ ಸಲ್ಲಿಸಿರುವ ಅರ್ಜಿ ಕುರಿತು ನಿರ್ಧಾರ ಕೈಗೊಳ್ಳದ ಕೇಂದ್ರದ ನಡೆ ಬಗ್ಗೆ ಸುಪ್ರೀಂ ಕೋರ್ಟ್ ಬುಧವಾರ ಅಸಮಾಧಾನ ಹೊರಹಾಕಿತು.

ರಾಜೋನಾ ಸಲ್ಲಿಸಿದ ಅರ್ಜಿಯನ್ನು ಮುಖ್ಯನ್ಯಾಯಮೂರ್ತಿ ಯು.ಯು.ಲಲಿತ್, ನ್ಯಾಯಮೂರ್ತಿಗಳಾದ ಎಸ್.ರವೀಂದ್ರ ಭಟ್ ಹಾಗೂ ಜೆ.ಬಿ.ಪಾರ್ದಿವಾಲಾ ಅವರಿದ್ದ ನ್ಯಾಯಪೀಠ ವಿಚಾರಣೆ ನಡೆಸಿತು.

'ಕಳೆದ 26 ವರ್ಷಗಳಿಂದ ಕಾರಾಗೃಹವಾಸದಲ್ಲಿರುವ ಕಾರಣ ನನಗೆ ವಿಧಿಸಿರುವ ಗಲ್ಲು ಶಿಕ್ಷೆಯನ್ನು ಜೀವಾವಧಿ ಶಿಕ್ಷೆಯನ್ನಾಗಿ ಮಾರ್ಪಡಿಸಬೇಕು' ಎಂದು ರಾಜೋನಾ ಅರ್ಜಿ ಸಲ್ಲಿಸಿದ್ದಾನೆ.

'ಅರ್ಜಿ ವಿಚಾರಣೆಯನ್ನು ಮುಂದೂಡಬೇಕು' ಎಂಬುದಾಗಿ ಕೇಂದ್ರ ಸರ್ಕಾರ ಮನವಿ ಮಾಡಿದ ಬಗ್ಗೆಯೂ ನ್ಯಾಯಪೀಠ ಅಸಮಾಧಾನ ವ್ಯಕ್ತಪಡಿಸಿತು.

'ಕಳೆದ ಮೇ 2ರಂದು ವಿಚಾರಣೆ ನಡೆಸಿ, ನಿರ್ಧಾರ ತಿಳಿಸಲು ಎರಡು ತಿಂಗಳು ಅವಕಾಶ ನೀಡಲಾಗಿತ್ತು. ಆ ಅವಧಿಯೂ ಮುಗಿದಿದೆ. ಆದರೆ, ಸಂಬಂಧಪಟ್ಟವರು ಈ ಕುರಿತು ಯಾವ ನಿರ್ಧಾರವನ್ನೂ ಕೈಗೊಂಡಿಲ್ಲ ಎಂಬುದಾಗಿ ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಎಂ.ನಟರಾಜ್ ಅವರು ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ತಿಳಿಸಲಾಗಿದೆ' ಎಂದು ಹೇಳಿದ ನ್ಯಾಯಪೀಠ, ವಿಚಾರಣೆಯನ್ನು ಶುಕ್ರವಾರಕ್ಕೆ ಮುಂದೂಡಿತು.

'ಇಂಥ ವಿಷಯಗಳು ವಿಚಾರಣೆಯನ್ನು ಮುಂದೂಡಿದಾಗ ಏನಾಗುತ್ತದೆ ಎಂಬುದು ನಿಮಗೆ ಗೊತ್ತು. ಇಂಥ ವಿಷಯಗಳು ಮತ್ತೆ ಆರು ತಿಂಗಳ ನಂತರ ವಿಚಾರಣೆಗೆ ಬರುತ್ತವೆ' ಎಂದೂ ನ್ಯಾಯಪೀಠ ಅಭಿಪ್ರಾಯಪಟ್ಟಿತು.

3 ತಿಂಗಳ ಬಳಿಕ ಶ್ರೀಕುಮಾರ್‌ಗೆ ಮಧ್ಯಂತರ ಜಾಮೀನು

ಅಹಮದಾಬಾದ್: ಗೋಧ್ರಾ ಗಲಭೆಗೆ ಸಂಬಂಧಿಸಿದಂತೆ ಮಾಜಿ ಡಿಜಿಪಿ ಆರ್.ಬಿ.ಶ್ರೀಕುಮಾರ್‌ಗೆ ಗುಜರಾತ್ ಹೈಕೋರ್ಟ್ ನ.15ರವರೆಗೆ ಮಧ್ಯಂತರ ಜಾಮೀನು ಮಂಜೂರು ಮಾಡಿದ್ದು, ಜಾಮೀನು ಪಡೆಯಲು ವಿಚಾರಣಾ ನ್ಯಾಯಾಲಯದಲ್ಲಿ ಹೊಸದಾಗಿ ಅರ್ಜಿ ಸಲ್ಲಿಸುವಂತೆ ಸೂಚಿಸಿದೆ.

2002ರ ಗುಜರಾತ್ ಗಲಭೆಗೆ ಸಂಬಂಧಿಸಿದಂತೆ ನಕಲಿ ಸಾಕ್ಷ್ಯಾಧಾರ ಸೃಷ್ಟಿಸಿದ ಪ್ರಕರಣದಲ್ಲಿ ಆರ್.ಪಿ.ಶ್ರೀಕುಮಾರ್ ಮತ್ತು ಸಾಮಾಜಿಕ ಕಾರ್ಯಕರ್ತೆ ತೀಸ್ತಾ ಸೆಟಲ್‌ವಾಡ್ ರನ್ನು ಜೂನ್ 25ರಂದು ಬಂಧಿಸಲಾಗಿತ್ತು.

ಇದೇ ವೇಳೆ ತೀಸ್ತಾ ಸೆಟಲ್‌ವಾಡ್ ಅವರ ಜಾಮೀನು ಅರ್ಜಿಯನ್ನು ನ.15ಕ್ಕೆ ಮುಂದೂಡಿದೆ.

ಲತಾ ಮಂಗೇಶ್ಕರ್ ಚೌಕ ಉದ್ಘಾಟನೆ

ಅಯೋಧ್ಯಾ (ಪಿಟಿಐ): ಸುಪ್ರಸಿದ್ಧ ಗಾಯಕಿ ಲತಾ ಮಂಗೇಶ್ಕರ್ ಹೆಸರಿನಲ್ಲಿ ಉತ್ತರ ಪ್ರದೇಶದ ಅಯೋಧ್ಯೆಯಲ್ಲಿ ನಿರ್ಮಿಸಲಾಗಿರುವ ರಸ್ತೆ ಚೌಕವನ್ನು ರಾಜ್ಯದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಬುಧವಾರ ಉದ್ಘಾಟಿಸಿದರು.

ಲತಾ ಮಂಗೇಶ್ಕರ್ ಅವರ 93ನೇ ಜನ್ಮ ದಿನಾಚರಣೆ ಪ್ರಯುಕ್ತ ಚೌಕ ಲೋಕಾರ್ಪಣೆ ಆಗಿದೆ. ಇದಕ್ಕೆ 'ಲತಾ ಮಂಗೇಶ್ಕರ್ ಚೌರಾಹ' ಎಂದು ಹೆಸರಿಡಲಾಗಿದೆ. ಸರಯೂ ನದಿ ತೀರದಲ್ಲಿರುವ ಇದರ ನಿರ್ಮಾಣಕ್ಕೆ ₹7.9 ಕೋಟಿ ವೆಚ್ಚ ತಗುಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

40 ಅಡಿ ಉದ್ದ, 12 ಮೀಟರ್ ಎತ್ತರದ 14 ಟನ್ ತೂಕದ ವೀಣೆಯನ್ನು ಈ ವೃತ್ತದಲ್ಲಿ ಸ್ಥಾಪಿಸಲಾಗಿದೆ. ಈ ನಿರ್ಮಾಣವು ಅಯೋಧ್ಯಾದ ಪ್ರಮುಖ ಯೋಜನೆಗಳಲ್ಲಿ ಒಂದು ಎಂದು ಅಯೋಧ್ಯಾ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಸತ್ಯೇಂದ್ರ ಸಿಂಗ್ ಅವರು ಹೇಳಿದ್ದಾರೆ.

ಉದ್ಘಾಟನಾ ಸಮಾರಂಭದಲ್ಲಿ ಕೇಂದ್ರ ಪ್ರವಾಸೋದ್ಯಮ ಸಚಿವ ಜಿ. ಕೃಷ್ಣಾ ರೆಡ್ಡಿ ಉಪಸ್ಥಿತರಿದ್ದರು.

ಮಾಲ್‌ನಲ್ಲಿ ಮಲಯಾಳ ನಟಿಯರಿಗೆ ಲೈಂಗಿಕ ಕಿರುಕುಳ

ಕೋಯಿಕ್ಕೋಡ್ (ಪಿಟಿಐ): ಉತ್ತರ ಕೇರಳದ ಜಿಲ್ಲೆಯೊಂದರ ಮಾಲ್‌ವೊಂದರಲ್ಲಿ ಸಿನಿಮಾ ಪ್ರಚಾರಕ್ಕೆಂದು ತೆರಳಿದಾಗ ತಾವು ಅಲ್ಲಿ ಲೈಂಗಿಕ ಕಿರುಕುಳ ಅನುಭವಿಸಿದ್ದಾಗಿ ಪ್ರಸಿದ್ಧ ಮಲಯಾಳ ನಟಿಯೊಬ್ಬರು ತಮ್ಮ ಇನ್‌ಸ್ಟಾಗ್ರಾಂ ಪೋಸ್ಟ್‌ನಲ್ಲಿ ಹಂಚಿಕೊಂಡಿದ್ದಾರೆ.

ಕೇರಳ ಮಹಿಳಾ ಆಯೋಗವು ಈ ಘಟನೆಯನ್ನು ತೀವ್ರವಾಗಿ ಖಂಡಿಸಿದ್ದು, ಪೊಲೀಸರು ಈ ಸಂಬಂಧ ತಕ್ಷಣವೇ ತನಿಖೆಯನ್ನು ಆರಂಭಿಸಿದ್ದಾರೆ.

ಜನರ ಲೈಂಗಿಕ ಹತಾಶೆಯ ಬಗ್ಗೆ ಕಳವಳವನ್ನು ವ್ಯಕ್ತಪಡಿಸಿರುವ ನಟಿ, ಮಂಗಳವಾರ ತಡರಾತ್ರಿ ಮಾಲ್‌ವೊಂದರಲ್ಲಿ ಸಿನಿಮಾ ಪ್ರಚಾರಕ್ಕೆ ತೆರಳಿದಾಗ, ನನ್ನ ಸಹನಟಿಗೂ ಇದೇ ರೀತಿಯ ಲೈಂಗಿಕ ಕಿರುಕುಳದ ಅನುಭವವಾಗಿದೆ ಎಂದು ಹೇಳಿದ್ದಾರೆ.

ಈ ಘಟನೆಯ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದ್ದು, ಅದನ್ನು ಸ್ಥಳೀಯ ಟಿವಿ ಚಾನೆಲ್‌ಗಳು ಪ್ರಸಾರ ಮಾಡಿವೆ.

'ಕೋಯಿಕ್ಕೋಡ್ ನನಗೆ ತುಂಬಾ ಇಷ್ಟವಾದ ಸ್ಥಳ. ಆದರೆ, ಇಂದು ರಾತ್ರಿ ಕಾರ್ಯಕ್ರಮ ಮುಗಿಸಿ ಹಿಂತಿರುಗುತ್ತಿದ್ದಾಗ, ಮಾಲ್‌ನಲ್ಲಿನ ಗುಂಪಿನಲ್ಲಿದ್ದ ವ್ಯಕ್ತಿಯೊಬ್ಬರು ನನ್ನನ್ನು ಹಿಡಿದುಕೊಂಡರು. ಎಲ್ಲಿ ಎಂದು ಹೇಳಲು ಅಸಹ್ಯವೆನಿಸುತ್ತದೆ. ನಮ್ಮ ಸುತ್ತಮುತ್ತಲಿನ ಜನರು ತುಂಬಾ ನಿರಾಶೆಗೊಂಡಿದ್ದಾರೆಯೇ? ಹಲವಾರು ಸ್ಥಳಗಳಿಗೆ ಹೋಗಿದ್ದೇನೆ. ಆದರೆ, ಅಂತಹ ಕೆಟ್ಟ ಅನುಭವವ ನನಗೆ ಬೇರೆಲ್ಲೂ ಆಗಿರಲಿಲ್ಲ. ನನ್ನ ಸಹೋದ್ಯೋಗಿಗೂ ಇದೇ ರೀತಿಯ ಅನುಭವವಾಗಿತ್ತು. ಅವಳು ಪ್ರತಿಕ್ರಿಯಿಸಿದಳು... ಆದರೆ ನಾನು ಒಂದು ಕ್ಷಣ ಆಘಾತಗೊಂಡಿದ್ದರಿಂದ ಆ ಪರಿಸ್ಥಿತಿಯಲ್ಲಿ ನನಗೆ ಏನೂ ಮಾಡಲು ಸಾಧ್ಯವಾಗಲಿಲ್ಲ' ಎಂದು ನಟಿ ಇನ್‌ಸ್ಟಾಗ್ರಾಂ ಪೋಸ್ಟ್‌ನಲ್ಲಿ ಬರೆದುಕೊಂಡಿದ್ದಾರೆ.

3 ರೈಲು ನಿಲ್ದಾಣಗಳ ಅಭಿವೃದ್ಧಿ: ₹10 ಸಾವಿರ ಕೋಟಿಗೆ ಒಪ್ಪಿಗೆ

ನವದೆಹಲಿ (ಪಿಟಿಐ): 'ನವದೆಹಲಿ, ಅಹಮದಾಬಾದ್ ಮತ್ತು ಮುಂಬೈನ ರೈಲು ನಿಲ್ದಾಣಗಳ ಮರುಅಭಿವೃದ್ಧಿಪಡಿಸಲು ₹10 ಸಾವಿರ ಕೋಟಿ ಬಿಡುಗಡೆಗೆ ಕೇಂದ್ರ ಸಚಿವ ಸಂಪುಟ ಬುಧವಾರ ಒಪ್ಪಿಗೆ ನೀಡಿದೆ' ಎಂದು ವಾರ್ತಾ ಮತ್ತು ಪ್ರಸಾರ ಸಚಿವ ಅನುರಾಗ್ ಠಾಕೂರ್ ಬುಧವಾರ ಹೇಳಿದರು.

'ರೈಲು ನಿಲ್ದಾಣಗಳ ಮರು ಅಭಿವೃದ್ಧಿ ಯೋಜನೆಯ ಮೊದಲ ಹಂತದಲ್ಲಿ, ಪ್ರತಿದಿನ 50 ಲಕ್ಷ ಜನರ ಸಂಚಾರ ಇರುವಂಥ 199 ರೈಲು ನಿಲ್ದಾಣಗಳನ್ನು ಮರುಅಭಿವೃದ್ಧಿಪಡಿಸಲಾಗುವುದು. ಜೊತೆಗೆ, ನಿಲ್ದಾಣಗಳನ್ನು ಆಯಾ ನಗರದ ಸೌಂದರ್ಯದಕ್ಕೆ ಧಕ್ಕೆ ಬರದಂತಹ ರೀತಿಯಲ್ಲಿ ನಿರ್ಮಿಸಲಾಗುವುದು' ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದರು.

'47 ನಿಲ್ದಾಣಗಳ ಮರು ಅಭಿವೃದ್ಧಿಗೆ ಟೆಂಡರ್ ಕರೆಯಲಾಗಿದೆ. 32 ನಿಲ್ದಾಣಗಳಲ್ಲಿ ಕಾಮಗಾರಿ ಕೆಲಸ ಪ್ರಗತಿಯಲ್ಲಿದೆ. ದೆಹಲಿ ನಿಲ್ದಾಣವನ್ನು ಮೂರುವರೆ ವರ್ಷದಲ್ಲಿ ಮತ್ತು ಇನ್ನುಳಿದ ಎರಡು ನಿಲ್ದಾಣಗಳನ್ನು ಎರಡೂವರೆ ವರ್ಷದ ಒಳಗೆ ಮರುಅಭಿವೃದ್ಧಿ ಪೂರ್ಣಗೊಳಿಸುವ ಗುರಿ ಹಾಕಿಕೊಳ್ಳಲಾಗಿದೆ' ಎಂದರು.

'ನಿಲ್ದಾಣಗಳು ಪರಿಸರ ಸ್ನೇಹಿಯಾಗಿರಲಿವೆ. ನಿಲ್ದಾಣಗಳಲ್ಲಿ ಸೋಲಾರ್ ಶಕ್ತಿಯನ್ನು ಬಳಕೆ ಮಾಡಲಾಗುವುದು. ಇಲ್ಲಿ ನೀರು ಸಂರಕ್ಷಣಾ ಮಾದರಿಗಳನ್ನು ಬಳಸಲಾಗುವುದು ಮತ್ತು ಕಸದ ಮರುಬಳಕೆ ಮಾಡಲಾಗುವುದು' ಎಂದರು.

ಪಟ್ಟಿಯಲ್ಲಿ ರಾಜ್ಯದ ಮೂರು ನಿಲ್ದಾಣಗಳು

ಬೆಂಗಳೂರಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣ, ಹುಬ್ಬಳ್ಳಿಯ ಎಸ್‌ಎಸ್‌ಎಸ್, ಮಂಗಳೂರು ಸೆಂಟ್ರಲ್ ರೈಲು ನಿಲ್ದಾಣಗಳನ್ನೂ ಮರು ಅಭಿವೃದ್ಧಿ ಪಡಿಸಲು ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ. 'ವಿಶ್ವ ದರ್ಜೆಯ ವಿಮಾನ ನಿಲ್ದಾಣದ ರೀತಿಯಲ್ಲಿ ಬೆಂಗಳೂರಿನ ಸರ್ ಎಂ. ವಿಶ್ವೇಶ್ವರಯ್ಯ ರೈಲು ನಿಲ್ದಾಣವನ್ನು ಈಗಾಗಲೇ ನಿರ್ಮಾಣ ಮಾಡಲಾಗಿದೆ. ಬೆಂಗಳೂರು ಕಂಟೋನ್ಮೆಂಟ್ ಮತ್ತು ಯಶವಂತಪುರ ರೈಲು ನಿಲ್ದಾಣಗಳ ಮರುಅಭಿವೃದ್ಧಿ ಕಾರ್ಯ ಪ್ರಗತಿಯಲ್ಲಿದೆ' ಎಂದು ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದರು.

₹12.83 ಕೋಟಿ ಕ್ರಿಪ್ಟೋ ಆಸ್ತಿ ಇ.ಡಿ ಮುಟ್ಟುಗೋಲು

ನವದೆಹಲಿ (ಪಿಟಿಐ): ಕೋಲ್ಕತ್ತ ಮೂಲದ ಮೊಬೈಲ್ ಗೇಮಿಂಗ್ ಆ್ಯಪ್ ಸಂಸ್ಥೆ ಪ್ರವರ್ತಕರ ವಿರುದ್ಧ ನಡೆಯುತ್ತಿರುವ ಹಣ ಅಕ್ರಮ ವರ್ಗಾವಣೆ ತನಿಖೆ ಭಾಗವಾಗಿ ₹ 12.83 ಕೋಟಿ ಮೌಲ್ಯದ ಬಿಟ್‌ಕಾಯಿನ್‌ಗಳನ್ನು ಮುಟ್ಟಗೋಲು ಹಾಕಿಕೊಂಡಿರುವುದಾಗಿ ಜಾರಿ ನಿರ್ದೇಶನಾಲಯ (ಇ.ಡಿ) ಬುಧವಾರ ತಿಳಿಸಿದೆ.

77.62710139 ಬಿಟ್ ಕಾಯಿನ್ (₹12.83 ಕೋಟಿ) ಮೌಲ್ಯದ ಕ್ರಿಪ್ಟೋ ಕರೆನ್ಸಿಯನ್ನು ಬಿನಾನ್ಸ್ ಕ್ರಿಪ್ಟೋ ಎಕ್ಸ್‌ಚೇಂಜ್‌ನಲ್ಲಿ ಇಡಲಾಗಿದೆ. ಇದು ಇ-ನಗ್ಗಟ್ಸ್ ಎಂಬ ಮೊಬೈಲ್ ಗೇಮಿಂಗ್ ಅಪ್ಲಿಕೇಶನ್ ಹೊಂದಿರುವ ಅಮೀರ್ ಖಾನ್ ಎಂಬ ವ್ಯಕ್ತಿಗೆ ಸೇರಿದೆ ಎಂದು ಇ.ಡಿ ಹೇಳಿಕೆಯಲ್ಲಿ ತಿಳಿಸಿದೆ.

ಈ ತಿಂಗಳ ಆರಂಭದಲ್ಲಿ ಕೋಲ್ಕತ್ತಾದಲ್ಲಿರುವ ಖಾನ್ ಮತ್ತು ಅವರ ತಂದೆ ನೇಸರ್ ಅಹ್ಮದ್ ಖಾನ್ ಅವರ ಕಂಪನಿ ಮೇಲೆ ದಾಳಿ ನಡೆಸಿ, ₹17.32 ಕೋಟಿ ನಗದು ವಶಪಡಿಸಿಕೊಂಡಿತ್ತು. ಕಳೆದ ವಾರ ಉತ್ತರ ಪ್ರದೇಶದಲ್ಲಿ ಅಮಿರ್ ಖಾನ್‌ನನ್ನು ಕೋಲ್ಕತ್ತ ಪೊಲೀಸರು ಬಂಧಿಸಿದ್ದರು.

ಏಕ್ತಾ ಕಪೂರ್ ವಿರುದ್ಧ ಬಂಧನ ವಾರೆಂಟ್

ಬೆಗುಸರಾಯ್ (ಪಿಟಿಐ): ತಮ್ಮ ವೆಬ್ ಸರಣಿ 'XXX'(ಸೀಸನ್–2)ನಲ್ಲಿ ಸೈನಿಕರನ್ನು ಅವಮಾನಿಸಿದ ಮತ್ತು ಅವರ ಕುಟುಂಬ ಸದಸ್ಯರ ಭಾವನೆಗಳಿಗೆ ಧಕ್ಕೆ ತಂದ ಆರೋಪದ ಮೇಲೆ ಚಲನಚಿತ್ರ ನಿರ್ದೇಶಕಿ ಏಕ್ತಾ ಕಪೂರ್ ಹಾಗೂ ಅವರ ತಾಯಿ ಶೋಭಾ ಕಪೂರ್ ವಿರುದ್ಧ ಬಿಹಾರದ ಬೆಗುಸರಾಯ್ ನ್ಯಾಯಾಲಯ ಬುಧವಾರ ಬಂಧನ ವಾರೆಂಟ್ ಹೊರಡಿಸಿದೆ.

ಸ್ವಾಗತಕಾರಿಣಿ ಅಂಕಿತಾ ಭಂಡಾರಿ ಕುಟುಂಬಕ್ಕೆ ₹ 25 ಲಕ್ಷ ಪರಿಹಾರ

ಡೆಹ್ರಾಡೂನ್ (ಪಿಟಿಐ): ಉತ್ತರಾಖಂಡದಲ್ಲಿ ಕೊಲೆಯಾದ ರೆಸಾರ್ಟ್ ಸ್ವಾಗತಕಾರಿಣಿ ಅಂಕಿತಾ ಭಂಡಾರಿ ಅವರ ಕುಟುಂಬಕ್ಕೆ ಬುಧವಾರ ₹ 25 ಲಕ್ಷ ನೆರವು ಘೋಷಿಸಿರುವ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ, ತ್ವರಿತಗತಿ ನ್ಯಾಯಾಲಯದಲ್ಲಿ ಪ್ರಕರಣದ ವಿಚಾರಣೆ ನಡೆಸಲಾಗುವುದು ಎಂದು ಭರವಸೆ ನೀಡಿದ್ದಾರೆ.

ಅಂಕಿತಾ ಕುಟುಂಬಕ್ಕೆ ಸರ್ಕಾರ ಎಲ್ಲಾ ರೀತಿಯ ಸಹಾಯ ಮಾಡಲಿದೆ. ಪ್ರಕರಣವನ್ನು ಎಸ್‌ಐಟಿ (ವಿಶೇಷ ತನಿಖಾ ತಂಡ) ತನಿಖೆ ನಡೆಸುತ್ತಿದೆ. ತನಿಖೆಯನ್ನು ನಿಷ್ಪಕ್ಷಪಾತವಾಗಿ ನಡೆಸಿ ಸಾಧ್ಯವಾದಷ್ಟು ಬೇಗ ಪೂರ್ಣಗೊಳಿಸಲಾಗುವುದು ಎಂದು ಮುಖ್ಯಮಂತ್ರಿ ಹೇಳಿದರು.

ಕೊಲೆಗಡುಕರಿಗೆ ಅತ್ಯಂತ ಕಠಿಣ ಶಿಕ್ಷೆಯಾಗುವಂತೆ ನೋಡಿಕೊಳ್ಳಲಾಗುವುದು ಎಂದರು.

ಹತ್ಯೆ ಪ್ರಕರಣವನ್ನು ಎಲ್ಲಾ ಕೋನಗಳಿಂದ ಸಂಪೂರ್ಣ ತನಿಖೆ ನಡೆಸಲಾಗುತ್ತಿದ್ದು, ಹಂತಕರನ್ನು ಆದಷ್ಟು ಬೇಗ ನೇಣುಗಂಬಕ್ಕೆ ಕಳುಹಿಸಲಾಗುವುದು ಎಂದು ಉನ್ನತ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ರೆಸಾರ್ಟ್ ಮಾಲೀಕ ಪುಲ್ಕಿತ್ ಆರ್ಯ ಸೇರಿದಂತೆ ಮೂವರು ಆರೋಪಿಗಳನ್ನು ಘಟನೆ ನಡೆದ 24 ಗಂಟೆಗಳ ಒಳಗೆ ಬಂಧಿಸಲಾಯಿತು. ಡಿಐಜಿ ಮಟ್ಟದ ಅಧಿಕಾರಿ ನೇತೃತ್ವದ ಎಸ್‌ಐಟಿ ತ್ವರಿತವಾಗಿ ಸಾಕ್ಷ್ಯಾಧಾರ ಸಂಗ್ರಹಿಸುತ್ತಿದೆ. ಅದರ ಆಧಾರದ ಮೇಲೆ ನ್ಯಾಯಾಲಯದಲ್ಲಿ ತಪ್ಪಿತಸ್ಥರನ್ನು ಗಲ್ಲಿಗೇರಿಸುವಂತೆ ಮನವಿ ಮಾಡಬಹುದು' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಅಧಿಕಾರಿ ಮಾಹಿತಿ ನೀಡಿದರು.

'ಅಂಕಿತಾ ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದಾಳೆ' ಎಂದು ಋಷಿಕೇಶದ ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್‌ನ (ಎಐಐಎಂಎಸ್) ನಾಲ್ವರು ವೈದ್ಯರ ಸಮಿತಿ ಮರಣೋತ್ತರ ಪರೀಕ್ಷೆ ವರದಿಯಲ್ಲಿ ತಿಳಿಸಿದೆ.

ಆಕೆಯ ಮೊಣಕ್ಕೈ, ಬೆನ್ನು ಮತ್ತು ಬೆರಳುಗಳ ಮೇಲೆ ಗಾಯದ ಗುರುತುಗಳು ಇದ್ದವು. ಏಕೆಂದರೆ ಅವಳನ್ನು ಎಳೆದಾಡಲಾಗಿತ್ತು. ಆಕೆ ಮೇಲೆ ಅತ್ಯಾಚಾರ ನಡೆದಿಲ್ಲ. ಆದಾಗ್ಯೂ, ದೇಹದ ಭಾಗಗಳ ಮಾದರಿಗಳನ್ನು ವಿಧಿವಿಜ್ಞಾನ ಪರೀಕ್ಷೆಗೆ ಕಳುಹಿಸಲಾಗಿದೆ ಎಂದು ಹೇಳಿದರು.

ಉತ್ತರಪ್ರದೇಶ: ಬಸ್–ಮಿನಿ ಟ್ರಕ್ ಅಪಘಾತ– 10 ಮಂದಿ ಸಾವು

ಲಖಿಂಪುರ ಖೇರಿ: ಉತ್ತರಪ್ರದೇಶದ ಲಖಿಂಪುರ ಖೇರಿಯಲ್ಲಿ ಬುಧವಾರ ಖಾಸಗಿ ಬಸ್ ಮತ್ತು ಮಿನಿ ಟ್ರಕ್ ನಡುವೆ ಸಂಭವಿಸಿದ ಅಪಘಾತದಲ್ಲಿ 10 ಮಂದಿ ಸಾವಿಗೀಡಾಗಿದ್ದು, 14 ಮಂದಿ ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಧೌರ್ಹರಾದಿಂದ ಲಖನೌಗೆ ತೆರಳುತ್ತಿದ್ದ ಬಸ್, ರಾಷ್ಟ್ರೀಯ ಹೆದ್ದಾರಿ 730ರಲ್ಲಿನ ಐರಾ ಸೇತುವೆ ಕಡೆಯಿಂದ ವಿರುದ್ಧ ದಿಕ್ಕಿನಿಂದ ಬರುತ್ತಿದ್ದ ಮಿನಿ ಟ್ರಕ್‌ವೊಂದಕ್ಕೆ ಡಿಕ್ಕಿ ಹೊಡೆದಿದೆ. ಸಾವಿನ ಸಂಖ್ಯೆ ಇನ್ನೂ ಹೆಚ್ಚಾಗುವ ಸಾಧ್ಯತೆ ಇದೆ ಎಂದು ಉಪ ಪೊಲೀಸ್ ವರಿಷ್ಠಾಧಿಕಾರಿ ಪ್ರೀತಂಪಾಲ್ ಸಿಂಗ್ ತಿಳಿಸಿದ್ದಾರೆ.

ಬಸ್ ಅಪಘಾತದ ಸುದ್ದಿ ತಿಳಿದು ತಕ್ಷಣವೇ ಸ್ಥಳಕ್ಕೆ ತೆರಳಿದ ಪೊಲೀಸರು, ಗ್ಯಾಸ್ ಕಟ್ಟರ್‌ನಿಂದ ಬಸ್ ಅನ್ನು ಕತ್ತರಿಸಿ ಗಾಯಾಳುಗಳನ್ನು ರಕ್ಷಿಸಿದರು. ಗಾಯಾಳುಗಳನ್ನು ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಅವರ ಗುರುತು ಪತ್ತೆಗೆ ಕ್ರಮ ಕೈಗೊಳ್ಳಲಾಗಿದೆ ಎಂದೂ ಅವರು ಹೇಳಿದ್ದಾರೆ.

ಅಪಘಾತದಲ್ಲಿ ಮಡಿದವರ ಬಗ್ಗೆ ಸಂತಾಪ ಸೂಚಿಸಿರುವ ಉತ್ತರಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್, ಗಾಯಾಳುಗಳಿಗೆ ಸೂಕ್ತ ಚಿಕಿತ್ಸಾ ಸೌಲಭ್ಯ ಕಲ್ಪಿಸುವಂತೆ ಸೂಚನೆ ನೀಡಿದ್ದಾರೆ.

ಎನ್‌ಎಸ್‌ಇ ಮಾಜಿ ಸಿಇಒ ಚಿತ್ರಾ, ಮಾಜಿ ಸಿಒಒ ಸುಬ್ರಮಣಿಯನ್‌ಗೆ ಜಾಮೀನು ಮಂಜೂರು

ನವದೆಹಲಿ: ಬ್ರೋಕರ್‌ಗಳಿಗೆ ತಮ್ಮ ಸರ್ವರ್‌ಗಳನ್ನು ಷೇರು ಮಾರುಕಟ್ಟೆಯಲ್ಲಿ ಇರಿಸುವ ಸೌಲಭ್ಯ ಕಲ್ಪಿಸುವಲ್ಲಿ (ಕೊ ಲೊಕೇಷನ್) ನಡೆದಿದೆ ಎನ್ನಲಾದ ಹಗರಣಕ್ಕೆ ಸಂಬಂಧಿಸಿ ರಾಷ್ಟ್ರೀಯ ಷೇರು ಪೇಟೆಯ (ಎನ್‌ಎಸ್‌ಇ) ಮಾಜಿ ಸಿಇಒ ಚಿತ್ರಾ ರಾಮಕೃಷ್ಣ, ಮಾಜಿ ಸಿಒಒ ಆನಂದ ಸುಬ್ರಮಣಿಯನ್ ಅವರಿಗೆ ದೆಹಲಿ ಹೈಕೋರ್ಟ್ ಬುಧವಾರ ಜಾಮೀನು ಮಂಜೂರು ಮಾಡಿದೆ.

ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸುಧೀರಕುಮಾರ್ ಜೈನ್, 'ಎನ್‌ಎಸ್‌ಇಯ ಈ ಇಬ್ಬರು ಮಾಜಿ ಅಧಿಕಾರಿಗಳಿಗೆ ಡಿಫಾಲ್ಟ್ ಜಾಮೀನು ನೀಡಲಾಗುತ್ತಿದೆ' ಎಂದರು. (ಪ್ರಾಸಿಕ್ಯೂಷನ್, ನಿಗದಿತ ಅವಧಿಯ ಒಳಗಾಗಿ ದೋಷಾರೋಪ ಪಟ್ಟಿ ಸಲ್ಲಿಸದ ಕಾರಣ ಆರೋಪಿಯು, ಕಾನೂನುಬದ್ಧವಾಗಿ ತಂತಾನೆ ಪಡೆಯಬಹುದಾದ ಜಾಮೀನಿಗೆ 'ಡಿಫಾಲ್ಟ್' ಜಾಮೀನು ಎನ್ನಲಾಗುತ್ತದೆ).

ಈ ಹಗರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸುತ್ತಿರುವ ಸಿಬಿಐ, ಕಳೆದ ಫೆಬ್ರುವರಿ 24ರಂದು ಸುಬ್ರಮಣಿಯನ್ ಹಾಗೂ ಮಾರ್ಚ್ 6ರಂದು ಚಿತ್ರಾ ರಾಮಕೃಷ್ಣ ಅವರನ್ನು ಬಂಧಿಸಿತ್ತು.

ಚಿತ್ರಾ ಅವರಿಗೆ ಜಾಮೀನು ದೊರೆತರೂ ಫೋನ್ ಕದ್ದಾಲಿಕೆ ಮತ್ತು ಗೂಢಚಾರಿಕೆ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಿಂದ ಜೈಲಿನಿಂದ ಹೊರ ಬಂದಿಲ್ಲ.

ಸೇನೆ ತಿಳಿಯಿರಿ ಜಮ್ಮುವಿನ ನಾಗ್ರೋಟದ ಸೇನಾ ಠಾಣೆಯಲ್ಲಿ ಬುಧವಾರ 'ನೋ ಯುವರ್ ಆರ್ಮಿ' ಮೇಳದಲ್ಲಿ ಯುದ್ಧೋಪಕರಣಗಳನ್ನು ಪ್ರದರ್ಶನಕ್ಕೆ ಇಡಲಾಗಿತ್ತು– ಪಿಟಿಐ ಚಿತ್ರ

ಮದ್ಯ ವ್ಯಾಪಾರಿ ಮಹೇಂದ್ರು ಬಂಧನ

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿಯಡಿ ನಡೆದಿದೆ ಎನ್ನಲಾದ ಅವ್ಯವಹಾರದಲ್ಲಿನ ಹಣ ಅಕ್ರಮ ವರ್ಗಾವಣೆ ಆರೋಪಕ್ಕೆ ಸಂಬಂಧಿಸಿ ಜಾರಿ ನಿರ್ದೇಶನಾಲಯ (ಇ.ಡಿ) ಅಧಿಕಾರಿಗಳು ಮದ್ಯ ವ್ಯಾಪಾರಿ ಸಮೀರ್ ಮಹೇಂದ್ರು ಎಂಬುವವರನ್ನು ಬುಧವಾರ ಬಂಧಿಸಿದ್ದಾರೆ.

ಮಹೇಂದ್ರು ಅವರು ಮದ್ಯ ವಿತರಕ ಕಂಪನಿ 'ಇಂಡೊ ಸ್ಪಿರಿಟ್'ನ ವ್ಯವಸ್ಥಾಪಕ ನಿರ್ದೇಶಕ.

ಸಂಸ್ಥೆಯ ಕಚೇರಿಯಲ್ಲಿ ರಾತ್ರಿಯಿಡೀ ಮಹೇಂದ್ರು ಅವರನ್ನು ವಿಚಾರಣೆಗೆ ಒಳಪಡಿಸಿದ್ದ ಇ.ಡಿ ಅಧಿಕಾರಿಗಳು, ಬುಧವಾರ ಅವರನ್ನು ಬಂಧಿಸಿದ್ದಾರೆ.

ಇದೇ ಪ್ರಕರಣಕ್ಕೆ ಸಂಬಂಧಿಸಿ ತನಿಖೆ ನಡೆಸುತ್ತಿರುವ ಸಿಬಿಐ ಕೂಡ ಮಹೇಂದ್ರು ಅವರನ್ನು ಈಗಾಗಲೇ ವಿಚಾರಣೆಗೆ ಒಳಪಡಿಸಿದೆ ಎಂದು ಮೂಲಗಳು ಹೇಳಿವೆ.

ವಿದೇಶಿ ಪ್ರವಾಸಿಗರು ಭೇಟಿ ನೀಡಿದ್ದ ತಾಣಗಳಲ್ಲಿ ಮಹಾಬಲಿಪುರಂಗೆ ಮೊದಲ ಸ್ಥಾನ

ತಾಜ್‌ಮಹಲ್‌ಗೆ 30 ಲಕ್ಷ ಪ್ರವಾಸಿಗರ ಭೇಟಿ

ನವದೆಹಲಿ (ಪಿಟಿಐ): ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಗೆ ಒಳಪಟ್ಟ ಸ್ಮಾರಕಗಳ ಪೈಕಿ ತಾಜ್‌ಮಹಲ್, ಕೆಂಪು ಕೋಟೆ ಮತ್ತು ಕುತುಬ್ ಮಿನಾರ್ ಗಳು 2021–22ನೇ ಸಾಲಿನಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರನ್ನು ಸೆಳೆದಿರುವುದು ಕೇಂದ್ರ ಪ್ರವಾಸೋದ್ಯಮ ಸಚಿವಾಲಯವು ಬಿಡುಗಡೆ ಮಾಡಿರುವ ಹೊಸ ವರದಿಯಿಂದ ತಿಳಿದುಬಂದಿದೆ.

ತಮಿಳುನಾಡಿನ ಮಹಾಬಲಿಪುರಂ ಅತಿ ಹೆಚ್ಚಿನ ಸಂಖ್ಯೆಯ ವಿದೇಶಿ ಪ್ರವಾಸಿಗರನ್ನು ಸೆಳೆದಿರುವುದನ್ನು ವರದಿ ತಿಳಿಸಿದೆ.

ತಾಜ್‌ಮಹಲ್‌ಗೆ 30.29 ಲಕ್ಷ, ಕೆಂಪು ಕೋಟೆಗೆ 10.32 ಲಕ್ಷ ಹಾಗೂ ಕುತುಬ್ ಮಿನಾರ್‌ಗೆ 10.15 ಲಕ್ಷ ದೇಶೀಯ ಪ್ರವಾಸಿಗರು ಭೇಟಿ ನೀಡಿದ್ದಾರೆ.

ತಾಜ್‌ಮಹಲ್

ಮಹಾಬಲಿಪುರಂಗೆ ಭೇಟಿ ನೀಡಿದ ವಿದೇಶಿ ಪ್ರವಾಸಿಗರ ಸಂಖ್ಯೆ 1.40 ಲಕ್ಷ ಎಂದು ವರದಿ ಹೇಳಿದೆ.

ಕೋವಿಡ್–19 ನಿರ್ಬಂಧದ ಕಾರಣದಿಂದಾಗಿ ಭಾರತದಲ್ಲಿ 2021ರಲ್ಲಿ ವಿದೇಶಿ ಪ್ರವಾಸಿಗರ ಸಂಖ್ಯೆ ಕ್ಷೀಣಿಸಿತ್ತು. 2020ರಲ್ಲಿ 20ಲಕ್ಷಕ್ಕೂ ಹೆಚ್ಚಿನ ವಿದೇಶಿ ಪ್ರವಾಸಿಗರು ಭೇಟಿ ನೀಡಿದ್ದರೆ, 2021ರಲ್ಲಿ ಈ ಸಂಖ್ಯೆ 10.5 ಲಕ್ಷವಿತ್ತು ಎಂದು ವರದಿ ಮಾಹಿತಿ ನೀಡಿದೆ.

ಇಲ್ಲಿನ ವಿಜ್ಞಾನ ಭವನದಲ್ಲಿ ಮಂಗಳವಾರ ವಿಶ್ವ ಪ್ರವಾಸೋದ್ಯಮ ದಿನಾಚರಣೆ ಕಾರ್ಯಕ್ರಮದಲ್ಲಿ ಉಪ ರಾಷ್ಟ್ರಪತಿ ಜಗದೀಪ್ ಧನಂಕರ್ ಅವರು 'ಭಾರತ ಪ್ರವಾಸೋದ್ಯಮದ ಅಂಕಿ–ಅಂಶ 2022' ವರದಿಯನ್ನು ಬಿಡುಗಡೆ ಮಾಡಿದರು. ಇದೇ ವೇಳೆ ಅವರು 2018-19ನೇ ಸಾಲಿನ ರಾಷ್ಟ್ರೀಯ ಪ್ರವಾಸೋದ್ಯಮ ಪ್ರಶಸ್ತಿಗಳನ್ನೂ ಪ್ರದಾನ ಮಾಡಿದರು.

'ಕೋವಿಡ್ ಸಾಂಕ್ರಾಮಿಕ ರೋಗದಿಂದಾಗಿ ಎರಡು ವರ್ಷಗಳ ಅವಧಿಯು ಬಹಳ ಕಠಿಣವಾಗಿತ್ತು. ಪ್ರವಾಸೋದ್ಯಮ ಕ್ಷೇತ್ರದ ಮೇಲೆ ಇದು ಹೆಚ್ಚು ಪರಿಣಾಮ ಬೀರಿದೆ. ಆದರೆ, ಭಾರತವು ಇದನ್ನು ಎದುರಿಸಿ, ಕಠಿಣ ಅವಧಿಯಿಂದ ಹೊರಬಂದಿದೆ' ಎಂದು ಧನಕರ್ ಹೇಳಿದ್ದಾರೆ.

ಸಾಂಕ್ರಾಮಿಕವಲ್ಲದ ರೋಗಗಳ ಕ್ಲಿನಿಕ್‌ಗಳಲ್ಲಿ ರೋಗ ಪತ್ತೆ

5 ತಿಂಗಳಲ್ಲಿ 2,993 ಮಂದಿಗೆ ಹೃದ್ರೋಗ

• ವರುಣ ಹೆಗಡೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಇಳಿಕೆ ಕಂಡಿದ್ದರಿಂದ ಸಾಂಕ್ರಾಮಿಕವಲ್ಲದ ರೋಗಗಳ ತಪಾಸಣೆಗೆ ಆದ್ಯತೆ ನೀಡಲಾಗಿದೆ. ಇದರಿಂದಾಗಿ ಈ ವರ್ಷ ಕಳೆದ 5 ತಿಂಗಳಲ್ಲಿಯೇ 2,993 ಮಂದಿಯಲ್ಲಿ ಹೃದ್ರೋಗ ಪತ್ತೆಯಾಗಿದೆ.

2020ರ ಮಾರ್ಚ್ ತಿಂಗಳಲ್ಲಿ ಕೋವಿಡ್ ಕಾಣಿಸಿಕೊಂಡಿದ್ದರಿಂದ ಅನ್ಯ ಕಾಯಿಲೆಗಳ ತಪಾಸಣೆ, ಚಿಕಿತ್ಸೆ ಹಿನ್ನಡೆಯಾಗಿತ್ತು. 2022ರ ಏಪ್ರಿಲ್ ಬಳಿಕ ಕೋವಿಡ್ ಪ್ರಕರಣಗಳ ಸಂಖ್ಯೆ ಇಳಿಮುಖ ಮಾಡಿದ್ದರಿಂದ ಹೃದಯ ಸೇರಿ ವಿವಿಧ ಕಾಯಿಲೆ ಹೊಂದಿರುವವರನ್ನು ಗುರುತಿಸಿ, ಚಿಕಿತ್ಸೆ ಒದಗಿಸಲಾಗುತ್ತಿದೆ. ಈ ಕಾರ್ಯಕ್ಕೆ ಆರೋಗ್ಯ ಇಲಾಖೆಯು ರಾಜ್ಯದಲ್ಲಿ ಸಾಂಕ್ರಾಮಿಕವಲ್ಲದ ರೋಗಗಳ ಕ್ಲಿನಿಕ್‌ಗಳನ್ನು (ಎನ್‌ಸಿಡಿ) ಬಳಸಿಕೊಳ್ಳುತ್ತಿದೆ. ಕೋವಿಡ್‌ನಿಂದ ಚೇತರಿಸಿಕೊಂಡ ಕೆಲವರಲ್ಲಿಯೂ ಹೃದ್ರೋಗ ಪತ್ತೆಯಾಗಿದೆ.

ರಾಜ್ಯದಲ್ಲಿ 30 ಜಿಲ್ಲಾ ಹಂತದ ಎನ್‌ಸಿಡಿ ಕ್ಲಿನಿಕ್‌ಗಳು ಹಾಗೂ ಸಮುದಾಯ ಆರೋಗ್ಯ ಕೇಂದ್ರಗಳ ಮಟ್ಟದಲ್ಲಿ 347 ಸಿ.ಎಚ್.ಸಿ-ಎನ್.ಸಿ.ಡಿ ಕ್ಲಿನಿಕ್‌ಗಳು ಕಾರ್ಯನಿರ್ವಹಿಸುತ್ತಿವೆ. ಈ ಕ್ಲಿನಿಕ್‌ಗಳಿಗೆ 2019-20ನೇ ಸಾಲಿನಲ್ಲಿ 36.07 ಲಕ್ಷ ಮಂದಿ ಭೇಟಿ ನೀಡಿ, ತಪಾಸಣೆ ಮಾಡಿಸಿಕೊಂಡಿದ್ದರು. ಕೋವಿಡ್‌ನಿಂದಾಗಿ 2020-21ನೇ ಸಾಲಿನಲ್ಲಿ ಈ ಸಂಖ್ಯೆ 20.94 ಲಕ್ಷಕ್ಕೆ ಇಳಿಕೆಯಾಗಿತ್ತು. ತಪಾಸಣೆಗೆ ಬರುವವರ ಸಂಖ್ಯೆ ಈಗ ಮತ್ತೆ ಹೆಚ್ಚಳವಾಗಿದೆ.

ಆಸ್ಪತ್ರೆಗಳಲ್ಲೂ ಪತ್ತೆ: ಎನ್‌ಸಿಡಿ ಕ್ಲಿನಿಕ್‌ಗಳಲ್ಲಿ ಕಳೆದ 5 ತಿಂಗಳಲ್ಲಿ ಪತ್ತೆಯಾದ ಹೃದ್ರೋಗ ಪ್ರಕರಣಗಳಲ್ಲಿ 2,190 ಮಂದಿಗೆ ಚಿಕಿತ್ಸೆ ಒದಗಿಸಲಾಗಿದೆ. ಕಳೆದ ವರ್ಷ ಈ ಕ್ಲಿನಿಕ್‌ಗಳಲ್ಲಿ 5,620 ಪ್ರಕರಣಗಳು ಪತ್ತೆಯಾಗಿದ್ದವು. 4,581 ಮಂದಿಗೆ ಚಿಕಿತ್ಸೆ ಒದಗಿಸಲಾಗಿತ್ತು. ಎನ್‌ಸಿಡಿ ಕೇಂದ್ರಗಳ ಜತೆಗೆ ಖಾಸಗಿ ಆಸ್ಪತ್ರೆ, ಸರ್ಕಾರಿ ಆಸ್ಪತ್ರೆಗಳಲ್ಲಿಯೂ ಹಲವರು ಹೃದಯ ಸಂಬಂಧಿ ಸಮಸ್ಯೆಗಳಿಗೆ ತಪಾಸಣೆ ಮಾಡಿಸಿಕೊಂಡಿದ್ದಾರೆ. ಆದರೆ, ಈ ಬಗ್ಗೆ ಆಸ್ಪತ್ರೆಗಳು ನಿಯಮಿತವಾಗಿ ಮಾಹಿತಿ ಒದಗಿಸಿಲ್ಲ. ಇದರಿಂದಾಗಿ ಇಲಾಖೆಯ ಬಳಿ ಈ ಬಗ್ಗೆ ಕ್ರೋಢೀಕೃತ ಮಾಹಿತಿಯಿಲ್ಲ.

'ಹೃದ್ರೋಗ ತಪಾಸಣೆಗೆ ಒಳಪಡುವವರ ಸಂಖ್ಯೆ ಹೆಚ್ಚಳವಾಗುತ್ತಿದೆ. ಜನರಲ್ಲಿಯೂ ಜಾಗೃತಿ ಮೂಡುತ್ತಿದೆ. ಹೃದಯ ಕಾಯಿಲೆಗಳ ಬಗ್ಗೆ ಜನ ಎಚ್ಚರದಿಂದ ಇರಬೇಕು. ಆಗಾಗ ಆರೋಗ್ಯವನ್ನು ಪರೀಕ್ಷೆ ಮಾಡಿಸಿಕೊಳ್ಳಬೇಕು. ಎನ್‌ಸಿಡಿ ಕ್ಲಿನಿಕ್‌ಗಳ ಜತೆಗೆ ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸಾ ಸೌಲಭ್ಯವನ್ನು ಒದಗಿಸಲಾಗಿದೆ. ಪ್ರಾಥಮಿಕ ಹಂತದ ಚಿಕಿತ್ಸೆಯನ್ನು ಜಿಲ್ಲಾ ಮಟ್ಟದಲ್ಲಿಯೇ ನೀಡಲಾಗುತ್ತದೆ' ಎಂದು ಸಾಂಕ್ರಾಮಿಕವಲ್ಲದ ರೋಗಗಳ ವಿಭಾಗದ ಉಪನಿರ್ದೇಶಕ ಡಾ.ಜಿ. ಶ್ರೀನಿವಾಸ್ ತಿಳಿಸಿದರು.

ಇತ್ತೀಚಿನ ವರ್ಷಗಳಲ್ಲಿ 40 ವರ್ಷದೊಳಗಿನವರು ಹೆಚ್ಚಾಗಿ ಹೃದಯ ಸಂಬಂಧಿ ಸಮಸ್ಯೆಗಳಿಗೆ ಒಳಪಡುತ್ತಿದ್ದಾರೆ. ಜೀವನಶೈಲಿಯ ಬಗ್ಗೆ ಕಾಳಜಿ ವಹಿಸಬೇಕು

ಡಾ.ಸಿ.ಎನ್. ಮಂಜುನಾಥ್, ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ನಿರ್ದೇಶಕ

ಯುವಜನರಲ್ಲಿ ಹೃದಯ ಸಮಸ್ಯೆ ಹೆಚ್ಚುತ್ತಿದೆ. ಹೃದಯಾಘಾತ ತಡೆಗೆ ನಿಯಮಿತವಾಗಿ ರಕ್ತದಲ್ಲಿನ ಕೊಲೆಸ್ಟ್ರಾಲ್ ಮಟ್ಟ, ಇಸಿಜಿ, ಇಕೋ, ಟಿಎಂಟಿ ಪರೀಕ್ಷೆ ಮಾಡಿಸಿಕೊಳ್ಳಬೇಕು

ಡಾ.ದೇವಿಪ್ರಸಾದ ಶೆಟ್ಟಿ, ಹೃದ್ರೋಗ ತಜ್ಞ



ಹೃದಯಾಘಾತಕ್ಕೆ ಕಾರಣಗಳು

- ಅನಾರೋಗ್ಯಕರ ಆಹಾರ ಪದ್ಧತಿ
- ಜೀವನಶೈಲಿಯಲ್ಲಿನ ಬದಲಾವಣೆ
- ಮದ್ಯಪಾನ, ಧೂಮಪಾನದಂತಹ ವ್ಯಸನಗಳು
- ಮಾನಸಿಕ ಒತ್ತಡ
- ಪರಿಸರದಲ್ಲಿನ ಮಾಲಿನ್ಯ

ಲಕ್ಷಣಗಳು

- ಹಠಾತ್ ಎದೆನೋವು
- ಉಸಿರಾಟದಲ್ಲಿ ತೊಂದರೆ
- ಅತಿಯಾದ ಬೆವರು
- ಅಜೀರ್ಣ, ವಾಂತಿ
- ಹಸಿವಾಗದಿರುವುದು
- ದವಡೆಯಲ್ಲಿ ನೋವು
- ನಿದ್ರಾಹೀನತೆ ಸಮಸ್ಯೆ
- ತಾತ್ಕಾಲಿಕ ಪ್ರಜ್ಞಾಹೀನತೆ

ಭದ್ರತಾ ಮಂಡಳಿ ಆಧುನೀಕರಣ ಅವಶ್ಯ: ಅಮೆರಿಕ

ವಾಷಿಂಗ್ಟನ್ (ಪಿಟಿಐ): ವಿಶ್ವಸಂಸ್ಥೆಯ ಭದ್ರತಾ ಮಂಡಳಿಯನ್ನು ಎಲ್ಲರನ್ನು ಹೆಚ್ಚು ಒಳಗೊಳ್ಳುವಂತೆ ಮತ್ತು ಕಾಯಂ ಸದಸ್ಯ ಸ್ಥಾನಗಳ ಸಂಖ್ಯೆ ಹೆಚ್ಚಿಸುವ ಮುಖೇನ ಆಧುನೀಕರಿಸುವ ಅಗತ್ಯವನ್ನು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆಂಟನಿ ಬ್ಲಿಂಕನ್ ಒತ್ತಿ ಹೇಳಿದ್ದಾರೆ. ಇದು ಭಾರತದ ದೀರ್ಘಕಾಲದ ಬೇಡಿಕೆಯೂ ಆಗಿದೆ.

ಭದ್ರತಾ ಮಂಡಳಿಯ ತುರ್ತು ಸುಧಾರಣೆಗೆ ದೀರ್ಘಕಾಲದಿಂದ ಒತ್ತಾಯಿಸುವ ಪ್ರಯತ್ನಗಳಲ್ಲಿ ಭಾರತ ಮುಂಚೂಣಿಯಲ್ಲಿದ್ದು, ವಿಶ್ವಸಂಸ್ಥೆಯ ಉನ್ನತ ಮಂಡಳಿಯ ಶಾಶ್ವತ ಸದಸ್ಯತ್ವಕ್ಕೆ ಭಾರತ ಹೆಚ್ಚು ಅರ್ಹ ಎನ್ನುವುದು ಬ್ಲಿಂಕನ್‌ಅವರಮಾತಿನಲ್ಲಿ ವ್ಯಕ್ತವಾಗಿದೆ.

ವಿದೇಶಾಂಗ ಸಚಿವ ಎಸ್. ಜೈಶಂಕರ್ ಜತೆ ಮಂಗಳವಾರ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬ್ಲಿಂಕನ್, 'ಭದ್ರತಾ ಮಂಡಳಿ ಎಲ್ಲರನ್ನು ಒಳಗೊಳ್ಳುವ ಜತೆಗೆ ಆಧುನೀಕರಣದ ಅವಶ್ಯಕತೆಯೂ ಇದೆ. ಅದಕ್ಕಾಗಿಯೇ, ಸಾಮಾನ್ಯ ಸಭೆಯ ಭಾಷಣದಲ್ಲಿ ಅಧ್ಯಕ್ಷ ಜೋ ಬೈಡನ್ ಅವರು ಭಾರತದ ದೀರ್ಘಕಾಲದ ಬೇಡಿಕೆ ಬೆಂಬಲಿಸಿದರು' ಎಂದರು.

'ಬೈಡನ್ ಸ್ವತಃ ಈ ವಿಷಯ ಪ್ರಸ್ತಾಪಿಸಿದ್ದು, ಅಮೆರಿಕದ ಸಕಾರಾತ್ಮಕ ನಡೆ ಪ್ರಶಂಸನೀಯ. ಈ ನಿಟ್ಟಿನಲ್ಲಿ ಅಮೆರಿಕದ ಜೊತೆಗೂಡಿ ಶ್ರಮಿಸಲು ಎದುರು ನೋಡುತ್ತಿದ್ದೇವೆ' ಎಂದು ಎಸ್. ಜೈಶಂಕರ್ ಹೇಳಿದರು.

ರಷ್ಯಾದ ಸೇನಾ ಉಪಕರಣ, ಬಿಡಿಭಾಗ ಪೂರೈಕೆಯಲ್ಲಿ ಅಡ್ಡಿ ಆಗಲಿಲ್ಲ: ಜೈಶಂಕರ್

ವಾಷಿಂಗ್ಟನ್ (ಪಿಟಿಐ): 'ಉಕ್ರೇನ್ ಯುದ್ಧದ ನಂತರವೂ ರಷ್ಯಾದಿಂದ ಈ ಹಿಂದೆ ಪಡೆದ ಸೇನಾ ಉಪಕರಣಗಳ ಸೇವೆ ಮತ್ತು ಬಿಡಿಭಾಗಗಳ ಪೂರೈಕೆಯಲ್ಲಿ ಯಾವುದೇ ಅಡಚಣೆಗಳನ್ನು ಎದುರಿಸಿಲ್ಲ. ಶಸ್ತ್ರಾಸ್ತ್ರಗಳನ್ನು ಪಡೆದುಕೊಳ್ಳುವುದು ನಮ್ಮ ಆಯ್ಕೆ. ಇದು ರಾಷ್ಟ್ರೀಯ ಹಿತಾಸಕ್ತಿ ಎನ್ನುವ ನಂಬಿಕೆ ನಮ್ಮದು' ಎಂದು ಭಾರತ ಪ್ರತಿಪಾದಿಸಿದೆ.

ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆಂಟನಿ ಬ್ಲಿಂಕನ್ ಅವರೊಂದಿಗೆ ಭಾರತದ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಮಂಗಳವಾರ ದ್ವಿಪಕ್ಷೀಯ ಮಾತುಕತೆ ನಡೆಸಿದ ನಂತರ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

'ರಷ್ಯಾದಿಂದ ಈ ಹಿಂದೆ ಪಡೆದ ಸೇನಾ ಉಪಕರಣಗಳ ಸೇವೆ ಮತ್ತು ಬಿಡಿಭಾಗಗಳ ಪೂರೈಕೆ ವಿಷಯದಲ್ಲಿ ನಾವು ಇತ್ತೀಚಿನ ತಿಂಗಳುಗಳಲ್ಲಿ ಯಾವುದೇ ನಿರ್ದಿಷ್ಟ ಸಮಸ್ಯೆಗಳನ್ನು ಎದುರಿಸಿದ್ದೇವೆ ಎಂದು ನಾನು ಭಾವಿಸಿಲ್ಲ' ಎಂದು ಜೈಶಂಕರ್ ಅವರು ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

'ಜನರ ಮೇಲೆ ಬಲ ಪ್ರಯೋಗ ಬೇಡ'

ದುಬೈ (ಎಪಿ): ಪೊಲೀಸ್ ವಶದಲ್ಲಿದ್ದ ಯುವತಿಯ ಸಾವನ್ನು ಖಂಡಿಸಿ ಪ್ರತಿಭಟಿಸುತ್ತಿರುವವರ ವಿರುದ್ಧ ಅನಗತ್ಯ ಬಲ ಪ್ರಯೋಗಿಸದಂತೆ ಇರಾನ್‌ಗೆ ವಿಶ್ವಸಂಸ್ಥೆಯ ಮಹಾಪ್ರಧಾನ ಕಾರ್ಯದರ್ಶಿ ಆಂಟೋನಿಯೊ ಗುಟೆರಸ್ ಸೂಚಿಸಿದ್ದಾರೆ.

'ಇರಾನ್‌ನಲ್ಲಿ ಅಶಾಂತಿಗೆ ಕಾರಣವಾಗಿರುವ 22 ವರ್ಷದ ಮಹ್ಸಾ ಅಮಿನಿ ಸಾವಿನ ಕುರಿತು ನಿಷ್ಪಕ್ಷಪಾತ ತನಿಖೆ ತ್ವರಿತವಾಗಿ ನಡೆಯಬೇಕೆಂದು ವಿಶ್ವಸಂಸ್ಥೆ ಒತ್ತಾಯಿಸಿದೆ. ಇರಾನ್‌ನಲ್ಲಿ ಮಹಿಳೆಯರು ಮತ್ತು ಮಕ್ಕಳು ಸೇರಿ ನಾಗರಿಕರ ಸಾವು, ನೋವುಗಳು ಹೆಚ್ಚುತ್ತಿರುವುದಕ್ಕೆ ಕಳವಳ ವ್ಯಕ್ತಪಡಿಸಿದೆ' ಎಂದು ವಿಶ್ವಸಂಸ್ಥೆ ವಕ್ತಾರ ಸ್ಟೀಫನ್ ಡುಜಾರಿಕ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

'ಇರಾನ್‌ನ 46 ನಗರ, ಪಟ್ಟಣ ಮತ್ತು ಹಳ್ಳಿಗಳಿಗೆ ಪ್ರತಿಭಟನೆ ವ್ಯಾಪಿಸಿದೆ. ಸೆ.17ರಿಂದ ಪ್ರತಿಭಟನೆ ಆರಂಭವಾದಾಗಿನಿಂದ 41 ಪ್ರತಿಭಟನಕಾರರು ಮತ್ತು ಪೊಲೀಸರು ಮೃತಪಟ್ಟಿದ್ದಾರೆ' ಎಂದು ಸರ್ಕಾರಿ ಮಾಧ್ಯಮ ತಿಳಿಸಿದೆ.

ಚೀನಾದಲ್ಲಿ ಬೆಂಕಿ ಅವಘಡ: 17 ಸಾವು

ಬೀಜಿಂಗ್ (ಎಪಿ): ಈಶಾನ್ಯ ಚೀನಾದ ಚಾಂಗ್‌ಚುನ್ ನಗರದ ರೆಸ್ಟೋರೆಂಟ್‌ನಲ್ಲಿ ಬುಧವಾರ ಸಂಭವಿಸಿದ ಬೆಂಕಿ ಅವಘಡದಲ್ಲಿ 17 ಜನರು ಮೃತಪಟ್ಟಿದ್ದಾರೆ. ಚಾಂಗ್‌ಚುನ್‌ನ ಹೊಸ ತಂತ್ರಜ್ಞಾನ ಪ್ರದೇಶದ ರೆಸ್ಟೋರೆಂಟ್‌ನಲ್ಲಿ ಮಧ್ಯಾಹ್ನ 12.40ರ ಸುಮಾರಿಗೆ ಬೆಂಕಿ ಅವಘಡ ಸಂಭವಿಸಿತು. ಕೂಡಲೇ ರಕ್ಷಣಾ ಕಾರ್ಯ ಕೈಗೊಳ್ಳಲಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

ನಂ. 16 ಸಿ-1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು-560052. ಫೋನ್: 080-22268677/78/79 ಫ್ಯಾಕ್ಸ್: 080-22268667 ಇ-ಮೇಲ್: kerc-ka@nic.in ವೆಬ್‌ಸೈಟ್: https://kerc.karnataka.gov.in

ಸಂಖ್ಯೆ: ಕ.ವಿ.ನಿ.ಆ/ಬಿ15/12/ಎಫ್‌ಟಿಎಸ್-1011/1016 ದಿನಾಂಕ: 28-09-2022

ಸಾರ್ವಜನಿಕ ವಿಚಾರಣೆ ಬಗ್ಗೆ ಸೂಚನೆ

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ದಿನಾಂಕ: 22-07-2022 ರ ಅಧಿಸೂಚನೆ ಸಂಖ್ಯೆ: ಕವಿನಿಆ/ಬಿ15/12 ರಲ್ಲಿ ಕರಡು **ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಇಂಧನ ಮತ್ತು ವಿದ್ಯುತ್ ಖರೀದಿ ವೆಚ್ಚ ಹೊಂದಾಣಿಕೆ) ವಿನಿಯಮಗಳು, 2022** ನ್ನು ದಿನಾಂಕ: 28-07-2022 ರ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಿ ಸಾರ್ವಜನಿಕರಿಂದ / ಆಸಕ್ತರಿಂದ ವಿಮರ್ಶೆ / ಅಭಿಪ್ರಾಯ / ಸಲಹೆ / ಆಕ್ಷೇಪಣೆಗಳನ್ನು ಆಹ್ವಾನಿಸಿತ್ತು. ಸದರಿ ಕರಡು ವಿನಿಯಮಗಳನ್ನು ಆಯೋಗದ ಅಂತರ್ಜಾಲ ತಾಣ: **https://kerc.karnataka.gov.in** ನಲ್ಲಿ ಪ್ರಕಟಿಸಲಾಗಿದೆ. ಆಯೋಗವು ಈ ವಿಷಯದಲ್ಲಿ ಸಾರ್ವಜನಿಕರ / ಆಸಕ್ತರ ಅಭಿಪ್ರಾಯಗಳನ್ನು ಪಡೆಯಲು ದಿನಾಂಕ: **14-10-2022ರಂದು ಬೆಳಿಗ್ಗೆ 11.00 ಗಂಟೆಗೆ ನಂ.16 ಸಿ-1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು – 560052 ರ 1ನೇ ಮಹಡಿಯಲ್ಲಿರುವ ಆಯೋಗದ ಕೋರ್ಟ್ ಹಾಲ್‌ನಲ್ಲಿ ಸಾರ್ವಜನಿಕ ವಿಚಾರಣೆಯನ್ನು ನಿಗದಿಪಡಿಸಲಾಗಿದೆ.** ಆಸಕ್ತ ವ್ಯಕ್ತಿಗಳು ಸದರಿ ಸಾರ್ವಜನಿಕ ವಿಚಾರಣೆಯಲ್ಲಿ ಭಾಗವಹಿಸಿ ತಮ್ಮ ಲಿಖಿತ/ ಮೌಖಿಕ ಅಭಿಪ್ರಾಯಗಳನ್ನು ಆಯೋಗದ ಮುಂದೆ ಸಲ್ಲಿಸಬಹುದಾಗಿದೆ.

ಸಹಿ/– ಕಾರ್ಯದರ್ಶಿ
ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಪರವಾಗಿ

ವಾಸಾಸಂಇ/ವಾ.ಪ್ರ/2415/2022-23

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಕಾರವಾರ

ಸಂ: ಕಾ.ನಿ.ಇಂ./ಲೋ.ಇ.ವಿ.ಕಾ/ಪಿ.ಬಿ-2/ಟೆಂಡರ-20/2022-23/2209 ದಿನಾಂಕ: 23.09.2022

ಗುತ್ತಿಗೆ ಆಹ್ವಾನ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್)

ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕೋಷ್ಟಕದಲ್ಲಿ ವಿವರಿಸಿರುವ ಕಾಮಗಾರಿಗಳಿಗಾಗಿ ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಕಾರವಾರ ಇವರಿಂದ ಗುತ್ತಿಗೆ ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಕೋಷ್ಟಕದಲ್ಲಿ ಕೊಟ್ಟಿರುವ ಕಾಮಗಾರಿಯ ಗುತ್ತಿಗೆಯನ್ನು ಇ-ಪ್ರೊಕ್ಯೂರಮೆಂಟ್ ಮುಖಾಂತರ ಮಾತ್ರ ಸಲ್ಲಿಸುವದು. ಗುತ್ತಿಗೆಯನ್ನು ವಹಿಸಲು ಅರ್ಹರಾಗಬೇಕಾದಲ್ಲಿ ಗುತ್ತಿಗೆದಾರರು **(ಕೆಡಬ್ಲೂ-3&4)** ರಲ್ಲಿ ನಿಗದಿಪಡಿಸಿರುವ ಷರತ್ತುಗಳನ್ನು ಗಮನಿಸುವದು.
(1) ಗುತ್ತಿಗೆಗೆ ಸಂಬಂಧಿಸಿದ ವಿಚಾರಣೆಗೆ ಕೊನೆಯ **ದಿ: 18.10.2022 16.30 ಗಂಟೆ ವರೆಗೆ** (2) ಟೆಂಡರನ್ನು ಸ್ವೀಕರಿಸುವ ಕೊನೆಯ **ದಿ: 19.10.2022 16.30 ಗಂಟೆ ವರೆಗೆ** (3) ಟೆಂಡರನ ತಾಂತ್ರಿಕ ಬಿಡ್ ತೆರೆಯುವ **ದಿ: 20.10.2022 17.00 ಗಂಟೆ ವರೆಗೆ** (4) ಟೆಂಡರನ ಆರ್ಥಿಕ ಬಿಡ್ ತೆರೆಯುವ **ದಿ: 25.10.2022 17.00 ಗಂಟೆ ವರೆಗೆ**
ಕಾಮಗಾರಿಯ ಹೆಸರು: H/Ac: 5054-MDR Improvements APPENDIX 'E' During 2022-23 ವರ್ಕ ಇಂಡೆಂಟ್: (1) 154658 (2) 154654 (3) 154554
H/Ac: 4059- ಲೋಕೋಪಯೋಗಿ ಇಲಾಖಾ ಕಟ್ಟಡಗಳು ಅಡಿಯಲ್ಲಿ, ವರ್ಕ ಇಂಡೆಂಟ್: (1) 154167
(ಕೆಡಬ್ಲೂ-3&4) ರಲ್ಲಿನ ನಿಬಂಧನೆಗಳನ್ನು ಮುಂದಿನ ದಿನಗಳಲ್ಲಿ e-proc ನಲ್ಲಿ ಸೂಚಿಸಲಾದ ನಿಬಂಧನೆಗಳನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಅಂದರೆ "eproc.karnataka.gov.in" ನೋಡಬಹುದು. ಹೆಚ್ಚಿನ ಮಾಹಿತಿಗಾಗಿ help desk Bangalore (Phone No. 918025501216 & 918025501227) ಇವರನ್ನು ಸಂಪರ್ಕಿಸಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ಕಾರವಾರ ವಿಭಾಗ, ಕಾರವಾರ

DIPR/ADK/MCA/463/22-23 dt.27.09.2022

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಡೆತನದ್ದು)
ಕಾರ್ಯನಿರ್ವಾಹಕ ಅಭಿಯಂತರರ ಕಾರ್ಯಾಲಯ, ಕೃಭಾಜನಿನಿ,
ಮುಏನೀ ವಿಭಾಗ ನಂ-1, ಮಟ್ಟಿಹಾಳ, ತಾ:ಕೋಲ್ಹಾರ, ಜಿ: ವಿಜಯಪುರ
ದೂರವಾಣಿ ಸಂ: 08426-286126, ಇ-ಮೇಲ್: kbjnleemli@gmail.com

ಸಂ:ಕೃಭಾಜನಿ(ನಿ)/ಮುಏನೀ/ವಿ-1ಮ/ಯೋ.ಶಾ/ಟೆಂಡರ್/2022-23/877 ದಿನಾಂಕ:26.09.2022

ಅಲ್ಪಾವಧಿ ಸಂಕ್ಷಿಪ್ತ ಟೆಂಡರ್ ಅಧಿಸೂಚನೆ (ಇ-ಪ್ರಕ್ಯೂರ್‌ಮೆಂಟ್‌ನಲ್ಲಿ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರ ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಬೆಂಗಳೂರು, ಇವರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರಿಂದ ಶೇಕಡಾವಾರು ದ್ವಿ-ಲಕೋಟೆ ಪದ್ಧತಿಯಲ್ಲಿ **ಒಟ್ಟು 02 ಕಾಮಗಾರಿಗಳ ಇಂಡೆಂಟ್ ಸಂಖ್ಯೆ: 23054 ಮತ್ತು 23055** ಕಾಮಗಾರಿಗಳ **ಟೆಂಡರಿಗಿಟ್ಟ ಗರಿಷ್ಠ ಮೊತ್ತ ಅನುಕ್ರಮವಾಗಿ ರೂ. 401.56 ರಿಂದ 398.73 ಲಕ್ಷಗಳು ಇರುತ್ತವೆ.** ಗುತ್ತಿಗೆದಾರರು ನಿಗದಿಪಡಿಸಿದ ಇ.ಎಮ್.ಡಿ. ಮೊತ್ತ/ ಗುತ್ತಿಗೆದಾರರ ದರ್ಜೆ/ ಟೆಂಡರ್ ನಿಯಮ/ ಟೆಂಡರ್ ಪ್ರೊಸೆಸಿಂಗ್ ಶುಲ್ಕ, ಇತ್ಯಾದಿ ವಿವರಗಳನ್ನು https://eproc.karnataka.gov.in/ ಅಥವಾ ಕೆಳಗೆ ಸಹಿ ಮಾಡಿದವರನ್ನು ಕಛೇರಿಯ ಸಮಯದಲ್ಲಿ **ದಿನಾಂಕ: 13.10.2022** ಸಮಯ **ಸಾಯಂಕಾಲ 5.00** ಗಂಟೆವರೆಗೆ ಸಂಪರ್ಕಿಸಬಹುದು ದೂರವಾಣಿ ಸಂಖ್ಯೆ: 08426-286126. ಸದರಿ ಟೆಂಡರುದಾರರು ದ್ವಿ-ಪ್ರತಿಯಲ್ಲಿ (ತಾಂತ್ರಿಕ ಮತ್ತು ಆರ್ಥಿಕ ಬಿಡ್) ಅಪಲೋಡ್ ಮಾಡುವುದು.

ಟೆಂಡರ್ ಅಧಿಸೂಚನೆಯ ಪ್ರಕಾರ ದಿನಾಂಕವಾರು ಘಟನಾವಳಿಗಳು ಈ ಕೆಳಗಿನಂತಿವೆ.
1.1 ಇ-ಟೆಂಡರ್ ದಸ್ತಾವೇಜುಗಳ ವಿವರಗಳು ಗುತ್ತಿಗೆದಾರರಿಗೆ ದೊರೆಯುವ ದಿನಾಂಕ ಹಾಗೂ ಪೂರ್ಣಗೊಳಿಸಿದ ಇ-ಟೆಂಡರ್ ದಾಖಲೆಗಳನ್ನು ದಿನಾಂಕ: **27.09.2022** ರಿಂದ **13.10.2022** ರವರೆಗೆ ಸಮಯ ಸಾಯಂಕಾಲ **5.00** ಗಂಟೆಯವರೆಗೆ ಸಲ್ಲಿಸುವುದು.
1.2 ಪೂರ್ವಭಾವಿ ಸಭೆಯನ್ನು **ದಿನಾಂಕ: 06.10.2022** ರಂದು **ಬೆಳಿಗ್ಗೆ 11.00 ಘಂಟೆಗೆ** ಕಾರ್ಯನಿರ್ವಾಹಕ ಅಭಿಯಂತರರು, ಕೃ.ಭಾ.ಜ.ನಿ.ನಿ, ಮು.ಏ.ನೀ, ವಿಭಾಗ-1, ಮಟ್ಟಿಹಾಳ ಕಛೇರಿಯಲ್ಲಿ ನಿಗದಿಪಡಿಸಲಾಗಿದೆ. ಬಿಡ್ಡದಾರರು ಯಾವುದೇ ಸ್ಪಷ್ಟೀಕರಣಕ್ಕಾಗಿ ತಮ್ಮ ಪ್ರಶ್ನೆಗಳನ್ನು **ದಿನಾಂಕ: 13.10.2022** ರಂದು **ಸಾಯಂಕಾಲ 05.00** ಘಂಟೆಯವರೆಗೆ ಸಲ್ಲಿಸುವುದು.
1.3 ಲಕೋಟೆ-1 (ತಾಂತ್ರಿಕ ಬಿಡ್) ಅನ್ನು ಕಾರ್ಯನಿರ್ವಾಹಕ ಅಭಿಯಂತರರು, ಕೃ.ಭಾ.ಜ.ನಿ.ನಿ, ಮುಏನೀ ವಿಭಾಗ ಸಂಖ್ಯೆ-1 ಮಟ್ಟಿಹಾಳ, ಕೋಲ್ಹಾರ ತಾಲೂಕು ವಿಜಯಪುರ ಜಿಲ್ಲೆ. ಇವರ ಕಛೇರಿಯಲ್ಲಿ ದಿನಾಂಕ:**17.10.2022** ಸಮಯ ಸಂಜೆ **17.00** ಘಂಟೆಗೆ ತೆರೆಯಲಾಗುವುದು.
1.4 ಲಕೋಟೆ-2 (ಆರ್ಥಿಕ ಬಿಡ್) ಅನ್ನು ಕಾರ್ಯನಿರ್ವಾಹಕ ಅಭಿಯಂತರರು, ಕೃ.ಭಾ.ಜ.ನಿ.ನಿ, ಮುಏನೀ, ವಿಭಾಗ ಸಂಖ್ಯೆ-1 ಮಟ್ಟಿಹಾಳ, ಕೋಲ್ಹಾರ ತಾಲೂಕು ವಿಜಯಪುರ ಜಿಲ್ಲೆ ಇವರ ಕಛೇರಿಯಲ್ಲಿ ತೆರೆಯುವುದು ದಿನಾಂಕ:**19.10.2022** ಸಮಯ ಬೆಳಿಗ್ಗೆ **11.00** ಗಂಟೆಗೆ ಅಥವಾ ತಾಂತ್ರಿಕ ಬಿಡ್ ಅನುಮೋದನೆ ನಂತರ ತೆರೆಯಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಕೃಭಾಜನಿನಿ, ಮುಏನೀ ವಿಭಾಗ ನಂ.1,
ಮಟ್ಟಿಹಾಳ

ವಾಸಾಸಂಇ/ವಿಜಯಪುರ/447/ಎಂಸಿಎ/2022-23

VISVESVARAYA JALA NIGAMA LIMITED
(A Government of Karnataka Enterprise)

Regd. Office Visvesvaraya Jala Nigam Limited
No.148 Imbassy Square, Ground Floor
Infantry Road, Bangalore-560001,
CIN No: U41000KA2016SGC09726
Ph: 080-22256688/22289966
Fax: 080-22264477
Email: techialogmail.com.
Website: www.jalin

Office of the Executive Engineer.
Visvesvaraya Jala Nigam Limited
Upper Bhadra Project Division
No.1, Kadur. 577548
Ph: 08267-295207
Email-Id-ecobpdvalgmail.com

ಸಂಖ್ಯೆ:ವಿಜನಿನಿ/ಭಮೇಯೋ/ಕಾಇಂ/ವಿ.ನಂ-1/ಕ/ತಿದ್ದು/2022-23/662 ದಿನಾಂಕ : 27/09/2022

ಟೆಂಡರ್ ತಿದ್ದುಪಡಿ ಪ್ರಕಟಣೆ-1 (ಇ-ಪ್ರೂಕ್ಯೂರ್ ಮೆಂಟ್ ಮುಖಾಂತರ)

ಈ ಮೇಲಿನ ಉಲ್ಲೇಖಿತ ಟೆಂಡರ್ ಅಧಿಸೂಚನೆಯಲ್ಲಿ (1) ಪ್ರಕಟಣೆಗೊಳಿಸಿದ ಇಂಡೆಂಟ್ ಸಂಖ್ಯೆಗಳು : 2232, 2233, 2243, 2234, 2247, 2238, 2244, 2242, 2248, ಮತ್ತು 2245 ಹಾಗೂ ಉಲ್ಲೇಖಿತ ಟೆಂಡರ್ ಅಧಿಸೂಚನೆಯಲ್ಲಿ (2) ಪ್ರಕಟಣೆಗೊಳಿಸಿದ ಇಂಡೆಂಟ್ ಸಂಖ್ಯೆಗಳು : 2231, 2237, 2239, 2240, 2230, 2246, 2235, 2241 ಮತ್ತು 2236 ಕಾಮಗಾರಿಗಳಿಗೆ ಸಂಬಂದಿಸಿದಂತೆ ತಾಂತ್ರಿಕ ಕಾರಣಗಳಿಂದ ಈ ಕೆಳಕಂಡ ದಿನಾಂಕವನ್ನು ಮರು ನಿಗಧಿಪಡಿಸಲಾಗಿದೆ.

1	ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ	ದಿನಾಂಕ: **01/10/2022** ರಂದು ಅಪರಾಹ್ನ **17.30** ಘಂಟೆವರೆಗೆ
2.	ತಾಂತ್ರಿಕ ಬಿಡ್ ತೆರೆಯುವ ದಿನಾಂಕ	ದಿನಾಂಕ: **03/10/2022** ರಂದು ಬೆಳಿಗ್ಗೆ **10.30** ಘಂಟೆಗೆ ಕಾರ್ಯ ನಿರ್ವಾಹಕ ಅಭಿಯಂತರರು, ವಿ.ಜ.ನಿ.ನಿ, ಭದ್ರಾ ಮೇಲ್ದಂಡೆ ಯೋಜನಾ, ವಿಭಾಗ ನಂ.1, ಕಡೂರು ಇವರ ಕಛೇರಿಯಲ್ಲಿ
3.	ಆರ್ಥಿಕ ಬಿಡ್ ತೆರೆಯುವ ದಿನಾಂಕ	ದಿನಾಂಕ: **06/10/2022** ರಂದು ಬೆಳಿಗ್ಗೆ **10.30** ಘಂಟೆಗೆ ಕಾರ್ಯ ನಿರ್ವಾಹಕ ಅಭಿಯಂತರರು, ವಿ.ಜ.ನಿ.ನಿ, ಭದ್ರಾ ಮೇಲ್ದಂಡೆ ಯೋಜನಾ, ವಿಭಾಗ ನಂ.1, ಕಡೂರು ಇವರ ಕಛೇರಿಯಲ್ಲಿ

ಸೂಚನೆ : ಈ ಮೇಲಿನ ಉಲ್ಲೇಖಕ್ಕೆ ಸಂಬಂದಿಸಿದಂತೆ ಟೆಂಡರ್ ತಿದ್ದುಪಡಿ ವೇಳಾಪಟ್ಟಿ ಪ್ರಕಟಣೆ ಹೊರತುಪಡಿಸಿ ಬಾಕಿ ಉಳಿದ ಷರತ್ತು ಮತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಸಹಿ/–ಕಾರ್ಯಪಾಲಕ ಇಂಜಿನಿಯರ್,ವಿ.ಜ.ನಿ.ನಿ, ಭಮೇಯೋ ವಿಭಾಗ ನಂ.1, ಕಡೂರು

ಕರ್ನಾಟಕ ಸರ್ಕಾರ
ಗಣಿ ಮತ್ತು ಭೂವಿಜ್ಞಾನ ಇಲಾಖೆ
#49, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-560 001.
ಇ-ಮೇಲ್: dir-mines@karnataka.gov.in

ಸಂ: ಡಿಎಂಜಿ-17012/17/2022 ದಿನಾಂಕ: 27.09.2022
ಸಿ.ನಂ: 873977

ಅಧಿಸೂಚನೆ ಮತ್ತು ಟೆಂಡರ್ ಆಹ್ವಾನಿಸುವ ಪ್ರಕಟಣೆ
'ಚಿನ್ನ ಮತ್ತು ಬಾಕ್ಸೈಟ್ ಬ್ಲಾಕ್‌ಗಳಿಗೆ ಸಂಯೋಜಿತ ಪರವಾನಗಿ ನೀಡಲು ಬಿಡ್‌ಗಳ ಆಹ್ವಾನ'

Mines and Minerals (Development and Regulation) Act, 1957 ರ ಸೆಕ್ಷನ್ 11 ಅಡಿಯಲ್ಲಿ ಪ್ರದತ್ತವಾದ ಅಧಿಕಾರದಂತೆ ಮತ್ತು the Minerals (Evidence of Mineral Contents) Rules, 2015 and the Mineral (Auction) Rules, 2015 ಮತ್ತು ಅದರಡಿಯಾದ ತಿದ್ದುಪಡಿಗಳ ಅನುಗುಣವಾಗಿ ಕರ್ನಾಟಕ ಸರ್ಕಾರವು ಹರಾಜಿನ ಮೂಲಕ ಸಂಯೋಜಿತ ಪರವಾನಗಿ ನೀಡಲು 2 ಚಿನ್ನದ ಬ್ಲಾಕ್‌ಗಳು ಮತ್ತು 1 ಬಾಕ್ಸೈಟ್ ಬ್ಲಾಕ್ ಅನ್ನು ಗುರುತಿಸಿರುತ್ತದೆ ಮತ್ತು ಎಲೆಕ್ಟ್ರಾನಿಕ್ ಹರಾಜಿಗೆ ಈ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದೆ.
ಯಾವುದೇ ವ್ಯಕ್ತಿ, ಸಂಸ್ಥೆ, ಕಂಪನಿಯು ಟೆಂಡರ್ ದಾಖಲೆಯಲ್ಲಿ ನಮೂದಿಸಿರುವ ಅರ್ಹತೆಗಳನ್ನು ಹೊಂದಿರುವವರು ಹರಾಜಿನಲ್ಲಿ ಭಾಗವಹಿಸಬಹುದಾಗಿರುತ್ತದೆ.

ಹರಾಜಿನ ಮೂಲಕ ಸಂಯೋಜಿತ ಪರವಾನಗಿಗಾಗಿ ಪಟ್ಟಿ ಮಾಡಿರುವ ಖನಿಜ ಬ್ಲಾಕ್‌ಗಳು

ಕ್ರ. ಸಂ.	ಬ್ಲಾಕ್ ಹೆಸರು	ಜಿಲ್ಲೆ	ಖನಿಜ	ವಿಸ್ತೀರ್ಣ (ಚ.ಕಿ.ಮೀ ಗಳಲ್ಲಿ)	ಅಂದಾಜಿಸಲಾದ ಖನಿಜ ಸಂಪನ್ಮೂಲ (ಎಂಎಂಟಿ)	ಟೆಂಡರ್ ಫೀ
1	ಮಡ್ಡಕೆರೆ ಚಿನ್ನದ ಬ್ಲಾಕ್	ಚಿತ್ರದುರ್ಗ	ಚಿನ್ನ	45.00	--	ರೂ. 2,00,000+ 18% ಜಿಎಸ್‌ಟಿ
2	ತಿಮ್ಮನಹಳ್ಳಿ ಚಿನ್ನದ ಬ್ಲಾಕ್	ತುಮಕೂರು	ಚಿನ್ನ	20.00	--	ರೂ. 2,00,000+ 18% ಜಿಎಸ್‌ಟಿ
3	ನಿಡ್ಡೋಡಿ ಬಾಕ್ಸೈಟ್ ಬ್ಲಾಕ್	ದಕ್ಷಿಣ ಕನ್ನಡ	ಬಾಕ್ಸೈಟ್	0.528	0.145	ರೂ. 2,00,000+ 18% ಜಿಎಸ್‌ಟಿ

ಮೇಲಿನ ಪಟ್ಟಿಯಲ್ಲಿ ತಿಳಿಸಿರುವ ಬ್ಲಾಕ್‌ಗಳಿಗೆ ಸಂಬಂಧಿಸಿದಂತೆ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಆಹ್ವಾನಿಸಲಾಗಿದೆ. ಆನ್‌ಲೈನ್‌ನಲ್ಲಿ ಸಲ್ಲಿಸಬೇಕಾದ ತಾಂತ್ರಿಕ ಬಿಡ್‌ಗಳ ಹೊರತಾಗಿ, ಬಿಡ್ಡುದಾರರು ತಮ್ಮ ತಾಂತ್ರಿಕ ಬಿಡ್‌ಗಳ ಮೂಲ ಭೌತಿಕ ಪ್ರತಿಗಳನ್ನು ಟೆಂಡರ್ ಆಹ್ವಾನಿಸುವ ಪ್ರಾಧಿಕಾರಕ್ಕೆ ಅಂದರೆ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ, ಇವರಿಗೆ ಸಲ್ಲಿಸಬೇಕಾಗುತ್ತದೆ.
ಅರ್ಹತಾ ನಿಬಂಧನೆಗಳು, ನಿಯಮ ಹಾಗೂ ನಿಬಂಧನೆಗಳು, ಎಲೆಕ್ಟ್ರಾನಿಕ್ ಹರಾಜಿನಲ್ಲಿ ಭಾಗವಹಿಸಬೇಕಾದ ದಿನಾಂಕ ಮತ್ತು ಸಮಯಗಳ ವಿವರಗಳನ್ನು ಟೆಂಡರ್ ದಸ್ತಾವೇಜಿನಲ್ಲಿ ನೀಡಲಾಗಿರುತ್ತದೆ. ಟೆಂಡರ್ ದಸ್ತಾವೇಜುಗಳು, ಪ್ರಕಟಣೆಗಳು, ನವೀಕರಣಗಳು ಮತ್ತು ಇ-ಹರಾಜು ಪ್ರಕ್ರಿಯೆಗೆ ಸಂಬಂಧಿಸಿದ ಇತರೆ ವಿವರಗಳು ಎಂಎಸ್‌ಟಿಸಿ ನಿಯಮಿತದ ವೆಬ್‌ಸೈಟ್ **(https://www.mstcecommerce.com/auctionhome/mlcl/index.jsp)** ನಲ್ಲಿ ಮಾತ್ರ ಎಲೆಕ್ಟ್ರಾನಿಕ್ ರೂಪದಲ್ಲಿ ಲಭ್ಯವಾಗುವುದು.
ಆಸಕ್ತಿಯುಳ್ಳ ಮತ್ತು ಅರ್ಹ ಬಿಡ್ಡುದಾರರು ಮೇಲ್ಕಂಡ ವೆಬ್‌ಸೈಟ್‌ನಲ್ಲಿ ನೊಂದಣಿ ಮಾಡಿಕೊಳ್ಳಬೇಕು. ಇ-ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲು ನೊಂದಣಿ ಮಾಡಿಕೊಂಡ ಬಿಡ್ಡುದಾರರು ಲಾಗಿನ್ ಐಡಿ ಮತ್ತು ಪಾಸ್‌ವರ್ಡ್‌ಗಳನ್ನು ಪಡೆಯಬಹುದು. ಟೆಂಡರ್ ದಸ್ತಾವೇಜು ಮಾದರಿ ಮತ್ತು ಬ್ಲಾಕ್‌ನ ಕುರಿತಾದ ಸಾರಾಂಶಗಳು ಎಂಎಸ್‌ಟಿಸಿ ನಿಯಮಿತದ ವೆಬ್‌ಸೈಟ್ **(https://www.mstcecommerce.com/ auctionhome/mlcl/index.jsp)** ನಲ್ಲಿ ಉಚಿತವಾಗಿ ಲಭ್ಯವಿದೆ. ಬಿಡ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ನೊಂದಣಿ ಮಾಡಿಕೊಂಡ ಬಿಡ್ಡುದಾರರು ಪ್ರತಿ ಬ್ಲಾಕ್‌ಗೆ ಕೋಷ್ಟಕದಲ್ಲಿ ನಮೂದಿಸಲಾದ ಶುಲ್ಕಗಳ ಪ್ರಕಾರ ಪಾವತಿಸುವ ಮೂಲಕ ಸಂಬಂಧಪಟ್ಟ ಗಣಿ ಬ್ಲಾಕ್‌ನ ಟೆಂಡರ್ ದಸ್ತಾವೇಜುಗಳನ್ನು ಎಂಎಸ್‌ಟಿಸಿ ನಿಯಮಿತದ ವೆಬ್‌ಸೈಟ್‌ನಿಂದ ಪಡೆಯಬಹುದು.
ಟೆಂಡರ್ ದಾಖಲೆಗಳ ಖರೀದಿಯ ಮೇಲೆ ಶೇ.18ರ ದರದಲ್ಲಿ ಜಿಎಸ್ಟಿ ಅನ್ವಯವಾಗುತ್ತದೆ. ಅನ್ವಯವಾಗುವ ಜಿಎಸ್ಟಿಯನ್ನು ಸಂಭಾವ್ಯ ಬಿಡ್ಡರ್ ಗಳು ಸ್ವತಃ ಪಾವತಿಸಬೇಕು. ಸಂಭಾವ್ಯ ಬಿಡ್ಡರ್ಗಳು ಅನ್ವಯವಾಗುವ ಕಾನೂನಿನ ಪ್ರಕಾರ ಜಿಎಸ್ಟಿಯನ್ನು ಪಾವತಿಸಲು ಸಂಪೂರ್ಣವಾಗಿ ಜವಾಬ್ದಾರರಾಗಿರುತ್ತಾರೆ ಮತ್ತು ಇದರಲ್ಲಿ ಶಾಸನಬದ್ಧ ಹೊಣೆಗಾರಿಕೆಯು ಸಂಭಾವ್ಯ ಬಿಡ್ಡರುಗಳ ಜವಾಬ್ದಾರಿಯಾಗಿರುತ್ತದೆ ಮತ್ತು ಯಾವುದೇ ಹೊಣೆಗಾರಿಕೆಯನ್ನು ಗಣಿ ಮತ್ತು ಭೂ ವಿಜ್ಞಾನ ಇಲಾಖೆ / ಎಂಎಸ್‌ಟಿಸಿ ಇಲಾಖೆ ಭರಿಸುವುದಿಲ್ಲ.
ಟೆಂಡರ್ ದಸ್ತಾವೇಜುಗಳನ್ನು ದಿನಾಂಕ: **28.09.2022** ರಿಂದ ಆಸಕ್ತ ಬಿಡ್‌ದಾರರಿಗೆ ಮೇಲ್ಕಂಡ ಎಂ.ಎಸ್.ಟಿ.ಸಿ ವೆಬ್‌ಸೈಟ್ ನಲ್ಲಿ ಲಭ್ಯವಿದ್ದು ದಿನಾಂಕ: **17.11.2022** ಟೆಂಡರ್ ಮಾರಾಟದ ಕೊನೆಯ ದಿನವಾಗಿರುತ್ತದೆ. ತಾಂತ್ರಿಕ ಹಾಗೂ ಬಿಡ್ ಮೊತ್ತ ನಮೂದಿಸಿದ ಪ್ರಸ್ತಾವನೆಯನ್ನು ಎಂ.ಎಸ್.ಟಿ.ಸಿ ವೆಬ್ ಸೈಟ್‌ನಲ್ಲಿ ದಿನಾಂಕ: **29.11.2022** ರ **17.00** ಗಂಟೆಗೆ ಅಥವಾ ಅದರೊಳಗೆ ಸಲ್ಲಿಸಬಹುದಾಗಿದೆ. ತಾಂತ್ರಿಕ ಬಿಡ್‌ಗಳ ಮೂಲ ಭೌತಿಕ ಪ್ರತಿಗಳನ್ನು ಟೆಂಡರ್ ಆಹ್ವಾನಿಸುವ ಪ್ರಾಧಿಕಾರಕ್ಕೆ ಅಂದರೆ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಇವರಿಗೆ ದಿನಾಂಕ: **29.11.2022** ರ **17.00** ಗಂಟೆಗೆ ಅಥವಾ ಅದರೊಳಗೆ ಸಲ್ಲಿಸಬೇಕಾಗುತ್ತದೆ.

ಸಹಿ/–
ನಿರ್ದೇಶಕರು
ಗಣಿ ಮತ್ತು ಭೂವಿಜ್ಞಾನ ಇಲಾಖೆ

DIPR/CP/2411/Zenkar/2022-23

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ ಬೀದರ ಜಿಲ್ಲೆ, ಬೀದರ
ದೂರವಾಣಿ- 08482-229332, ಫ್ಯಾಕ್ಸ ಸಂ : 08482-225262,
E-Mail: itstaff_dudc_bidar@yahoo.com

ಸಂ: ಎಂಯುಎನ್/ನಗ-3(ಉ)/ಸಿಆರ್- /2022-23 ದಿನಾಂಕ: 23-09-2022

ಟೆಂಡರ್ ಪ್ರಕಟಣೆ

1) ಕಾಮಗಾರಿ/ಸರಕು/ಸೇವೆಯ ವಿವರ 1) ನಗರೋತ್ಥಾನ ಹಂತ-3 (ಉಳಿತಾಯ) ಯೋಜನೆಯಡಿ ಬಸವಕಲ್ಯಾಣ ನಗರಸಭೆ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳು, DMA/2022-23/RD/WORK_ INDENT 136777, 2) ಕಾಮಗಾರಿ/ ಸರಕು/ ಸೇವೆಯ ಅಂದಾಜು ಮೊತ್ತ: e-portal ನಲ್ಲಿ ನಮೂದಿಸಿದಂತೆ 3) ಗುತ್ತಿಗೆದಾರರ ಅರ್ಹತೆ ವಿವರ: e-portal ನಲ್ಲಿ ನಮೂದಿಸಿದಂತೆ, 4) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ: e-portal ನಲ್ಲಿ ನಮೂದಿಸಿದಂತೆ, 5) ಪ್ರಿ ಬಿಡ್ ಮೀಟಿಂಗ್: 18-10-2022 at 11.00 AM, 6) ಟೆಂಡರ ಭರ್ತಿ ಮಾಡಿ ಸಲ್ಲಿಸಲು ಅಂತಿಮ ದಿನಾಂಕ: 27-10-2022 upto 04.30 PM 7) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 28-10-2022 at 05.00 PM, 8) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ ಕಛೇರಿ ವಿಳಾಸ, ದೂರವಾಣಿ ಸಂಖ್ಯೆ: ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿಕೋಶ, ಬೀದರ ಇ-ಮೇಲ್: itstaff_dudc_bidar@yahoo.com 08482-229332 9) ಅಂತರಜಾಲ ತಾಣದ ವಿಳಾಸ: www.eproc.karnataka.gov.in

ಸಹಿ/– ಜಿಲ್ಲಾಧಿಕಾರಿಗಳು,
ಬೀದರ ಜಿಲ್ಲೆ, ಬೀದರ

ವಾ.ಸಾ.ಸಂ.ಇ/ಬೀದರ/250/ಎಂಸಿ&ಎ/2022-23

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಾರ್ಯಾಲಯ, ಕೃಭಾಜನಿನಿ, ಎ ಎಲ್ ಬಿ ಸಿ ವಿಭಾಗ,
ಆಲಮಟ್ಟಿ – 586201. ತಾ: ಬ.ಬಾಗೇವಾಡಿ, ಜಿ:ವಿಜಯಪುರ.

ಸಂ:ಕೃಭಾಜನಿನಿ/ಎಎಲ್‌ಬಿಸಿ ವಿಭಾಗ/ಡಿಎಮ್/ಟೆಂಡರ/ಚಿಮ್ಮಲಗಿ/ರಸ್ತೆ/2022-23/1677 ದಿನಾಂಕ: 23.09.2022

ಅಲ್ಪಾವಧಿ ಸಂಕ್ಷಿಪ್ತ ತಿದ್ದುಪಡಿ ಟೆಂಡರ್ ಪ್ರಕಟಣೆ (ಇ-ಪ್ರಾಕ್ಯೂರ್‌ಮೆಂಟ್ ಮುಖಾಂತರ)

ಈ ಕಛೇರಿಯ ಟೆಂಡರ ಅಧಿಸೂಚನೆ ಸಂಖ್ಯೆ: **ಸಂಖ್ಯೆ:** ಕೃ.ಭಾ.ಜ.ನಿ.ನಿ/ಎಎಲ್‌ಬಿಸಿ ವಿಭಾಗ/ಡಿಎಮ್/ಟೆಂಡರ/ಚಿಮ್ಮಲಗಿ/ರಸ್ತೆ/2022-23/1598 ದಿನಾಂಕ: 05-09-2022 ರಲ್ಲಿ Improvements and Developments of Aycut Roads Gundkarajagi to Basarkod and Gonal P N to Basarkod and SH-161 via Hullur, Koppa, Siddapur to Basarkod Outer Road coming under command area of Chimmalgi LIS, under UKP Stage-III in Muddebihal Taluk, Vijayapura District. **(Indent No. 23051)** Construction and Developments of Aycut Roads from Nadahalli to Madikeshwar, Balawat to Madikeshwar and Nadahalli via Balawat Gudihal to SH-41 coming under command area of Chimmalgi LIS under UKP Stage-III in Muddebihal Taluk, Vijayapura District. **(Indent No. 23050)** **ಕಾಮಗಾರಿಗಳಿಗಾಗಿ** ಟೆಂಡರನ್ನು ಆಹ್ವಾನಿಸಲಾಗಿತ್ತು, ಅನಿವಾರ್ಯ ತಾಂತ್ರಿಕ ಕಾರಣಗಳಿಂದಾಗಿ ಈ ಕೆಳಗಿನ ಅವಧಿಯವರೆಗೆ ಮುಂದೂಡಲಾಗಿರುತ್ತದೆ.

ಟೆಂಡರ ಪ್ರಕ್ರಿಯೆಯ ಹಂತ	ಮೊದಲು ನಿಗಿಪಡಿಸಿರುವ ಅವಧಿ	ಮುಂದೂಡಲ್ಪಟ್ಟಿರುವ ಅವಧಿ
ಟೆಂಡರ ಡಾಕುಮೆಂಟ್‌ನ್ನು ಇ-ಪೋರ್ಟಲ್‌ನಲ್ಲಿ ವೀಕ್ಷಿಸುವ & ಭರ್ತಿ ಮಾಡಿದ ಬಿಡ್‌ನ್ನು ಸಲ್ಲಿಸುವ ಕಾಲಾವಧಿ	13.09.2022 ರಿಂದ 23.09.2022 ಸಾಯಂಕಾಲ 5.00 ಘಂಟೆಯವರೆಗೆ	30.09.2022 ರ ಸಾಯಂಕಾಲ 5.00 ಘಂಟೆಯವರೆಗೆ
ಟೆಂಡರ್‌ನ ಪೂರ್ವಭಾವಿ ಸಭೆಯ ದಿನಾಂಕ	17.09.2022 ಬೆಳಿಗ್ಗೆ 11.00 ಘಂಟೆಗೆ	–
ಲಕೋಟೆ-1 (ತಾಂತ್ರಿಕ ಬಿಡ್)ನ್ನು ತೆರೆಯುವ ದಿನಾಂಕ	27.09.2022 ಬೆಳಿಗ್ಗೆ 11.00 ಘಂಟೆಗೆ	03.10.2022 ಬೆಳಿಗ್ಗೆ 11.00 ಘಂಟೆಗೆ
ಲಕೋಟೆ-2 (ಆರ್ಥಿಕ ಬಿಡ್)ನ್ನು ತೆರೆಯುವ ದಿನಾಂಕ	03.10.2022 ಬೆಳಿಗ್ಗೆ 11.00 ಘಂಟೆಗೆ	10.10.2022 ಬೆಳಿಗ್ಗೆ 11.00 ಘಂಟೆಗೆ

ಯಾವುದೇ ಸಂದರ್ಭದಲ್ಲಾದರೂ, ಯಾವದೇ ಕಾರಣ ನೀಡದೇ ಟೆಂಡರನ್ನು ಅಂಗಿಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿರುವವರು ಕಾಯ್ದಿರಿಸಿಕೊಂಡಿರುತ್ತಾರೆ. ಟೆಂಡರಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯನ್ನು ಕಛೇರಿಯ ಅವಧಿಯಲ್ಲಿ ಅಥವಾ http://eproc.karnataka.gov.in/eportal /ines.seam and www.kbjnl.karnataka.gov.in ವೆಬ್‌ಸೈಟನಲ್ಲಿ ಪಡೆದುಕೊಳ್ಳಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ, ಎ ಎಲ್ ಬಿ ಸಿ ವಿಭಾಗ, ಆಲಮಟ್ಟಿ

ವಾಸಾಸಂಇ/ವಿಜಯಪುರ/457/ಎಂಸಿಎ/2022-23

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರವರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ.

ಸಂಖ್ಯೆ: ಕಾಇಂ:ಲೋವಿಚಿ:ಎಇ-2:ಟೆಂಡರ್-61:2022-23 ದಿನಾಂಕ: 26.09.2022

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅದ್ಯಾದೇಶ 2000 ಹಾಗೂ ಆಕ್ಟ್ 2000 ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ಗಳ ನಿಯಮಗಳನ್ವಯ ಕರ್ನಾಟಕ ರಾಜ್ಯ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ ಇವರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ **ಅರ್ಹ ಗುತ್ತಿಗೆದಾರರಿಂದ** ಇ-ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗಳಿಗೆ **ಏಕ ಲಕೋಟೆ ಮತ್ತು ದ್ವಿ ಲಕೋಟೆ ಪದ್ಧತಿಯಲ್ಲಿ** ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ವೆಬ್‌ಸೈಟ್ www.eproc.Karnataka.gov.in/eportal/index.seam ನಲ್ಲಿ ಟೆಂಡರ್‌ಗಾಗಿ ವಿವರಗಳನ್ನು ಪಡೆದು ಭಾಗವಹಿಸಬಹುದು. **ಕಾಮಗಾರಿಗಳ ವಿವರ:- ಇ- ಪ್ರೊಕ್ಯೂರ್‌ಮೆಂಟ್ ಮೂಲಕ- ದ್ವಿ ಲಕೋಟೆ ಪದ್ಧತಿ:- ಲೆಕ್ಕ ಶೀರ್ಷಿಕೆ: 3054-04-337-1-10-200 ಜಿಲ್ಲಾ ಮತ್ತು ಇತರೆ ರಸ್ತೆಗಳ ನಿರ್ವಹಣೆ:- 1** ಪ್ಯಾಕೇಜ್: 1) a) ಹೊಳಲ್ಕೆರೆ ತಾ. ಹಿರೇಬೆನ್ನೂರು-ಸಿರಿಗೆರೆ-ಸಾಸಲು ರಸ್ತೆ ಕೀ.ಮಿ 13.00 ರಿಂದ 21.60 ರವರೆಗೆ ವಾರ್ಷಿಕ ನಿರ್ವಹಣೆ b) ಹೊಳಲ್ಕೆರೆ ತಾ. ದಂಡಿಗೇನಹಳ್ಳಿ-ಕಾಗಳಗೆರೆ ರಸ್ತೆ ಕಿ.ಮೀ 0.00 ರಿಂದ 11.30 ರವರೆಗೆ ವಾರ್ಷಿಕ ನಿರ್ವಹಣೆ 2) a) ಹೊಳಲ್ಕೆರೆ ತಾ. ಎನ್.ಹೆಚ್-13ರಿಂದ ಶಿವಪುರ ರಸ್ತೆ ಕಿ.ಮೀ 0.00 ರಿಂದ 7.00 ರವರೆಗೆ ವಾರ್ಷಿಕ ನಿರ್ವಹಣೆ b) ಹೊಳಲ್ಕೆರೆ ತಾ. ಕೆಂಗುಂಟೆ-ಚನ್ನಗಿರಿ-ತಾಲ್ಲೂಕು ಗಡಿ ರಸ್ತೆ ಕಿ.ಮೀ 0.00 ರಿಂದ 9.00ರವರೆಗೆ ವಾರ್ಷಿಕ ನಿರ್ವಹಣೆ 3) a) ಹೊಳಲ್ಕೆರೆ ತಾ. ಹೊಳಲ್ಕೆರೆ ರೈಲ್ವೇ ಸ್ಟೇಷನ್-ವಂಕಿ ರಸ್ತೆ ರಸ್ತೆ ಕಿ.ಮೀ 0.00 ರಿಂದ 0.60 ರವರೆಗೆ ವಾರ್ಷಿಕ ನಿರ್ವಹಣೆ b) ಹೊಳಲ್ಕೆರೆ ತಾ. ವಿಶ್ವನಾಥನಹಳ್ಳಿ-ಹೊಳಲ್ಕೆರೆ ರೈಲ್ವೇ ಸ್ಟೇಷನ್ ರಸ್ತೆ ಕಿ.ಮೀ 0.00 ರಿಂದ 12.50 ರವರೆಗೆ ವಾರ್ಷಿಕ ನಿರ್ವಹಣೆ c) ಹೊಳಲ್ಕೆರೆ ತಾ. ಮಲ್ಲಾಡಿಹಳ್ಳಿ ಲೂಪ್ ರಸ್ತೆ ಕೀ.ಮಿ 1.65 ರಿಂದ 3.60 ರವರೆಗೆ ವಾರ್ಷಿಕ ನಿರ್ವಹಣೆ 4) a) ಹೊಳಲ್ಕೆರೆ ತಾ. ಹೊಳಲ್ಕೆರೆ-ಹುಲೇಮಳಲಿ ರಸ್ತೆ ಕೀ.ಮಿ 0.00 ರಿಂದ 10.50 ರವರೆಗೆ ವಾರ್ಷಿಕ ನಿರ್ವಹಣೆ b) ಹೊಳಲ್ಕೆರೆ ತಾ. ಅಗ್ರಹಾರ-ಆಡನೂರು ರಸ್ತೆ ಕೀ.ಮಿ 0.00 ರಿಂದ 10.00 ರವರೆಗೆ ವಾರ್ಷಿಕ ನಿರ್ವಹಣೆ 5) a) ಹೊಳಲ್ಕೆರೆ ತಾ. ಹೊಳಲ್ಕೆರೆ-ಗುಂಡೇರಿ-ರಾಮಗಿರಿ ರಸ್ತೆ ಕಿ.ಮೀ 0.00 ರಿಂದ 13.00 ರವರೆಗೆ ವಾರ್ಷಿಕ ನಿರ್ವಹಣೆ b) ಹೊಳಲ್ಕೆರೆ ತಾ. ಗೌಡಿಹಳ್ಳಿ ಹೊಸದುರ್ಗ ರಸ್ತೆ ಕಿ.ಮೀ 0.00 ರಿಂದ 8.50 ರವರೆಗೆ ವಾರ್ಷಿಕ ನಿರ್ವಹಣೆ 6) a) ಹೊಳಲ್ಕೆರೆ ತಾ. ಹೆಚ್.ಡಿ.ಪುರ-ತೇಕಲವಟ್ಟಿ ರಸ್ತೆ ಕಿ.ಮೀ 0.00 ರಿಂದ 7.00 ರವರೆಗೆ ವಾರ್ಷಿಕ ನಿರ್ವಹಣೆ b) ಹೊಳಲ್ಕೆರೆ ತಾ. ತೇಕಲವಟ್ಟಿ-ಕೊಳಾಳ್ ರಸ್ತೆ ಕೀ.ಮಿ 0.00 ರಿಂದ 5.30 ಮತ್ತು ಕಿ.ಮೀ 7.80 ರಿಂದ 9.00 ರವರೆಗೆ ವಾರ್ಷಿಕ ನಿರ್ವಹಣೆ 7) a) ಹೊಳಲ್ಕೆರೆ ತಾ. ಐಮಂಗಳ-ಹೆಚ್.ಡಿ.ಪುರ ರಸ್ತೆ ಕೀ.ಮಿ 12.67 ರಿಂದ 26.67 ರವರೆಗೆ ವಾರ್ಷಿಕ ನಿರ್ವಹಣೆ b) ಹೊಳಲ್ಕೆರೆ ತಾ. ಉಪ್ಪರಿಗೇನಹಳ್ಳಿ-ಅಮೃತಾಪುರ ರಸ್ತೆ ಕೀ.ಮಿ 0.00 ರಿಂದ 4.00 ಮತ್ತು ಕಿ.ಮೀ 4.27 ರಿಂದ 6.00 ರವರೆಗೆ ವಾರ್ಷಿಕ ನಿರ್ವಹಣೆ 8) a) ಹೊಳಲ್ಕೆರೆ ತಾ. ಮತಿಘಟ್ಟ-ಚಿತ್ರದುರ್ಗ ತಾ. ಗಡಿ ರಸ್ತೆ ಕೀ.ಮಿ 1.125 ರಿಂದ 8.20 ಮತ್ತು ಕಿ.ಮೀ 9.00 ರಿಂದ 15.30 ರವರೆಗೆ ವಾರ್ಷಿಕ ನಿರ್ವಹಣೆ 9) a) ಹೊಳಲ್ಕೆರೆ ತಾ. ಹಿರೇಎಮ್ಮಿಗನೂರು-ಕಡೂರು ರಸ್ತೆ ಕೀ.ಮಿ 0.00 ರಿಂದ 11.00 ರವರೆಗೆ ವಾರ್ಷಿಕ ನಿರ್ವಹಣೆ b) ಹೊಳಲ್ಕೆರೆ ತಾ. ಎಸ್.ಹೆಚ್.-48 ರಿಂದ ಅಮೃತಾಪುರ ರಸ್ತೆ ಕೀ.ಮಿ 4.50 ರಿಂದ 6.10 ರವರೆಗೆ ವಾರ್ಷಿಕ ನಿರ್ವಹಣೆ c) ಹೊಳಲ್ಕೆರೆ ತಾ. ಎಸ್.ಹೆಚ್-47 ರಿಂದ ಸಿಂಗೇನಹಳ್ಳಿ-ಕೆ.ಕೆ ರಸ್ತೆ ವಯಾ ಕಾಳಘಟ್ಟ ಲಂಬಾಣಿಹಟ್ಟಿ, ಕಾಳಘಟ್ಟ, ಕಾಳಘಟ ವಡ್ಡರಹಟ್ಟಿ, ದಾಸರಹಳ್ಳಿ, ಅಬ್ಬಿಗೆರೆ, ನಂದಿಹಳ್ಳಿ ರಸ್ತೆ ಕಿ.ಮೀ 0.00 ರಿಂದ 15.00 ರವರೆಗೆ ವಾರ್ಷಿಕ ನಿರ್ವಹಣೆ 10) a) ಹೊಳಲ್ಕೆರೆ ತಾ. ಎನ್.ಹೆಚ್-13ರಿಂದ ಹೊಸದುರ್ಗ ತಾ. ಗಡಿ ರಸ್ತೆ ಕೀ.ಮಿ 0.00 ರಿಂದ 13.00 ರವರೆಗೆ ವಾರ್ಷಿಕ ನಿರ್ವಹಣೆ b) ಹೊಳಲ್ಕೆರೆ ರಾಷ್ಟ್ರೀಯ ಹೆದ್ದಾರಿ-369 ರಿಂದ ಚಿಕ್ಕಜಾಜೂರು ಮಾರ್ಗ ಚೀರನಹಳ್ಳಿ, ಕಂಬದೇವರಹಟ್ಟಿ, ಅರೇನಹಳ್ಳಿ, ದಾಸರಹಳ್ಳಿ, ಮೇಕೆನಹಟ್ಟಿ, ಅಪ್ಪರಸನಹಳ್ಳಿ, ಚನ್ನಪಟ್ಟಣ ಸೇರುವ ಗ್ರಾಮೀಣ ರಸ್ತೆ ಕಿ.ಮೀ 0.00 ರಿಂದ 2.54 ಮತ್ತು ಕಿ.ಮೀ 3.03 ರಿಂದ 20.00ರವರೆಗೆ ವಾರ್ಷಿಕ ನಿರ್ವಹಣೆ 11) ಹೊಳಲ್ಕೆರೆ ತಾ. ರಾಜ್ಯ ಹೆದ್ದಾರಿ-47ರ ಹೊಳಲ್ಕೆರೆ ಪಟ್ಟಣದಿಂದ ಹನುಮಲಿ ರಸ್ತೆ ಮಾರ್ಗ ಆವಳಿಹಟ್ಟಿ, ಮಾಳೇನಹಳ್ಳಿ, ನುಲೇನೂರು, ರಂಗಾಪುರ, ರಸ್ತೆ ಕಿ.ಮೀ 0.00 ರಿಂದ 6.10, ಕಿ.ಮೀ 6.35 ರಿಂದ 10.00, ಕಿ.ಮೀ 11.90 ರಿಂದ 13.52, ಮತ್ತು ಕಿ.ಮೀ 14.50 ರಿಂದ 14.90ರವರೆಗೆ ವಾರ್ಷಿಕ ನಿರ್ವಹಣೆ. (WI-156407)/2nd call ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):- **81.00**
ಇ- ಪ್ರೊಕ್ಯೂರ್‌ಮೆಂಟ್ ಮೂಲಕ- ಏಕ ಲಕೋಟೆ ಪದ್ಧತಿ:- ಪರಿಶಿಷ್ಟ ಜಾತಿಗೆ ಮೀಸಲು:- ಲೆಕ್ಕ ಶೀರ್ಷಿಕೆ: 3054-03-337-0-05-200 ರಾಜ್ಯ ಹೆದ್ದಾರಿ ನಿರ್ವಹಣೆ:- (2) ಹೊಳಲ್ಕೆರೆ ತಾಲ್ಲೂಕು ಎ) ರಾಜ್ಯ ಹೆದ್ದಾರಿ-48ರ ವಿಶ್ವನಾಥನಹಳ್ಳಿಯಿಂದ ಶಿರಾ ಗಡಿ ವಯಾ ಚಿಕ್ಕಜಾಜೂರು, ಚಿತ್ರಹಳ್ಳಿ, ಹೆಚ್.ಡಿ ಪುರ, ಮಾಡದಕೆರೆ, ಭರಮಗಿರಿ, ದೊಡ್ಡಗಟ್ಟ, ಆದಿವಾಲ ರಂಗನಾಥಪುರ ಕಿ.ಮೀ 0.00 ರಿಂದ 49.10 ರವರೆಗೆ ವಾರ್ಷಿಕ ನಿರ್ವಹಣೆ. (ವ.ಇಂ. 155604)/2ನೇ ಕರೆ. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):- **28.00**
ಕ್ರ.ಸಂ. 1 ಕಾಮಗಾರಿ ಟೆಂಡರ್ ದಿನಾಂಕಗಳು ಈ ಕೆಳಕಂಡಂತಿವೆ. (1) ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ 06-10-2022 ಸಮಯ 17-30 (2) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ 07-10-2022 ಸಮಯ 16-00 (3)ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ 10-10-2022 ಸಮಯ 16-01 (4)ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ 12-10-2022 ಸಮಯ 11-00 **ಕ್ರ.ಸಂ. 2 ಕಾಮಗಾರಿ ಟೆಂಡರ್ ದಿನಾಂಕಗಳು ಈ ಕೆಳಕಂಡಂತಿವೆ:-** (1) ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ 06-10-2022 ಸಮಯ 17-30 (2) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ 07-10-2022 ಸಮಯ 16-00 (3) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ 10-10-2022 ಸಮಯ 16-01 ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ ಸಂಖ್ಯೆ 08194 222446) ಹಾಗೂ ಹೆಚ್.ಪಿ. ಕಂಪನಿಯ ಸಹಾಯಕ ದೂರವಾಣಿ ಸಂಖ್ಯೆ 080 25501216 ಮತ್ತು 080 25501227 ರಿಂದ ಮಾಹಿತಿ ಪಡೆಯಬಹುದು.

DIPR/CTA/MCA/566/2022-23
ಸಹಿ/– ಕಾರ್ಯಪಾಲಕ ಅಭಿಯಂತರರು, ಪಿ.ಡಬ್ಲ್ಯೂ.ಡಿ, ಚಿತ್ರದುರ್ಗ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಚಿರಸ್ಮರಣೆ

ಎಂ.ಎಸ್. ಸಂದೀಪ್, ಎಂ.ಎಸ್.
ಜನನ : 06-12-1981
ಮರಣ : 29-09-2007

ನೀನು ನಮ್ಮ ಬದುಕಿನ
ದಿವ್ಯಜ್ಯೋತಿ
ನಿನ್ನ ನುಡಿ ಮಧುರ
ನಿನ್ನ ನೆನಪು ಅಮರ

ಸದಾ ನಿನ್ನ ನೆನಪಿನಲ್ಲಿ
ಉಷಾ ಮತ್ತು ಎಂ.ಕೆ. ಶಂಕರಲಿಂಗೇಗೌಡ, ಐಎಎಸ್(ನಿ)
ಇಮೇಲ್: mssundeeptrust@gmail.com

SAD DEMISE



Our dearest beloved
A L RAMACHANDRA RAO
left for his heavenly abode on
Sunday, 25.09.2022

DEEPLY MOURNED BY:
Shantha Rao(Wife), Mahesh(Son),
Amaresh(Son), Sahana(Daughter)
and their families

Condolence on :
shrichakra.01@gmail.com

11ನೇ ವರ್ಷದ ಸ್ಮರಣೆ

ಹೆಚ್. ಕಮಲಾನಾಥ್
07.08.1925 ರಿಂದ 29.09.2011
ಸ್ಟ್ಯಾಂಡರ್ಡ್ ಬುಕ್ ಕಂಪನಿ
ಸ್ಟ್ಯಾಂಡರ್ಡ್ ಪ್ರೆಸ್
ಮಾಜಿ ಅಧ್ಯಕ್ಷರು
ಬೆಂಗಳೂರು ಗಾಯನ ಸಮಾಜ
ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘ
ಕರ್ನಾಟಕ ಪ್ರಕಾಶಕರ ಮತ್ತು
ಪುಸ್ತಕ ವ್ಯಾಪಾರಿಗಳ ಸಂಘ
ಇಂತಿ ದುಃಖತಪ್ತ ಕುಟುಂಬವರ್ಗ

LOOKING FOR JOB OPPORTUNITY
Refer Classifieds on Wednesday

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,007
ಇಂದಿನ ಅಂತ್ಯ	16,858
▼	149
ದಿನದ ಕನಿಷ್ಠ	16,820

ವಿನಿಮಯ ದರ

$ ಡಾಲರ್	81.93
£ ಪೌಂಡ್	87.53
€ ಯುರೊ	78.22
¥ ಯೆನ್ (100ಕ್ಕೆ)	57

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹440
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹442

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1615 (1620)
ಸೋಯಾ (ರಿಫೈನ್ಡ್)	₹1140 (1150)
ಸೂರ್ಯಕಾಂತಿ (ರಿಫೈನ್ಡ್)	₹1300 (1300)
ಪಾಮೋಲಿನ್	₹860 (880)

ಐದು ವರ್ಷಗಳಲ್ಲಿ ಶೇ 40ಕ್ಕೂ ಅಧಿಕ ಮಾರುಕಟ್ಟೆ ಪಾಲು: ಡಬ್ಲ್ಯುಜಿಸಿ ಮಾಹಿತಿ

ಚಿನ್ನಾಭರಣ: ಕಂಪನಿಗಳ ಬೆಳವಣಿಗೆಗೆ ವೇಗ

• ವಿಶ್ವನಾಥ ಎಸ್.

ಚಿನ್ನಾಭರಣ ಮಾರುಕಟ್ಟೆಯ ನೋಟ

1.3% ದೇಶಿ ಚಿನ್ನ ಉದ್ಯಮವು ಜಿಡಿಪಿಗೆ ನೀಡುತ್ತಿರುವ ಕೊಡುಗೆ

15-20% ತಯಾರಿಕೆಯಲ್ಲಿ ಸಂಘಟಿತ ವಲಯದ ಪಾಲು

71% ಇಪಿಎಫ್ ತರಹದ ಸಾಮಾಜಿಕ ಸುರಕ್ಷತಾ ಸೌಲಭ್ಯಗಳು ಇಲ್ಲದ ಕೆಲಸಗಾರರ ಪ್ರಮಾಣ

₹15,000-16,000 ಚಿನ್ನಾಭರಣ ತಯಾರಿಸುವ ಕಾರ್ಮಿಕರ ತಿಂಗಳ ಗಳಿಕೆ

ಮಾಹಿತಿ: ಡಬ್ಲ್ಯುಜಿಸಿ

ಮಾರುಕಟ್ಟೆ ಪಾಲು (%)



ಬೆಂಗಳೂರು: ದೇಶದ ಚಿನ್ನಾಭರಣಗಳ ರಿಟೇಲ್ ಮಾರುಕಟ್ಟೆಯಲ್ಲಿ ತನಿಷ್ಕ್, ಮಲಬಾರ್ ಗೋಲ್ಡ್‌ನಂತಹ (ರಿಟೇಲ್ ಚೇನ್) ಕಂಪನಿಗಳು ಉತ್ತಮ ಬೆಳವಣಿಗೆ ಕಾಣುತ್ತಿವೆ. 2021ರಲ್ಲಿ ಶೇಕಡ 35ರಷ್ಟು ಮಾರುಕಟ್ಟೆ ಪಾಲು ಹೊಂದಿದ್ದ ಇಂತಹ ರಿಟೇಲ್ ಚೇನ್ ಕಂಪನಿಗಳು ಇನ್ನು ಐದು ವರ್ಷಗಳಲ್ಲಿ ಶೇ 40ಕ್ಕಿಂತ ಹೆಚ್ಚಿನ ಪಾಲನ್ನು ಹೊಂದುವ ನಿರೀಕ್ಷೆ ಇದೆ.

ಮಾರುಕಟ್ಟೆಯ ಈಗಿನ ಬೆಳವಣಿಗೆಯನ್ನು ಗಮನಿಸಿದರೆ, ಪ್ರಮುಖ ಐದು ಕಂಪನಿಗಳು ಐದು ವರ್ಷಗಳಲ್ಲಿ 800ರಿಂದ 1 ಸಾವಿರ ಹೊಸ ಮಳಿಗೆಗಳನ್ನು ತೆರೆಯುವ ಸಾಧ್ಯತೆ ಇದೆ ಎಂದು ವಿಶ್ವ ಚಿನ್ನ ಸಮಿತಿಯ (ಡಬ್ಲ್ಯುಜಿಸಿ) ವರದಿ ಹೇಳಿದೆ.

‘ಚಿನ್ನಾಭರಣದ ರಿಟೇಲ್ ಮಾರುಕಟ್ಟೆಯು ಕಳೆದ ಒಂದು ದಶಕದಲ್ಲಿ ಗುರುತಿಸಬಹುದಾದ ಹಲವು ಬದಲಾವಣೆಗಳಿಗೆ ತೆರೆದುಕೊಂಡಿದೆ. ಗ್ರಾಹಕರ ಆಯ್ಕೆಗಳು ಮತ್ತು ಸರ್ಕಾರದ ನಿಯಂತ್ರಣ ಕ್ರಮಗಳಿಂದಾಗಿ ಉದ್ಯಮವು ಹೆಚ್ಚು ಸಂಘಟಿತವಾಗಿದೆ’ ಎಂದು ಡಬ್ಲ್ಯುಜಿಸಿ ಭಾರತದ ಪ್ರಾದೇಶಿಕ ಸಿಇಒ ಸೋಮಸುಂದರಂ ಪಿ.ಆರ್. ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

‘ಉತ್ತಮ ವಿನ್ಯಾಸ ಮತ್ತು ಗ್ರಾಹಕರ ಖರೀದಿ ಅನುಭವ ಸುಧಾರಿಸುವುದು, ಹಾಲ್‌ಮಾರ್ಕ್ ಬಗ್ಗೆ ಹೆಚ್ಚಾಗುತ್ತಿರುವ ಜಾಗೃತಿ ಹಾಗೂ ಸ್ಪರ್ಧಾತ್ಮಕ ಬೆಲೆಯಿಂದಾಗಿ ರಿಟೇಲ್ ಮಳಿಗೆಗಳು ಉತ್ತಮ ಬೆಳವಣಿಗೆ ಕಂಡಿವೆ. ಈ ಮಳಿಗೆಗಳಲ್ಲಿನ ಒಟ್ಟಾರೆ ಮಾರಾಟದಲ್ಲಿ ನಿತ್ಯ ಬಳಸುವ, ಸರ ಮತ್ತು ಉಂಗುರದಂತಹ ಚಿನ್ನದ ಆಭರಣಗಳ ಪಾಲು ಶೇ50–60ರಷ್ಟು ಇದೆ’ ಎಂದು ಅವರು ಮಾಹಿತಿ ನೀಡಿದ್ದಾರೆ.

ಆನ್‌ಲೈನ್ ಮಾರಾಟ ಹೆಚ್ಚಳ: ಆನ್‌ಲೈನ್ ಮೂಲಕ ಚಿನ್ನಾಭರಣ ಮಾರಾಟವು ಕೆಲವು ವರ್ಷಗಳಿಂದ ವೇಗವಾಗಿ ಬೆಳವಣಿಗೆ ಕಾಣುತ್ತಿದೆ. ಹೊಸ ತಲೆಮಾರಿನವರು (ಮಿಲೆನಿಯಲ್ಸ್) ಆನ್‌ಲೈನ್ ಮೂಲಕ ಚಿನ್ನ ಖರೀದಿಸಲು ಹೆಚ್ಚು ಆಸಕ್ತಿ ತೋರಿಸುತ್ತಿರುವುದೇ ಇದಕ್ಕೆ ಕಾರಣ ಎಂದು ವರದಿ ತಿಳಿಸಿದೆ.

18ರಿಂದ 45 ವರ್ಷ ವಯಸ್ಸಿನವರು ಹೆಚ್ಚಿನ ಪ್ರಮಾಣದಲ್ಲಿ ಆನ್‌ಲೈನ್ ಮೂಲಕ ಖರೀದಿಸುತ್ತಿದ್ದಾರೆ. ಇವರು 5ರಿಂದ 10 ಗ್ರಾಂನಷ್ಟು ಚಿನ್ನಭರಣವನ್ನು ಖರೀದಿಸುತ್ತಿದ್ದಾರೆ.

ನಗದು ರೂಪದಲ್ಲೇ ಹೆಚ್ಚು ಖರೀದಿ: ದೇಶದಲ್ಲಿ ನಗದು ಪಾವತಿಸಿ ಚಿನ್ನ ಖರೀದಿಸುವ ಪ್ರವೃತ್ತಿಯೇ ಈಗಲೂ ಹೆಚ್ಚಿದೆ. ಚಿನ್ನಾಭರಣಗಳ ಮೌಲ್ಯದ ಆಧಾರದಲ್ಲಿ ಹೇಳುವುದಾದರೆ ಮಹಾನಗರಗಳು ಮತ್ತು ದೊಡ್ಡ ನಗರಗಳಲ್ಲಿ ನಗದು ಪಾವತಿಸಿ ಖರೀದಿಸುವ ಪ್ರಮಾಣ ಶೇ50–60ರಷ್ಟು, ಉಳಿದ ಕಡೆಗಳಲ್ಲಿ ಶೇ 70–80ರಷ್ಟು ಇದೆ.

ಸೂರ್ಯಕಾಂತಿ ಎಣ್ಣೆ ಬೆಲೆ ಇಳಿಕೆ

ಮುಂಬೈ (ರಾಯಿಟರ್ಸ್): ಕಪ್ಪು ಸಮುದ್ರದ ಮಾರ್ಗವಾಗಿ ಉಕ್ರೇನ್ ಸೂರ್ಯಕಾಂತಿ ಎಣ್ಣೆಯ ರಫ್ತನ್ನು ಆಗಸ್ಟ್‌ನಿಂದ ಶುರು ಮಾಡಿರುವ ಪರಿಣಾಮವಾಗಿ ಈ ಅಡುಗೆ ಎಣ್ಣೆಯ ಬೆಲೆಯಲ್ಲಿ ಇಳಿಕೆ ಆಗಿದೆ.

ಏಪ್ರಿಲ್‌ನಲ್ಲಿ ಸೂರ್ಯಕಾಂತಿ ಎಣ್ಣೆಯ ಬೆಲೆ ಗರಿಷ್ಠ ಮಟ್ಟ ತಲುಪಿತ್ತು. ಆ ಮಟ್ಟಕ್ಕೆ ಹೋಲಿಸಿದರೆ ಈಗ ಬೆಲೆಯು ಸರಿಸುಮಾರು ಅರ್ಧದಷ್ಟು ಕಡಿಮೆ ಆಗಿದೆ.

‘ಸೂರ್ಯಕಾಂತಿ ಎಣ್ಣೆಯನ್ನು ಸಾಧ್ಯವಾದಷ್ಟು ಬೇಗ ರಫ್ತು ಮಾಡಲು ಉಕ್ರೇನಿನ ಪೂರೈಕೆದಾರರು ಯತ್ನಿಸುತ್ತಿದ್ದಾರೆ. ಅಲ್ಲದೆ, ಸೂರ್ಯಕಾಂತಿ ಬೀಜದಿಂದ ಆಗಬೇಕಿರುವ ಎಣ್ಣೆ ಉತ್ಪಾದನೆ ದೊಡ್ಡ ಪ್ರಮಾಣದಲ್ಲಿ ಬಾಕಿ ಇದೆ’ ಎಂದು ಮುಂಬೈ ಮೂಲದ ವರ್ತಕರೊಬ್ಬರು ತಿಳಿಸಿದ್ದಾರೆ.

ಲೋಹ, ಬ್ಯಾಂಕಿಂಗ್ ವಲಯದ ಷೇರುಗಳಲ್ಲಿ ಮಾರಾಟದ ಒತ್ತಡ

57 ಸಾವಿರಕ್ಕಿಂತ ಕೆಳಕ್ಕೆ ಇಳಿದ ಸೆನ್ಸೆಕ್ಸ್

ಮುಖ್ಯಾಂಶಗಳು
- ಆರೋಗ್ಯ ಸೇವೆ, ಐ.ಟಿ ಮತ್ತು ತಂತ್ರಜ್ಞಾನ ಷೇರುಗಳ ಗಳಿಕೆ
- ಬಿಎಸ್ ಮಿಡ್‌ಕ್ಯಾಪ್ ಶೇ 0.47ರಷ್ಟು ಇಳಿಕೆ

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳಲ್ಲಿ ಸತತ ಆರನೇ ದಿನವೂ ನಕಾರಾತ್ಮಕ ವಹಿವಾಟು ನಡೆಯಿತು. ಲೋಹ, ಬ್ಯಾಂಕಿಂಗ್ ಮತ್ತು ಹಣಕಾಸು ವಲಯದ ಷೇರುಗಳು ಅತಿಯಾದ ಮಾರಾಟದ ಒತ್ತಡಕ್ಕೆ ಒಳಗಾದವು. ಇದರಿಂದಾಗಿ ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 509 ಅಂಶ ಕುಸಿದು 57 ಸಾವಿರಕ್ಕಿಂತ ಕೆಳಮಟ್ಟದಲ್ಲಿ ವಹಿವಾಟು ಅಂತ್ಯಗೊಳಿಸಿತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 149 ಅಂಶ ಇಳಿಕೆ ಕಂಡಿತು. ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಇಳಿಕೆ ಮತ್ತು ವಿದೇಶಿ ಬಂಡವಾಳ ಹೊರಹರಿವು ಷೇರುಪೇಟೆಯ ಮೇಲೆ ಇನ್ನಷ್ಟು ಪ್ರತಿಕೂಲ ಪರಿಣಾಮ ಬೀರಿದವು ಎಂದು ವರ್ತಕರು ಹೇಳಿದ್ದಾರೆ. ಸೆನ್ಸೆಕ್ಸ್‌ನಲ್ಲಿ ಐಟಿಸಿ ಕಂಪನಿ ಷೇರು ಮೌಲ್ಯ ಶೇ 2.97ರಷ್ಟು ಗರಿಷ್ಠ ಇಳಿಕೆ ಕಂಡಿತು.

‘ಜಾಗತಿಕ ಮಾರುಕಟ್ಟೆಗಳ ಇಳಿಮುಖ ಚಲನೆಯ ಪ್ರಭಾವಕ್ಕೆ ಒಳಗಾಗಿ ದೇಶಿ ಷೇರುಪೇಟೆಗಳು ಇಳಿಕೆ ಕಂಡವು. ವಿಶ್ವ ಆರ್ಥಿಕ ಹಿಂಜರಿತದ ಭೀತಿ ಹೆಚ್ಚಾಗಿರುವುದರಿಂದ ಹೂಡಿಕೆ ಚಟುವಟಿಕೆ ತಗ್ಗಿದೆ. ಇದರಿಂದಾಗಿ ಜಾಗತಿಕ ಮಟ್ಟದಲ್ಲಿ ಎಲ್ಲಾ ಮಾರುಕಟ್ಟೆಗಳೂ ತೀವ್ರ ಏರಿಳಿತ ಕಾಣುತ್ತಿವೆ’ ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವೀಸಸ್‌ನ ರಿಟೇಲ್ ವಿಭಾಗದ ಮುಖ್ಯಸ್ಥ ಸಿದ್ಧಾರ್ಥ ಖೇಮ್ಕ ಹೇಳಿದ್ದಾರೆ.

‘ದೇಶದಲ್ಲಿ ವಿದೇಶಿ ಸಾಂಸ್ಥಿಕ ಬಂಡವಾಳ (ಎಫ್‌ಐಐ) ಹೊರಹರಿವು ಹೆಚ್ಚಾಗಿರುವುದು ಹಾಗೂ ಸೆಪ್ಟೆಂಬರ್ ತಿಂಗಳ ವಾಯಿದಾ ವಹಿವಾಟು ಗುರುವಾರ ಮುಕ್ತಾಯ ಆಗುವುದು ಸಹ ವಹಿವಾಟಿನ ಮೇಲೆ ಪರಿಣಾಮ ಬೀರಿದವು’ ಎಂದೂ ಅವರು ತಿಳಿಸಿದ್ದಾರೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರ ಶೇ 0.08ರಷ್ಟು ಇಳಿಕೆ ಕಂಡು ಒಂದು ಬ್ಯಾರಲ್‌ಗೆ 86.20 ಡಾಲರ್‌ಗೆ ತಲುಪಿತು.

₹ 82ಕ್ಕೆ ಕುಸಿದಿದ್ದ ರೂಪಾಯಿ

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಬುಧವಾರ ಒಂದು ಹಂತದಲ್ಲಿ ₹ 82.02ಕ್ಕೆ ಕುಸಿತ ಕಂಡಿತ್ತು. ನಂತರ ತುಸು ಚೇತರಿಕೆ ಕಂಡು ಅಂತಿಮವಾಗಿ 40 ಪೈಸೆ ಇಳಿಕೆಯೊಂದಿಗೆ ಒಂದು ಡಾಲರ್‌ಗೆ ₹ 81.93ರಂತೆ ವಿನಿಮಯಗೊಂಡಿತು. ಇದು ಸಹ ಸಾರ್ವಕಾಲಿಕ ಕನಿಷ್ಠ ಮಟ್ಟವಾಗಿದೆ.

ರಾಜೇಂದ್ರಕುಮಾರ್ ಸೇರಿ ಮೂವರಿಗೆ ಚೌಡಯ್ಯ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಮಂಡ್ಯ: ರಾಜ್ಯ ಸಹಕಾರ ಮಾರಾಟ ಮಹಾಮಂಡಳ, ದಕ್ಷಿಣ ಕನ್ನಡ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಅಧ್ಯಕ್ಷ ಡಾ.ಎಂ.ಎನ್.ರಾಜೇಂದ್ರಕುಮಾರ್ ಅವರಿಗೆ ನಗರದಲ್ಲಿ ಬುಧವಾರ 2022ನೇ ಸಾಲಿನ ಡಾ.ಎಚ್.ಡಿ.ಚೌಡಯ್ಯ ಸಹಕಾರ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

ಜನತಾ ಶಿಕ್ಷಣ ಟ್ರಸ್ಟ್ ಸಹಯೋಗದಲ್ಲಿ ಆಯೋಜಿಸಿದ್ದ ಡಾ.ಎಚ್.ಡಿ.ಚೌಡಯ್ಯ ಅವರ 95ನೇ ಜನ್ಮದಿನದ ಪ್ರಯುಕ್ತ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಅವರೊಂದಿಗೆ, ಎಸ್.ಬಿ.ಎಜುಕೇಷನ್ ಟ್ರಸ್ಟ್ ಕಾರ್ಯದರ್ಶಿ ಮೀರಾ ಶಿವಲಿಂಗಯ್ಯ ಅವರಿಗೆ ಸಮಾಜ ಸೇವಾ ಪ್ರಶಸ್ತಿ ಹಾಗೂ ಗೊರವನಹಳ್ಳಿ ಗ್ರಾಮ ಪಂಚಾಯಿತಿಗೆ ಗ್ರಾಮೀಣಾಭಿವೃದ್ಧಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಮಂಡ್ಯದ ಜನತಾ ಶಿಕ್ಷಣ ಟ್ರಸ್ಟ್ ಪ್ಲೇಸ್‌ಮೆಂಟ್ ಸಭಾಂಗಣದಲ್ಲಿ ಬುಧವಾರ ನಡೆದ ಸಮಾರಂಭದಲ್ಲಿ ಮದ್ದೂರು ತಾಲ್ಲೂಕು, ಗೊರವನಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಜಿ.ಬಿ.ಶಂಕರೇಗೌಡ ಅವರಿಗೆ ಎಚ್‌.ಡಿ.ಚೌಡಯ್ಯ ಗ್ರಾಮೀಣಾಭಿವೃದ್ಧಿ ಪ್ರಶಸ್ತಿ, ರಾಜ್ಯ ಸಹಕಾರ ಮಾರಾಟ ಮಹಾಮಂಡಲ ಅಧ್ಯಕ್ಷ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಅಧ್ಯಕ್ಷ ಡಾ.ಎಂ.ಎನ್‌ ರಾಜೇಂದ್ರಕುಮಾರ್ ಅವರಿಗೆ ಎಚ್‌.ಡಿ.ಚೌಡಯ್ಯ ಸಹಕಾರ ಪ್ರಶಸ್ತಿ, ಮಂಡ್ಯದ ಎಸ್‌.ಬಿ.ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಮೀರಾ ಶಿವಲಿಂಗಯ್ಯ ಅವರಿಗೆ ಸಮಾಜಸೇವಾ ಪ್ರಶಸ್ತಿ ಪ್ರದಾನ ಮಾಡಲಾಯಿತು. ಡಾ.ಎಚ್‌.ಎಲ್‌.ನಾಗರಾಜ್, ವಿಜಯ್ ಆನಂದ್, ವಿ.ಡಿ.ಸುವರ್ಣಾ, ರಾಮಲಿಂಗಯ್ಯ ಇದ್ದರು

17 ಸಾವಿರ ಟನ್ ಅಡಿಕೆ ಆಮದಿಗೆ ಅನುಮತಿ

ನವದೆಹಲಿ (ಪಿಟಿಐ): ಭೂತಾನ್ ದೇಶದಿಂದ ಪ್ರತಿ ವರ್ಷ 17 ಸಾವಿರ ಟನ್ ಹಸಿ ಅಡಿಕೆಯನ್ನು ಆಮದು ಮಾಡಿಕೊಳ್ಳಲು ಕೇಂದ್ರ ಸರ್ಕಾರ ಬುಧವಾರ ಅವಕಾಶ ಕಲ್ಪಿಸಿದೆ. ಕನಿಷ್ಠ ಆಮದು ಬೆಲೆಯ (ಎಂಐಪಿ) ಷರತ್ತು ಇಲ್ಲದೆ ಇಷ್ಟು ಅಡಿಕೆಯನ್ನು ಆಮದು ಮಾಡಿಕೊಳ್ಳಬಹುದು.

ದೇಶದ ಕೃಷಿಕರ ಹಿತ ಕಾಯುವ ಉದ್ದೇಶದಿಂದ ಕೇಂದ್ರವು 2017ರಲ್ಲಿ ಕನಿಷ್ಠ ಆಮದು ಬೆಲೆಯು ಕೆ.ಜಿ.ಗೆ ₹ 251 ಇರಬೇಕು ಎಂಬ ಷರತ್ತು ವಿಧಿಸಿತ್ತು. ಈ ಬೆಲೆಗಿಂತ ಕಡಿಮೆಗೆ ಆಮದು ಮಾಡಿಕೊಳ್ಳಲು ಅವಕಾಶವಿರಲಿಲ್ಲ. ಆದರೆ ಈಗ ಪ್ರತಿ ವರ್ಷ 17 ಸಾವಿರ ಟನ್‌ನಷ್ಟು ಅಡಿಕೆಯನ್ನು ಈ ಷರತ್ತು ಇಲ್ಲದೆ ಆಮದು ಮಾಡಿಕೊಳ್ಳಲು ಅವಕಾಶ ನೀಡಲಾಗಿದೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ 8,500 ಟನ್ ಹಸಿ ಅಡಿಕೆಯನ್ನು ಎಂಐಪಿ ಷರತ್ತು ಇಲ್ಲದೆ ಆಮದು ಮಾಡಿಕೊಳ್ಳಬಹುದು. 2023–24ರಲ್ಲಿ 17 ಸಾವಿರ ಟನ್ ಹಸಿ ಅಡಿಕೆ ಆಮದು ಮಾಡಿಕೊಳ್ಳಬಹುದು.

ಟಿಯಾಗೊ ಇವಿ ಅನಾವರಣ

ಮುಂಬೈ (ಪಿಟಿಐ): ಪ್ರಸಕ್ತ ದಶಕದ ಅಂತ್ಯದ ಹೊತ್ತಿಗೆ ತಾನು ಮಾರಾಟ ಮಾಡುವ ವಾಹನಗಳ ಪೈಕಿ ಶೇಕಡ 30ರಷ್ಟು ವಾಹನಗಳು ವಿದ್ಯುತ್ ಚಾಲಿತ (ಇ.ವಿ.) ಆಗಿರಲಿವೆ ಎಂದು ಟಾಟಾ ಮೋಟರ್ಸ್ ಕಂಪನಿ ಅಂದಾಜು ಮಾಡಿದೆ.

ಹೊಸ ಇ.ವಿ. ಮಾದರಿಗಳನ್ನು ಮಾರುಕಟ್ಟೆಗೆ ತರುವುದರ ಜೊತೆಯಲ್ಲಿಯೇ ಕಂಪನಿಯು ಸಾಂಪ್ರದಾಯಿಕ ಇಂಧನ ಬಳಸುವ ವಾಹನಗಳ ಮೇಲೆಯೂ ಹೂಡಿಕೆ ಮುಂದುವರಿಸಲಿದೆ. ಇಂತಹ ವಾಹನಗಳಿಗೆ 2030ರ ನಂತರವೂ ಒಳ್ಳೆಯ ಬೇಡಿಕೆ ಇರಲಿದೆ ಎಂದು ಅದು ಅಂದಾಜಿಸಿದೆ.

ಟಿಯಾಗೊ ಇವಿ –ಪಿಟಿಐ ಚಿತ್ರ

ಟಾಟಾ ಮೋಟರ್ಸ್ ಕಂಪನಿಯು ಬುಧವಾರ ‘ಟಿಯಾಗೊ ಇವಿ’ಯನ್ನು ಅನಾವರಣ ಮಾಡಿದೆ. ಮೊದಲ ಹತ್ತು ಸಾವಿರ ಗ್ರಾಹಕರಿಗೆ ಇದರ ಪರಿಚಯಾತ್ಮಕ ಬೆಲೆ ₹ 8.49 ಲಕ್ಷದಿಂದ ₹ 11.79 ಲಕ್ಷದವರೆಗೆ (ಎಕ್ಸ್ ಷೋರೂಂ) ಇರಲಿದೆ. ನೆಕ್ಸಾನ್ ಇವಿ ಅಥವಾ ಟಿಗೋರ್ ಇವಿ ಕಾರನ್ನು ಈಗಾಗಲೇ ಹೊಂದಿರುವವರಿಗೆ 2,000 ‘ಟಿಯಾಗೊ ಇವಿ’ಗಳನ್ನು ಕಾಯ್ದಿರಿಸಲಾಗುತ್ತದೆ.

ಟಾಟಾ ಮೋಟರ್ಸ್ ಮಾರುಕಟ್ಟೆಗೆ ಬಿಡುಗಡೆ ಮಾಡಿರುವ ಇ.ವಿ.ಗಳ ಪೈಕಿ ಟಿಯಾಗೊ ಇವಿ ಅತ್ಯಂತ ಕಡಿಮೆ ಬೆಲೆಯದ್ದು. 25 ಕಿಲೊವಾಟ್ ಸಾಮರ್ಥ್ಯದ ಬ್ಯಾಟರಿ ಇರುವ ಟಿಯಾಗೊ ವಾಹನವು ಒಮ್ಮೆ ಪೂರ್ತಿಯಾಗಿ ಚಾರ್ಜ್ ಆದರೆ 315 ಕಿ.ಮೀ. ಸಾಗುತ್ತದೆ. 19.2 ಕಿಲೊವಾಟ್ ಸಾಮರ್ಥ್ಯದ ಬ್ಯಾಟರಿ ಇರುವ ಟಿಯಾಗೊ 250 ಕಿ.ಮೀ. ಸಾಗುತ್ತದೆ ಎಂದು ಕಂಪನಿಯ ಪ್ರಯಾಣಿಕ ವಾಹನ ವಿಭಾಗದ ನಿರ್ದೇಶಕ ಶೈಲೇಶ್ ಚಂದ್ರ ತಿಳಿಸಿದ್ದಾರೆ.

ಹೊಸ ವಾಹನದ ಬುಕಿಂಗ್ ಅಕ್ಟೋಬರ್ 10ರಿಂದ ಶುರುವಾಗಲಿದೆ. ಮುಂದಿನ ವರ್ಷದ ಜನವರಿಯಿಂದ ಕಾರನ್ನು ಗ್ರಾಹಕರಿಗೆ ಹಸ್ತಾಂತರಿಸುವ ಸಾಧ್ಯತೆ ಇದೆ.

ಚಿನ್ನ ₹ 435, ಬೆಳ್ಳಿ ₹ 1,600 ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಬುಧವಾರ ಚಿನ್ನದ ದರ ₹ 435ರಷ್ಟು ಇಳಿಕೆ ಕಂಡು 10 ಗ್ರಾಂಗೆ ₹ 49,282ರಂತೆ ಮಾರಾಟವಾಯಿತು. ಬೆಳ್ಳಿ ಧಾರಣೆ ಕೆ.ಜಿ.ಗೆ ₹ 1,600ರಷ್ಟು ಇಳಿಕೆಯಾಗಿ ₹ 54,765ಕ್ಕೆ ತಲಪಿತು.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ದರ ಇಳಿಕೆ ಆಗಿರುವುದರಿಂದ ದೇಶಿ ಮಾರುಕಟ್ಟೆಯಲ್ಲಿಯೂ ದರ ಇಳಿಕೆ ಆಗಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹145.50
ಆರ್‌ಎಸ್‌ಎಸ್-5	₹135.50
ಗುಡ್ ಲಾಟ್	₹131.50

(ಪ್ರತಿ ಕೆ.ಜಿಗೆ)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1200-1600
ಮಧ್ಯಮ	₹800-1200
ಸಣ್ಣ	₹400-800

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ

ಬಂಟ್ವಾಳ	
ಕೋಕ	12500-25000
ಹೊಸತು	27500-47500
ಹಳತು	46000-56000
ಕೊಪ್ಪ	
ಬೆಟ್ಟೆ	47899-53899
ಗೊರಬಲು	32199-38155
ರಾಶಿ	42119-51099
ಸರಕು	45099-78619
ಕುಮಟ	
ಚಿಪ್ಪು	28019-33109
ಕೋಕ	16509-30099
ಫ್ಯಾಕ್ಟರಿ	12509-21929
ಹೊಸಚಾಲಿ	38609-42399
ಹಳೆಚಾಲಿ	45599-46299
ಪುತ್ತೂರು	
ಕೋಕ	11000-26000
ಹೊಸತು	34500-47500
ಶಿವಮೊಗ್ಗ	
ಬೆಟ್ಟೆ	52409-54109
ಗೊಬರಲು	17050-37699
ರಾಶಿ	47539-50599
ಸರಕು	57520-79999
ಸಿದ್ದಾಪುರ	
ಬಿಳಿಗೋಟು	28889-33899
ಚಾಲಿ	37399-41509
ಕೋಕ	27119-32112
ಕೆಂಪುಗೋಟು	26919-35609
ರಾಶಿ	48719-49519
ತಟ್ಟಿಬೆಟ್ಟೆ	39209-44109
ಶಿರಸಿ	
ಬೆಟ್ಟೆ	26366-47669
ಬಿಳಿಗೋಟು	8099-37999
ಚಾಲಿ	39109-43513
ಕೆಂಪುಗೋಟು	28119-33731
ರಾಶಿ	45119-49969

ಮೂಡಿಗೆರೆ ಕಾಫಿ (50 ಕೆ.ಜಿಗೆ)

	ಮುದ್ರಮನೆ
ಎಪಿ	16200
ಎಸಿ	9100
ಆರ್‌ಪಿ	9800
ಆರ್‌ಸಿ	4800

ಮುಂಬೈ ಧಾರಣೆ

ಶೇಂಗಾ

28–9–2022

ಜಾವಾ 70/80(ಹೊಸ)	11700-11750
ಜಾವಾ 80/90(ಹೊಸ)	10700-10750
ದಪ್ಪ ಮಧ್ಯಪ್ರದೇಶ(ಹೊಸ)	10250-10300
ದಪ್ಪ ಗುಜರಾತ್(ಹೊಸ)	10850-10900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1625 (1630)
ಒಂದು ವಾರದ ಡೆಲಿವರಿ	1620 (1625)
ಸೋಯಾ ಕಚ್ಚಾ	1080 (1080)
ಪಾಮ್ ವಾರದ ಡೆಲಿವರಿ	858 (878)
ಸೂರ್ಯಕಾಂತಿ ಎಣ್ಣೆ ಕಚ್ಚಾ	1210 (1220)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
49,450 (49,250)
ಬೆಳ್ಳಿ ಕೆ.ಜಿ 54,550 (55,350)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್: ಒತ್ತಡ ಮುಕ್ತ ಚಾಲನೆ ಸಂಬಳ: 18000-20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

General

ಬೆಂಗಳೂರಿನ ಎಲ್ಲಾ ಭಾಗಗಳಲ್ಲಿ ಪಿಕ್ಕಿಂಗ್, ಪ್ಯಾಕಿಂಗ್,ಸ್ಕ್ಯಾನಿಂಗ್ ಕೆಲಸಗಳಿಗಾಗಿ ಯುವಕ,ಯುವತಿಯರು ಬೇಕಾಗಿದ್ದಾರೆ, ಆಯ್ದ ಭಾಗಗಳಲ್ಲಿ ಊಟ,ವಸತಿ ವಾಹನ ಸೌಲಭ್ಯವಿದೆ,15,000-19,000/-ಸಂಬಳ. 8123967566, 9036016848.

ಖಾಸಗಿ ಬ್ಯಾಂಕ್‌ಗಳಲ್ಲಿ ಕೆಲಸಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ SSLC, PUC, Degree ಸಂಬಳ15000 to 28000 ಸಂಪರ್ಕಿಸಿರಿ 9980814578, 9980812378

ಬೇಕಾಗಿದ್ದಾರೆ. FIELD Work ಗೆ ಪುರುಷ ಅಥವಾ ಮಹಿಳೆಯರು ಬೇಕಾಗಿದ್ದಾರೆ. ಸಂಪರ್ಕಿಸಿ: 9113022187, 9902417838, 7795228716.

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/- ರವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ & ವಯಸ್ಕರಿಗೆ. ಮನೆಯಲ್ಲಿಯೇ ಕುಳಿತು ನಾವು ಕೊಡುವ ಫಾರಂನಲ್ಲಿ ಅಂಕಿಗಳನ್ನು & ಅಕ್ಷರಗಳನ್ನು ತುಂಬುವ ಹಾಗೂ ಬುಕ್ ಬರೆಯುವ ಮೂಲಕ ತಿಂಗಳಿಗೆ 15000- 20000 ಗಳಿಸಿ. ಕರೆಮಾಡಿ: 9611225266/ 9611225388

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಕಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಮನೆಯಿಂದಲೇ ಕೆಲಸ: ಗೃಹಿಣಿಯರು, ವಿದ್ಯಾರ್ಥಿಗಳು,ನಿವೃತ್ತರು, ನೌಕರರು, ಡೇಟಾಎಂಟ್ರಿ, ಬುಕ್ ರೈಟಿಂಗ್, ಫಾರಂಫಿಲ್ಲಿಂಗ್,ತಿಂಗಳಿಗೆ 15,000-18,000 ಗಳಿಸಿ. 9148801842, 8904455542.

ಭವಿಷ್ಯ

Astrology

ಒಂದೇ ಕರೆಯಲ್ಲಿ100% ಗ್ಯಾರಂಟಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ ಪಂಡಿತ್. ಕೃಷ್ಣಪ್ರಸಾದ್:ಉಚಿತಭವಿಷ್ಯ ಖಚಿತಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಹೊರನಾಡು: 9900510171

ಪ್ರವಾಸ

Travel

ಶ್ರೀಮಲ್ಲಿಕಾರ್ಜುನ ಟ್ರಾವೆಲ್ಸ್ ದಸರಾ ಹಾಗೂ ದೀಪಾವಳಿ ವಿಶೇಷ ಪ್ರವಾಸ. 14.10.2022 8 ದಿನಗಳ ಶಿರಡಿ. 14.10.2022 6 ದಿನಗಳ ದಕ್ಷಿಣಕನ್ನಡ. 27.10.2022 4 ದಿನಗಳ ಗೋವಾ ದುಧ್‌ಸಾಗರ್. 30.10.2022 13 ದಿನಗಳ ಕಾಶಿ,ಮುಕ್ತಿನಾಥ. 09.11.2022 9ದಿನಗಳ ಅಖಂಡ ಗುಜರಾತ್ 06.11.2022 4ದಿನಗಳ ರಾಮೇಶ್ವರಂ ಕನ್ಯಾಕುಮಾರಿ 14.11.2022 12 ದಿನಗಳ ಅಸ್ಸಾಂ ಅರುಣಾಚಲಪ್ರದೇಶ 27.10.2022 ದೆಹಲಿ,ಆಗ್ರಾ ವೈಷ್ಣವಿದೇವಿ 30.10.2022 ದೆಹಲಿ ಕುಲುಮನಾಲಿ 9880847001 9342848791

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್. 3.11.2022, ಕಾಶಿ, ಗಯಾ, ಬುದ್ಧಗಯಾ, ಪ್ರಯಾಗ್‌ರಾಜ್, ಅಯೋಧ್ಯ, 14.11.2022, ಗುಜರಾತ್- ನಾಗನಾಥ್- ಸೋಮನಾಥ- ದ್ವಾರಕಾ. 9591017782, 9964527782

EDUCATION CORNER

ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ಕಂಪ್ಯೂಟರ್ ತರಬೇತಿ ಕೇಂದ್ರಗಳಿಗೆ ಅರ್ಜಿ ಆಹ್ವಾನ
ಸರಕಾರದ ಅಂಗೀಕೃತ ಕಂಪ್ಯೂಟರ್, ವಿವಿಧ ಕೋರ್ಸುಗಳನ್ನು ನಡೆಸಲು ಸುವರ್ಣಾಕಾಶ
ಶಾಲೆ ಕಾಲೇಜುಗಳಲ್ಲಿ ಖಾತರಿ ಉದ್ಯೋಗ ಕಲ್ಪಿಸುವ 1 ವರುಷದ
ಡಿಪ್ಲೋಮಾ ಇನ್ ಕಂಪ್ಯೂಟರ್ ಟೀಚರ್ಸ್ ಟ್ರೈನಿಂಗ್ ಕೋರ್ಸು (DCTTC)
Nursery Teachers Training Course
Qual : PUC. ಈ ಕೋರ್ಸುಗಳಲ್ಲದೆ
Post Graduation Diploma in Information Technology
6 ತಿಂಗಳ DIT,DCA,DOA ಇತ್ಯಾದಿ ಕೋರ್ಸುಗಳು
ಸರಕಾರದ ವಿವಿಧ ಕೌಶಲ್ಯ ಯೋಜನೆಯ ಪಾಲುದಾರಿಕಾ ಸಂಸ್ಥೆ.
THE RcsS SPOKEN ENGLISH ACADEMY
ರಾಷ್ಟ್ರೀಯ ಕಂಪ್ಯೂಟರ್ ಸಾಕ್ಷರತಾ ಸಮಿತಿ
The RCSS
Sharing Computer Literacy with Govt. of India
Recognized by Govt. of Karnataka
Mob. 9008419955, 9901520055, 9449198555,
Email : info@thercss.com
Website : www.thercss.com

★ಶ್ರೇಯಸ್ ಟೂರ್ಸ್★ ಹಾರ್ನೋಬಿಲ್ ಫೆಸ್ಟಿವಲ್ ವಿಶೇಷ ಈಶಾನ್ಯರಾಜ್ಯಗಳ(ಸೆವೆನ್ ಸಿಸ್ಟರ್ಸ್)ಪ್ರವಾಸ 28.11.2022 12/15/21ದಿನಗಳು ಅಸ್ಸಾಂ ಮೇಘಾಲಯ,ಅರುಣಾಚಲ ನಾಗಲ್ಯಾಂಡ್,ಮಣಿಪುರ ಮಿಝೋರಾಂ,ತ್ರಿಪುರ. 24.11.2022,16.12.2022 10/21ದಿನಗಳು ತ್ರಿಪುರ ಮಿಝೋರಾಂ,ಮಣಿಪುರ ನಾಗಲ್ಯಾಂಡ್,ಅಸ್ಸಾಂ ಅರುಣಾಚಲ,ಮೇಘಾಲಯ. 8073824856 9206979202 6366322639

18.11.2022ರಿಂದ 8ದಿನಗಳ ವಿಮಾನ ಎಸಿ`ಬಸ್ಸು ಎಸಿ.ರೂಂ ನೊಂದಿಗೆ`ವಾರಾಣಸಿ, ನೈಮಿಷಾರಣ್ಯ,ಗಯಾ, ಅಲಹಾಬಾದ್,ಅಯೋಧ್ಯ, ರೂ.40000/`ಹಾಗೂ 15ದಿನಗಳ`ಅಷ್ಟಾಜ್ಯೋತಿರ್ಲಿಂಗ ಸಮೇತ`ದ್ವಾರಕಾ,ಪಟೇಲ್ ಪ್ರತಿಮೆ,ಶಿರಡಿ,ಪೋರಬಂದರ್. 58000/`ಏಷ್ಯನ್`ಟ್ರಾವೆಲ್ ಲೈನ್ಸ್.164/3`ಅರ್.ವಿ.ರಸ್ತೆ, ಬೆಂಗಳೂರು.ಸಂಪರ್ಕಿಸಿ: ಷಣ್ಮುಗಾನಂದ: 8105657052/ 26565085

3.11.2022ರಿಂದ ಎಸಿ.ಬಸ್ಸು ಎಸಿ.ರೂಂನೊಂದಿಗೆ ಪಂಚರಾಮ ಕ್ಷೇತ್ರ ಸಮೇತ`ಭದ್ರಾಚಲಂ, ಅನ್ನಾವರಂ,ಹೈದರಾಬಾದ್, ವಾಸವಿಪೆನ್ನಗೊಂಡ,ಅಹೋಬಲಂ. 39000/`ಹಾಗೂ 9ದಿನಗಳ ನವಗ್ರಹ ಸಮೇತ ಗುರುವಾಯೂರು,ಮದುರೈ, ರಾಮೇಶ್ವರ, ತ್ರಿವೇಂಡ್ರಮ್, ಕನ್ಯಾಕುಮಾರಿ 27000/`ಏಷ್ಯನ್ ಟ್ರಾವೆಲ್`ಲೈನ್ಸ್,164/3` ಅರ್.ವಿ.ರಸ್ತೆ.ಬೆಂಗಳೂರು. ಸಂಪರ್ಕಿಸಿ:`ಷಣ್ಮುಗಾನಂದ. 8105657052/ 26565085

ಮಾರುತಿ ಟ್ರಾವೆಲ್ಸ್. 1.10.2022 ತಮಿಳುನಾಡು 5 ದಿನಗಳು. 7.10.2022 ಕೇರಳ 5 ದಿನಗಳು. 14.10.2022 ಶಿರಡಿ 5 ದಿನಗಳು. 21.10.2022 ಆಂದ್ರ- ತೆಲಂಗಾಣ 5 ದಿನಗಳು. 30.10.2022 ಕಾಶಿಯಾತ್ರಾ 14 ದಿನಗಳು. 9916688569

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಹೆಸರು ಬದಲಾವಣೆಗಾಗಿ
BOOK YOUR NAME CHANGE AD IN PRAJAVANI ALL KARNATAKA ALL DAY
CHANGE OF NAME @ 50/-* Per Words
condition apply*
For More Details Contact:
9731810277 | 9901641752
9845114560 | 9886213331
080- 45557160 | 163 | 164

ಸಿಂಗ್–ಚಾಹರ್ ಸ್ವಿಂಗ್‌ಗೆ ಒಲಿದ ಜಯ

ಗ್ರೀನ್‌ಫೀಲ್ಡ್‌ನಲ್ಲಿ ಭಾರತದ ಬೌಲರ್‌ಗಳ ಮಿಂಚು; ರಾಹುಲ್, ಸೂರ್ಯ ಅಬ್ಬರದ ಅರ್ಧಶತಕ

ತಿರುವನಂತಪುರ (ಪಿಟಿಐ): ಎಡಗೈ ಮಧ್ಯಮವೇಗಿ ಅರ್ಷದೀಪ್ ಸಿಂಗ್ ಹಾಗೂ ದೀಪಕ್ ಚಾಹರ್ ಅವರ ಚುರುಕಿನ ದಾಳಿಯಿಂದಾಗಿ ಭಾರತ ಕ್ರಿಕೆಟ್ ತಂಡವು ಬುಧವಾರ ಇಲ್ಲಿ ನಡೆದ ದಕ್ಷಿಣ ಆಫ್ರಿಕಾ ಎದುರಿನ ಮೊದಲ ಟಿ20 ಪಂದ್ಯದಲ್ಲಿ ಜಯಭೇರಿ ಬಾರಿಸಿತು.

ಗ್ರೀನ್‌ಫೀಲ್ಡ್ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ಬುಧವಾರ ಟಾಸ್ ಗೆದ್ದ ಭಾರತ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ನಾಯಕ ರೋಹಿತ್ ಶರ್ಮಾ ಅವರ ಈ ನಿರ್ಧಾರಕ್ಕೆ ನಿರೀಕ್ಷೆಗೂ ಮೀರಿದ ಫಲ ದಕ್ಕಿತು. ಅರ್ಷದೀಪ್ (32ಕ್ಕೆ3) ದೀಪಕ್ (24ಕ್ಕೆ2) ಅವರು ಆರಂಭದಲ್ಲಿಯೇ ಪೆಟ್ಟು ಕೊಟ್ಟರು.

ದಕ್ಷಿಣ ಆಫ್ರಿಕಾ ತಂಡವು ಮೊದಲ ಮೂರು ಓವರ್‌ಗಳು ಮುಗಿಯುವ ಮುನ್ನವೇ ಕೇವಲ ಒಂಬತ್ತು ರನ್‌ಗಳಿಗೆ ಐದು ವಿಕೆಟ್ ಕಳೆದುಕೊಂಡಿತು. ಇದರಿಂದಾಗಿ 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 106 ರನ್ ಗಳಿಸಿತು. ಈ ಸಣ್ಣ ಗುರಿಯನ್ನು ಬೆನ್ನಟ್ಟಿದ ಭಾರತ ತಂಡವು 16.4 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 110 ರನ್ ಗಳಿಸಿತು. ಎಂಟು ವಿಕೆಟ್‌ಗಳಿಂದ ಗೆದ್ದಿತು. ದಕ್ಷಿಣ ಆಫ್ರಿಕಾ ಬೌಲರ್‌ಗಳ ಪ್ರಯತ್ನಕ್ಕೆ ಕೆ.ಎಲ್.ರಾಹುಲ್ (ಅಜೇಯ 51) ಹಾಗೂ ಸೂರ್ಯಕುಮಾರ್ ಯಾದವ್ (ಅಜೇಯ 50) ಅಡ್ಡಿಯಾದರು. ತಂಡವು ಮೂರು ಪಂದ್ಯಗಳ ಸರಣಿಯಲ್ಲಿ 1-0 ಮುನ್ನಡೆ ಗಳಿಸಿತು.

ದೀಪಕ್-ಸಿಂಗ್ ಮಿಂಚು: ದಕ್ಷಿಣ ಆಫ್ರಿಕಾಕ್ಕೆ ಇನಿಂಗ್ಸ್‌ನ ಮೊದಲ ಓವರ್‌ನಲ್ಲಿ ದೀಪಕ್ ಪೆಟ್ಟುಕೊಟ್ಟರು. ಅವರ ಸ್ವಿಂಗ್‌ಗೆ ತೆಂಬಾ ಬವುಮಾ ಔಟಾದರು. ಎರಡನೇ ಓವರ್‌ನಲ್ಲಿ ಅರ್ಷದೀಪ್ ಎಸೆತಗಳಿಗೆ ಕ್ವಿಂಟನ್ ಡಿಕಾಕ್, ರಿಲಿ ರೊಸೊವ್ ಹಾಗೂ ಡೇವಿಡ್ ಮಿಲ್ಲರ್ ಪೆವಿಲಿಯನ್ ಸೇರಿದರು. ನಂತರದ ಓವರ್‌ನಲ್ಲಿಯೂ ದೀಪಕ್ ಮತ್ತೊಂದು ವಿಕೆಟ್ ಉರುಳಿಸಿದರು.

ಆದರೆ ತುಸು ಹೋರಾಟ ತೋರಿದ ಏಡನ್ ಮರ್ಕರಂ (25; 24ಎ), ವೇಯ್ನ್ ಪಾರ್ನೆಲ್ (24; 37ಎ) ಹಾಗೂ ಕೊನೆಯಲ್ಲಿ ಮಿಂಚಿನ ಆಟವಾಡಿದ ಕೇಶವ್ ಮಹಾರಾಜ (41) ಅವರಿಂದಾಗಿ ತಂಡವು ಅತ್ಯಲ್ಪ ಮೊತ್ತಕ್ಕೆ ಕುಸಿಯುವುದು ತಪ್ಪಿತು.

ಆಫ್‌ಸ್ಪಿನ್ನರ್ ಆರ್. ಅಶ್ವಿನ್ ಅವರಿಗೆ ವಿಕೆಟ್ ಲಭಿಸಲಿಲ್ಲ. ಆದರೆ, ನಾಲ್ಕು ಓವರ್‌ಗಳಲ್ಲಿ ಕೇವಲ ಎಂಟು ರನ್ ನೀಡಿದ ಅವರು ಒಂದು ಮೇಡನ್ ಕೂಡ ಮಾಡಿದರು. ಅಕ್ಷರ್ ಕೂಡ ಉತ್ತಮ ಬೌಲಿಂಗ್ ಮಾಡಿದರು.

ಜಸ್‌ಪ್ರೀತ್ ಬೂಮ್ರಾ ಗಾಯಗೊಂಡ ಕಾರಣ ವಿಶ್ರಾಂತಿ ಪಡೆದರು.



ವಿಕೆಟ್ ಗಳಿಸಿದ ಭಾರತದ ಅರ್ಷದೀಪ್ ಸಿಂಗ್ ಅವರನ್ನು ಅಭಿನಂದಿಸಿದ ಸಹ ಆಟಗಾರ –ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ದಕ್ಷಿಣ ಆಫ್ರಿಕಾ 8ಕ್ಕೆ106 (20 ಓವರ್)
ಡಿಕಾಕ್ ಬಿ ಅರ್ಷದೀಪ್ 1 (4ಎ), ಬವುಮಾ ಬಿ ದೀಪಕ್ 0 (4ಎ), ರೊಸೊವ್ ಸಿ ಪಂತ್ ಬಿ ಅರ್ಷದೀಪ್ 0 (1ಎ), ಮರ್ಕರಂ ಎಲ್‌ಬಿಡಬ್ಲ್ಯು ಬಿ ಹರ್ಷಲ್ 25 (24ಎ, 4X3,6X1), ಮಿಲ್ಲರ್ ಬಿ ಅರ್ಷದೀಪ್ 0 (1ಎ), ಸ್ಟಬ್ಸ್ ಸಿ ಅರ್ಷದೀಪ್ ಬಿ ದೀಪಕ್ 0 (1ಎ), ಪಾರ್ನೆಲ್ ಸಿ ಸೂರ್ಯಕುಮಾರ್ ಬಿ ಅಕ್ಷರ್ 24 (37ಎ, 4X1, 6X1), ಮಹಾರಾಜ ಬಿ ಹರ್ಷಲ್ 41 (35ಎ, 4X5, 6X2), ರಬಾಡ ಔಟಾಗದೆ 7 (11ಎ), ಎನ್ರಿಚ್ ಔಟಾಗದೆ 2 (2ಎ)
ಇತರೆ 6 (ವೈಡ್ 6)
ವಿಕೆಟ್ ಪತನ: 1-1 (ತೆಂಬಾ ಬವುಮಾ; 0.6), 2-1 (ಕ್ವಿಂಟನ್ ಡಿಕಾಕ್; 1.2), 3-8 (ರಿಲಿ ರೊಸೊವ್; 1.5), 4-8 (ಡೇವಿಡ್ ಮಿಲ್ಲರ್;1.6), 5-9 (ಟ್ರಿಸ್ಟನ್ ಸ್ಟಬ್ಸ್;2.3), 6-42 (ಏಡನ್ ಮರ್ಕರಂ;7.6), 7-68 (ವೇಯ್ನ್ ಪಾರ್ನೆಲ್; 15.5), 8-101 (ಕೇಶವ್ ಮಹಾರಾಜ; 19.1)
ಬೌಲಿಂಗ್: ದೀಪಕ್ ಚಾಹರ್ 4-0-24-2, ಅರ್ಷದೀಪ್ ಸಿಂಗ್ 4-0-32-3, ಆರ್. ಅಶ್ವಿನ್ 4-1-8-0, ಹರ್ಷಲ್ ಪಟೇಲ್ 4-0-26-2, ಅಕ್ಷರ್ ಪಟೇಲ್ 4-0-16-1

ಭಾರತ 2ಕ್ಕೆ110 (16.4 ಓವರ್)
ರಾಹುಲ್ ಅಜೇಯ 51 (56ಎ, 4X2, 6X4), ರೋಹಿತ್ ಸಿ ಡಿಕಾಕ್ ಬಿ ರಬಾಡ 0 (2ಎ), ವಿರಾಟ್ ಸಿ ಡಿಕಾಕ್ ಬಿ ಎನ್ರಿಚ್ 3 (9ಎ), ಸೂರ್ಯಕುಮಾರ್ ಅಜೇಯ 50 (33ಎ, 4X5, 6X3)
ಇತರೆ 6 (ವೈಡ್ 6)
ವಿಕೆಟ್ ಪತನ: 1-9 (ರೋಹಿತ್ ಶರ್ಮಾ; 2.2), 2-17 (ವಿರಾಟ್ ಕೊಹ್ಲಿ; 6.1)
ಬೌಲಿಂಗ್: ಕಗಿಸೊ ರಬಾಡ 4-1-16-1, ವೇಯ್ನ್ ಪಾರ್ನೆಲ್ 4-0-14-0, ಎನ್ರಿಚ್ ನಾಕಿಯಾ 3-0-32-1, ತಬ್ರೇಜ್ ಶಮ್ಸಿ 2.4-0-27-0, ಕೇಶವ್ ಮಹಾರಾಜ 3-0-21-0

ಫಲಿತಾಂಶ: ಭಾರತ ತಂಡಕ್ಕೆ 8 ವಿಕೆಟ್ ಜಯ

ಸೂರ್ಯಕುಮಾರ್ ಯಾದವ್– ಪಿಟಿಐ ಚಿತ್ರ

ಒಲಿಂಪಿಯನ್ ಕುಸ್ತಿಪಟು ಸಾಕ್ಷಿ ಮಲಿಕ್ ಚಾಲನೆ

ದಸರಾ ಕೂಟಕ್ಕೆ 4,500 ಸ್ಪರ್ಧಿಗಳು

ಪ್ರಜಾವಾಣಿ ವಾರ್ತೆ

ಮೈಸೂರು: ನವರಾತ್ರಿಯ ರಂಗಿನಲ್ಲಿ ಮುಳುಗಿರುವ ಅರಮನೆ ನಗರಿಯಲ್ಲಿ ಗುರುವಾರದಿಂದ ರಾಜ್ಯ ದಸರಾ ಕ್ರೀಡಾಕೂಟ ಆರಂಭವಾಗಲಿದೆ. ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ಅಕ್ಟೋಬರ್ 2ರವರೆಗೆ ಕ್ರೀಡೆಗಳು ಆಯೋಜನೆಗೊಂಡಿವೆ. ಸುಮಾರು 4,500 ಕ್ರೀಡಾಪಟುಗಳು ಭಾಗವಹಿಸಲಿದ್ದಾರೆ.

ಒಲಿಂಪಿಕ್ ಪದಕವಿಜಯೀ ಕುಸ್ತಿಪಟು ಸಾಕ್ಷಿ ಮಲಿಕ್ ಅವರು ಸಂಜೆ 4.30ಕ್ಕೆ ಕೂಟಕ್ಕೆ ಚಾಲನೆ ನೀಡುವರು. ನಾಲ್ಕು ದಿನಗಳಲ್ಲಿ ವಿವಿಧ ಕ್ರೀಡಾಂಗಣಗಳಲ್ಲಿ 27 ಸ್ಪರ್ಧೆಗಳು ನಡೆಯಲಿವೆ. ಅಥ್ಲೆಟಿಕ್ಸ್, ಆರ್ಚರಿ, ಬ್ಯಾಡ್ಮಿಂಟನ್, ಬಾಲ್ ಬ್ಯಾಡ್ಮಿಂಟನ್, ಬ್ಯಾಸ್ಕೆಟ್‌ಬಾಲ್, ಬಾಕ್ಸಿಂಗ್, ಸೈಕ್ಲಿಂಗ್, ಫೆನ್ಸಿಂಗ್, ಫುಟ್‌ಬಾಲ್, ಜಿಮ್ನಾಸ್ಟಿಕ್ಸ್, ಹ್ಯಾಂಡ್‌ಬಾಲ್, ಹಾಕಿ, ಜೂಡೋ, ಕಬಡ್ಡಿ, ಕೊಕ್ಕೊ, ಟೆನಿಸ್, ನೆಟ್‌ಬಾಲ್, ಶೂಟಿಂಗ್, ಈಜು, ಟೇಬಲ್ ಟೆನಿಸ್, ಟೆಕ್ವಾಂಡೊ, ಥ್ರೋಬಾಲ್, ವಾಲಿಬಾಲ್, ವೇಟ್‌ಲಿಫ್ಟಿಂಗ್, ಕುಸ್ತಿ, ವುಶು, ಯೋಗ ಸ್ಪರ್ಧೆಗಳನ್ನು ಆಯೋಜಿಸಲಾಗುತ್ತಿದೆ.

ಇದೇ ಮೊದಲ ಬಾರಿ ಯೋಗ, ಶೂಟಿಂಗ್ ಸ್ಪರ್ಧೆಗಳು ನಡೆಯುತ್ತಿವೆ.

ವಿಜೇತ ಕ್ರೀಡಾಪಟುಗಳಿಗೆ ವೈಯಕ್ತಿಕ ಕ್ರೀಡಾ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನವಾಗಿ ₹ 8 ಸಾವಿರ, ನಂತರದ ಎರಡು ಸ್ಥಾನಗಳಿಗೆ ಕ್ರಮವಾಗಿ ₹5 ಸಾವಿರ ಹಾಗೂ ₹ 2,500 ನೀಡಲಾಗುತ್ತಿದೆ. ಗುಂಪು ಕ್ರೀಡೆಯಲ್ಲಿ ವಿಜೇತರಾದವರ ನಗದು ಪುರಸ್ಕಾರವನ್ನು ₹ 4 ಸಾವಿರಕ್ಕೆ ಹೆಚ್ಚಿಸಲಾಗಿದೆ.

ಕ್ರೀಡಾಕೂಟದಲ್ಲಿ ನೂತನ ದಾಖಲೆ ನಿರ್ಮಿಸಿದವರಿಗೆ ನೀಡಲಾಗುತ್ತಿದ್ದ ನಗದು ಪುರಸ್ಕಾರವನ್ನು ₹10 ಸಾವಿರರಿಂದ ₹ 20 ಸಾವಿರಕ್ಕೆ ಹೆಚ್ಚಿಸಲಾಗಿದೆ. ಜೊತೆಗೆ ಪದಕ, ಪ್ರಮಾಣಪತ್ರ ನೀಡಲಾಗುತ್ತಿದೆ. ನಗದು ಮೊತ್ತವನ್ನು ನೇರವಾಗಿ ಬ್ಯಾಂಕ್ ಖಾತೆಗೆ ವರ್ಗಾಯಿಸಲಾಗುತ್ತದೆ ಎಂದು ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆಯ ಮೂಲಗಳು ತಿಳಿಸಿವೆ.

ಫಲಿತಾಂಶಕ್ಕಾಗಿ www.dasaracmcup.com ವೀಕ್ಷಿಸಬಹುದು.

ಮೈಸೂರಿನಲ್ಲಿ ನಡೆಯುತ್ತಿರುವ ದಸರಾ ನಾಡಕುಸ್ತಿಯಲ್ಲಿ ಬುಧವಾರ ಕುಂಬಾರಕೊಪ್ಪಲಿನ ನಂದನ್‌ಕುಮಾರ್ ಹಾಗೂ ಮರಟಿಕ್ಯಾತನಹಳ್ಳಿಯ ಶಶಾಂಕ್ ನಡುವಿನ ಪೈಪೋಟಿಯ ದೃಶ್ಯ. ಈ ಕುಸ್ತಿ ಸಮಬಲದಲ್ಲಿ ಕೊನೆಗೊಂಡಿತು – ಪ್ರಜಾವಾಣಿ ಚಿತ್ರ

ನಾಳೆಯಿಂದ ಪಾಯಿಂಟ್ ಕುಸ್ತಿ

ಮೈಸೂರಿನ ವಸ್ತುಪ್ರದರ್ಶನ ಪ್ರಾಧಿಕಾರ ಆವರಣದ ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣದಲ್ಲಿ ನಾಳೆಯಿಂದ (ಸೆ.30) ಅ.2ರವರೆಗೆ ದಸರಾ ಕಂಠೀರವ, ದಸರಾ ಕೇಸರಿ, ದಸರಾ ಕಿಶೋರಿ ಹಾಗೂ ದಸರಾ ಕುಮಾರ ಪ್ರಶಸ್ತಿಗಳಿಗಾಗಿ ಪಾಯಿಂಟ್ ಕುಸ್ತಿ ಸೆಣಸಾಟ ನಡೆಯಲಿದೆ. 30ರಂದು ಮಧ್ಯಾಹ್ನ 3.30ಕ್ಕೆ ಮಹಿಳೆಯರ ನಾಡಕುಸ್ತಿ ನಡೆಯಲಿದೆ.

ಗಾಲ್ಫ್: ವಿಧಾತ್ರಿ ಅರಸ್‌ಗೆ ಮುನ್ನಡೆ

ಬೆಂಗಳೂರು: ಮೈಸೂರಿನ ವಿಧಾತ್ರಿ ಅರಸ್ ಅವರು ಇಲ್ಲಿ ನಡೆಯುತ್ತಿರುವ ಐಜಿಯು ಬಯೊಜೆನ್ ಸದರ್ನ್ ಇಂಡಿಯಾ ಅಮೆಚೂರ್ ಗಾಲ್ಫ್ ಚಾಂಪಿಯನ್‌ಷಿಪ್‌ನಲ್ಲಿ ಬುಧವಾರ ಮಹಿಳೆಯರ ವಿಭಾಗದಲ್ಲಿ ಅಗ್ರಸ್ಥಾನ ಗಳಿಸಿದ್ದರು.

ನಿಶಾ ಪಟೇಲ್ ಮತ್ತು ಹುನಾರ್ ಮಿತ್ತಲ್ ಅವರನ್ನು ವಿಧಾತ್ರಿ ಹಿಂದಿಕ್ಕಿದ್ದರು.

ಬೆಂಗಳೂರಿನ ಮಿಥಿಲ್ ಎಂ.ಜಿ. ಪುರುಷರ ವಿಭಾಗದಲ್ಲಿ ಅಗ್ರಸ್ಥಾನ ಗಳಿಸಿದ್ದರು. ಸಂದೀಪ್ ಯಾದವ್ ಮತ್ತು ಶೌರ್ಯ ಭಟ್ಟಾಚಾರ್ಯ ಕ್ರಮವಾಗಿ 2 ಮತ್ತು 3ನೇ ಸ್ಥಾನದಲ್ಲಿದ್ದರು.

ರಾಜ್ಯ ಹಾಕಿ ತಂಡಕ್ಕೆ ಸುನಿಲ್ ಸಾರಥ್ಯ

ಗುಜರಾತ್‌ನಲ್ಲಿ ರಾಷ್ಟ್ರೀಯ ಕ್ರೀಡಾಕೂಟ: ಅಕ್ಟೋಬರ್ 2ರಿಂದ ಪಂದ್ಯಗಳು

ಬೆಂಗಳೂರು: ಗುಜರಾತ್‌ನಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಕ್ರೀಡಾಕೂಟಕ್ಕೆ ಕರ್ನಾಟಕದ ಪುರುಷ ಮತ್ತು ಮಹಿಳಾ ಹಾಕಿ ತಂಡಗಳನ್ನು ಬುಧವಾರ ಪ್ರಕಟಿಸಲಾಗಿದೆ.

ಪುರುಷರ ತಂಡವನ್ನು ಎಸ್.ವಿ. ಸುನಿಲ್ ಮತ್ತು ಮಹಿಳಾ ತಂಡವನ್ನು ಕೃತಿಕಾ ಎಸ್.ಪಿ. ಮುನ್ನಡೆಸಲಿದ್ದಾರೆ. ಅಕ್ಟೋಬರ್ 2ರಿಂದ ಪಂದ್ಯಗಳು ನಡೆಯಲಿದ್ದು, ಮಹಿಳಾ ತಂಡವು ಜಾರ್ಖಂಡ್, ಪಂಜಾಬ್ ಮತ್ತು ಮಧ್ಯಪ್ರದೇಶ ತಂಡಗಳಿರುವ ಬಿ ಗುಂಪಿನಲ್ಲಿ ಸ್ಥಾನ ಪಡೆದಿದೆ. ಮೊದಲ ಪಂದ್ಯದಲ್ಲಿ ರಾಜ್ಯ ತಂಡಕ್ಕೆ ಪಂಜಾಬ್ ಸವಾಲು ಎದುರಾಗಿದೆ.

ತಮಿಳುನಾಡು, ಜಾರ್ಖಂಡ್ ಮತ್ತು ಉತ್ತರ ಪ್ರದೇಶ ತಂಡಗಳಿರುವ ಬಿ ಗುಂಪಿನಲ್ಲಿ ರಾಜ್ಯದ ಪುರುಷರ ತಂಡವಿದೆ. ಮೊದಲ ಹಣಾಹಣಿಯಲ್ಲಿ ಕರ್ನಾಟಕವು ಉತ್ತರಪ್ರದೇಶ ಎದುರು ಆಡಲಿದೆ.

ಎಡ್ವಿನ್‌ಗೆ ನಾಯಕತ್ವ: ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಕರ್ನಾಟಕ ಫುಟ್‌ಬಾಲ್ ತಂಡವನ್ನು ಎಡ್ವಿನ್ ರೊಸಾರಿಯೊ ಮುನ್ನಡೆಸಲಿದ್ದಾರೆ. ದೀಪಕ್ ಸರವಣನ್ ತಂಡದ ಉಪನಾಯಕರಾಗಿದ್ದಾರೆ.

ಅಕ್ಟೋಬರ್ 3ರಂದು ಮೊದಲ ಪಂದ್ಯದಲ್ಲಿ ರಾಜ್ಯ ತಂಡವು ಗುಜರಾತ್ ಎದುರು ಆಡಲಿದೆ.

ಕರ್ನಾಟಕ ಹಾಕಿ ತಂಡಗಳು: ಪುರುಷರು: ಎಸ್.ವಿ.ಸುನಿಲ್ (ನಾಯಕ), ಹರೀಶ ಮುತಗಾರ, ಪ್ರಣಾಮ್ ಗೌಡ ವೈ.ಎಂ, ಸೋಮಯ್ಯ ಕೆ.ಪಿ, ಅಭರಣ್ ಸುದೇವ್ ಬಿ, ಗಣೇಶ್, ನಾಗಶ್ರೀನು, ಎ.ಎಚ್. ದೀಕ್ಷಿತ್, ಪೃಥ್ವಿರಾಜ್ ಜಿ.ಎನ್, ಶರತ್ ಸೋಮಣ್ಣ (ಗೋಲುಕೀಪರ್), ಭರತ್ ಕೆ.ಆರ್, ಶೇಷೇಗೌಡ ಬಿ.ಎಂ, ಸೂರ್ಯ ಎನ್.ಎಂ, ಮೊಹಮ್ಮದ್ ರಾಹೀಲ್, ನಾಚಪ್ಪ ಐ. ಆರ್, ಜಗದೀಪ್ ದಯಾಳ್ (ಗೋಲುಕೀಪರ್), ನಿತಿನ್ ತಿಮ್ಮಯ್ಯ ಸಿ.ಎ., ಪುನೀತ್ ಆರ್. ಮ್ಯಾನೇಜರ್: ಎ.ಬಿ. ಸುಬ್ಬಯ್ಯ, ಕೋಚ್: ವಿನಯ್ ವಿ.ಎಸ್, ಸ್ಟ್ರೆಂಥ್ ಮತ್ತು ಕಂಡಿಷನಿಂಗ್ ಕೋಚ್: ಬಸವರಾಜ್ ರಾಯಪ್ಪ ಡಿ.

ಮಹಿಳೆಯರು: ಕೃತಿಕಾ ಎಸ್.ಪಿ. (ನಾಯಕಿ), ಶ್ರಾವ್ಯಾ ಜಿ.ಬಿ (ಗೋಲು ಕೀಪರ್), ಅದಿರಾ ಎಸ್, ಹೇಮಾ ಅಶೋಕ್ ಹಪ್ಪಳಿ, ನಿಶಾ ಪಿ.ಸಿ, ಸಹನಾ ಸಿ.ಎಂ, ಪೂಜಿತಾ ಬಿ.ಎನ್, ಯಶಿಕಾ ಎಂ.ಜಿ, ಅಂಜಲಿ ಎಚ್.ಆರ್, ಕಾವ್ಯಾ ಕೆ.ಆರ್, ದೀಪ್ತಿ, ಲಿಖಿತಾ ಎಸ್. ಪಿ, ದೇಚಮ್ಮಾ, ಅರ್ಪಿತಾ ಪಿ.ಎನ್. (ಗೋಲು ಕೀಪರ್), ಜೀವಿತಾ ಬಿ.ಜಿ, ಚಂದನಾ ಜೆ, ಸೌಮ್ಯಶ್ರೀ ಎನ್.ಆರ್, ಪೂಜಾ ಎಂ.ಡಿ. ಮ್ಯಾನೇಜರ್: ಜಮುನಾ ಅನೂಪ್, ಕೋಚ್: ವರ್ಗೀಸ್ ಜಾನ್, ಸಹಾಯಕ ಕೋಚ್: ಸೋಮಣ್ಣ ಕೆ.ಎಂ.

ಸರ್ವಿಸಸ್ ಕಬಡ್ಡಿ ತಂಡಕ್ಕೆ ಜಯ: ಸರ್ವಿಸಸ್ ಪುರುಷರ ಕಬಡ್ಡಿ ತಂಡವು ಅಹಮದಾಬಾದ್‌ನಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಸತತ ಎರಡನೇ ಜಯ ಸಾಧಿಸಿತು. ಇದರೊಂದಿಗೆ ಸತತ ನಾಲ್ಕನೇ ಪ್ರಶಸ್ತಿ ಜಯದತ್ತ ಒಂದು ಹೆಜ್ಜೆ ಮುಂದಿಟ್ಟಿತು.

ಮಂಗಳವಾರ ನಡೆದ ಪಂದ್ಯದಲ್ಲಿ ಸರ್ವಿಸಸ್ ಆಟಗಾರರು 45-31ರಿಂದ ತಮಿಳುನಾಡು ತಂಡವನ್ನು ಪರಾಭವಗೊಳಿಸಿದರು. ಮಹಾರಾಷ್ಟ್ರ ಮಹಿಳಾ ತಂಡವು ಎರಡನೇ ಜಯ ಸಂಪಾದಿಸಿತು. ಆ ತಂಡವು 46-22ರಿಂದ ಆತಿಥೇಯ ಗುಜರಾತ್ ಎದುರು ಗೆದ್ದಿತು.

ಎಸ್‌.ವಿ.ಸುನಿಲ್

ಬಿಟಿಸಿಗೆ ಶಿವಕುಮಾರ್ ಖೇಣಿ ಅಧ್ಯಕ್ಷ

ಬೆಂಗಳೂರು: ಶಿವಕುಮಾರ್ ಖೇಣಿ ಅವರು ಬೆಂಗಳೂರು ಟರ್ಫ್ ಕ್ಲಬ್‌ನ (ಬಿಟಿಸಿ) ನೂತನ ಅಧ್ಯಕ್ಷ ಹಾಗೂ ಸೀನಿಯರ್ ಸ್ಟೀವರ್ಡ್ ಆಗಿ ಆಯ್ಕೆಯಾಗಿದ್ದಾರೆ.

ಶಿವಕುಮಾರ್ ಖೇಣಿ

ಬುಧವಾರ ನಡೆದ 61ನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಅವರು ಆಯ್ಕೆಯಾದರು.

ಪದಾಧಿಕಾರಿಗಳು: ಶಿವಕುಮಾರ್ ಖೇಣಿ (ಅಧ್ಯಕ್ಷ–ಸೀನಿಯರ್ ಸ್ಟೀವರ್ಡ್), **ಸ್ಟೀವರ್ಡ್ಸ್:** ನವಲ್ ಆರ್. ನರೀವಾಲಾ, ಶಿವಕುಮಾರ್ ಖೇಣಿ, ಸತೀಶ್ ಎನ್ ಗೌಡ

ಸಮಿತಿ ಸದಸ್ಯರು: ಡಾ. ಸಿ.ಎ. ಪ್ರಶಾಂತ್, ಕೆ. ಶಶಾ ಬಿಂದು ದಾಸ್,

ಸ್ಟೀವರ್ಡ್ಸ್ (ಸರ್ಕಾರಿ ನಾಮನಿರ್ದೇಶನ): ಕರ್ನಾಟಕದ ಸರ್ಕಾರದ ಹಣಕಾಸು ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಬೆಂಗಳೂರು ನಗರ ಪೊಲೀಸ್ ಕಮಿಷನರ್.

ಬ್ಯಾಡ್ಮಿಂಟನ್: ಪ್ರಣೀತ್‌ಗೆ ಸೋಲು

ಹೊ ಚಿ ಮಿನ್ (ಪಿಟಿಐ): ಭಾರತದ ಬಿ.ಸಾಯಿ ಪ್ರಣೀತ್ ಅವರು ವಿಯೆಟ್ನಾಂ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಆಘಾತ ಅನುಭವಿಸಿದ್ದಾರೆ.

ಇಲ್ಲಿ ನಡೆಯುತ್ತಿರುವ ಟೂರ್ನಿಯ ಪುರುಷರ ಸಿಂಗಲ್ಸ್ ವಿಭಾಗದ ಹಣಾಹಣಿಯಲ್ಲಿ ಬುಧವಾರ ಪ್ರಣೀತ್ 21-17, 18-21, 13-21ರಿಂದ ಭಾರತದವರೇ ಆದ ಋತ್ವಿಕ್ ಸಂಜೀವಿ ಸತೀಶ್ ಕುಮಾರ್ ಎದುರು ಸೋತರು. ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಈ ಹಿಂದೆ ಕಂಚು ಜಯಿಸಿದ್ದ ಪ್ರಣೀತ್ ಇಲ್ಲಿ ಸಾಮರ್ಥ್ಯಕ್ಕೆ ತಕ್ಕ ಆಟವಾಡುವಲ್ಲಿ ವಿಫಲರಾದರು.

ರೆಸ್ಟ್ ಆಫ್ ಇಂಡಿಯಾಕ್ಕೆ ಹನುಮ ನಾಯಕ

ನವದೆಹಲಿ (ಪಿಟಿಐ): ಹನುಮ ವಿಹಾರಿ ಅವರನ್ನು ಇರಾನಿ ಟ್ರೋಫಿ ಟೂರ್ನಿಯಲ್ಲಿ ಆಡಲಿರುವ ರೆಸ್ಟ್ ಆಫ್ ಇಂಡಿಯಾ ತಂಡದ ನಾಯಕರನ್ನಾಗಿ ನೇಮಕ ಮಾಡಲಾಗಿದೆ.

ಕಳೆದ ಋತುವಿನ ರಣಜಿ ಟ್ರೋಫಿ ವಿಜೇತ ಸೌರಾಷ್ಟ್ರ ತಂಡದ ಎದುರು ವಿಹಾರಿ ಬಳಗವು ಕಣಕ್ಕಿಳಿಯಲಿದೆ. ಪಂದ್ಯವು ಅಕ್ಟೋಬರ್ 1ರಿಂದ 5ರವರೆಗೆ ರಾಜ್‌ಕೋಟ್‌ನಲ್ಲಿ ನಡೆಯಲಿದೆ.

ಬುಧವಾರ ಬಿಸಿಸಿಐ ಪ್ರಕಟಿಸಿರುವ 16 ಆಟಗಾರರ ತಂಡದಲ್ಲಿ ಕರ್ನಾಟಕದ ಮಯಂಕ್ ಅಗರವಾಲ್ ಇದ್ದಾರೆ. ಕಾಶ್ಮೀರದ ವೇಗಿ ಉಮ್ರಾನ್ ಮಲೀಕ್ ಸ್ಥಾನ ಗಿಟ್ಟಿಸಿದ್ದಾರೆ.

ಈಚೆಗೆ ನ್ಯೂಜಿಲೆಂಡ್ ಎ ತಂಡದ ವಿರುದ್ಧ ನಡೆದ ‘ಟೆಸ್ಟ್’ ಸರಣಿಯಲ್ಲಿ ಭಾರತ ಎ ತಂಡದ ನಾಯಕತ್ವ ವಹಿಸಿದ್ದ ಪ್ರಿಯಾಂಕ್ ಪಾಂಚಾಲ್ ಕೂಡ ಅವಕಾಶ ಪಡೆದಿದ್ದಾರೆ. ಸೌರಾಷ್ಟ್ರ ತಂಡದಲ್ಲಿ ಟೆಸ್ಟ್ ಪರಿಣತ ಚೇತೇಶ್ವರ್ ಪೂಜಾರ ಅವರು ಆಡುವ ನಿರೀಕ್ಷೆ ಇದೆ.

ಕೋವಿಡ್ -19 ಸೃಷ್ಟಿಸಿದ್ದ ಬಿಕ್ಕಟ್ಟಿನಿಂದಾಗಿ ಕಳೆದ ಎರಡು ಋತುಗಳಲ್ಲಿ ಇರಾನಿ ಟ್ರೋಫಿ ಟೂರ್ನಿ ನಡೆದಿರಲಿಲ್ಲ.

ರೆಸ್ಟ್ ಆಫ್ ಇಂಡಿಯಾ: ಹನುಮ ವಿಹಾರಿ (ನಾಯಕ), ಮಯಂಕ್ ಅಗರವಾಲ್, ಪ್ರಿಯಾಂಕ್ ಪಾಂಚಾಲ್, ಅಭಿಮನ್ಯು ಈಶ್ವರನ್, ಯಶ್ ಧುಳ್, ಸರ್ಫರಾಜ್ ಖಾನ್, ಯಶಸ್ವಿ ಜೈಸ್ವಾಲ್, ಕೆ.ಎಸ್. ಭರತ್, ಉಪೇಂದ್ರ ಯಾದವ್, ಜಯಂತ್ ಯಾದವ್, ಸೌರಭ್ ಕುಮಾರ್, ಆರ್. ಸಾಯಿಕಿಶೋರ್, ಮುಕೇಶ್ ಕುಮಾರ್, ಉಮ್ರಾನ್ ಮಲಿಕ್, ಕುಲದೀಪ್ ಸೇನ್, ಅರ್ಜಾನ್ ನಾಗಸ್ವಲ್ಲಾ.

ಹನುಮವಿಹಾರಿ

ಜೀವನ-ಸಾಧನೆ ತಿಳಿಸುವ ‘ಕ್ಯಾಪ್ಟನ್ ಫೆಂಟಾಸ್ಟಿಕ್’ ಬಿಡುಗಡೆ

ಸುನಿಲ್ ಚೆಟ್ರಿಗೆ ಫಿಫಾ ಗೌರವ

ನವದೆಹಲಿ (ಪಿಟಿಐ): ಭಾರತ ಫುಟ್‌ಬಾಲ್ ತಂಡದ ನಾಯಕ ಸುನಿಲ್ ಚೆಟ್ರಿ ಅವರ ವೃತ್ತಿಜೀವನ ಮತ್ತು ಸಾಧನೆಗಳನ್ನು ತಿಳಿಸುವ ಮೂರು ಕಂತುಗಳ ವಿಡಿಯೊ ಸರಣಿಯನ್ನು ಅಂತರರಾಷ್ಟ್ರೀಯ ಫುಟ್‌ಬಾಲ್ ಫೆಡರೇಷನ್ (ಫಿಫಾ) ಬಿಡುಗಡೆ ಮಾಡಿದೆ. ಈ ಮೂರೂ ಕಂತುಗಳು ಫಿಫಾ ಪ್ಲಸ್‌ನಲ್ಲಿ ಪ್ರಸಾರವಾಗುತ್ತಿವೆ.

ಈ ಸಂಚಿಕೆಗಳಿಗೆ ‘ಕ್ಯಾಪ್ಟನ್ ಫೆಂಟಾಸ್ಟಿಕ್’ ಎಂಬ ಶೀರ್ಷಿಕೆಯನ್ನು ಫಿಫಾ ನೀಡಿದೆ.

‘ರೊನಾಲ್ಡೊ ಮತ್ತು ಮೆಸ್ಸಿ ಅವರ ಬಗ್ಗೆ ನಿಮಗೆ ಗೊತ್ತು. ಅಂತರರಾಷ್ಟ್ರೀಯ ಫುಟ್‌ಬಾಲ್‌ನಲ್ಲಿ ಪ್ರಸ್ತುತ ಇರುವ ಆಟಗಾರರಲ್ಲಿ ಅತಿ ಹೆಚ್ಚು ಗೋಲು ಗಳಿಸಿರುವ ಮೂರನೇ ವ್ಯಕ್ತಿ ಎಂಬ ಶ್ರೇಯ ಗಳಿಸಿರುವ ಆಟಗಾರನ ಪರಿಚಯವನ್ನು ಮಾಡಿಕೊಳ್ಳಿ. ಸುನಿಲ್ ಚೆಟ್ರಿ/ ಕ್ಯಾಪ್ಟನ್ ಫೆಂಟಾಸ್ಟಿಕ್ ಈಗ ಫಿಫಾ ಪ್ಲಸ್‌ನಲ್ಲಿ ಲಭ್ಯ’ ಎಂದು ಫಿಫಾ ಟ್ವೀಟ್ ಮಾಡಿದೆ.

38 ವರ್ಷದ ಚೆಟ್ರಿ ಅಂತರರಾಷ್ಟ್ರೀಯ ಫುಟ್‌ಬಾಲ್‌ನಲ್ಲಿ 84 ಗೋಲು ಗಳಿಸಿದ್ದಾರೆ. ಪೋರ್ಚುಗಲ್‌ನ ಕ್ರಿಸ್ಟಿಯಾನೊ ರೊನಾಲ್ಡೊ (117) ಮತ್ತು ಅರ್ಜೆಂಟೀನಾದ ಲಯೊನೆಲ್ ಮೆಸ್ಸಿ (90) ಅವರು ಸಕ್ರಿಯ ಆಟಗಾರರ ಪೈಕಿ ಗೋಲುಗಳಿಕೆಯಲ್ಲಿ ಮೊದಲೆರಡು ಸ್ಥಾನಗಳಲ್ಲಿದ್ದಾರೆ.

ಫಿಫಾ ಬಿಡುಗಡೆ ಮಾಡಿರುವ ಮೊದಲ ಕಂತಿನಲ್ಲಿ, ಚೆಟ್ರಿ ಅವರು ತಮ್ಮ 20ನೇ ವಯಸ್ಸಿನಲ್ಲಿ ಭಾರತ ತಂಡಕ್ಕೆ ಪದಾರ್ಪಣೆ ಮಾಡಿದ ಕುರಿತ ಚಿತ್ರಣವಿದೆ. ಈ ಬಗ್ಗೆ ಅವರ ಆಪ್ತರು ಹಾಗೂ ಸಹ ಆಟಗಾರರು ಮಾತನಾಡಿದ್ದಾರೆ. ರಾಷ್ಟ್ರೀಯ ತಂಡಕ್ಕಾಗಿ ಅವರು ನೀಡಿದ ಅದ್ಭುತ ಪ್ರದರ್ಶನ ಮತ್ತು ವೃತ್ತಿಪರ ಆಟಗಾರನಾಗಿ ವಿಶ್ವದ ಪ್ರಮುಖ ಕ್ಲಬ್‌ಗಳನ್ನು ಪ್ರತಿನಿಧಿಸುವ ಕನಸುಗಳ ಕುರಿತು ಎರಡನೇ ಕಂತು ಬೆಳಕು ಚೆಲ್ಲುತ್ತದೆ.

ಮೂರನೇ ಕಂತಿನಲ್ಲಿ, ಚೆಟ್ರಿ ಅವರು ವೃತ್ತಿಜೀವನದಲ್ಲಿ ಏರಿದ ಎತ್ತರ ಮತ್ತು ವೈಯಕ್ತಿಕ ಜೀವನ, ದಾಖಲೆಗಳ ಕುರಿತು ವಿವರಿಸಲಾಗಿದೆ.

ಚೆಟ್ರಿ ಅವರು 2005ರಲ್ಲಿ ಭಾರತ ತಂಡಕ್ಕೆ ಪದಾರ್ಪಣೆ ಮಾಡಿದ್ದು, ಇದುವರೆಗೆ 131 ಪಂದ್ಯಗಳನ್ನು ಆಡಿದ್ದಾರೆ.

ಸುನಿಲ್ ಚೆಟ್ರಿ– ಪಿಟಿಐ ಚಿತ್ರ

ಕರ್ನಾಟಕ ಮಾನವ ಹಕ್ಕುಗಳ ಆಯೋಗ
3ನೇ ಮಹಡಿ. 5ನೇ ಹಂತ, ಬಹುಮಹಡಿಗಳ ಕಟ್ಟಡ.
ಡಾ. ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು–560 001.
ಸಂಖ್ಯೆ: ಮಾಹಆ/64/ಆಡಳಿತ/2021 ದಿನಾಂಕ: 22.09.2022
ಸಂಕ್ಷಿಪ್ತ ಅಧಿಸೂಚನೆ
ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗಕ್ಕೆ ಮಂಜೂರಾದ **ಲೆಕ್ಕ ಅಧೀಕ್ಷಕರು** 01 ಹುದ್ದೆ, **ತೀರ್ಪು ಬರಹಗಾರರು** 01 ಹುದ್ದೆ, **ಹಿರಿಯ ಸಹಾಯಕರು** 01 ಹುದ್ದೆ, **ಕಾನೂನು ಸಹಾಯಕರು / ಸಂಶೋಧನಾ ಸಹಾಯಕರು** 01 ಹುದ್ದೆ, **ಸಹಾಯಕರು** 01 ಹುದ್ದೆ ಹಾಗೂ **ಶೀಘ್ರಲಿಪಿಗಾರರು** 02 ಹುದ್ದೆಗಳನ್ನು ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ **ಪ್ರಥಮತಃ 06 ತಿಂಗಳ ಅವಧಿಗೆ** ಭರ್ತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಯೋಗದ ವೆಬ್‌ಸೈಟ್ **www.kshrc.karnataka.gov.in** ನಲ್ಲಿ ಅಧಿಸೂಚನೆ ಹಾಗೂ ಅರ್ಜಿ ಪ್ರಪತ್ರದ ವಿವರಗಳನ್ನು ಪ್ರಕಟಿಸಲಾಗಿದೆ. ಅರ್ಜಿಯನ್ನು ಸಲ್ಲಿಸುವ ಕೊನೆಯ **ದಿನಾಂಕ: 20.10.2022.**
ವಾಸಾಸಂಇ/ವಾಪ್ರ/ಜಿಎ/2401/2022–23 ಸಹಿ/– ಕಾರ್ಯದರ್ಶಿ.

ಗದಗ ಬೆಟಗೇರಿ ನಗರಸಭೆ ಕಾರ್ಯಾಲಯ–582101
ಜಿಲ್ಲಾ ಗದಗ ರಾಜ್ಯ : ಕರ್ನಾಟಕ ದೂರವಾಣಿ : 08372–259932
ಇ–ಮೇಲ್ : itstaff.ulb.gadag@gmail.com
ನಂ.ಗಬೆನಸ/ತಾಂ.ವಿ/ವಿ.ಶಾ/ವಹಿ/841/2022–23 ದಿನಾಂಕ : 26–09–2022
ತಿದ್ದುಪಡಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999–2000ರ ಪ್ರಕಾರ ಸ್ಟ್ಯಾಂಡರ್ಡ ಟೆಂಡರ್ ಡಾಕ್ಯೂಮೆಂಟ್ಸ್ ನಿಯಮದನ್ವಯ ಇಂಡೆಂಟ್ ನಂ– DMA/2022-23/EL/WORK_INDENT No/136635 ಹೊಂದಿರುವ ಕಾಮಗಾರಿಗೆ ದರಗಳನ್ನು ಆಹ್ವಾನಿಸಿದ್ದು ಹೆಚ್ಚಿನ ವಿವರಗಳಿಗಾಗಿ ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ವೆಬ್‌ಸೈಟ್ **www.eproc.karnataka.gov.in** ಮುಖಾಂತರ ಟೆಂಡರ ಸಲ್ಲಿಸಬಹುದಾಗಿದ್ದು ಹಾಗೂ ಹೆಚ್ಚಿನ ವಿವರಗಳನ್ನು ಕಛೇರಿಯ ವೆಬ್‌ಸೈಟ್ **www.gadag-betagericity.gov.in** ದಲ್ಲಿ ನೋಡಬಹುದು.
ಇತರೆ ಹೆಚ್ಚಿನ ಮಾಹಿತಿಗಾಗಿ ಇ–ಪ್ರೊಕ್ಯೂರಮೆಂಟ್ ಹೆಲ್ಪಲೈನ್ ನಂಬರ್–**080–23010900–1** ಗೆ ಸಂಪರ್ಕಿಸಬಹುದು.
ಸಹಿ/– ಶ್ರೀಮತಿ ಉಷಾ ಎಮ್ ದಾಸರ, ಅಧ್ಯಕ್ಷರು, ನಗರಸಭೆ ಗದಗ–ಬೆಟಗೇರಿ
ಸಹಿ/– ಶ್ರೀ ರಮೇಶ ಎಸ್ ಸುಣಗಾರ ಕೆ.ಎಂ.ಎ.ಎಸ್., ಪೌರಾಯುಕ್ತರು, ನಗರಸಭೆ ಗದಗ–ಬೆಟಗೇರಿ
ವಾಸಾಸಂಇ/ಗದಗ/ಎಂ.ಸಿ.ಎ/337/2022–23

ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ
(ಭಾರತ ಸರ್ಕಾರ ಹಾಗೂ ಕರ್ನಾಟಕ ಸರ್ಕಾರದ ಜಂಟಿ ಸಹಭಾಗಿತ್ವದಲ್ಲಿ)
ಇ–ಮೇಲ್ : contracts@bmrc.co.in ವೆಬ್‌ಸೈಟ್ : www.bmrc.co.in
ಸಂಖ್ಯೆ: ಬಿಎಂಆರ್‌ಸಿಎಲ್/ಹಂತ–2ಎ&2ಬಿ/ಟ್ರಾಕ್ ವರ್ಕ್ಸ್/2022/93
ದಿನಾಂಕ: 29.09.2022
ಟೆಂಡರ್ ಪ್ರಕಟಣೆ
ವ್ಯವಸ್ಥಾಪಕ ನಿರ್ದೇಶಕರು, ಬಿಎಂಆರ್‌ಸಿಎಲ್, ಇವರ ಪರವಾಗಿ ಪ್ರಧಾನ ವ್ಯವಸ್ಥಾಪಕರು (ಗುತ್ತಿಗೆಗಳು) ಇವರು ಈ ಕೆಳಗಿನ ಕಾಮಗಾರಿಗಳಿಗೆ ಟೆಂಡರುಗಳನ್ನು ಆಹ್ವಾನಿಸಿದ್ದಾರೆ.
(1) ಕಾಮಗಾರಿಯ ಹೆಸರು: ಟ್ರಾಕ್ ವರ್ಕ್–ಟಿ1: ಬೆಂಗಳೂರು ಮೆಟ್ರೋ ರೈಲು ಯೋಜನೆ, ಹಂತ–2 ಎ&2ಬಿ ಯ ಎಲಿವೇಟೆಡ್ ವಯಾಡಕ್ಟ್ ಸೆಕ್ಷನ್ ಸಿಲ್ಕ್ ಬೋರ್ಡ್ ಮೆಟ್ರೋ ನಿಲ್ದಾಣದಿಂದ (ಕಿ.ಮೀ.0.00) ಕೃಷ್ಣರಾಜಪುರಂ ಮೆಟ್ರೋ ನಿಲ್ದಾಣದವರೆಗೆ (ಕಿ.ಮೀ.18.236) & ಕೃಷ್ಣರಾಜಪುರಂ ಮೆಟ್ರೋ ನಿಲ್ದಾಣದಿಂದ (ಕಿ.ಮೀ.0.00) ಕೆಂಪಾಪುರ ಮೆಟ್ರೋ ನಿಲ್ದಾಣದವರೆಗೆ (ಕಿ.ಮೀ.10.200) ಮತ್ತು ಬೈಯ್ಯಪ್ಪನಹಳ್ಳಿ ಡಿಪೋದಲ್ಲಿ ಸ್ಟ್ಯಾಂಡರ್ಡ್ ಗೇಜ್ ಜಲ್ಲಿ ರಹಿತ ರೈಲು ಹಳಿ ಅಳವಡಿಕೆ (ಅಂದಾಜು 57 ಟ್ರಾಕ್ ಕಿ.ಮೀ.) ಹಾಗೂ ಬೈಯ್ಯಪ್ಪನಹಳ್ಳಿ ಡಿಪೋನಲ್ಲಿ ಜಲ್ಲಿ ಸಹಿತ ರೈಲು ಹಳಿ ಅಳವಡಿಕೆಗಾಗಿ ವಿನ್ಯಾಸ, ಅಳವಡಿಕೆ, ಸರಬರಾಜು, ತಪಾಸಣೆ ಹಾಗೂ ಕಾರ್ಯಾಚರಣೆಗೆ ಸಂಬಂಧಪಟ್ಟ ಕಾಮಗಾರಿಗಳು. ಅಂದಾಜು ಮೊತ್ತ: **ರೂ. 267.48 ಕೋಟಿಗಳು.** ಟೆಂಡರ್ ಭದ್ರತಾ ಮೊತ್ತ: **ರೂ.2.67 ಕೋಟಿಗಳು.**
(2) ಕಾಮಗಾರಿಯ ಹೆಸರು: ಟ್ರಾಕ್ ವರ್ಕ್– ಟಿ2: ಬೆಂಗಳೂರು ಮೆಟ್ರೋ ರೈಲು ಯೋಜನೆ, ಹಂತ–2ಬಿಯ ಎಲಿವೇಟೆಡ್ ವಯಾಡಕ್ಟ್ ಸೆಕ್ಷನ್ ಕೆಂಪಾಪುರ ಮೆಟ್ರೋ ನಿಲ್ದಾಣದಿಂದ (ಕಿ.ಮೀ.10.200) ಏರ್‌ಪೋರ್ಟ್ ಮೆಟ್ರೋ ನಿಲ್ದಾಣದವರೆಗೆ (ಕಿ.ಮೀ.36.530) ಮತ್ತು ಏರ್‌ಪೋರ್ಟ್ ಡಿಪೋದಲ್ಲಿ ಸ್ಟ್ಯಾಂಡರ್ಡ್ ಗೇಜ್ ಜಲ್ಲಿ ರಹಿತ ರೈಲು ಹಳಿ ಅಳವಡಿಕೆ (ಅಂದಾಜು 51 ಟ್ರಾಕ್ ಕಿ.ಮೀ. ಎಲಿವೇಟೆಡ್ ವಯಾಡಕ್ಟ್ ಸೆಕ್ಷನ್ ಮತ್ತು 2 ಟ್ರಾಕ್ ಕಿ.ಮೀ. ಕಟ್ ಅಂಡ್ ಕವರ್ ಸೆಕ್ಷನ್) ಹಾಗೂ ಏರ್‌ಪೋರ್ಟ್ ಡಿಪೋನಲ್ಲಿ ಜಲ್ಲಿ ಸಹಿತ ರೈಲು ಹಳಿ ಅಳವಡಿಕೆಗಾಗಿ ವಿನ್ಯಾಸ, ಅಳವಡಿಕೆ, ಸರಬರಾಜು, ತಪಾಸಣೆ ಹಾಗೂ ಕಾರ್ಯಾಚರಣೆಗೆ ಸಂಬಂಧಪಟ್ಟ ಕಾಮಗಾರಿಗಳು. ಅಂದಾಜು ಮೊತ್ತ: **ರೂ. 232.68 ಕೋಟಿಗಳು.** ಟೆಂಡರ್ ಭದ್ರತಾ ಮೊತ್ತ: **ರೂ.2.32 ಕೋಟಿಗಳು.** ಟೆಂಡರ್ ದಸ್ತಾವೇಜಿನ ಬೆಲೆ: **(ಕ್ರ.ಸಂ.1&2) ರೂ.59,000/–.** ಟೆಂಡರ್ ದಸ್ತಾವೇಜುಗಳ ಮಾರಾಟ (ಆನ್‌ಲೈನ್ ಮಾತ್ರ): (ಕ್ರ.ಸಂ.1&2) **03.10.2022 ರಿಂದ 14.11.2022 ವರೆಗೆ.** ಟೆಂಡರ್ ದಸ್ತಾವೇಜುಗಳ ಮಾರಾಟ (ಆನ್‌ಲೈನ್ ಮಾತ್ರ): (ಕ್ರ.ಸಂ. 1&2): **15.11.2022 ರಂದು ಬೆಳಿಗ್ಗೆ 10.00 ಗಂಟೆಯಿಂದ ಮಧ್ಯಾಹ್ನ 3.00 ಗಂಟೆವರೆಗೆ.** ಟೆಂಡರ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: (ಕ್ರ.ಸಂ. 1&2): **15.11.2022 ರಂದು ಮಧ್ಯಾಹ್ನ 3.30 ಗಂಟೆಗೆ.** ಹೆಚ್ಚಿನ ವಿವರಗಳಿಗಾಗಿ ನಮ್ಮ ವೆಬ್‌ಸೈಟ್: **www.bmrc.co.in**ರಲ್ಲಿ ದಿನಾಂಕ: 03.10.2022 ರಿಂದ ಪರಿವೀಕ್ಷಿಸಬಹುದು.
ಸಹಿ/– ಪ್ರಧಾನ ವ್ಯವಸ್ಥಾಪಕರು (ಗುತ್ತಿಗೆಗಳು)

ಸಾರ್ವಜನಿಕ ಪ್ರಕಟಣೆ
ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, **ಮೆ॥ ಜಿ.ಎಂ. ಶುಗರ್ಸ್ ಮತ್ತು ಎನರ್ಜಿ ಲಿ.,** ನವರು 120 ಕೆಎಲ್‌ಪಿಡಿ ಸಾಮರ್ಥ್ಯದ ಡಿಸ್ಟಿಲರಿ, **10000** ಟಿ.ಸಿ.ಡಿ ಸಾಮರ್ಥ್ಯದ ಕಬ್ಬು ನುರಿಯುವ ಮತ್ತು **50 MW** ಸಹ ವಿದ್ಯುತ್–ಉತ್ಪಾದನಾ ಘಟಕವನ್ನು ಹಾವೇರಿ ಜಿಲ್ಲೆಯ, ಚಟ್ನಹಳ್ಳಿ ಗ್ರಾಮದ ಸರ್ವೆ ನಂ.**40/1, 40/2, 40/3, 40/4, 40/5, 40/6, 41, 41/3, 41/4, 41/5, 41/6, 42, 47(P), 50/1(P), 41/1, 47/2, 49/1, 49/2, 53/5a/1, 62/2** ರಲ್ಲಿ ಸ್ಥಾಪಿಸಲು ಉದ್ದೇಶಿಸಿದ್ದಾರೆ. ಸದರಿ ಯೋಜನೆಗೆ ದಿ:02–02–2022ರಂದು ಪರಿಸರ ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ, ಭಾರತ ಸರ್ಕಾರದಿಂದ ಪತ್ರ ಸಂಖ್ಯೆ: **J-11011/77/2017-IA-II (I)** ಮುಖೇನ ಪರಿಸರ ವಿಮೋಚನ ಪತ್ರವನ್ನು ನೀಡಿರುತ್ತಾರೆ. ಈ ಪರಿಸರ ವಿಮೋಚನ ಪತ್ರವನ್ನು ಪರಿಸರ ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ, ಭಾರತ ಸರ್ಕಾರದವರ **website: https://parivesh.nic.in** ಇಲ್ಲಿ ಲಭ್ಯವಿರುತ್ತದೆ

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ, ಲೋಕೋಪಯೋಗಿ ಇಲಾಖೆ ಮಂಗಳೂರು ವಿಭಾಗ, ಮಂಗಳೂರು
ಸಂಖ್ಯೆ:ಲೋ.ಇ:ಮಂ.ವಿ:ಟಿ.ಎನ್.ಡಿ(40ಇ):2022–23:ಜೆಇ–2 ದಿನಾಂಕ: 28.09.2022
ಅಲ್ಪಾವಧಿ ಟೆಂಡರ್ ಪ್ರಕಟಣೆ (ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಮೂಲಕ)
ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಸಾರ್ವಜನಿಕ ಇ–ಪ್ರೊಕ್ಯುರ್‌ಮೆಂಟ್ ಮೂಲಕ **ಲೆಕ್ಕಶೀರ್ಷಿಕೆ: 3054–03–337–0–05–200 ರಾಜ್ಯ ಹೆದ್ದಾರಿ ರಸ್ತೆಗಳ ನಿರ್ವಹಣೆಯಡಿ** ಒಟ್ಟು 27 ಕಾಮಗಾರಿಗಳು, **ಲೆಕ್ಕಶೀರ್ಷಿಕೆ: 3054–04–337–1–10–200 ಜಿಲ್ಲಾ ಮುಖ್ಯ ರಸ್ತೆಗಳ ನಿರ್ವಹಣೆಯಡಿ** 16 ಕಾಮಗಾರಿಗಳು ಮತ್ತು ಬಂಟ್ವಾಳ ತಾಲೂಕಿನ ಪ್ಯಾಕೇಜ್ ಆಧಾರದಲ್ಲಿ 9 ಪ್ಯಾಕೇಜ್ ಕಾಮಗಾರಿಗಳು, ಈ ಎಲ್ಲಾ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದ್ದು, ಇ–ಪ್ರೊಕ್ಯುರ್‌ಮೆಂಟ್ ಮುಖಾಂತರ ಟೆಂಡರನ್ನು ಸಲ್ಲಿಸುವ ಕೊನೆಯ **ದಿನಾಂಕಃ 07.10.2022 (ಮಧ್ಯಾಹ್ನ 4.00 ಗಂಟೆಯವರೆಗೆ ಮಾತ್ರ)** ನಿಗದಿಪಡಿಸಲಾಗಿರುತ್ತದೆ. ಕಾಮಗಾರಿವಾರು ಮೀಸಲಾತಿ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ತಿಳಿದುಕೊಳ್ಳುವುದು.
ಈ ಕಾಮಗಾರಿಗಳ ಗರಿಷ್ಠ ಅಂದಾಜು ಮೊತ್ತ ರೂ.39.20 ಲಕ್ಷ, ಕನಿಷ್ಠ ಅಂದಾಜು ಮೊತ್ತ ರೂ.5.30ಲಕ್ಷ ಆಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ **https://eproc.karnataka.gov.in** ನ್ನು ಸಂಪರ್ಕಿಸಲು ಕೋರಲಾಗಿದೆ.
DIPR/MNG/MCA/650/22-23 dt.28.09.2022 ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್

ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ) CIN: U02001KA1971SGC001999
ವಿಭಾಗೀಯ ವ್ಯವಸ್ಥಾಪಕರವರ ಕಛೇರಿ, ಬೆಂಗಳೂರು ವಿಭಾಗ,
"ವನವಿಕಾಸ' ನೆಲಮಹಡಿ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–03.
ದೂ: 080–23345199 e-mail: dmkfdclbd@gmail.com
ಸಂ: ಕಅಅನಿನಿ/ವಿವ್ಯ/ಬೆಂ.ವಿ/ಮಾರಾಟ/ಸಿ.ಆರ್.ನಂ4/2022–23/889 ದಿ: 28.09.2022
ಅಲ್ಪಾವಧಿ ಮರು ಇ–ಟೆಂಡರ್ ಪ್ರಕಟಣೆ
ಈ ಮೂಲಕ ನೋಂದಾಯಿತ ಅರಣ್ಯ ಗುತ್ತಿಗೆದಾರರಿಗೆ ತಿಳಿಸುವುದೇನೆಂದರೆ, 2022–23ನೇ ಸಾಲಿನಲ್ಲಿ ಬೆಂಗಳೂರು ವಿಭಾಗದ, ವಿವಿಧ ನೆಡುತೋಪುಗಳಲ್ಲಿ ಲಭ್ಯವಿರುವ ಅಂದಾಜು ಸಿಪ್ಪೆ ರಹಿತ 33941 ಎಂ.ಟಿ ಅಥವಾ ಸಿಪ್ಪೆ ಸಹಿತ 48194 ಎಂ.ಟಿ ಮೆದುಮರಗಳನ್ನು ಕಡಿದು ವಿವಿಧ ಕೈಗಾರಿಕಾ ಉದ್ಯಮಗಳ ಪ್ರದೇಶಕ್ಕೆ ಸಾಗಾಣಿಕೆ ಮಾಡಲು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ದ್ವಿ–ಲಕೋಟೆ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಆಸಕ್ತ ಗುತ್ತಿಗೆದಾರರು **https://www.eproc.karnataka.gov.in** ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಂಡು ದಿನಾಂಕ: **15.10.2022ರ 17.30 ಗಂಟೆ ಒಳಗಾಗಿ** ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ: 080–23345199 (ರಜಾ ದಿನಗಳನ್ನು ಹೊರತುಪಡಿಸಿ) ಈ ಕಾರ್ಯಾಲಯದ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.
ಸಹಿ/– ವಿಭಾಗೀಯ ವ್ಯವಸ್ಥಾಪಕರು, ಕಅಅನಿನಿ, ಬೆಂಗಳೂರು ವಿಭಾಗ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರು ಗ್ರಾಮಾಂತರ
ಕಾರ್ಯಪಾಲಕ ಅಭಿಯಂತರರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೆಂಗಳೂರು ಗ್ರಾಮಾಂತರ
Email ID: eerdwsd.bngr1@gmail.com Ph : 080-29787463, Mobile: 9448367736
ಸಂ: ಕಾಪಾಅ/ಗ್ರಾಕುನೀ.ಮತ್ತು ನೈರ್ಮಲ್ಯ ವಿಭಾಗ/ಬೆಂ.ಗ್ರಾ/ತಾ.ಶಾ/ಟೆಂಡರ್/22-23 ದಿನಾಂಕ : 29/09/2022
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ.18/2022–23/1100 ದಿನಾಂಕ: 26–09–2022
(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೆಂಗಳೂರು ಗ್ರಾಮಾಂತರರವರಿಂದ 2021-2022ನೇ ಸಾಲಿನ 2215 JJM ಲೆಕ್ಕಶೀರ್ಷಿಕೆಯಡಿ ಬೆಂಗಳೂರು ಗ್ರಾಮಾಂತರ ವಿಭಾಗ ವ್ಯಾಪ್ತಿಯ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿಯಾಗಿರುವ ಹಾಗೂ ಇ-ಪ್ರೊಕ್ಯೂರ್‌ಮೆಂಟ್ ಸಂಸ್ಥೆಯಲ್ಲಿ ನೊಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಐಟಂವಾರು ಟೆಂಡರ್‌ಗಳನ್ನು ಅನ್ವಯವಾಗುವ ಸ್ಟ್ಯಾಂಡರ್ಡ್ ಟೆಂಡರ್ ಬಿಡ್ ಡಾಕ್ಯೂಮೆಂಟ್ KW-1, KW-2, KW-3 & KW-4 ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಅರ್ಜಿ ಮತ್ತು ಇ.ಎಂ.ಡಿಯನ್ನು ಈ ಪೇಮೆಂಟ್ ಮುಖಾಂತರ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸುವುದು.
ಸಾಮಾನ್ಯ ಸೂಚನೆಗಳು: 1) ಗುತ್ತಿಗೆದಾರರು ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು. 2) ಅರ್ಹತೆಗೆ ಬೇಕಾಗುವ ಎಲ್ಲಾ ಪ್ರಮಾಣ ಪತ್ರ ಆನ್‌ಲೈನ್ ಮೂಲಕ ಸಲ್ಲಿಸಬೇಕು.
1) ಟೆಂಡರ್ ದಾಸ್ತಾವೇಜುಗಳನ್ನು ವೆಬ್‌ಸೈಟ್ ನಿಂದ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ : 27.09.2022 ರ ಸಂಜೆ 4.00 ಗಂಟೆಯ ನಂತರ. 2) ಭರ್ತಿಮಾಡಿದ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 15.10.2022 ಸಂಜೆ 4.00 ಗಂಟೆಯುವರೆಗೆ. 3) ಟೆಂಡರ್ / ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 17.10.2022 ಬೆಳಿಗ್ಗೆ 11.00 ಗಂಟೆಗೆ. 4) ಆರ್ಥಿಕ ಬಿಡ್ ತೆರೆಯುವ ದಿನಾಂಕ : 21.10.2022 ಬೆಳಿಗ್ಗೆ 11.00 ಗಂಟೆಗೆ.
ಸಹಿ/–
(ಎಸ್.ಎಂ.ಸುಭಾನ್ ಸಾಹೇಬ್) ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೆಂಗಳೂರು ಗ್ರಾಮಾಂತರ
DIPR/CP/RO2394/AAPL/2022-23

ಅಖಿಲ ಭಾರತ ಪೋಸ್ಟಲ್ ವಾಲಿಬಾಲ್: ಒಡಿಶಾ, ಆಂಧ್ರ ತಂಡಗಳಿಗೆ ಜಯ

ಎಂಟರ ಘಟ್ಟಕ್ಕೆ ಕರ್ನಾಟಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೋಘ ಆಟವಾಡಿದ ಕರ್ನಾಟಕ ವೃತ್ತ ತಂಡವು ಅಖಿಲ ಭಾರತ ಪೋಸ್ಟಲ್ (ಅಂಚೆ ಇಲಾಖೆ) ವಾಲಿಬಾಲ್ ಟೂರ್ನಿಯಲ್ಲಿ ಕ್ವಾರ್ಟರ್ ಫೈನಲ್‌ಗೆ ಲಗ್ಗೆಯಿಟ್ಟಿತು.

ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೂರ್ನಿಯ ಎರಡನೇ ದಿನವಾದ ಬುಧವಾರ ತನ್ನ ಕೊನೆಯ ಲೀಗ್ ಪಂದ್ಯದಲ್ಲಿ ಕರ್ನಾಟಕ 25–15, 21–25, 25–19, 25–20ರಿಂದ ಕೇರಳ ತಂಡಕ್ಕೆ ಸೋಲುಣಿಸಿತು.

ಲೀಗ್ ಹಂತದಲ್ಲಿ ಆಡಿದ ಮೂರು ಪಂದ್ಯಗಳಲ್ಲಿ ಕರ್ನಾಟಕ ಅಜೇಯವಾಗುಳಿಯಿತು. ಗುರುವಾರ ನಡೆಯುವ ಕ್ವಾರ್ಟರ್‌ಫೈನಲ್‌ನಲ್ಲಿ ರಾಜ್ಯ ತಂಡವು ಮಹಾರಾಷ್ಟ್ರ ತಂಡವನ್ನು ಎದುರಿಸಲಿದೆ.

ಹಿಮಾಚಲ ಪ್ರದೇಶ, ಒಡಿಶಾ, ರಾಜಸ್ಥಾನ, ಕೇರಳ, ಪಶ್ಚಿಮ ಬಂಗಾಳ, ಆಂಧ್ರ ತಂಡಗಳೂ ಎಂಟರಘಟ್ಟ ತಲುಪಿದವು.

ಲೀಗ್ ಹಂತದ ಮತ್ತೊಂದು ಪಂದ್ಯದಲ್ಲಿ ಬುಧವಾರ ಗುಜರಾತ್ ತಂಡವು 25–21, 25–12, 25–19ರಿಂದ ತೆಲಂಗಾಣ ತಂಡಕ್ಕೆ ಸೋಲುಣಿಸಿತು. ಮೊದಲ ಗೇಮ್‌ನಲ್ಲಿ ತೆಲಂಗಾಣ ಸ್ವಲ್ಪ ಪೈಪೋಟಿ ನೀಡಿತು. ಆದರೆ ಎರಡನೇ ಗೇಮ್‌ನಲ್ಲಿ ಗುಜರಾತ್ ಸಂಪೂರ್ಣ ಮೇಲುಗೈ ಸಾಧಿಸಿತು. ನಿರ್ಣಾಯಕ ಮೂರನೇ ಗೇಮ್‌ನಲ್ಲಿ ತೆಲಂಗಾಣ ಉತ್ತಮ ಆಟವಾಡಿದರೂ ಎದುರಾಳಿ ತಂಡದ ಗೆಲುವು ತಡೆಯಲಾಗಲಿಲ್ಲ. ಇನ್ನೊಂದು ಪಂದ್ಯದಲ್ಲಿ ಮಹಾರಾಷ್ಟ್ರ 25–18, 25–13, 25–22ರಿಂದ ಮಧ್ಯಪ್ರದೇಶ ತಂಡಕ್ಕೆ ಸೋಲುಣಿಸಿತು. ಲೀಗ್ ಹಂತದ ಇನ್ನುಳಿದ ಹಣಾಹಣಿಗಳಲ್ಲಿ ಹಿಮಾಚಲ ಪ್ರದೇಶ 25–7, 25–14, 25–20ರಿಂದ ಹರಿಯಾಣ ಎದುರು, ತಮಿಳುನಾಡು 25–17, 25–15, 18–25, 25–16ರಿಂದ ಉತ್ತರ ಪ್ರದೇಶ ವಿರುದ್ಧ, ಪಶ್ಚಿಮ ಬಂಗಾಳ 25–21, 25–21, 25–22ರಿಂದ ಒಡಿಶಾ ಎದುರು ಜಯ ಸಾಧಿಸಿದವು.

ಕರ್ನಾಟಕ ತಂಡವು ಲೀಗ್ ಹಂತದಲ್ಲಿ ಮಂಗಳವಾರ ಎರಡನೇ ಪಂದ್ಯದಲ್ಲಿ 25–9, 25–17, 25–24ರಿಂದ ದೆಹಲಿ ತಂಡಕ್ಕೆ ಸೋಲುಣಿಸಿತು. 44 ನಿಮಿಷಗಳ ಹಣಾಹಣಿಯಲ್ಲಿ ಕರ್ನಾಟಕ ತಂಡ ಎಲ್ಲ ಹಂತಗಳಲ್ಲೂ ಉತ್ತಮ ಆಟವಾಡಿತು.

ಮೊದಲ ಪಂದ್ಯದಲ್ಲಿ ರಾಜ್ಯ ತಂಡ ಪಂಜಾಬ್‌ಅನ್ನು ಮಣಿಸಿ ಶುಭಾರಂಭ ಮಾಡಿತ್ತು.

ಮಂಗಳವಾರ ನಡೆದ ಇನ್ನುಳಿದ ಪಂದ್ಯಗಳಲ್ಲಿ ಮಧ್ಯಪ್ರದೇಶ 25–19, 25–23, 25–8ರಿಂದ ಹರಿಯಾಣ ಎದುರು, ಕೇರಳ 25–14, 25–17, 25–13ರಿಂದ ಪಂಜಾಬ್ ವಿರುದ್ಧ, ಪಶ್ಚಿಮ ಬಂಗಾಳ 25–22, 25–20, 25–14ರಿಂದ ತೆಲಂಗಾಣ ಎದುರು ಜಯ ಸಾಧಿಸಿದವು. ರಾಜಸ್ಥಾನ 25–15, 25–15, 23–25, 25–20ರಿಂದ ಉತ್ತರ ಪ್ರದೇಶ ಎದುರು, ಮಹಾರಾಷ್ಟ್ರ 25–10, 25–17, 25–17ರಿಂದ ಹರಿಯಾಣ ಎದುರು, ಆಂಧ್ರ ಪ್ರದೇಶ 25–17, 17–25, 18–25, 28–26, 15–11ರಿಂದ ತಮಿಳುನಾಡು ಎದುರು ಗೆದ್ದು ಮುನ್ನಡೆದವು.

ಕರ್ನಾಟಕ ತಂಡದ ಸೂರಜ್ ನಾಯಕ್ (ಬಲ) ಅವರು ಹೊಡೆದ ಚೆಂಡನ್ನು ಬ್ಲಾಕ್ ಮಾಡಲು ಯತ್ನಿಸಿದ ಕೇರಳ ತಂಡದ ಹ್ಯಾರಿಸ್ ಪಿ.ಪಿ– ಪ್ರಜಾವಾಣಿ ಚಿತ್ರ/ಎಸ್‌.ಕೆ. ದಿನೇಶ್

ಮುಖ್ಯಾಂಶಗಳು

- ಲೀಗ್ ಹಂತದ ಮೂರೂ ಪಂದ್ಯಗಳಲ್ಲಿ ಗೆಲುವು
- ಕ್ವಾರ್ಟರ್‌ಫೈನಲ್‌ನಲ್ಲಿ ಕರ್ನಾಟಕ– ಮಹಾರಾಷ್ಟ್ರ ಸೆಣಸಾಟ
- ಕ್ವಾರ್ಟರ್‌ಫೈನಲ್‌ಗೆ ರಾಜಸ್ಥಾನ, ಹಿಮಾಚಲ ಪ್ರದೇಶ

ಭೋವನೀಶ್‌ಗೆ ಒಲಿಂಪಿಕ್ಸ್ ಟಿಕೆಟ್

ನವದೆಹಲಿ (ಪಿಟಿಐ): ಭೋವನೀಶ್ ಮೆಂಡಿರಟ್ಟಾ ಅವರು 2024ರ ಪ್ಯಾರಿಸ್ ಒಲಿಂಪಿಕ್ಸ್ ಟಿಕೆಟ್ ಗಳಿಸಿದ್ದಾರೆ. ಇದರೊಂದಿಗೆ ಈ ಅವಕಾಶ ಪಡೆದ ಭಾರತದ ಮೊದಲ ಶೂಟರ್ ಎನಿಸಿಕೊಂಡಿದ್ದಾರೆ.

ಕ್ರೊವೇಷ್ಯಾದ ಒಸಿಜೆಕ್‌ನಲ್ಲಿ ನಡೆದ ಐಎಸ್‌ಎಸ್‌ಎಫ್ ಶಾಟ್‌ಗನ್ ವಿಶ್ವ ಚಾಂಪಿಯನ್‌ಷಿಪ್‌ನ ಪುರುಷರ ಟ್ರ್ಯಾಪ್‌ನಲ್ಲಿ ನಾಲ್ಕನೇ ಸ್ಥಾನ ಗಳಿಸುವ ಮೂಲಕ ಅವರು ಒಲಿಂಪಿಕ್ಸ್ ಅರ್ಹತೆ ಗಳಿಸಿದರು. ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಪದಕ ಗೆಲ್ಲುವ ಅವಕಾಶವನ್ನು ಕೂದಲೆಳೆ ಅಂತರದಲ್ಲಿ ಕಳೆದುಕೊಂಡರು.

ಮಹಿಳಾ ಮತ್ತು ಪುರುಷರ ಟ್ರ್ಯಾಪ್ ವಿಭಾಗಗಳಲ್ಲಿ ಒಲಿಂಪಿಕ್ಸ್‌ನ ತಲಾ ನಾಲ್ಕು ಸ್ಥಾನಗಳನ್ನು ಗಳಿಸುವ ಅವಕಾಶವಿತ್ತು.

ಪುರುಷರ ಟ್ರ್ಯಾಪ್ ವಿಭಾಗದಲ್ಲಿ ಅಮೆರಿಕದ ಡೆರಿಕ್ ಮೇನ್ ಚಿನ್ನದ ಪದಕ ಗೆದ್ದುಕೊಂಡರೆ, ಬ್ರಿಟನ್‌ನ ನೇಥನ್ ಹೇಲ್ಸ್ ಬೆಳ್ಳಿ ಪದಕ ಗೆದ್ದುಕೊಂಡರು.

ಭೋವನೀಶ್ ಮೆಂಡಿರಟ್ಟಾ

ಫುಟ್‌ಬಾಲ್: ರೆಬೆಲ್ಸ್ ಎಫ್‌ಸಿ– ಎಂಇಜಿ ಪಂದ್ಯ ಡ್ರಾ

ಬೆಂಗಳೂರು: ರೆಬೆಲ್ಸ್ ಎಫ್‌ಸಿ ಮತ್ತು ಎಂಇಜಿ ಸೆಂಟರ್ ಎಫ್‌ಸಿ ತಂಡಗಳ ನಡುವಣ ಬಿಡಿಎಫ್‌ಎ ಸೂಪರ್ ಡಿವಿಷನ್ ಲೀಗ್ ಚಾಂಪಿಯನ್‌ಷಿಪ್ ಪಂದ್ಯ ಡ್ರಾನಲ್ಲಿ ಅಂತ್ಯವಾಯಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಹಣಾಹಣಿಯಲ್ಲಿ ಉಭಯ ತಂಡಗಳು ತಲಾ ಒಂದು ಗೋಲು ಗಳಿಸಿದವು. 47ನೇ ನಿಮಿಷದಲ್ಲಿ ಎಂಇಜಿ ತಂಡದ ಅರ್ಜುನ್ ಮಧು ಗೋಲು ದಾಖಲಿಸಿ ಮುನ್ನಡೆ ತಂದುಕೊಟ್ಟರು. ಆದರೆ ರೆಬೆಲ್ಸ್ ಪರ 56ನೇ ನಿಮಿಷದಲ್ಲಿ ಮೊಹಮ್ಮದ್ ಶರೀಫ್ ಖಾನ್ ಕಾಲ್ಚಳಕ ತೋರಿ ಸಮಬಲ ಸಾಧಿಸುವಂತೆ ಮಾಡಿದರು.

ಬೆಂಗಳೂರು ಈಗಲ್ಸ್ ಎಫ್‌ಸಿ ಮತ್ತು ಎಎಸ್‌ಸಿ ಸೆಂಟರ್ ನಡುವಣ ಇನ್ನೊಂದು ಸೆಣಸಾಟವೂ ಡ್ರಾನಲ್ಲಿ ಕೊನೆಗೊಂಡಿತು. ಎಎಸ್‌ಸಿ ತಂಡಕ್ಕಾಗಿ ಎಲಾಂಗ್‌ಬಮ್ ತೊಂದನ್ ಮಿತೇಯ್ (56ನೇ ನಿಮಿಷ) ಮತ್ತು ಈಗಲ್ಸ್ ತಂಡಕ್ಕಾಗಿ ನಿಶಾಂತ್ ಎನ್‌. 78ನೇ ನಿಮಿಷದಲ್ಲಿ ಗೋಲು ಹೊಡೆದರು.

ಗುರುವಾರ ನಡೆಯುವ ಪಂದ್ಯಗಳಲ್ಲಿ ಬಿಎಫ್‌ಸಿ– ಎಫ್‌ಸಿ ಡೆಕ್ಕನ್, ಬಿಯುಎಫ್‌ಸಿ– ಸ್ಪೋರ್ಟಿಂಗ್ ಕ್ಲಬ್ ಬೆಂಗಳೂರು ಆಡಲಿವೆ.

ಸೇಂಟ್ ಪ್ಯಾಟ್ರಿಕ್ಸ್ ತಂಡಕ್ಕೆ ಸುಬ್ರತೊ ಕಪ್

ನವದೆಹಲಿ (ಪಿಟಿಐ): ಜಾರ್ಖಂಡ್‌ನ ಸೇಂಟ್ ಪ್ಯಾಟ್ರಿಕ್ಸ್ ಗುಮ್ಲಾ ತಂಡವು ಸುಬ್ರತೊ ಕಪ್ 17 ವರ್ಷದೊಳಗಿನ ಬಾಲಕಿಯರ ಅಂತರರಾಷ್ಟ್ರೀಯ ಫುಟ್‌ಬಾಲ್ ಟೂರ್ನಿಯ ಚಾಂಪಿಯನ್ ಆಗಿ ಹೊರಹೊಮ್ಮಿದೆ.

ಇಲ್ಲಿಯ ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಫೈನಲ್ ಪಂದ್ಯದಲ್ಲಿ ಸೇಂಟ್ ಪ್ಯಾಟ್ರಿಕ್ಸ್ 3–1ರಿಂದ ಇಂಫಾಲ್‌ನ ವಾಂಗೊಯಿ ಹೈಯರ್ ಸೆಕೆಂಡರಿ ಸ್ಕೂಲ್ ತಂಡವನ್ನು ಪರಾಭವಗೊಳಿಸಿತು.

ವಿಜೇತ ತಂಡದ ಪರ ಅನಿತಾ ಡಂಗ್‌ಡಂಗ್ ಐದನೇ ನಿಮಿಷದಲ್ಲಿ ಮೊದಲ ಗೋಲು ಹೊಡೆದರು. ವಾಂಗೊಯಿ ತಂಡಕ್ಕೆ ರೆಮಿ ಸಮಬಲದ ಗೋಲು ದಾಖಲಿಸಿದರು. ಆದರೆ ಹೆಚ್ಚುವರಿ ಅವಧಿಯಲ್ಲಿ ಅಲ್ಫಾ ಕಂಡುಲ್ನಾ ಪ್ಯಾಟ್ರಿಕ್ಸ್ ಪರ ಎರಡು ಗೋಲು ದಾಖಲಿಸಿ ತಂಡವನ್ನು ಗೆಲುವಿನ ದಡ ಸೇರಿಸಿದರು.